₹ 6 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ ಸೋಮವಾರ 05.05.2025 ಸಂಪುಟ: 67 ಸಂಚಿಕೆ: 361 ಪುಟಗಳು: 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಕೆಕೆಆರ್‌ಗೆ 1 ರನ್ನಿನ ರೋಚಕ ಜಯ

ಕೋಲ್ಕತ್ತದ ಈಡನ್ ಗಾರ್ಡನ್‌ನಲ್ಲಿ ಭಾನುವಾರ ನಡೆದ ಐಪಿಎಲ್ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಕೋಲ್ಕತ್ತ ನೈಟ್ ರೈಡರ್ಸ್ ತಂಡವು ರಾಜಸ್ಥಾನ ರಾಯಲ್ಸ್ ಎದುರು 1 ರನ್ ಅಂತರದ ರೋಚಕ ಜಯ ಸಾಧಿಸಿತು. ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಕೋಲ್ಕತ್ತ ತಂಡವು 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 206 ರನ್ ಗಳಿಸಿತು. ಅದಕ್ಕುತ್ತರವಾಗಿ ರಾಜಸ್ಥಾನ ರಾಯಲ್ಸ್ ತಂಡವು ವಿರೋಚಿತ ಹೋರಾಟವನ್ನೇ ಮಾಡಿದರೂ 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 205 ರನ್ ಗಳಿಸಲಷ್ಟೇ ಸಾಧ್ಯವಾಯಿತು.

ಸೊಂಪಾದ ಪುಟಗಳು

ಯೋಗಿಯ ಯೋಗ ನೀರಿನಿಂದ ನೀರಾ ತನಕ

ಮೂರ್ತಿಪೂಜೆ
ಆರ್.ಟಿ.ವಿಠ್ಠಲಮೂರ್ತಿ 6

ಹಾಂಗ್ ಕಾಂಗ್‌ನಲ್ಲಿ ಹರಿಶ್ಚಂದ್ರ...!

ವಿದೇಶವಾಸಿ
ಕಿರಣ್ ಉಪಾಧ್ಯಾಯ ಬಹ್ರೈನ್ 7

ದಾರಿದೀಪೋಕ್ತಿ

ನೀವು ಯಾರಿಗಾದರೂ ಒಂದು ಗಂಟೆ ಕಾಲ ಕಾದಾಗ ಸಮಯ ವ್ಯರ್ಥ ವಾಯಿತು ಎಂದು ಅನಿಸುತ್ತದೆ. ಆದರೆ ಆ ಸಮಯದಲ್ಲಿ ನೀವು ನಿಮ್ಮ ಸಹನೆಯ ಜತೆಗಿನ ಸಂಬಂಧವನ್ನು ಇನ್ನಷ್ಟು ಉತ್ತಮಪಡಿಸಿಕೊಂಡಿದ್ದೀರಿ ಎಂದೂ ಅರ್ಥ. ನಾವು ಆಗಾಗ ನಮ್ಮ ಸಹನೆಯ ಮಟ್ಟವನ್ನು ಪರೀಕ್ಷಿಸಿಕೊಳ್ಳಬೇಕು.

ವಕ್ರತುಂಡೋಕ್ತಿ

ಬಾಸ್‌ಗೂ, ಚಿಕ್ಕಮಗುವಿಗೂ, ಸ್ವಲ್ಪವೂ ವ್ಯತ್ಯಾಸವಿಲ್ಲ. ಆತ ಅರ್ಧ ಗಂಟೆಗೊಮ್ಮೆ ಕಿರುಚುತ್ತಾನೆ ಮತ್ತು ಎಬ್ಬಿಸುತ್ತಾನೆ.

ಜಿಲೇಬಿ, ಶರಬತ್ ಮಾದರಿ ಸಂಗ್ರಹಕ್ಕೆ ಇಲಾಖೆ ಆದೇಶ

ಬೆಂಗಳೂರು: ಆಹಾರ ಗುಣಮಟ್ಟ ಮತ್ತು ಸುರಕ್ಷತೆ ಇಲಾಖೆಯು ಜಿಲೇಬಿ ಮತ್ತು ಶರಬತ್ ತಯಾರಿಕೆಯ ಗುಣ ಮಟ್ಟವನ್ನು ಪರಿಶೀಲಿಸಲು ರಾಜ್ಯಾದ್ಯಂತ ವಿಶೇಷ ಮೆಗಾ ಡ್ರೈವ್‌ಗೆ ಸಿದ್ಧತೆ ನಡೆಸಿದೆ. ಸಾಮಾಜಿಕ ಜಾಲತಾಣಗಳಲ್ಲಿ ಜಿಲೇಬಿ ಮತ್ತು ಶರಬತ್ ತಯಾರಿಕೆಯ ಸ್ವಚ್ಛತೆಯ ಕುರಿತು ಉಂಟಾದ ಆತಂಕದ ಹಿನ್ನೆಲೆಯಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ.

ಕೆಪಿಎಸ್‌ಸಿಗೆ ನೇಮಕ: ಸಿಎಸ್ ಅಧ್ಯಕ್ಷತೆಯ ಸಮಿತಿ ರಚನೆ

ಬೆಂಗಳೂರು: ಕರ್ನಾಟಕ ಲೋಕ ಸೇವಾ ಆಯೋಗದ (ಕೆಪಿಎಸ್‌ಸಿ) ಅಧ್ಯಕ್ಷರು, ಸದಸ್ಯರ ನೇಮಕಾತಿಗೆ ಸರಕಾರಕ್ಕೆ ಹೆಸರು ಶಿಫಾರಸು ಮಾಡಲು ಮುಖ್ಯ ಕಾರ್ಯದರ್ಶಿ (ಸಿಎಸ್) ಅಧ್ಯಕ್ಷತೆಯಲ್ಲಿ ಮೂವರು ಸದಸ್ಯರನ್ನು ಒಳಗೊಂಡ 'ವ್ಯಾಪಕ ಆಧಾರಿತ ಹುಡುಕಾಟ ಸಮಿತಿ' ರಚಿಸಿ ರಾಜ್ಯ ಸರಕಾರ ಆದೇಶ ಹೊರಡಿಸಿದೆ.

ಸುಹಾಸ್ ಶೆಟ್ಟಿ ಕೊಲೆ ಪ್ರಕರಣ ಎನ್‌ಐಎಗೆ: ಪರ-ವಿರೋಧ ಚರ್ಚೆ

ಬೆಂಗಳೂರು: ಮಂಗಳೂರಿನ ಸುಹಾಸ್ ಶೆಟ್ಟಿ ಕೊಲೆ ನಡೆದು 4 ದಿನದ ಬಳಿಕ ಕರಾವಳಿ ಸಹಜ ಸ್ಥಿತಿಯತ್ತ ವಾಲುತ್ತಿದೆ. ಆದರೀಗ ಈ ಪ್ರಕರಣವನ್ನು ಎನ್‌ಐಎಗೆ ವಹಿಸಬೇಕು ಎನ್ನುವ ವಿಷಯಕ್ಕೆ ಪರ-ವಿರೋಧ ಚರ್ಚೆ ಆರಂಭವಾಗಿದೆ. ಗೃಹ ಸಚಿವ ಪರಮೇಶ್ವರ ಸೇರಿ ಹಲವು ಕಾಂಗ್ರೆಸಿಗರು ಸ್ಥಳೀಯ ಪೊಲೀಸರೇ ತನಿಖೆ ನಡೆಸಲಿ ಎಂದು ಸಮರ್ಥಿಸಿಕೊಳ್ಳುತ್ತಿದ್ದರೆ, ಬಿಜೆಪಿಗರು ಎನ್‌ಐಎ ತನಿಖೆಗೆ ಆಗ್ರಹಿಸಿದ್ದಾರೆ.

ಫನ್‌ತರಂಗ

- ರಘುಪತಿ ಶೃಂಗೇರಿ -

ಪಿಯುಸಿಯಲ್ಲಿ 98.25% ಅಂಕ ಗಳಿಸಿ Rank ಪಡೆದ ಶಿಕ್ಷಣ ಸಚಿವರ ಪುತ್ರ

ಫಿರಂಗಿ, ಮದ್ದು ಗುಂಡುಗಳ ಕೊರತೆ | ಶತ್ರು ರಾಷ್ಟ್ರದ ಬಳಿಯಿಲ್ಲ ಶಸ್ತ್ರಾಸ್ತ್ರ ಬಲ

ಪಾಕ್ ಬತ್ತಳಿಕೆ ಖಾಲಿ

ದೆಹಲಿ: ಪೆಹಲ್ಗಾಮ್ ಉಗ್ರರ ದಾಳಿಗೆ ಪ್ರತೀಕಾರ ತೀರಿಸಿಕೊಳ್ಳುವ ಉತ್ಸಾಹದಲ್ಲಿರುವ ಭಾರತಕ್ಕೆ ಪಾಠ ಕಲಿಸುತ್ತೇವೆಂದು ಹೇಳಿಕೊಳ್ಳುತ್ತಿರುವ ಪಾಕಿಸ್ತಾನದ ಬಳಿ ಪೂರ್ಣ ಪ್ರಮಾಣದ ಯುದ್ಧಕ್ಕೆ ಬೇಕಿರುವ ಸಾಮಾನ್ಯ ಮದ್ದುಗುಂಡುಗಳೇ ಇಲ್ಲ ಎನ್ನುವ ಕುತೂಹಲಕಾರಿ ಅಂಶ ಬಹಿರಂಗಗೊಂಡಿದೆ.

ಹೌದು, ದಿವಾಳಿಯ ಅಂಚಿನಲ್ಲಿರುವ ಪಾಕಿಸ್ತಾನ ಸೇನೆಗೆ ಬಲ ತುಂಬುವ ಕೆಲಸವನ್ನು ಮರೆತು ಹಲವು ವರ್ಷಗಳೇ ಕಳೆದಿವೆ. ಆದ್ದರಿಂದ ಸೇನೆಯಲ್ಲಿ ಮಾನವ ಸಂಪನ್ಮೂಲದ ಕೊರತೆಯಷ್ಟೇ ಅಲ್ಲದೇ ಶಸ್ತ್ರಾಸ್ತ್ರಗಳ ಕೊರತೆಯಿರುವುದು ಇದೀಗ ಬಹಿರಂಗವಾಗಿದೆ. ಒಂದು ವೇಳೆ ಭಾರತ ಪಾಕಿಸ್ತಾನದ ವಿರುದ್ಧ ಪೂರ್ಣ ಯುದ್ಧ ಆರಂಭಿಸಿದರೆ, ಕೇವಲ ನಾಲ್ಕು ದಿನಕ್ಕಾಗುವಷ್ಟು ಮದ್ದುಗುಂಡುಗಳು ಮಾತ್ರ ಪಾಕಿಸ್ತಾನದ ಬಳಿ ಇವೆ ಎನ್ನುವ ಅಂಶ ಬಹಿರಂಗವಾಗಿದೆ.

ಆರ್ಥಿಕವಾಗಿ ತೀವ್ರ ಸಂಕಷ್ಟ ಅನುಭವಿಸಿದ್ದ ಪಾಕಿಸ್ತಾನ, ಇದರಿಂದ ಆಚೆ ಬರಲು ಇತ್ತೀಚೆಗೆ ಉಕ್ರೇನ್‌ನೊಂದಿಗೆ ಶಸ್ತ್ರಾಸ್ತ್ರ ಒಪ್ಪಂದ ಮಾಡಿಕೊಂಡಿತ್ತು. ಈ ಒಪ್ಪಂದ ಅನ್ವಯ ಉಕ್ರೇನ್‌ಗೆ ಮದ್ದು ಗುಂಡುಗಳನ್ನು ನೀಡಿರುವ ಪಾಕಿಸ್ತಾನ, ಹೊಸದಾಗಿ ಮದ್ದು ಗುಂಡುಗಳ ತಯಾರಿಕೆ ಆರಂಭಿಸಿಲ್ಲ. ಕೆಲ ಮದ್ದು-ಗುಂಡುಗಳ ತಯಾರಿಕೆ ಆರಂಭವಾಗಿದ್ದರೂ, ಹೇಳಿಕೊಳ್ಳುವ ವೇಗದಲ್ಲಿಲ್ಲ. ಆದ್ದರಿಂದ ಒಂದು ವೇಳೆ ಯುದ್ಧ ಆರಂಭವಾದರೆ ಕೇವಲ 96 ಗಂಟೆಗಳ ಕಾಲ ತೀವ್ರ ಸಂಘರ್ಷವನ್ನು ತಡೆದುಕೊಳ್ಳಲು ಸಾಧ್ಯವಿದೆ ಎನ್ನಲಾಗಿದೆ.

ಸೇನೆಗೆ ಮದ್ದುಗುಂಡುಗಳನ್ನು ಪೂರೈಸುವ ಪಾಕಿಸ್ತಾನ್ ಆರ್ಡನೆನ್ಸ್ ಫ್ಯಾಕ್ಟರಿಯಿಂದ ಉಕ್ರೇನ್ ಸೇರಿದಂತೆ ಕೆಲ ದೇಶಗಳಿಗೆ ಮದ್ದುಗುಂಡು ನೀಡಿರುವುದರಿಂದ ಒತ್ತಡ ಹೆಚ್ಚಿದೆ. ಇದರೊಂದಿಗೆ ಹಳತಾದ ಉತ್ಪಾದನಾ ಯಂತ್ರಗಳಿರುವುದರಿಂದ ನಿರೀಕ್ಷಿತ ಪ್ರಮಾಣದಲ್ಲಿ ಉತ್ಪಾದನೆ ಸಾಧ್ಯವಿಲ್ಲ ಎನ್ನುವುದು ತಿಳಿದುಬಂದಿದೆ. ಸಂಖ್ಯಾತ್ಮಕವಾಗಿ ಬಲಾಢ್ಯವಾಗಿರುವ ಭಾರತೀಯ ಸೇನೆಯ ವಿರುದ್ಧ ಸಜ್ಜುಗೊಳ್ಳಲು ಪಾಕ್ ಸೇನೆ ಫಿರಂಗಿ ಮತ್ತು ಶಸ್ತ್ರಸಜ್ಜಿತ ಘಟಕಗಳನ್ನು ಅವಲಂಬಿಸಿದೆ. ಆದರೂ ಉಕ್ರೇನ್‌ಗೆ 155 ಎಂಎಂ ಮದ್ದುಗುಂಡುಗಳನ್ನು ಮಾರಾಟ ಮಾಡಿದ ನಂತರ ಪಿಒಎಫ್ ದೇಶೀಯ ಸಂಗ್ರಹಣೆಯನ್ನು ಮರು ಪೂರ್ಣಗೊಳಿಸಿಲ್ಲ ಎಂದು ಖಚಿತ ಮೂಲಗಳು ತಿಳಿಸಿವೆ. → 4

ಕಡಿತಗೊಳಿಸಿದ ಸಮರಾಭ್ಯಾಸ

ಇಂಧನ ಕೊರತೆ ಎದುರಿಸುತ್ತಿರುವ ಪಾಕಿಸ್ತಾನ, ತನ್ನ ಸೇನೆಗೆ ಸಮರಾಭ್ಯಾಸಕ್ಕೆ ಕೊಕ್ಕೆ ಹಾಕಿದೆ. 2022-23 ಆರ್ಥಿಕ ವರ್ಷದೊಳಗೆ ಪಾಕಿಸ್ತಾನದ ಶಸ್ತ್ರಾಸ್ತ್ರ ರಫ್ತುಗಳು 2021-22 ರಲ್ಲಿದ್ದ 13 ಮಿಲಿಯನ್ ಡಾಲರ್‌ಗಳಿಂದ 415 ಮಿಲಿಯನ್ ಡಾಲರ್‌ಗಳಿಗೆ ಏರಿಕೆಯಾಗಿದೆ. ಆದರೆ ಸೇನೆಗೆ ಮೀಸಲಿಟ್ಟ ಹಣದಲ್ಲಿ ಸುಮಾರು ಶೇ.80ರಷ್ಟು ಸೇನಾ ಮುಖ್ಯಸ್ಥರ ಪ್ರಧಾನ ಕಚೇರಿಗೆ ರವಾನೆಯಾಗಿದೆ. ಇದರಿಂದ ಸೇನೆಗೆ ಅಗತ್ಯವಿರುವ ಅನುದಾನ ಸಿಕ್ಕಿಲ್ಲ ಎನ್ನುವ ಆರೋಪ ಕೇಳಿಬಂದಿದೆ.

- ದಿವಾಳಿಯ ಅಂಚಿನಲ್ಲಿರುವ ಪಾಕಿಸ್ತಾನ ಸೇನೆಗೆ ಬಲ ತುಂಬುವ ಕೆಲಸವನ್ನು ಮರೆತು ಹಲವು ವರ್ಷಗಳೇ ಕಳೆದಿವೆ
- ಪಾಕ್ ಸೇನೆಯಲ್ಲಿ ಮಾನವ ಸಂಪನ್ಮೂಲದ ಕೊರತೆಯಷ್ಟೇ ಅಲ್ಲದೇ ಶಸ್ತ್ರಾಸ್ತ್ರಗಳ ಕೊರತೆಯಿರುವುದು ಬಹಿರಂಗವಾಗಿದೆ
- ಭಾರತ ಪಾಕಿಸ್ತಾನ ಯುದ್ಧ ಆರಂಭವಾದರೆ ನಾಲ್ಕೇ ದಿನಕ್ಕಾಗುವಷ್ಟು ಮದ್ದುಗುಂಡುಗಳು ಮಾತ್ರ ಪಾಕಿಸ್ತಾನದ ಬಳಿ ಇವೆ

ಮೋದಿ ಮನೆಯಲ್ಲಿ ಸಭೆ

ಭಾರತ-ಪಾಕ್ ಗಡಿಯಲ್ಲಿ ದಿನದಿಂದ ದಿನಕ್ಕೆ ಪರಿಸ್ಥಿತಿ ಬಿಗಡಾಯಿಸುತ್ತಿರುವ ಹೊತ್ತಿನಲ್ಲಿಯೇ, ಪ್ರಧಾನಿ ನರೇಂದ್ರ ಮೋದಿ ಅವರನ್ನು ವಾಯುಸೇನಾ ಮುಖ್ಯಸ್ಥ ಅಮರ್ ಪ್ರೀತ್ ಸಿಂಗ್ ಭಾನುವಾರ ಬೆಳಗ್ಗೆ ಭೇಟಿಯಾಗಿರುವುದು ಕುತೂಹಲಕ್ಕೆ ಕಾರಣ ವಾಗಿದೆ. ಶನಿವಾರ ಸಂಜೆ ನೌಕಾಸೇನಾ ಮುಖ್ಯಸ್ಥ ದಿನೇಶ್ ತ್ರಿಪಾಠಿ ಭೇಟಿಯಾಗಿ ಮಾಹಿತಿ ನೀಡಿದ ಬಳಿಕ, ವಾಯುಸೇನಾ ಮುಖ್ಯಸ್ಥರ ಭೇಟಿ ಕುತೂ ಹಲಕ್ಕೆ ಕಾರಣವಾಗಿದ್ದು, ಯಾವ ರೀತಿಯ ನಡೆ ಅನುಸರಿಸಬೇಕು ಎನ್ನುವ ಬಗ್ಗೆ ಚರ್ಚಿಸಿದ್ದಾರೆ ಎನ್ನಲಾಗಿದೆ.

ಭಾರತದ ಬತ್ತಳಿಕೆಗೆ ಮತ್ತೊಂದು ಅಸ್ತ್ರ

ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ) ಗೇಮ್ ಚೇಂಜರ್ ವಾಯು ಅಸ್ತ್ರದ ಪರೀಕ್ಷೆಯನ್ನು ಯಶಸ್ವಿಯಾಗಿ ನಡೆಸಿದೆ. ಮಧ್ಯಪ್ರದೇಶದ ಶಿಯೋಪುರ್ ಪರೀಕ್ಷಾ ಸ್ಥಳದಲ್ಲಿ ವಾಯುಮಂಡಲದ ಏರ್‌ಶಿಫ್ ಪರೀಕ್ಷೆಯನ್ನು ಡಿಆರ್‌ಡಿಒ ಯಶಸ್ವಿಯಾಗಿ ನಡೆಸಿದ್ದು, ಈ ಏರ್‌ಶಿಫ್ ಅನ್ನು ಆಗ್ರಾದ ವೈಮಾನಿಕ ವಿತರಣಾ ಸಂಶೋಧನೆ ಮತ್ತು ಅಭಿವೃದ್ಧಿ ಸ್ಥಾಪನೆಯಿಂದ ಅಭಿವೃದ್ಧಿಪಡಿಸಲಾಗಿದೆ. ಈ ಏರ್‌ಶಿಫ್ ಅನ್ನು ಹಲವು ಉಪಕರಣ ಗಳ ಪೇಲೋಡ್‌ನೊಂದಿಗೆ ಸುಮಾರು 17 ಕಿ.ಮೀ ಎತ್ತರಕ್ಕೆ ಹಾರಿಸಲಾಗಿದೆ. ಏರ್‌ಶಿಫ್‌ನಲ್ಲಿರುವ ಸೆನ್ಸಾರ್‌ಗಳಿಂದ ಡೇಟಾವನ್ನು ಸ್ವೀಕರಿಸಲಾಗಿದೆ. ಇದನ್ನು ಭವಿಷ್ಯದಲ್ಲಿ ಉತ್ತಮ ಗುಣಮಟ್ಟದ ಫಿಡೆಲಿಟಿ ಸಿಮ್ಯುಲೇಶನ್ ಮಾದರಿಗಳ ಅಭಿವೃದ್ಧಿಗಾಗಿ ಬಳಸಿಕೊಳ್ಳಲಾ ಗುವುದು ಎಂದು ಡಿಆರ್‌ಡಿಒ ಹೇಳಿದೆ. ಇದು ಗಾಳಿಗಿಂತ ಹಗುರವಾದ ವ್ಯವಸ್ಥೆಯಾಗಿದ್ದು, ಭಾರತದ ಭೂಮಿಯ ವೀಕ್ಷಣೆ ಮತ್ತು ಗುಪ್ತಚರ, ಕಣ್ಗಾವಲು ಮತ್ತು ವಿಚಕ್ಷಣ ಸಾಮರ್ಥ್ಯಗಳನ್ನು ಹೆಚ್ಚಿಸುತ್ತದೆ.

ಸಿಂಗಪುರ: ಪಿಎಪಿ ಪಕ್ಷಕ್ಕೆ ಭರ್ಜರಿ ಜಯ

ಸಿಂಗಪುರ: ಜಾಗತಿಕ ಆರ್ಥಿಕ ಅನಿಶ್ಚಿತತೆಯ ನಡುವೆ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಪ್ರಧಾನಿ ಲಾರೆನ್ಸ್ ವಾಂಗ್ ನೇತೃತ್ವದ ಸಿಂಗಪುರದ ಆಡಳಿತಾರೂಢ ಪಕ್ಷ ಪೀಪಲ್ ಆಕ್ಷನ್ ಪಾರ್ಟಿ(ಪಿಎಪಿ) ಭರ್ಜರಿ ಜಯ ಸಾಧಿಸಿ ಮತ್ತೆ ಅಧಿಕಾರಕ್ಕೆ ಬಂದಿದೆ. 97 ಸ್ಥಾನಗಳ ಪೈಕಿ 87 ಸ್ಥಾನಗಳನ್ನು ಪಡೆದ ಆಡಳಿತ ಪಕ್ಷ ಅಧಿಕಾರಕ್ಕೆ ಮರಳಿದೆ. ಪಿಎಪಿ ಶೇ.65.6ರಷ್ಟು ಮತಗಳನ್ನು ಗಳಿಸಿದ್ದು, 2020ಕ್ಕಿಂತ (ಶೇ.61.2) ಮತ ಗಳಿಕೆ ಪ್ರಮಾಣ ಹೆಚ್ಚಾಗಿದೆ.

ಇಸ್ರೇಲ್ ವಿಮಾನ ನಿಲ್ದಾಣದ ಮೇಲೆ ಬಂಡುಕೋರರ ದಾಳಿ

ಟೆಲ್ ಅವೀವ್: ಇಸ್ರೇಲ್‌ನ ಟೆಲ್ ಅವೀವ್ ವಿಮಾನ ನಿಲ್ದಾಣದ ಮೇಲೆ ಭಾನುವಾರ ಕ್ಷಿಪಣಿ ದಾಳಿ ನಡೆದಿದ್ದು, ದಾಳಿಯಿಂದಾಗಿ ಆರು ಜನರಿಗೆ ಗಾಯಗಳಾಗಿವೆ. ಹುಥಿ ಬಂಡುಕೋರರು ಈ ದಾಳಿಯ ಹೊಣೆ ಹೊತ್ತಿದ್ದಾರೆ. ಕ್ಷಿಪಣಿಯನ್ನು ಆಕಾಶದಲ್ಲಿಯೇ ಹೊಡೆದುರುಳಿಸಲು ಹಲವು ಪ್ರಯತ್ನಗಳನ್ನು ನಡೆಸಲಾಗಿತ್ತು ಎಂದು ಇಸ್ರೇಲ್ ಸೇನೆ ಹೇಳಿದೆ. ವಿಮಾನ ನಿಲ್ದಾಣದ ಮೂಲಸೌಕರ್ಯಕ್ಕೆ ಹಾನಿ ಆಗಿಲ್ಲ. ವಿಮಾನ ನಿಲ್ದಾಣದ ವಾಹನ ನಿಲ್ದಾಣ ಪ್ರದೇಶದಲ್ಲಿ ಕ್ಷಿಪಣಿ ಅಪ್ಪಳಿಸಿದೆ.

ಯೋಗ ಗುರು ಸ್ವಾಮಿ ಶಿವಾನಂದ ನಿಧನ

ವಾರಾಣಸಿ: ಪದ್ಮಶ್ರೀ ಪುರಸ್ಕೃತ 128 ವರ್ಷದ ಯೋಗ ಗುರು ಸ್ವಾಮಿ ಶಿವಾನಂದ ಬಾಬಾ ಅವರು ನಿಧನರಾಗಿದ್ದಾರೆ. ಆರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದ ಅವರು ವಾರಾಣಸಿಯ ಬಿಎಚ್‌ಯು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಅವರು ಶನಿವಾರ ರಾತ್ರಿ ಮೃತರಾಗಿದ್ದಾರೆ. ಭಾನುವಾರ ಹರಿಶ್ಚಂದ್ರ ಘಾಟ್‌ನಲ್ಲಿ ಅಂತ್ಯಸಂಸ್ಕಾರ ನಡೆದಿದೆ.

ಸಿಇಟಿ ಪರೀಕ್ಷೆಯಲ್ಲಿನ ಘಟನೆ ಮಾಸುವ ಮುನ್ನವೇ ಮತ್ತೊಂದು ಅವಾಂತರ | ನೀಟ್ ಪರೀಕ್ಷಾ ಕೇಂದ್ರದ ಬಳಿ ಬ್ರಾಹ್ಮಣ ಮಹಾಸಭಾ ವತಿಯಿಂದ ಪ್ರತಿಭಟನೆ

ನೀಟ್‌ನಲ್ಲೂ ಜನಿವಾರ ಜಟಾಪಟಿ

ಕಲಬುರಗಿ/ಬೆಂಗಳೂರು: ಸಿಇಟಿ ಪರೀಕ್ಷೆ ವೇಳೆ ವಿದ್ಯಾರ್ಥಿಯ ಜನಿವಾರ ತೆಗೆಸಿದ ಘಟನೆ ಮಾಸುವ ಮುನ್ನವೇ ಅದೇ ರೀತಿಯ ಮತ್ತೊಂದು ಘಟನೆ ಕಲಬುರಗಿಯಲ್ಲಿ ನಡೆದಿದ್ದು, ಅಧಿಕಾರಿಗಳ ನಡೆಗೆ ಬ್ರಾಹ್ಮಣ ಸಮುದಾಯ ತೀವ್ರ ವಿರೋಧ ವ್ಯಕ್ತಪಡಿಸಿದೆ.

ಭಾನುವಾರ ದೇಶಾದ್ಯಂತ ನೀಟ್ ಪರೀಕ್ಷೆ ನಡೆಯಿತು. ಕಲಬುರಗಿ ನಗರದ ಸೆಂಟ್ ಮೇರಿ ಪರೀಕ್ಷಾ ಕೇಂದ್ರಕ್ಕೆ ಆಗಮಿಸಿದ ಬೀದರ್ ಜಿಲ್ಲೆಯ ಬಸವಕಲ್ಯಾಣ ತಾಲೂಕಿನ ಬೆಬಲಕುಂದಾ ಗ್ರಾಮ ಮೂಲದ ಕಲಬುರಗಿ ಖಾಸಗಿ ಕಾಲೇಜಿನ ವಿದ್ಯಾರ್ಥಿಯಾಗಿದ್ದ ಶ್ರೀಪಾದ ಪಾಟೀಲ್ ಎನ್ನುವ ವಿದ್ಯಾರ್ಥಿಯ ಜನಿವಾರವನ್ನು ತೆಗೆಸಿರುವುದು ಇದೀಗ ವಿವಾದಕ್ಕೆ ಕಾರಣವಾಗಿದೆ. ಈ ಘಟನೆಯ ಬೆನ್ನಲ್ಲೇ, ಅಧಿಕಾರಿಗಳ ನಡೆಯನ್ನು ಖಂಡಿಸಿ ಕಲಬುರಗಿ ಜಿಲ್ಲಾ ಬ್ರಾಹ್ಮಣ ಮಹಾಸಭಾ ಪರೀಕ್ಷಾ ಕೇಂದ್ರದ ಎದುರು ಪ್ರತಿಭಟನೆ ನಡೆಸಿದೆ.

ರಾಜ್ಯಾದ್ಯಂತ ನೀಟ್ ಪರೀಕ್ಷೆ

2025-26ನೇ ಸಾಲಿನ ವೈದ್ಯಕೀಯ ಪ್ರವೇಶಕ್ಕೆ ಭಾನುವಾರ ರಾಜ್ಯಾದ್ಯಂತ ನೀಟ್ ಪರೀಕ್ಷೆ ನಡೆಯಿತು. ದೇಶಾದ್ಯಂತ ಏಕಕಾಲಕ್ಕೆ ನಡೆಯುವ ಈ ಪರೀಕ್ಷೆಗೆ ರಾಜ್ಯದಲ್ಲಿ 381 ಪರೀಕ್ಷಾ ಕೇಂದ್ರ ಗಳನ್ನು ಸಜ್ಜುಗೊಳಿಸಲಾಗಿತ್ತು. ರಾಜ್ಯದ 1.49 ಲಕ್ಷ ವಿದ್ಯಾರ್ಥಿಗಳು ನೀಟ್ ಪರೀಕ್ಷೆಗೆ ಅರ್ಜಿ ಸಲ್ಲಿಸಿದ್ದರು.

ಈ ವೇಳೆ ಮಾತನಾಡಿದ ಪ್ರತಿಭಟನಾನಿರತರು, ಸಿಇಟಿ ಪರೀಕ್ಷೆ ಸಂದರ್ಭದಲ್ಲೇ ಜನಿವಾರ ತೆಗೆದು ಸಾಕಷ್ಟು ರಾದ್ಧಾಂತವಾದರೂ ಈಗ ಮತ್ತೆ ಜನಿವಾರ ತೆಗೆಸಿರುವುದು ಉದ್ದೇಶಪೂರ್ವಕದಿಂದಲೇ ಎಂಬುದು ಕಂಡು ಬರುತ್ತದೆ. ಬ್ರಾಹ್ಮಣ ಸಮಾಜದ ತಾಳ್ಮೆ ಪರೀಕ್ಷಿಸುವಂತಾಗಿದೆ. ಸ್ವಾಭಿಮಾನಕ್ಕೆ ಧಕ್ಕೆ ಬಂದರೆ ಯಾರೂ ಸುಮ್ಮನೇ ಕೂರುವುದಿಲ್ಲ. ಜನಿವಾರ ತೆಗೆಸಿದವರ ವಿರುದ್ಧ ಕಠಿಣ ಕ್ರಮ ಜರುಗಲೇಬೇಕು ಎಂದು ಆಗ್ರಹಿಸಿದರು.

ಇತ್ತೀಚೆಗೆ ನಡೆದ ಸಿಇಟಿ ಪರೀಕ್ಷೆ ಸಂದರ್ಭದಲ್ಲಿ ವಿದ್ಯಾರ್ಥಿಗಳ ಜನಿವಾರ ತೆಗೆಸಿದ ಪ್ರಕರಣ ನಡೆದು ಸಾಕಷ್ಟು ವಿವಾದವಾಗಿತ್ತು. ಅಧಿಕಾರಿಗಳ ಈ ನಡೆಯನ್ನು ಖಂಡಿಸಿ ರಾಜ್ಯಾದ್ಯಂತ ಪ್ರತಿಭಟನೆ ನಡೆಸಲಾಗಿತ್ತು.

ಸ್ಥಳದಲ್ಲಿಯೇ ಯಜ್ಞೋಪವೀತ ಧರಿಸಿದ ವಿದ್ಯಾರ್ಥಿ

ಪರೀಕ್ಷೆ ತಪ್ಪಿಸಿಕೊಳ್ಳುವ ಆತಂಕದಿಂದ ಶ್ರೀಪಾದ ಅವರು ಜನಿವಾರವನ್ನು ತೆಗೆದು ಪರೀಕ್ಷೆ ಬರೆದರೂ, ಪರೀಕ್ಷೆಯ ಬಳಿಕ ಸಮುದಾಯದ ಪ್ರಮುಖರ ಸಮ್ಮುಖದಲ್ಲಿಯೇ ಸ್ಥಳದಲ್ಲಿಯೇ ಯಜ್ಞೋಪವೀತವನ್ನು ಶಾಸ್ತ್ರೋಕ್ತವಾಗಿ ಧರಿಸಿದರು. ಈ ವೇಳೆ ಸ್ಥಳದಲ್ಲಿದ್ದ ಬ್ರಾಹ್ಮಣ ಸಮುದಾಯದವರು ವಿದ್ಯಾರ್ಥಿ ಪರ ಘೋಷಣೆ ಕೂಗಿದರು.

ಪರೀಕ್ಷಾ ಕೊಠಡಿಯೊಳಗೆ ಹೋಗುವಾಗ ಅಧಿಕಾರಿಗಳು ಜನಿವಾರ ತೆಗೆಯುವಂತೆ ಹೇಳಿದರು. ಆರಂಭದಲ್ಲಿ ವಿರೋಧಿಸಿದೆ. ಆದರೆ ಇನ್ನೊಬ್ಬ ಅಧಿಕಾರಿಯೂ ತೆಗೆಯುವಂತೆ ಹೇಳಿದಾಗ, ಪರೀಕ್ಷೆ ಕೈತಪ್ಪುವ ಆತಂಕದಿಂದ ಜನಿವಾರ ತೆಗೆದು ತಂದೆಯವರ ಕೈಗೆ ಕೊಟ್ಟೆ. ಈ ರೀತಿಯಾಗಿದ್ದಕ್ಕೆ ತೀವ್ರ ಬೇಸರವಿದೆ.

- ಶ್ರೀಪಾದ ಪಾಟೀಲ್, ಜನಿವಾರ ತೆಗೆದ ವಿದ್ಯಾರ್ಥಿ

ರಾಜ್ಯಾದ್ಯಂತ ಇಲಿ ಜ್ವರದ ಆತಂಕ

ವಾರದಲ್ಲಿ 24 ಜನರಲ್ಲಿ ಲೆಪ್ಟೊಸ್ಪೈರೋಸಿಸ್ ಪತ್ತೆ

ಬೆಂಗಳೂರು: ರಾಜ್ಯದಲ್ಲಿ ಲೆಪ್ಟೊಸ್ಪೈರೋಸಿಸ್ ಎಂದು ಕರೆಯಲ್ಪಡುವ ಇಲಿ ಜ್ವರ ಪ್ರಕರಣಗಳು ಹೆಚ್ಚಾಗುತ್ತಿರುವುದರಿಂದ ಜನರಲ್ಲಿ ಆತಂಕದ ಮನೆಮಾಡಿದೆ.

ರಾಜ್ಯದಲ್ಲಿ ಕಳೆದ ಒಂದು ವಾರದಲ್ಲಿ 169 ಜನರನ್ನು ಇಲಿ ಜ್ವರ ಪತ್ತೆ ಪರೀಕ್ಷೆಗೆ ಒಳಪಡಿಸಿದ್ದು 24 ಜನರಲ್ಲಿ ಇಲಿ ಜ್ವರ ಪತ್ತೆಯಾಗಿದೆ. ಜನವರಿಯಿಂದ ಇಲ್ಲಿವರೆಗೆ 3044 ಮಂದಿಯಲ್ಲಿ ಲಕ್ಷಣಗಳು ಕಂಡುಬಂದಿದ್ದು, ಜನರ ರಕ್ತ ಮಾದರಿ ಪಡೆದು ಪರೀಕ್ಷೆ ಮಾಡಿಸಿದಾಗ 365 ಜನರಲ್ಲಿ ಪಾಸಿಟಿವ್ ಕಂಡುಬಂದಿದೆ. ಹೀಗಾಗಿ ಆರೋಗ್ಯ ಇಲಾಖೆ ಇಲಿ ಜ್ವರದ ಬಗ್ಗೆ ಎಚ್ಚರಿಕೆ ನೀಡಿದೆ. ಲೆಪ್ಟೊಸ್ಪೈರೋಸಿಸ್ ಅಥವಾ ಇಲಿ ಜ್ವರ ಇಲಿಗಳಿಂದ ಹರಡುತ್ತದೆ. ಇಲಿಯ ಎಂಜಲು, ಮೂತ್ರ, ಮಲ ಅಥವಾ ಅದರ ದೇಹದ ಯಾವುದೇ ದ್ರವ ಮಾನವರ ಚರ್ಮಕ್ಕೆ ತಾಗುವುದರಿಂದ ಈ ಸೋಂಕು ಹರಡುತ್ತದೆ. ಹೀಗಾಗಿ ತೀವ್ರ ಜ್ವರ , ತಲೆನೋವು, ಕಣ್ಣು ಕೆಂಪಾಗುವುದು, ವಾಕರಿಕೆ ಅಥವಾ ವಾಂತಿ, ಮೈಕೈ ನೋವು, ಮೈಮೇಲೆ ಗುಳ್ಳೆಗಳು ಹಾಗೂ ಸೋಂಕು ಉಂಟಾದ ಎರಡು ದಿನಗಳ ನಂತರ ಮತ್ತು ಕೀಲುನೋವು ಕಂಡುಬಂದಲ್ಲಿ ಪರೀಕ್ಷೆ ಮಾಡಿಸಿಕೊಳ್ಳುವಂತೆ ವೈದ್ಯರು ಸಲಹೆ ನೀಡಿದ್ದಾರೆ.

ಮುನ್ನೆಚ್ಚರಿಕೆ ಕೈಗೊಳ್ಳಿ

ಡೆಂಘೀ, ಚಿಕುನ್ ಗುನ್ಯಾ ಹಾಗೂ ಇತರ ಅನೇಕ ವೈರಲ್ ಸೋಂಕುಗಳ ನಡುವೆ ಈಗ ಇಲಿ ಜ್ವರದ ಆತಂಕ ಹೆಚ್ಚಾಗಿರುವುದರಿಂದ ಮನೆಯ ಸಂಪ್‌ಗಳ, ಬಳಸುವ ನೀರಿನ ಬಗ್ಗೆ ಎಚ್ಚರ ವಹಿಸಿ ಎಂದು ವೈದ್ಯರು ಎಚ್ಚರಿಕೆ ನೀಡಿದ್ದಾರೆ. ಮನೆಯಲ್ಲಿ ಅಥವಾ ಉಗ್ರಾಣಗಳಲ್ಲಿ ಆಹಾರ ಪದಾರ್ಥಗಳು, ದವಸ ಧಾನ್ಯಗಳನ್ನು ಎಲ್ಲೆಂದರಲ್ಲಿ ಎಸೆಯದೆ ಸ್ವಚ್ಛತೆ ಕಾಪಾಡಿಕೊಳ್ಳುವುದರ ಮೂಲಕ ಹಾಗೂ ಸಾಧ್ಯವಾದಷ್ಟು ಬಿಸಿ ನೀರು ಸೇವನೆ ಮಾಡುವ ಮೂಲಕ ಇಲಿ ಜ್ವರ ಹರಡುವುದನ್ನು ನಿಯಂತ್ರಿಸಬಹುದು ಎಂದು ವೈದ್ಯರು ಸಲಹೆ ನೀಡಿದ್ದಾರೆ.

ಜಮ್ಮುವಿನ ಶಂಕರಾಚಾರ್ಯ ಮಠದಲ್ಲಿ ವಿಶೇಷ ಪೂಜೆ | ಮೈಸೂರು, ಬೆಂಗಳೂರಿನ 13 ಜನರ ತಂಡದಿಂದ ಹವನಹೋಮ | ಪೂಜೆಗೆ ಸಿಆರ್‌ಪಿಎಫ್, ಸ್ಥಳೀಯ ಪೊಲೀಸರಿಂದಲೂ ಬೆಂಬಲ

ಕಣಿವೆ ನಾಡಲ್ಲಿ ಕರುನಾಡ ಪೂಜೆ

ವಿಶ್ವವಾಣಿ ವಿಶೇಷ

ಬೆಂಗಳೂರು: ಪಹಲ್ಗಾಮ್ ಉಗ್ರರ ದಾಳಿ ಬಳಿಕ ದೇಶಾದ್ಯಂತ ಪಾಕಿಸ್ತಾನದ ವಿರುದ್ಧ 'ಪ್ರತೀಕಾರ'ದ ಕೂಗು ಕೇಳಿಬರುತ್ತಿದೆ.

ದಾಳಿಯ ಬೆನ್ನಲ್ಲೇ ಕೇಂದ್ರ ಸರಕಾರ ಹಾಗೂ ರಕ್ಷಣಾ ಇಲಾಖೆ ಪ್ರತಿದಾಳಿಯ ಅಥವಾ ಯುದ್ಧದ ತಯಾರಿಯಲ್ಲಿದೆ ಎನ್ನುವ ಮಾತುಗಳು ಅಂತಾ ರಾಷ್ಟ್ರೀಯ ಮಟ್ಟದಲ್ಲಿ ಕೇಳಿ ಬರುತ್ತಿದೆ.

ಈ ನಡುವೆ, ಪಾಕಿಸ್ತಾನ ಹಾಗೂ ಉಗ್ರರ ವಿರುದ್ಧ ಹೋರಾಡಲು ಬೇಕಿರುವ 'ಶಕ್ತಿ'ಯನ್ನು ದೇಶದ ಸೈನಿಕರಿಗೆ ಸಿಗಲಿಯೆಂದು ವಿಶೇಷ ಪೂಜೆಯನ್ನು ಜಮ್ಮು- ಕಾಶ್ಮೀರದ ಶ್ರೀನಗರದಲ್ಲಿರುವ ಆದಿ ಶಂಕರಾ ಚಾರ್ಯರ ಮಠದಲ್ಲಿ ನೆರವೇರಿಸಲಾಗಿದೆ. ಈ ಹವನ-ಹೋಮದ ವಿಶೇಷತೆಯೆಂದರೆ, ಇದರಲ್ಲಿ ಕೇವಲ ಋತ್ವಿಕರು ಮಾತ್ರವಲ್ಲದೇ, ಸಿಆರ್‌ಪಿಎಫ್, ಜಮ್ಮು-ಕಾಶ್ಮೀರ ಪೊಲೀಸರು ಹಾಗೂ ಸೇನಾಧಿಕಾರಿಗಳು ಭಾಗವಹಿಸಿ, ಶಕ್ತಿಗೆ ದೇವರಲ್ಲಿ ಪ್ರಾರ್ಥಿಸಿದ್ದಾರೆ. ಈ ಹೋಮದ ನೇತೃತ್ವವನ್ನು ವಹಿಸಿದ್ದು, ಕರುನಾಡಿನ ಅರ್ಚಕರ ತಂಡ ಎನ್ನುವುದು ಮತ್ತೊಂದು ವಿಶೇಷ. → 4

- ಪಾಕಿಸ್ತಾನ, ಉಗ್ರರ ವಿರುದ್ಧ ಹೋರಾಟಕ್ಕೆ ಶಕ್ತಿ ಸಿಗಲೆಂದು ವಿಶೇಷ ಪೂಜೆ
- ಸುಮಾರು 12 ತಾಸುಗಳ ಕಾಲ ವಿಶೇಷ ಪೂಜೆ ನಡೆಸಿದ ರಾಜ್ಯದ ಪುರೋಹಿತರ ತಂಡ
- ಶ್ರೀನಗರದ ಶಂಕರಾಚಾರ್ಯರ ಮಠದಲ್ಲಿ ನಡೆದ ಹೋಮಕ್ಕೆ ಸೇನೆಯ ಬೆಂಬಲ
- ಸೈನಿಕರಿಗೆ ಶತ್ರುಗಳ ವಿರುದ್ಧ ಹೋರಾಡಲು ಬಲಬರಲೆಂದು ಪ್ರಾರ್ಥನೆ

ಪಹಲ್ಗಾಮ್ ಉಗ್ರರ ದಾಳಿಗೆ ಪ್ರತೀಕಾರ ತೀರಿಸಿಕೊಳ್ಳುವ ಸಮಯದಲ್ಲಿ ದೇಶಕ್ಕೆ ಹಾಗೂ ಸೈನಿಕರಿಗೆ ದೈವೀಶಕ್ತಿ ಸಿಗಲಿ ಎನ್ನುವ ಕಾರಣಕ್ಕೆ ಜಮ್ಮು ಕಾಶ್ಮೀರದಲ್ಲಿ ಈ ವಿಶೇಷ ಪೂಜೆ ನೆರವೇರಿಸಲಾಗಿದೆ. ಈ ವೇಳೆ ಪಾಕಿಸ್ತಾನ ಆಕ್ರಮಿತ ಜಾಗವನ್ನು ವಾಪಸು ಪಡೆಯುವ ಮೂಲಕ ಶಾರದಾ ಪೀಠ ವಾಪಸ್ ಭಾರತಕ್ಕೆ ಬರುವ ಹಾಗೆ ಶಕ್ತಿ ನೀಡಲೆಂದು ದೇವರಲ್ಲಿ ಪ್ರಾರ್ಥಿಸಲಾಯಿತು.

- ಪಣೀಂದ್ರ ಬೇಲೂರು, ಪುರೋಹಿತರು

ALVA'S PU COLLEGE
VIDYAGIRI, MOODUBIDIRE, D.K. - 574227
ALVA'S RECORD BREAKING PERFORMANCE IN VARIOUS EXAMINATIONS
PUC RESULTS – 2025
49 STUDENTS FROM ALVA'S PU COLLEGE
HAVE SECURED POSITIONS AMONG THE STATE'S TOP 10 RANKS, including 2nd, 3rd, 4th, 5th, 6th, 7th, 8th, 9th & 10th Ranks
DISTINCTION 1948 STUDENTS
MARKS IMPROVED COMPARED TO SSLC 1806 STUDENTS
NEET RESULTS 2024 182 STUDENTS ABOVE 600/720 686 STUDENTS ABOVE 500/720
448 STUDENTS SECURED MBBS SEATS IN 2024
JEE MAINS 2025 Above 90 Percentile 292 Students | Subjectwise 99 Percentile & above 77 Students | No. of students qualified for JEE Advanced 515 Students
NATA RESULTS 2025 STUDENTS APPEARED 19 CLEARED 19 (100% RESULT)
NDA RESULTS 2025 25 STUDENTS cleared NDA examinations in the first attempt
CA FOUNDATION 2024 100 STUDENTS QUALIFIED
CSEET RESULTS 2024 (Company Secretary Executive Entrance Test) 24 STUDENTS QUALIFIED
CLAT RESULTS 2024 (Common Law Admission Test) 3 STUDENTS QUALIFIED
ADMISSIONS OPEN 2025-26
SCIENCE PCMB | PCMC | PCMS | PCME NEET | CET | JEE | NATA | NDA
COMMERCE EBAC | EBAS | EBAH | BASBm | BAEBm CA | CS | NDA | CLAT | CIVIL SERVICE
ARTS HEPS CLAT | NDA | CIVIL SERVICE
ADMISSIONS OPEN for NEET Long Term 2026 JEE Long Term 2026
SPECIAL FEE CONCESSION FOR STATE, CBSE & ICSE MERITORIOUS STUDENTS
Scan Here
www.tarjani.co
Ph: 6366377825, 6366377827, 6366377823
WE HAVE NO BRANCHES

ಸಮಾಚಾರ ಸಣ್ಣದಲ್ಲ

ವಸತಿ ಶಾಲೆ: ಶೇ.100ರಷ್ಟು ಸಾಧನೆ

ಕಾರವಾರ: ಕುಮಟಾ ತಾಲೂಕಿನ ಗೋಕರ್ಣ ಹೋಬಳಿಯ ಗಂಗೆಕೊಳ್ಳದಲ್ಲಿರುವ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯು ಪ್ರಸಕ್ತ ವರ್ಷದ ಎಸ್.ಎಸ್.ಎಲ್.ಸಿ ಪರೀಕ್ಷೆಯ ಫಲಿತಾಂಶದಲ್ಲಿ 100% ಸಾಧನೆಯನ್ನು ದಾಖಲಿಸಿದ್ದು, ಸತತವಾಗಿ 4 ವರ್ಷಗಳಿಂದ ಈ ಸಾಧನೆಯನ್ನು ಕಾಯ್ದುಕೊಳ್ಳುವಲ್ಲಿ ಯಶಸ್ವಿಯಾಗಿದೆ. 20 ವಿದ್ಯಾರ್ಥಿನಿಯಲ್ಲಿ 9 ವಿದ್ಯಾರ್ಥಿನಿಯರು ವಿಶಿಷ್ಟ ಶ್ರೇಣಿಯಲ್ಲಿ ಉಳಿದಂತೆ 11 ವಿದ್ಯಾರ್ಥಿನಿಯರು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದು ಶಾಲೆಯ ಫಲಿತಾಂಶವು ಶೇಕಡಾ 100 ರಷ್ಟಾಗಿದೆ. ಧನ್ಯಶ್ರೀ ಶನಿಯಾರ ದೇವಡಿಗ 96.64% ಅಂಕಗಳನ್ನು ಪಡೆದು ಪ್ರಥಮ ಸ್ಥಾನ, ಭಾಗ್ಯಶ್ರೀ ಲಕ್ಷ್ಮಣ ಪೂಜೇರಿ, 96.48% ದ್ವಿತೀಯ ಸ್ಥಾನ, ಪ್ರತಿಮಾ ಲೋಹಿತ್ ಪೂಜಾರಿ, 96.36% ತೃತೀಯ ಸ್ಥಾನ, ನಯನಾ ಮಂಜುನಾಥ ಪಟಗಾರ 95.20% ಚತುರ್ಥ ಸ್ಥಾನ, ಹರ್ಷಿತಾ ವಿನಾಯಕ ಪಟಗಾರ, 94.56 ಅಂಕಗಳನ್ನು ಪಡೆದು ಐದನೇ ಸ್ಥಾನವನ್ನು ಪಡೆದಿರುತ್ತಾರೆ. ಈ ಎಲ್ಲಾ ವಿದ್ಯಾರ್ಥಿನಿಯರಿಗೆ ಪಾಠ ಬೋಧನೆ ಮಾಡಿದ ವಿಷಯ ಶಿಕ್ಷಕರುಗಳಿಗೆ ಹಾಗೂ ವಿದ್ಯಾರ್ಥಿನಿಯರಿಗೆ, ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಉಮೇಶ. ವೈ. ಕೆ. ಮತ್ತು ವಸತಿ ಶಾಲೆಯ ಪ್ರಾಂಶುಪಾಲ ಎನ್.ಆರ್.ನಾಯಕ ಹಾಗೂ ಸಿಬ್ಬಂದಿಗಳು ಶುಭ ಕೋರಿದ್ದಾರೆ.

ಇಂದಿರಾ ಗಾಂಧಿ ಶಾಲೆ ಉತ್ತಮ ಸಾಧನೆ

ಕಾರವಾರ: ಅಂಕೋಲಾ ತಾಲೂಕಿನ ಇಂದಿರಾ ಗಾಂಧಿ ವಸತಿ ಶಾಲೆ ಹೊನ್ನೆಕೇರಿ ಅಂಕೋಲಾ ಶಾಲೆಯ ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆಯಲ್ಲಿ 40 ವಿದ್ಯಾರ್ಥಿಗಳಲ್ಲಿ 39 ವಿದ್ಯಾರ್ಥಿಗಳೂ ಉತ್ತೀರ್ಣರಾಗಿದ್ದು ಶಾಲೆಯ ಫಲಿತಾಂಶ 97.50% ರಷ್ಟು ಪಡೆದಿರುತ್ತದೆ. ಕೊಟ್ರೇಶ ನಾಗಲಾಪುರ 613 ಅಂಕಗಳಿಸಿ 98.08% ದೊಂದಿಗೆ ಪ್ರಥಮ ಸ್ಥಾನ ಗಳಿಸಿದರೆ, ನಮ್ರತಾ ನಾಯಕ 593 ಅಂಕ ಗಳಿಸಿ 94.88% ದ್ವಿತೀಯ ಸ್ಥಾನ ಗಳಿಸಿದರೆ, ಶ್ರೀಕೃಷ್ಣರಡ್ಡಿ ಗಿರಡ್ಡಿ 592ಅಂಕ ಗಳಿಸಿ 94.72% ತೃತೀಯ ಸ್ಥಾನ ಗಳಿಸುವ ಮೂಲಕ ಶಾಲೆಗೆ ಕೀರ್ತಿ ತಂದಿರುತ್ತಾರೆ. ಪರೀಕ್ಷೆಗೆ ಹಾಜರಾದ 40 ವಿದ್ಯಾರ್ಥಿಗಳಲ್ಲಿ 39 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, 13 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿಯಲ್ಲಿ ಮತ್ತು 24 ವಿದ್ಯಾರ್ಥಿಗಳು ಉನ್ನತ ಶ್ರೇಣಿಯಲ್ಲಿ ಹಾಗೂ 2 ವಿದ್ಯಾರ್ಥಿಗಳು ದ್ವಿತೀಯ ಶ್ರೇಣಿಯಲ್ಲಿ ಉತ್ತೀರ್ಣರಾಗಿರುತ್ತಾರೆ. ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಉತ್ತರ ಕನ್ನಡ ಜಿಲ್ಲೆಯ ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಉಮೇಶ ವೈ ಕೆ, ಹಾಗೂ ಶಾಲೆಯ ಪ್ರಾಂಶುಪಾಲ ವಿನೋದ ಪಿ ಗಾಂವಕರ ಮತ್ತು ಶಾಲಾ ಶಿಕ್ಷಕ, ಶಿಕ್ಷಕೇತರ ವೃಂದದವರೂ ಅಭಿನಂದನೆ ಸಲ್ಲಿಸಿದ್ದಾರೆ.

ನಚಿಕೇತ ಮರಾಠಿ: 625ಕ್ಕೆ 623 ಅಂಕಗಳಿಕೆ

ಯಲ್ಲಾಪುರ: ಈ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಸ್ಥಳೀಯ ವೈ. ಟಿಎಸ್‌ಎಸ್ ಆಂಗ್ಲ ಮಾಧ್ಯಮ ಪ್ರೌಢ ಶಾಲೆಯ ನಚಿಕೇತ ನಾಗಪ್ಪ ಮರಾಠಿ 625 ಕ್ಕೆ 623 (ಶೇ.99.68), ಅಂಕ ಗಳಿಸಿ ಶಾಲೆಗೆ ಪ್ರಥಮ, ರಾಜ್ಯಕ್ಕೆ 3ನೇ ಸ್ಥಾನ ತಾಲೂಕಿಗೆ ಪ್ರಥಮ, ಧನ್ಯಾ ನಾರಾಯಣ ಹೆಗಡೆ 625ಕ್ಕೆ 622 (ಶೇ.99.52) ಅಂಕ ಗಳಿಸಿ ದ್ವಿತೀಯ, ರಾಜ್ಯಕ್ಕೆ 4ನೇ ಸ್ಥಾನ, ತಾಲೂಕಿಗೆ 2 ನೇ ಸ್ಥಾನ, ಸಿರಿ ರಾಯನಗೌಡ್ರ 625ಕ್ಕೆ 610 (ಶೇ.97.6) ಗಳಿಸಿ ಶಾಲೆಗೆ ತೃತೀಯ, ತಾಲೂಕಿಗೆ 9ನೇ ಸ್ಥಾನ ಪಡೆದಿರುತ್ತಾರೆ. ಮಹಮ್ಮದ ಸಾಧಿಕ್ ರಿತ್ತಿ 603(ಶೇ.96.48), ಪ್ರೀತಮ್ ಬಸಪ್ಪ ಉಗ್ನಿಕೇರಿ 602 (ಶೇ.96.32), ಸೋನಲ್ ಸಂತೋಷ ಜಾಧವ 600 (ಶೇ. 96), ಶಶಾಂಕ್ ದತ್ತಾತ್ರೇಯ ಭಟ್ಟ 597 (ಶೇ.95.52), ಸಿದ್ಧಾರ್ಥ ಪ್ರಶಾಂತ ಜಾಧವ 597(ಶೇ.95.52), ಅಂಕಿತ ರಾಜಕುಮಾರ ಹೊಸಮನಿ 594 (ಶೇ.95.04) ಪಡೆದು ಪರೀಕ್ಷೆಗೆ ಕುಳಿತ 46 ವಿದ್ಯಾರ್ಥಿಗಳಲ್ಲಿ 23 ವಿದ್ಯಾರ್ಥಿಗಳು ಉನ್ನತ ಶ್ರೇಣಿ, 17 ವಿದ್ಯಾರ್ಥಿಗಳು ಪ್ರಥಮ ಶ್ರೇಣಿ ಪಡೆದಿರುತ್ತಾರೆ. ಇವರ ಈ ಸಾಧನೆಗೆ ಸಂಸ್ಥೆಯ ಅಧ್ಯಕ್ಷ ರವಿಕುಮಾರ ಲಕ್ಷ್ಮಣ ಶಾನಭಾಗ, ಉಪಾಧ್ಯಕ್ಷ ಪ್ರಸನ್ನ ಗುಡಿಗಾರ, ಕಾರ್ಯದರ್ಶಿಗಳಾದ ರಾಜೇಂದ್ರಪ್ರಸಾದ ಬಿ ಭಟ್ಟ ಹಾಗೂ ಆಡಳಿತ ಮಂಡಳಿಯ ಎಲ್ಲಾ ಸದಸ್ಯರು, ಪ್ರಾಂಶುಪಾಲರಾದ ಆನಂದ ಹೆಗಡೆ, ಮುಖ್ಯೋಪಾಧ್ಯಾ ಯರಾದ ಶೈಲಜಾ ಮಾಪ್ಸೇಕರ ಹಾಗೂ ಎಲ್ಲಾ ಶಿಕ್ಷಕ-ಶಿಕ್ಷಕೇತರ ಸಿಬ್ಬಂದಿ ಅಭಿನಂದಿಸಿದ್ದಾರೆ.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ರೈತರ ಪಂಪ್ ಸೆಟ್‌ಗಳಿಗೆ ವಿದ್ಯುತ್ ನೀಡಲು ತೀರ್ಮಾನ: ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್

ಕೇಂದ್ರದ ಗಮನಕ್ಕೆ ವರದಾ-ಬೇಡ್ತಿ ಜೋಡಣೆ

ಹಾನಗಲ್ (ಹಾವೇರಿ): ಕುಸುಮ್ ಯೋಜನೆ ಮೂಲಕ ಪ್ರತಿ ತಾಲೂಕಿನಲ್ಲಿ 20 ಮೆ.ವ್ಯಾ ಸಾಮರ್ಥ್ಯದ ಸೋಲಾರ್ ವಿದ್ಯುತ್ ಘಟಕ ಸ್ಥಾಪನೆ ಮಾಡಿ ಇದರಿಂದ ಹಗಲು ಹೊತ್ತಿನಲ್ಲಿಯೇ ರೈತರ ಪಂಪ್‌ಸೆಟ್‌ಗಳಿಗೆ ವಿದ್ಯುತ್ ನೀಡಲು ಸರಕಾರ ತೀರ್ಮಾನ ಮಾಡಿದೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಹೇಳಿದರು.

ಹಾವೇರಿ ಜಿಲ್ಲೆಯ ಹಾನಗಲ್ ವಿಧಾನಸಭಾ ಕ್ಷೇತ್ರದ ಅಕ್ಕಿ ಆಲೂರಿನಲ್ಲಿ ಭಾನುವಾರ ನಡೆದ ವಿವಿಧ ಕಾಮಗಾರಿಗಳ ಶಂಕುಸ್ಥಾಪನೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

665.75 ಕೋಟಿ ಹಣವನ್ನು ನಿಮ್ಮ ಕ್ಷೇತ್ರದ ಅಭಿವೃದ್ಧಿಗೆ ನೀಡುತ್ತಿದ್ದೇವೆ. 418 ಕೋಟಿ ವೆಚ್ಚದಲ್ಲಿ ಬಾಳಂಬೀಡು ಹಾಗೂ ಇತರೆ 72 ಗ್ರಾಮಗಳ 162 ಕೆರೆಗಳು. 116 ಕೋಟಿ ವೆಚ್ಚದಲ್ಲಿ ಹಿರೇಕೌಂಶಿ ಮತ್ತು ಇತರೆ 9 ಗ್ರಾಮಗಳ 77 ಕೆರೆಗಳನ್ನು ತುಂಬಿಸುವ ಕೆಲಸ ನಾವು ಮಾಡುತ್ತಿದ್ದೇವೆ. 2018 ಕೋಟಿ ವೆಚ್ಚದ ವರದಾ ಮತ್ತು ಬೇಡ್ತಿ ನದಿ ಜೋಡಣೆ ವಿಚಾರವನ್ನು ರಾಷ್ಟ್ರೀಯ ನದಿ ಪ್ರಾಧಿಕಾರದ ಮೂಲಕ ಕೇಂದ್ರ ಸರಕಾರದ ಗಮನಕ್ಕೆ ತರಲಾಗಿದೆ ಎಂದರು.

ರೈತರಿಗಾಗಿ ಹಾಲಿನ ಬೆಲೆ ಹೆಚ್ಚಳ ಮಾಡಿದ್ದೇವೆ. ಈ ಹಣವನ್ನು ಸರಕಾರ ಏನಾದರೂ ತೆಗೆದುಕೊಂಡಿದೆಯೇ? ಇದನ್ನು ರೈತರಿಗೆ ನೀಡಿದ್ದೇವೆ. 30 ಸಾವಿರವಿದ್ದ 10 ಗ್ರಾಂ ಚಿನ್ನದ ಬೆಲೆ 1 ಲಕ್ಷಕ್ಕೆ ಏರಿದೆ. ದಿನಸಿ ವಸ್ತುಗಳು, ಕಬ್ಬಿಣ, ಸಿಮೆಂಟ್ ಸೇರಿದಂತೆ ಪ್ರತಿಯೊಂದು ವಸ್ತುಗಳ ಬೆಲೆ ಏರಿಕೆಯಾದಾಗ ಬಿಜೆಪಿಯವರು ಆಕ್ರೋಶ ವ್ಯಕ್ತಪಡಿಸಲಿಲ್ಲ. ಅವರು ಯಾವಾಗ ನಮ್ಮ ಮೇಲೆ ಆಕ್ರೋಶ ವ್ಯಕ್ತಪಡಿಸಿದರೋ ಅದೇ ದಿನ ಕೇಂದ್ರ ಸರಕಾರ ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ ಬೆಲೆ ಹೆಚ್ಚಳ ಮಾಡಿತು. ಅಧಿಕಾರದಲ್ಲಿ ಇರುವ ನಾವು ನಿಮ್ಮ ನೆರವಿಗೆ ನಿಲ್ಲಬೇಕೆ ಹೊರತು ಪಿಕ್‌ಪಾಕೆಟ್ ಮಾಡಲು ಅಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಹಾನಗಲ್ ವಿಧಾನಸಭಾ ಕ್ಷೇತ್ರದ ಅಕ್ಕಿ ಆಲೂರಿನಲ್ಲಿ ವಿವಿಧ ಕಾಮಗಾರಿಗಳ ಶಂಕುಸ್ಥಾಪನೆ ಕಾರ್ಯಕ್ರಮವನ್ನು ಡಿಸಿಎಂ ಡಿ.ಕೆ.ಶಿವಕುಮಾರ್, ಸಿಎಂ ಸಿದ್ದರಾಮಯ್ಯ ಉದ್ಘಾಟಿಸಿದರು.

> ಮಾಜಿ ಸಿಎಂ ಬಂಗಾರಪ್ಪ ಅವರ ಅವಧಿಯಲ್ಲಿ ರೈತರ ಪಂಪ್ ಸೆಟ್‌ಗೆ ಉಚಿತ ವಿದ್ಯುತ್ ನೀಡಲಾಯಿತು. 2013 ರ ಕಾಂಗ್ರೆಸ್ ಸರಕಾರದ ವೇಳೆ ನಾನು ಇಂಧನ ಸಚಿವನಾಗಿದ್ದಾಗ ರೈತರ ಪಂಪ್‌ಸೆಟ್‌ಗಳಿಗೆ ನೀಡುವ ತ್ರೀ ಫೇಸ್ ವಿದ್ಯುತ್ ಪೂರೈಕೆಯನ್ನು 6 ಗಂಟೆಯಿಂದ 7 ಗಂಟೆಗೆ ಹೆಚ್ಚಳ ಮಾಡಲಾಯಿತು.
>
> ಡಿ.ಕೆ.ಶಿವಕುಮಾರ್, ಡಿಸಿಎಂ

ಗ್ಯಾರಂಟಿ ವಿರೋಧ ಮಾಡುತ್ತಿದ್ದ ಬಿಜೆಪಿಯವರು ನಂತರ ಮಹಾರಾಷ್ಟ್ರ, ಹರಿಯಾಣ, ಮಧ್ಯಪ್ರದೇಶ, ದೆಹಲಿ ಚುನಾವಣೆಯಲ್ಲಿ ಅವರೂ ಗ್ಯಾರಂಟಿಗಳನ್ನು ಘೋಷಣೆ ಮಾಡಿದರು. ದೇಶದ ಪ್ರಧಾನಿ ಕರ್ನಾಟಕ ಬರಿದಾಗಿ ಹೋಯಿತು ಎಂದರು. ಗ್ಯಾರಂಟಿ ಯೋಜನೆಗಳಿಗೆ 52 ಸಾವಿರ ಕೋಟಿ ಕೊಟ್ಟು ರಾಜ್ಯದಲ್ಲಿ ಸಾವಿರಾರು ಕೋಟಿ ರು.ಗಳ ಅಭಿವೃದ್ಧಿ ಕೆಲಸ ಮಾಡಲಾಗುತ್ತಿದೆ ಎಂದರು.

ಹಾನಗಲ್ಲಿನ ಶಾಸಕ ಶ್ರೀನಿವಾಸ ಮಾನೆ ಅವರು ಅತ್ಯಂತ ಕ್ರಿಯಾಶೀಲವಾದ ಶಾಸಕರು. ನೀರಾವರಿ, ಲೋಕೋಪಯೋಗಿ ಮಾತ್ರವಲ್ಲ ಎಲ್ಲಾ ಇಲಾಖೆಗಳಿಂದ ಜನರಿಗೆ ಉಪಯೋಗವಾಗುವ ಕೆಲಸ ಮಾಡುತ್ತಿದ್ದಾರೆ. ಕಂದಾಯ, ವಿದ್ಯುತ್ ಇಲಾಖೆಯಿಂದ ರೈತರಿಗೆ ಬೇಕಾದಂತಹ ಕೆಲಸ ಮಾಡಿಕೊಡುತ್ತಿದ್ದಾರೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಸಿ.ಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ ಶಿವಕುಮಾರ್, ಉಸ್ತುವಾರಿ ಸಚಿವ ಶಿವಾನಂದ ಪಾಟೀಲ್, ಸಚಿವ ಸತೀಶ ಜಾರಕಿಹೊಳೆ, ವಿ.ಪ ಸರಕಾರ ಮುಖ್ಯ ಸಚೇತಕರಾದ ಸಲೀಂ ಅಹಮ್ಮದ, ಕಾರ್ಯಕ್ರಮ ಅಧ್ಯಕ್ಷರು ಶಾಸಕ ಶ್ರೀನಿವಾಸ ಮಾನೆ, ಶಾಸಕ ಯಾಶೀರಖಾನ್ ಪಠಾಣ, ಗ್ಯಾರಂಟಿ ರಾಜ್ಯ ಉಪಾಧ್ಯಕ್ಷ ಎಸ್.ಆರ್.ಪಾಟೀಲ್, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಸಂಜೀವಕುಮಾರ ನೀರಲಗಿ, ಹೆಸ್ಕಾಂ ಅಧ್ಯಕ್ಷ ಅಜ್ಜಂಪೀರ ಖಾದ್ರಿ, ಸಿಇಒ ರುಚಿ ಬಿಂದಾಲ್, ಜಿಲ್ಲಾಧಿಕಾರಿ ಡಾ.ವಿಜಯ ಮಹಾಂತೇಶ ದಾನಮ್ಮನವರ, ಐಜಿ ರವಿಕಾಂತ್, ಎಸ್ಪಿ ಅಂಶುಕುಮಾರ, ಕಾಂಗ್ರೆಸ್ ಮುಖಂಡರಾದ ಆನಂದ ಗಡ್ಡದೇವರಮಠ ಹಾಜರಿದ್ದರು.

ರಾಜ್ಯದ ಅಭಿವೃದ್ಧಿಗಾಗಿ ಬಜೆಟ್ ಮಂಡನೆ

ಕೇಂದ್ರ ರಾಜ್ಯದ ಪಾಲಿನ ಶೇ.13 ರಷ್ಟು ಹಣ ಮಾತ್ರ ನೀಡುತ್ತಿದೆ. ನಾವು ಅಧಿಕಾರಕ್ಕೆ ಬರುವ ಮುಂಚಿತವಾಗಿ ಕೊಟ್ಟಂತಹ ಗ್ಯಾರಂಟಿ ಭರವಸೆಗಳನ್ನು ಈಡೇರಿಸಿದ್ದೇವೆ. ಬೆಲೆ ಏರಿಕೆಯಿಂದ ತತ್ತರಿಸಿ ಹೋಗಿದ್ದ ನಿಮಗೆ ನಾವು ಆಸರೆಯಾಗಿ ನಿಂತು ಆಧಾರವಾಗಿದ್ದೇವೆ. ಕೇಂದ್ರ ಸರಕಾರ ರಾಜ್ಯದಿಂದ ಹೋದ ತೆರಿಗೆಯಲ್ಲಿ ಕೇವಲ ಶೇ.13 ರಷ್ಟನ್ನು ಮಾತ್ರ ವಾಪಸ್ ಕೊಡುತ್ತಿದೆ. ಆದರೂ ನಾವು 4 ಲಕ್ಷ ಕೋಟಿಗೂ ಅಧಿಕವಾದ ಬಜೆಟ್ ಅನ್ನು ರಾಜ್ಯದ ಅಭಿವೃದ್ಧಿಗಾಗಿ ಮಂಡನೆ ಮಾಡಿದ್ದೇವೆ ಎಂದು ಡಿ.ಕೆ.ಶಿವಕುಮಾರ ಹೇಳಿದರು.

ಬೆಲೆ ಏರಿಕೆಯ ಸರದಾರ ನರೇಂದ್ರ ಮೋದಿ

ಹಾನಗಲ್: ಬೆಲೆ ಏರಿಕೆಯ ಸರದಾರ ಪ್ರಧಾನಿ ಮೋದಿ ಅವರು ಸುಳ್ಳಿನ ಸರದಾರರೂ ಆಗಿದ್ದಾರೆ. ಮೋದಿ ಅವರು ಭಾಷಣದಲ್ಲಿ ಕೊಟ್ಟ ಭರವಸೆಯಲ್ಲಿ ಒಂದೇ ಒಂದು ಜಾರಿ ಆಗಿರುವ ಉದಾಹರಣೆ ಇದೆಯೇ ಎಂದು ಸಿಎಂ ಸಿದ್ದರಾಮಯ್ಯ ಅವರು ಸವಾಲು ಹಾಕಿದರು. ಹಾವೇರಿ ಜಿಲ್ಲೆಯಲ್ಲಿ 650 ಕೋಟಿ ಮೌಲ್ಯದ ಅಭಿವೃದ್ಧಿ ಕಾರ್ಯಗಳನ್ನು ಜನಾರ್ಪಣೆಗೊಳಿಸಿ, ನೂತನ ಯೋಜನೆಗಳ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದರು. ಮುಂದಿನ ಲೋಕಸಭಾ ಚುನಾವಣೆಯಲ್ಲಿ ಹಾವೇರಿಯಲ್ಲಿ ಕಾಂಗ್ರೆಸ್ ಗೆದ್ದೇ ಗೆಲ್ಲತ್ತೆ ಎಂದು ಸಿ.ಎಂಚುನಾವಣೆಗಳ ಭರವಸೆ ವ್ಯಕ್ತಪಡಿಸಿದರು.

ಡಾಲರ್ ಬೆಲೆ 59 ರು.ನಿಂದ 85 ರು.ಗೆ ಏರಿಕೆ ಆಗಿದೆ. ಅಡಗೆ ಅನಿಲ 400 ರು.ಪಾ ದಿಂದ 879ರು. ಆಗಿದೆ. ಪೆಟ್ರೋಲ್, ಡೀಸೆಲ್, ರಸಗೊಬ್ಬರ, ಔಷಧ, ಚಿನ್ನ, ಅಕ್ಕಿ, ಬೇಳೆ, ಎಣ್ಣೆ, ಕಾಳು ಸೇರಿ ಎಲ್ಲದರ ಬೆಲೆಯನ್ನೂ ಮೋದಿ ಆಕಾಶಕ್ಕೆ ಏರಿಸಿದ್ದಾರಲ್ಲಾ ಇದೇನಾ ಅಚ್ಚೆ ದಿನ್ ? ವರ್ಷಕ್ಕೆ 2 ಕೋಟಿ ಉದ್ಯೋಗ ಕೊಡ್ತೀವಿ ಎಂದು ಮೋದಿ ಭರವಸೆ ಕೊಟ್ಟಿದ್ದರು. ಈ 11 ವರ್ಷದಲ್ಲಿ 22 ಕೋಟಿ ಉದ್ಯೋಗ ಸೃಷ್ಟಿ ಆಗಬೇಕಿತ್ತು. ಆಗಲಿಲ್ಲ. ಅದಕ್ಕೇ ಹೇಳೋದು ಸುಳ್ಳು ಬಿಜೆಪಿಯ ಮನೆ ದೇವರು ಎಂದರು.

ಶಾಸಕ ಮಾನೆಗೆ ಉತ್ತಮ ಭವಿಷ್ಯ ಇದೆ: ಸಿಎಂ

ಶಾಸಕ ಮಾನೆಯವರು ಕ್ಷೇತ್ರಕ್ಕೆ ಮಾಡಿರುವ ಕೆಲಸ ಕಾಣುತ್ತಿದೆ. ಈ ಊರಿನ ಅಳಿಯ ಬೊಮ್ಮಾಯಿಯವರೇ ಕ್ಷೇತ್ರಕ್ಕೆ ಏನು ಮಾಡಿದ್ದೀರಿ ಜನರಿಗೆ ಉತ್ತರಿಸಿ ಎಂದು ಸವಾಲು ಹಾಕಿದ ಮುಖ್ಯಮಂತ್ರಿಗಳು, ಮುಂದೆ ಶಾಸಕ ಮಾನೆಯವರಿಗೆ ರಾಜಕೀಯವಾಗಿ ಉತ್ತಮ ಭವಿಷ್ಯ ಇದೆ ಎಂದು ಘೋಷಿಸಿದರು.

ಬೀರಲಿಂಗೇಶ್ವರ ಭವನ ನಿರ್ಮಾಣಕ್ಕೆ ಶಾಸಕ ಪಾಟೀಲ ಚಾಲನೆ

ಗಜೇಂದ್ರಗಡ: ಗೋಗೇರಿ ಗ್ರಾಮದಲ್ಲಿ ಕೃಷಿಯನ್ನೇ ಅವಲಂಬಿತರಾಗಿದ್ದು, ರೈತ ಸಮುದಾಯಕ್ಕೆ ಅನುಕೂಲವಾಗುವ ನಿಟ್ಟಿನಲ್ಲಿ ಈ ಭಾಗದ ನಾಗರಸಕೊಪ್ಪ ಕೆರೆ ಸೇರಿ ಸುತ್ತಲಿನ ಕೆರೆಗಳನ್ನು ತುಂಬಿಸುವ ಯೋಜನೆಯನ್ನು ಜಾರಿಗೊಳಿಸುವುದೇ ನನ್ನ ಧ್ಯೇಯವಾಗಿದೆ ಎಂದು ಶಾಸಕ ಜಿ.ಎಸ್. ಪಾಟೀಲ ಹೇಳಿದರು.

ಸಮೀಪದ ಗೋಗೇರಿ ಗ್ರಾಮದಲ್ಲಿ ಧಾರ್ಮಿಕ ದತ್ತಿ ಇಲಾಖೆ ವತಿಯಿಂದ 8 ಲಕ್ಷ ರು. ವೆಚ್ಚದಲ್ಲಿ ಶ್ರೀ ಬೀರಲಿಂಗೇಶ್ವರ ಸಮುದಾಯ ಭವನ ನಿರ್ಮಾಣಕ್ಕೆ ಭಾನುವಾರ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ತಾಲೂಕಿನ ಗೋಗೇರಿಯಿಂದ ಹಿಡಿದು ಹಾಲಕೆರೆ ಗ್ರಾಮದ ವರೆಗೂ ಇರುವ ಎಲ್ಲ ಕೆರೆಗಳನ್ನು ತುಂಬಿಸುವ ಯೋಜನೆ ಕುರಿತು 118 ಕೋಟಿ ವೆಚ್ಚದ ಯೋಜನೆಗೆ ನೀಲನಕ್ಷೆ ಸಿದ್ದಪಡಿಸಲಾಗಿದೆ. ಸರಕಾರದ ಗಮನ ಸೆಳೆದು ಎಲ್ಲ ಕೆರೆಗಳನ್ನು ತುಂಬಿಸಲು ಪ್ರಯತ್ನ ಮಾಡುತ್ತೇನೆ.

ಗೋಗೇರಿ ಗ್ರಾಮದ ಕೃಷಿ ಕುಟುಂಬ ಬೋರವೆಲ್ ನಂಬಿಯೇ ಕೃಷಿ ಚಟುವಟಿಕೆ ಮಾಡುತ್ತಾರೆ. ನಾಗರಸಕೊಪ್ಪ ಗ್ರಾಮದಲ್ಲಿನ ಕೆರೆ ತುಂಬಿದರೆ, ಇಲ್ಲಿನ ಬೋರವೆಲ್‌ಗಳಲ್ಲಿ ಅಂತರ್ಜಲಮಟ್ಟ ಹೆಚ್ಚಳವಾಗಲಿದೆ. ಜತೆಗೆ ಕೃಷಿ ಚಟುವಟಿಕೆಗಳು ಮತ್ತಷ್ಟು ಹೆಚ್ಚಲು ಪೂರಕವಾಗಲಿದೆ. ಹೀಗಾಗಿ ಈ ಯೋಜನೆಯನ್ನು ಜಾರಿಗೊಳಿಸುವುದೇ ನನ್ನ ಗುರಿಯಾಗಿದೆ ಎಂದರು. ಇದೇ ಸಂದರ್ಭದಲ್ಲಿ ಸ್ಥಳೀಯ ಶಾಸಕರ ಪ್ರದೇಶಾಭಿವೃದ್ಧಿ ಯೋಜನೆಯ ಅನುದಾನದಲ್ಲಿ 5 ಲಕ್ಷ ರು. ವೆಚ್ಚದಲ್ಲಿ ಶ್ರೀ ಶರಣಬಸವೇಶ್ವರರ ಸಮುದಾಯ ಭವನ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸಲಾಯಿತು.

ರೋಣ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವೀರಣ್ಣ ಶೆಟ್ಟರ, ವಿ.ಆರ್. ಗುಡಿಸಾಗರ, ಗಜೇಂದ್ರಗಡ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶಿವರಾಜ ಘೋರ್ಪಡೆ, ಶರಣಪ್ಪ ಬೆಟಗೇರಿ, ಕೆ.ಎಸ್. ಕೊಡತಗೇರಿ, ಮಲ್ಲಿಕಾರ್ಜುನ್ ಗಾರಗಿ, ಮಂಜುಳಾ ರೇವಡಿ, ಶ್ರೀ ಧರ ಬಿದರಳ್ಳಿ, ಶ್ರೀ ಧರ ಗಂಜಿಗೌಡರ, ಮಾರ್ತಾಂಡಪ್ಪ ಹದ್ದಣ್ಣವರ, ಬಸನಗೌಡ ಪಾಟೀಲ, ಅಂದಪ್ಪ ಅಡವಿ, ಮಲ್ಲನಗೌಡ ಪಾಟೀಲ, ಹೇಮಾಪತಿ ಭೋಸಲೆ, ಐ.ಎಚ್. ಬಾಗವಾನ, ಇಮಾಮಸಾಬ ಬಾಗವಾನ, ಮೂಕಪ್ಪ ಕರಡಿ, ಅರ್ಜುನ್ ರಾಠೋಡ ಇದ್ದರು.

ಶ್ರೀ ಬೀರಲಿಂಗೇಶ್ವರ ಸಮುದಾಯ ಭವನ ನಿರ್ಮಾಣಕ್ಕೆ ಶಾಸಕ ಜಿ.ಎಸ್.ಪಾಟೀಲ ಭೂಮಿ ಪೂಜೆ ನೆರವೇರಿಸಿದರು.

> ಗ್ರಾಮದಲ್ಲಿ ಹತ್ತು ಹಲವಾರು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಮುಂದಿನ ದಿನಗಳಲ್ಲಿ ಸಮರ್ಪಕ ರಸ್ತೆ, ಚರಂಡಿ ಸೇರಿ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗುವುದು. ಗ್ರಾಮದ ಜನರು ನನ್ನ ಮೇಲೆ ಇಟ್ಟಿರುವ ನಂಬಿಕೆಗೆ ಯಾವುದೇ ಧಕ್ಕೆ ಬರದಂತೆ ನಿಮ್ಮ ಸೇವೆಗೈಯುತ್ತೇನೆ.
>
> -ಜಿ.ಎಸ್. ಪಾಟೀಲ, ಶಾಸಕ

ಸಿದ್ಧಾರ್ಥ ಆಂಗ್ಲ ಮಾಧ್ಯಮ ಪ್ರೌಢ ಶಾಲೆ ಸಾಧನೆ

ಭಟ್ಕಳ: ಇಲ್ಲಿನ ಶಿರಾಲಿಯ ಸಿದ್ಧಾರ್ಥ ಆಂಗ್ಲ ಮಾಧ್ಯಮ ಪ್ರೌಢ ಶಾಲೆ, ಪಂಚವಟಿ ಸಾಲಿನ ಎಸ್.ಎಸ್.ಎಲ್.ಸಿ ಫಲಿತಾಂಶ ಪ್ರಕಟವಾಗಿದ್ದು, ಪರೀಕ್ಷೆಗೆ ಕುಳಿತ 68 ವಿದ್ಯಾರ್ಥಿಗಳಲ್ಲಿ 66 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ.

ಶಾಲೆಯ ಫಲಿತಾಂಶ ಅತ್ಯುತ್ತಮವಾಗಿದ್ದು, ಶೇಕಡಾ 97.08 ದಾಖಲಾಗಿದೆ. ಕಾರ್ತಿಕ್ ನಾಗರಾಜ ನಾಯ್ಕ 613 (98.08%), ಮಾನ್ಯ ಎನ್. ವಿ. 613 (98.08%) ಮತ್ತು ನಂದಿತಾ ಕೆ. ನಾಯ್ಕ 613 (98.08%) ಅಂಕಗಳೊಂದಿಗೆ ಪ್ರಥಮ, ದಿಗಂತ್ ದೇವಾಡಿಗ 611(97.76%) ಅಂಕಗಳೊಂದಿಗೆ ದ್ವಿತಿಯ ಹಾಗೂ ಸುಗಮ ಆರ್ ನಾಯ್ಕ 610 (97.6%) ಅಂಕಗಳೊಂದಿಗೆ ತೃತೀಯ ಸ್ಥಾನ ಪಡೆದಿದ್ದಾರೆ.

ತೇರ್ಗಡೆಯಾದ 66 ವಿದ್ಯಾರ್ಥಿಗಳಲ್ಲಿ 23 ಉನ್ನತ ಶ್ರೇಣಿ, ಮತ್ತು 37 ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ತೃತೀಯ ಭಾಷೆ ಹಿಂದಿಯಲ್ಲಿ 6 ವಿದ್ಯಾರ್ಥಿಗಳು, ಗಣಿತದಲ್ಲಿ 1 ವಿದ್ಯಾರ್ಥಿ, ವಿಜ್ಞಾನದಲ್ಲಿ 1 ವಿದ್ಯಾರ್ಥಿ ಹಾಗೂ ಸಮಾಜ ವಿಜ್ಞಾನದಲ್ಲಿ 2 ವಿದ್ಯಾರ್ಥಿಗಳು 100ಕ್ಕೆ 100 ಅಂಕಗಳನ್ನು ಪಡೆದಿದ್ದಾರೆ.

ಕನ್ನಡ, ಇಂಗ್ಲೀಷ ಹಾಗೂ ಸಮಾಜ ವಿಜ್ಞಾನ ವಿಷಯದಲ್ಲಿ 100 ಕ್ಕೆ 100 ಫಲಿತಾಂಶ ಬಂದಿರುತ್ತದೆ. ವಿದ್ಯಾರ್ಥಿಗಳ ಈ ಸಾಧನೆಗೆ ಆಡಳಿತ ಮಂಡಳಿಯವರು, ಮುಖ್ಯೋ ಪಾಧ್ಯಾಯರು ಮತ್ತು ಎಲ್ಲಾ ಸಿಬ್ಬಂದಿ ವರ್ಗದವರು ಅಭಿನಂದನೆ ಸಲ್ಲಿಸಿದ್ದಾರೆ.

ನಗರ ಠಾಣೆಗೆ ಕಬ್ಬಿಣದ ಗೇಟ್ ಕೊಡುಗೆ

ಶಿರಸಿ: ಸಂಘಟನೆಯ ಮೂಲಕ ಅನೇಕ ಸಮಾಜಿಕ ಕಾರ್ಯಗಳನ್ನು ಮಾಡುತ್ತಿರುವ ಶಿರಸಿಯ ಕೆನರಾ ಬಾರ್ ಬೆಂಡಿಂಗ್ ಮತ್ತು ಸೆಂಟ್ರಿಂಗ್ ಅಸೋಸಿಯೇಷನ್ ನವರು ಸಂಘದ ಸದಸ್ಯರಿಂದ ಸಂಗ್ರಹಿಸಿದ ಹಣದಲ್ಲಿ ಬಡ ಕಾರ್ಮಿಕರಿಗೆ ಸಹಾಯ, ರೋಗಿಗಳಿಗೆ ಸಹಾಯ, ಬಡ ಕಾರ್ಮಿಕರು ಮರಣ ಹೊಂದಿದಾಗ ಸಹಾಯ, ಶಾಲೆ ಅಂಗನವಾಡಿಗಳಿಗೆ ಪಟ್ಟಿ ಪುಸ್ತಕ, ಡೆಸ್ಕ್, ಬೆಂಚ್, ರೇನಕೋಟ್, ಸ್ಕೂಲ್ ಬ್ಯಾಗ್, ಸಂಘದ ಸದಸ್ಯರಿಗಾಗಿ ಕ್ರೀಡೆ ಹೀಗೆ ಅನೇಕ ಚಟುವಟಿಕೆಗಳನ್ನು ನಿಸ್ವಾರ್ಥ ಸೇವೆಯಿಂದ ಮಾಡುತ್ತಿದೆ.

ಇವರ ಪ್ರಮಾಣಿಕ ಸೇವೆ ಎಷ್ಟಿದೆ ಎಂದರೇ ಸಂಘದ ಸದಸ್ಯರ ಮಕ್ಕಳ ಮದುವೆಗಾಗಿಯೇ ಸಂಘದ ಸದಸ್ಯರ ಕೂಡಿಟ್ಟ ಹಣದಿಂದ ಕಲ್ಯಾಣ ಮಂಟಪ ಕೂಡಾ ನಿರ್ಮಾಣಮಾಡುತ್ತಿದೆ. ಹೀಗೆ ಸಮಾಜ ಸೇವೆಯಲ್ಲಿ ಮುಂಚೂಣಿಯಲ್ಲಿರುವ ಈ ಸಂಘ ಇಂದು ನಗರ ಠಾಣೆಗೆ ಕಬ್ಬಿಣ ಗೇಟನ್ನೇ ಕೊಡುಗೆಯಾಗಿ ನೀಡಿದೆ.

ಇದನ್ನು ಪಿಎಸ್‌ಆಯ್ ನಾಗಪ್ಪ ಬಿ. ಸ್ವೀಕರಿಸಿದರು. ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷ ವೆಂಕಟೇಶ ನಾಯಕ್, ಗೌರವಾಧ್ಯಕ್ಷ ಬಾಬಣ್ಣ ಹನ್ಮಂತಿಕರ್, ಕಾರ್ಯದರ್ಶಿ ಸದಾನಂದ ಮರಾಠೆ, ಖಜಾಂಚಿ ಆನಂದ ಸಾಲೇರ್, ನಿರ್ದೇಶಕರುಗಳಾದ ಮಹ್ಮದ ಶಫಿ ಶೇಖ್, ನ್ಯಾಯ ಸಮಿತಿಯ ಅಧ್ಯಕ್ಷರಾದ ರಾಮಮೂರ್ತಿ ಭೋವಿ, ಸದಸ್ಯರಾದ ನಿತೀಶ ಕುರುಬ್, ರಾಜು ಪೂಜಾರಿ ಇತರರಿದ್ದರು.

ಆನಂದ ಆಶ್ರಮ ಆಂಗ್ಲಮಾಧ್ಯಮ ಪ್ರೌಢಶಾಲೆಗೆ ಶೇ.95 ಫಲಿತಾಂಶ

ಭಟ್ಕಳ: ನಗರದ ಆನಂದ ಆಶ್ರಮ ಆಂಗ್ಲಮಾಧ್ಯಮ ಪ್ರೌಢ ಶಾಲೆಯ 2024-2025ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ಪಡೆದುಕೊಂಡಿದ್ದು ಒಟ್ಟಾರೆ ಶಾಲೆಯ ಫಲಿತಾಂಶ ಶೇ.95 ಆಗಿದೆ.

ವಿದ್ಯಾರ್ಥಿಗಳಾದ ಸಿಮ್ರಾ ಮಹರೀನ ಜಿ.ಎಮ್. ಶೇ. 99.2, ವಿಕಾಸ ವಾಸು ಮೊಗೇರ ಶೇ. 98.88, ಸಿಂಚನಾ ಮಹೇಶ ಹೆಗಡೆ ಶೇ.98.72, ಐಶಾ ನುಮಾ ಕಾಶಿಮಜಿ ಶೇ.98.56, ಭರತ್ ಕೇಶವ ಪೈ ಶೇ.98.56, ಪ್ರೀತಮ್ ಮಾದೇವ ಖಾರ್ವಿ ಶೇ.98.56, ರೋಹನ್ ಜೆ.ಕೆ. ಶೇ.98.56, ಸಚಿನ ಅನಂತ ಮೊಗೇರ ಶೇ.98.56, ಶ್ರೀನಿವಾಸ ಉಮೇಶ ಭಟ್ಟ ಶೇ.98.40, ಸಿಯಾನ್ ರುಜಾರಿಯೋ ಡಯಾಸ್ ಶೇ.97.92, ದಕ್ಷ ಗಣಪತಿ ನಾಯ್ಕ ಶೇ.97.92, ಸಚೇತ ನಾಗರಾಜ ಚಳ್ಳಜ್ಜಿಮನೆ ಶೇ.97.6, ವಿಲಾಸ ನಾಗರಾಜ ಮೊಗೇರ ಶೇ.97.6, ದೀಕ್ಷಾ ರಾಮಕೃಷ್ಣ ಮೊಗೇರ ಶೇ.97.44, ಪ್ರಗತಿ ನಿತ್ಯಾನಂದ ಶೆಟ್ಟಿ ಶೇ.97.44, ದಯಾನಂದ ಡಿ.ಬಿ. ಶೇ.97.28, ಎ.ಎಸ್.ಅಭಿಷೇಕ ಶೇ.97.12, ಫಾಮಿಯಾ ಶೇ.96.08, ಸೌಜನ್ಯ ವಿಠಲ ನಾಯ್ಕ ಶೇ.96.90, ಅಫಾಕ್ ಅಜ್ಮಲ್ ಮುಜಾವರ್ ಶೇ.96.64, ಸಫಿಯಾ ರಿಫಾ ಶೇಖ್ ಶೇ.96.64, ಭಸ್ವತಾ ನಾಗೇಶ ಮೊಗೇರ ಶೇ.96.32, ಅಸ್ಪಿಯಾ ತೆಹಸೀನ್ ಶೇ.96, ಶ್ರಾವ್ಯ ಶೇ.95.80, ವಿಶಾಲ್ ಸಂದೀಪ ಶೆಟ್ಟ ಶೇ.95.68, ಶ್ರೇಯಸ್ ಎಸ್. ನಾಯ್ಕ ಶೇ.95, ಶ್ರೇಯಾ ಶಂಕರ ನಾಯ್ಕ ಶೇ.94.72 ಅಂಕಗಳನ್ನು ಗಳಿಸಿದ್ದಾರೆ. ಡಿಸ್ಟಿಂಗ್ಷನ್‌ನಲ್ಲಿ 77, ಪ್ರಥಮ ದರ್ಜೆಯಲ್ಲಿ 67, ದ್ವಿತೀಯ ದರ್ಜೆಯಲ್ಲಿ 10, ತೃತೀಯ ದರ್ಜೆಯಲ್ಲಿ 1 ಉತ್ತೀರ್ಣರಾಗಿದ್ದು, ಕನ್ನಡಲ್ಲಿ 27, ಹಿಂದಿಯಲ್ಲಿ 9, ಗಣಿತದಲ್ಲಿ 2, ವಿಜ್ಞಾನದಲ್ಲಿ 2, ಸಮಾಜ ವಿಜ್ಞಾನದಲ್ಲಿ 15 ವಿದ್ಯಾರ್ಥಿಗಳೂ 100ಕ್ಕೆ 100 ಅಂಕ ಗಳಿಸಿದ್ದಾರೆ. ಉತ್ತಮ ಅಂಕಗಳಿಸಿದ ವಿದ್ಯಾರ್ಥಿಗಳನ್ನು ಶಾಲಾ ಆಡಳಿತ ಮಂಡಳಿ, ಪ್ರಾಂಶುಪಾಲರು, ಬೋಧಕ, ಬೋಧಕೇತರ ಸಿಬ್ಬಂದಿ ಅಭಿನಂದಿಸಿದ್ದಾರೆ.

ದೇವಸ್ಥಾನಕ್ಕೆ ತೆರಳಿದ ಕಳಸ

ಗೋಕರ್ಣ: ಶ್ರೀ ಭದ್ರಕಾಳಿ ದೇವಿಯ ಬಂಡಿ ಹಬ್ಬದ ನಿಮಿತ್ತ ದೇವಿಯ ಕಳಸವು ಮಾಣೇಶ್ವರ ದೇವಸ್ಥಾನಕ್ಕೆ ತೆರಳಿ ಅಲ್ಲಿ ಆಸಿನವಾಯಿತು. ದೇವಸ್ಥಾನದಲ್ಲಿ ಪೂಜೆ ಪುನಸ್ಕಾರ ನಡೆದ ನಂತರ ಶ್ರೀ ಭದ್ರಕಾಳಿ ದೇವಿಯ ಕಳಸವನ್ನು ಹೊತ್ತ ಗುನಗರು ಪ್ರಮುಖ ರಸ್ತೆಗಳಲ್ಲಿ ಸಂಚರಿಸಿದರು. ದೇವರ ಕಳಸ ಬರುವ ಮಾರ್ಗದಲ್ಲಿ ಅಂಗಡಿಯವರು ಹಾಗೂ ಮನೆಯವರು ತಳಿರು ತೋರಣ ಹಾಕಿ ರಂಗೋಲಿ ಬಿಡಿಸಿ ದೇವರಿಗೆ ಪೂಜೆ ಸಲ್ಲಿಸಿದರು. ಪ್ರತಿ ವರ್ಷ ನಡೆಯುವ ಈ ಹಬ್ಬವನ್ನು ವೀಕ್ಷಿಸಲು ಸಾಕಷ್ಟು ಸಂಖ್ಯೆಯಲ್ಲಿ ಜನರು ಆಗಮಿಸುತ್ತಾರೆ.

ಡಿಪ್ಲೊಮಾ ಕೋರ್ಸ್ ಪ್ರವೇಶಕ್ಕೆ ಅರ್ಜಿ

ಕಾರವಾರ: ಸರಕಾರಿ ಪಾಲಿಟೆಕ್ನಿಕ್, ಕಾರವಾರದಲ್ಲಿ ಪ್ರಥಮ ವರ್ಷ ಡಿಪ್ಲೊಮಾ (ಪ್ರಥಮ ಸೆಮಿಸ್ಟರ್) ಡಿಪ್ಲೊಮಾ ಕೋರ್ಸ್‌ಗಳ ಪ್ರವೇಶಾತಿಗಾಗಿ ಆಫ್-ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಕರ್ನಾಟಕ ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಶೇ. 35% ಅಂಕಗಳನ್ನು ಪಡೆದು ಉತ್ತೀರ್ಣರಾಗಿರಬೇಕು. ನಿಗದಿತ ಅರ್ಜಿಯ ನಮೂನೆಗಳನ್ನು ಈ ಸಂಸ್ಥೆಯಲ್ಲಿ ನೀಡಲಾಗುವುದು. ಪ್ರವೇಶ ಬಯಸುವ ಅಭ್ಯರ್ಥಿಗಳು ಮೇ.8 ರೊಳಗಾಗಿ ಅರ್ಜಿಯನ್ನು ಸಲ್ಲಿಸಿ ಮೇ.9 ರಿಂದ ಆಫ್-ಲೈನ್ ಕೌನ್ಸಿಲಿಂಗ್ ಮೂಲಕ ಪ್ರವೇಶ ಪಡೆಯಬಹುದಾಗಿದೆ. ಅಭ್ಯರ್ಥಿಯು ಅರ್ಜಿಯನ್ನು ಸರಕಾರಿ ಪಾಲಿಟೆಕ್ನಿಕ್, ಕಾರವಾರ ಸಂಸ್ಥೆಯಿಂದ ಪಡೆದು ಭರ್ತಿ ಮಾಡಿದ ಅರ್ಜಿಯನ್ನು ಈ ಸಂಸ್ಥೆಗೆ ಮೇ.8 ರೊಳಗಾಗಿ ಸಂಬಂಧಿಸಿದ ಎಲ್ಲ ಪ್ರಮಾಣ ಪತ್ರಗಳ ಝೇರಾಕ್ಸ್ ಪ್ರತಿಯೊಂದಿಗೆ ಸಲ್ಲಿಸಬೇಕು. ಅರ್ಹ ಅಭ್ಯರ್ಥಿಗಳ ಮೆರಿಟ್ ಪಟ್ಟಿಯನ್ನು ಮೇ 8 ರ ಮಧ್ಯಾಹ್ನದ ನಂತರ ಈ ಸಂಸ್ಥೆಯ ಸೂಚನಾ ಫಲಕದಲ್ಲಿ ಪ್ರಕಟಿಸಲಾಗುವುದು. ಮೇ.9 ರಂದು ಆಫ್-ಲೈನ್ ಕೌನ್ಸಲಿಂಗ್ ಮುಖಾಂತರ ಸೀಟು ಹಂಚಿಕೆ ಮಾಡಿ, ಸೀಟು ಆಯ್ಕೆ ಮಾಡಿಕೊಂಡ ಅಭ್ಯರ್ಥಿಗಳು ಮೂಲ ದಾಖಲೆಗಳು ಮತ್ತು ನಿಗದಿತ ಶುಲ್ಕದೊಂದಿಗೆ ಪ್ರವೇಶ ಪಡೆದುಕೊಳ್ಳಬಹುದು. ಪ್ರವೇಶಕ್ಕೆ ಸಂಬಂಧಿಸಿದಂತೆ ವಿವರಗಳನ್ನು ಲಭ್ಯವಿರುವ ಕೋರ್ಸುಗಳ ವಿವರ ಅರ್ಜಿಯೊಂದಿಗೆ ಸಲ್ಲಿಸಬೇಕಾಗಿರುವ ಪ್ರಮಾಣಪತ್ರಗಳು ಮತ್ತು ಹೆಚ್ಚಿನ ಮಾಹಿತಿಯನ್ನು ಈ ಸಂಸ್ಥೆಯ ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿದೆ.

ನುಡಿದಂತೆ ನಡೆಯುವುದು ಬದುಕನ್ನು ಗಟ್ಟಿಗೊಳಿಸುತ್ತದೆ: ಅನುಸೂಯ

ಮಾಸ್ಕೇರಿ ಸಾಹಿತ್ಯಾರಾಧನಾ ಸಂಸ್ಥೆ, ದಾಂಡೇಲಿ, ಸಾಹಿತ್ಯ ಸಂಚಲನ । ಅವ್ವನ ಜಾನಪದ ಕಾವ್ಯ ಪ್ರಶಸ್ತಿ ಪ್ರದಾನ

ಶಿರಸಿ: ಮಕ್ಕಳು, ಅತಿಥಿಗಳು, ಬಂಧುಗಳು ಮನೆಗೆ ಬಂದಾಗ ಅವರ ಕುಶಲೋಪಹರಿಯ ಮೊದಲು ಹಸಿವಿನ ಬಗ್ಗೆ ವಿಚಾರಿಸಿ ತಿನ್ನಲು ಏನಾದರೂ ಬೇಕೇ? ಎಂದು ಕೇಳುವ ಹೃದಯ ಮಾತೆಯರದ್ದು. ಸದಾ ತಾಯ್ತನದ ಅನುಭೂತಿಯಿಂದ ಸುಖ ದುಃಖಗಳಲ್ಲೂ ಪ್ರೀತಿಯನ್ನು ಧಾರೆ ಎರೆಯುವ ಮಮತಾಮಯಿ. ಗೃಹಿಣಿಯ ಬಾಳಿಗೆ ತಾಯ್ತನದಿಂದಲೇ ಸಾರ್ಥಕತೆ, ಜನ್ಮ ಪಾವನ ಎಂದು ಮೈಸೂರಿನ ಗೃಹಿಣಿ ಅನುಸೂಯ ದೇವನೂರು ನುಡಿದರು.

ಅವರು ಮೈಸೂರಿನ ಸ್ವಗೃಹದಲ್ಲಿ ಹಮ್ಮಿಕೊಂಡ ಸಮಾರಂಭದಲ್ಲಿ ಮಾಸ್ಕೇರಿ ಸಾಹಿತ್ಯಾರಾಧನಾ ಸಂಸ್ಥೆ, ದಾಂಡೇಲಿ ಹಾಗೂ ಸಾಹಿತ್ಯ ಸಂಚಲನ ಶಿರಸಿ ಇವರಿಂದ 2025ನೇ ಸಾಲಿನ ಮಾಸ್ಕೇರಿ ಅವ್ವನ ಜಾನಪದ ಕಾವ್ಯ ಪ್ರಶಸ್ತಿಯನ್ನು ಸ್ವೀಕರಿಸಿ ಮಾತನಾಡಿದರು.

ಮಾಸ್ಕೇರಿ ಸಾಹಿತ್ಯಾರಾಧನಾ ಸಂಸ್ಥೆ ದಾಂಡೇಲಿ ಮತ್ತು ಸಾಹಿತ್ಯ ಸಂಚಲನ ಶಿರಸಿ ವತಿಯಿಂದ ಪ್ರಶಸ್ತಿ ಪ್ರದಾನ ಮಾಡಿದ ಮುಕ್ತಕ ಕವಿ ಕೃಷ್ಣ ಪದಕಿ ಅವರು ಎರಡೂ ಸಂಸ್ಥೆಗಳ ಕಿರುಪರಿಚಯವನ್ನು ಮಾಡಿ ನುಡಿದಂತೆ ನಡೆಯುವುದು ಮತ್ತು ಬರೆದಂತೆ ಬದುಕುವುದು ನಮ್ಮ ವ್ಯಕ್ತಿತ್ವವನ್ನು ಗಟ್ಟಿಗೊಳಿಸುತ್ತದೆ. ಮೌಲ್ಯಯುತ ಬದುಕು ಸಮಾಜದಲ್ಲಿ ಮನ್ನಣೆ ದೊರೆಯುವಂತೆ ಮಾಡುತ್ತದೆ. ಈ ದಂಪತಿಗಳ ಶ್ರೇಷ್ಠತಮ ವ್ಯಕ್ತಿತ್ವದ ಪ್ರಭಾವವೇ ಈ ಪ್ರಶಸ್ತಿ ಪ್ರದಾನಕ್ಕೆ ಮೂಲ ಕಾರಣ. ಮಾಸ್ಕೇರಿ ಅವ್ವನೂ ಸಹ ಈ ವಿಚಾರದಲ್ಲಿ ಪೂಜನೀಯಳು. ನಿರಾಶ್ರಿತರ ಪಾಲಿಗೆ ಅನ್ನಪೂರ್ಣೇಶ್ವರಿಯಾದ ಮಾತೆಯನ್ನು ಗೌರವಿಸಿ ನಾವೂ ಧನ್ಯರಾದೆವು ಎಂದು ನುಡಿದರು.

ಪುರುಷರು ಮಾಡುವ ಸೇವೆಗಳು ಗಣನೆಗೆ ಬರುತ್ತವೆ. ಆದರೆ ಯಾವುದೇ ಪ್ರತಿಫಲಾಪೇಕ್ಷೆ, ನಿವೃತ್ತಿ ಇಲ್ಲದೇ ಹಗಲು ರಾತ್ರಿ ದುಡಿಯುವ ಮಾತೆಯರ ಸೇವೆ ಗಮನಕ್ಕೆ ಬರುವುದೇ ಇಲ್ಲ. ಇಂದು ಗಂಡನ ಪ್ರತಿ ಹೆಜ್ಜೆಗೂ ಪ್ರೇರಕ ಶಕ್ತಿಯಾಗಿ, ಸಂಸಾರ ನಿಭಾಯಿಸಿದ ಸದ್ಗೃಹಿಣಿ ಮಾತೆಯ ಸೇವೆಯನ್ನು ಪರಿಗಣಿಸಿ ನೀಡಿರುವ ಈ ಪ್ರಶಸ್ತಿ ನಿಜಕ್ಕೂ ಎಲ್ಲ ತಾಯಂದಿರಿಗೆ ಸಲ್ಲುವ ವಿಶೇಷ ಗೌರವವಾಗಿದೆ. ಎಂದು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕಿ ಎನ್ ಕೆ ಲೋಲಾಕ್ಷಿ ಪ್ರಶಂಸೆ ವ್ಯಕ್ತಪಡಿಸಿದರು.

ಶರಣ ಚಿಂತಕ ಶಂಕರ ದೇವನೂರು ಪ್ರೀತಿಯ ಜ್ಯೋತಿಯಿಂದ ಮನಸ್ಸನ್ನು ಗೆಲ್ಲಬೇಕು. ಬಲ ಆಮಿಷಗಳಿಂದ ದಕ್ಕಿರುವ ಗೆಲುವು ಶಾಶ್ವತವಲ್ಲ. ಶರಣ ತತ್ವಗಳು ಮಾನವೀಯತೆಯನ್ನು ಬೋಧಿಸಿವೆ. ಸಕಲ ಜೀವ ಜಂತುಗಳನ್ನು ಪ್ರೀತಿಸುವ ಮನಸ್ಸು ನಮ್ಮದಾಗಬೇಕು ಎಂದು ಮನಮುಟ್ಟುವಂತೆ ಮಾತನಾಡಿದರು. ಕವಿ ಅನಂತ ತಾಮ್ಹನಕರ ಪ್ರಾರ್ಥಿಸಿದರು. ಕವಯಿತ್ರಿ ಕೆ.ಟಿ. ಸರ್ವರನ್ನು ಸ್ವಾಗತಿಸಿದರು. ಮೇಘನಾ ವಂದಿಸಿದರು. ಸಂಶೋಧನಾ ವಿದ್ಯಾರ್ಥಿಗಳಾದ ಮಹೇಶ, ಮೇಘನ, ರಂಜಿತ ಮತ್ತು ಅವರ ಪುತ್ರರಾದ ಬೆಂಗಳೂರು ಆಕಾಶವಾಣಿ ವಾರ್ತಾ ವಾಚಕರಾದ ಶ್ರೇಯಸ್ ಅವರು ಉಪಸ್ಥಿತರಿದ್ದರು.



SYNISE e-Sale & Sourcing
E-Auction
NMDC LIMITED, DONIMALAI
Sale of Various Scrap Machines, Earth Moving Equipment's, Burnt / Used Oil, Nylon Conveyor Belt, Bolero (M&M), Dumpers & Other Scrap Items
Inspection Dates From 19th to 26th May 2025
Online Auction 2nd June 2025
Last date of EMD submission 27th May 2025 up to 2 PM
Contact
Giri : 9686173473 | Ashok P : 8308810317
Catalogue on - synise.com

ಸಮಾಚಾರ ಸಣ್ಣದಲ್ಲ

ಶರಣರ ವಚನಗಳು ಸಮಾಜದ ಬುನಾದಿ

ಧಾರವಾಡ: ಬಸವಾದಿ ಶರಣರ ವಚನಗಳು ಸಮಾಜಕ್ಕೆ ಬುನಾದಿ,ವಚನಗಳ ಮೂಲ ಸ್ವರೂಪ ಬದಲಾಗದಂತೆ ಎಲ್ಲರೂ ಎಚ್ಚರ ವಹಿಸಬೇಕು ಎಂದು ಕ. ವಿ.ವಿ ನಿವೃತ್ತ ಪ್ರಾಧ್ಯಾಪಕ ಪ್ರೊ.ಟೋಣ್ಣನವರ ಹೇಳಿದರು. ಬಸವ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಶ್ರೀ ಶಂಕರಲಿಂಗ ದೇವಸ್ಥಾನ ಸೇವಾ ಸಮಿತಿ ಮತ್ತು ಮಹಾಂತ ನಗರ ಅಭಿವೃದ್ಧಿ ಸಂಘ ಸಹಯೋಗದಲ್ಲಿ ಬಸವೇಶ್ವರ ಜಯಂತಿಯನ್ನು ಶಂಕರಲಿಂಗ ದೇವಸ್ಥಾನದಲ್ಲಿ ಆಚರಿಸಲಾಯಿತು. ಕುಲ, ಹೆಣ್ಣು, ಗಂಡು, ಮೇಲು, ಕೀಳು ಎಂಬ ಸಂಕೋಲೆಯನ್ನು ಹೊಡೆದು ಹಾಕಿದ ಸಮಾನತೆ ಹರಿಕಾರ ಎಂದು ಸಚ್ಚಿನಾಂದ ಲಕ್ಷಮೆಶ್ವರ ಮಾತನಾಡಿದರು. ಜಗಜ್ಯೋತಿ ಮಹಿಳಾ ಮಂಡಳಿ ವತಿಯಿಂದ ಬಸವಣ್ಣನವರ ವಚನಗಳನ್ನು ಹಾಡಿದರು. ಕಾರ್ಯಕ್ರಮದಲ್ಲಿ ಅಶೋಕ್ ಪಾಟೀಲ್, ತಾವಂಶಿ, ರಾಚಯ್ಯ ಹಿರೇಮಠ, ಮೂಗಿ, ಚಬ್ಬಿ, ಕಪಲಿ ಮುಂತಾದವರು ಉಪಸ್ಥಿತರಿದ್ದರು ಕಾರ್ಯಕ್ರಮಕ್ಕೆ ಬಂದ ಅತಿಥಿ ಗಣ್ಯರನ್ನು ಡಾ.ನಾಗರಾಜ ಗುಡಗನವರ ಸ್ವಾಗತಿಸಿದರು. ವಾಮನ್ ಶಿರಟ್ಟಿ ವಂದನಾರ್ಪಣೆ ಮಾಡಿದರು.

ಮೇ 10ರವರೆಗೆ ಭಗವದ್ಗೀತೆ ಅಭಿಯಾನ

ಧಾರವಾಡ: ತ್ರೈತ ಸಿದ್ಧಾಂತ ಭಗವದ್ಗೀತೆ ಹಾಗೂ ಅದರ ಅನುಬಂಧ ಗ್ರಂಥಗಳ ಜ್ಞಾನ ಪ್ರಚಾರ ಕಾರ್ಯಕ್ರಮವು ಮೇ 1 ರಿಂದ ಜಿಲ್ಲೆಯಲ್ಲಿ ಆರಂಭಗೊಂಡಿದ್ದು, ಮೇ 10 ರವರೆಗೆ ನಡೆಯಲಿದೆ. ಧಾರವಾಡ, ಹುಬ್ಬಳ್ಳಿ, ಕಲಘಟಗಿ, ಅಣ್ಣಿಗೇರಿ, ಅಳ್ನಾವರ, ನವಲಗುಂದ, ಕುಂದಗೋಳ ಸೇರಿದಂತೆ ಇಡೀ ಜಿಲ್ಲೆಯಲ್ಲಿ ಈ ಪ್ರಚಾರ ಅಭಿಯಾನ ಜರುಗಲಿದ್ದು, ಆಂಧ್ರಪ್ರದೇಶ ಹಾಗೂ ತೆಲಂಗಾಣ ದಿಂದ ಬಂದಿರುವ ಪ್ರಬೋಧ ಆಶ್ರಮ-ಶ್ರೀಕೃಷ್ಣ ಮಂದಿರದ ಭಕ್ತರು ಭಾಗಿಯಾಗಿದ್ದಾರೆ. ಶ್ರೀಕೃಷ್ಣ ಪರಮಾತ್ಮ ಬೋಧಿಸಿರುವ ಭಗವದ್ಗೀತೆಯಲ್ಲಿನ ಪುರುಷೋತ್ತಮ ಪ್ರಾಪ್ತಿ ಯೋಗದ 16 ಹಾಗೂ 17ನೇ ಶ್ಲೋಕಗಳಲ್ಲಿನ ಜೀವಾತ್ಮ (ಕ್ಷರನು), ಆತ್ಮ (ಅಕ್ಷರನು), ಪರಮಾತ್ಮ (ಪುರುಷೋತ್ತಮನು) ಎನ್ನುವ ಮೂರು ಆತ್ಮಗಳನ್ನು ಆಧಾರ ಮಾಡಿಕೊಂಡು ತ್ರೈತ ಸಿದ್ಧಾಂತವನ್ನು ಶ್ರೀ ಆಚಾರ್ಯ ಪ್ರಬೋಧಾನಂದ ಯೋಗೀಶ್ವರರು ಪ್ರತಿಪಾದಿಸಿರುತ್ತಾರೆ. ಮಾನವನ ಅಜ್ಞಾನ ಜನಿತ ತನ್ನ ಮೂಢನಂಬಿಕೆಗಳಿಂದ ಆತ್ಮಜ್ಞಾನದ ಕಡೆಗೆ ನಡೆದು ಪರಮ ಶಾಂತಿಯನ್ನು ಹೊಂದಬೇಕೆಂದರೆ ತ್ರೈತ ಸಿದ್ಧಾಂತ ಗ್ರಂಥಗಳಿಂದ ಮಾತ್ರವೇ ಸಾಧ್ಯ ಎನ್ನುವ ಸಂದೇಶವನ್ನು ತಿಳಿಸಲು 250 ಭಕ್ತರ ಮುಖಾಂತರ ತ್ರೈತ ಸಿದ್ಧಾಂತ ದೈವ ಗ್ರಂಥಗಳ ಪ್ರಚಾರ ಕಾರ್ಯ ಸಾಗಿದೆ. ಈ ಅಭಿಯಾನದಲ್ಲಿ ಮನೋಹರ್, ಭರತ್, ಶ್ರೀದೇವಿ, ಯೋಗೇಶ್, ಆದಿ, ನಾಗರಾಜ್, ಚಂದ್ರು, ಶಿವರಾಜ್, ರವಿ, ಮಲ್ಲಿಕಾರ್ಜುನ, ರಾಘವೇಂದ್ರ, ವಿಶ್ವಮೂರ್ತಿ, ಬಾಲಯ್ಯ, ನರೇಶ್, ವೆಂಕಟೇಶ್, ನಾಗಭೂಷಣ್, ಆದಿನಾರಾಯಣ, ಹರಿ, ಮಾಣಿಕ್ಯಂ ಇದ್ದರು.

ಹನುಮಂತ ದೇವರ ರಥೋತ್ಸವ

ಧಾರವಾಡ: ಸಮಾಜದಲ್ಲಿನ ಪ್ರತಿಯೊಬ್ಬ ವ್ಯಕ್ತಿಯನ್ನು ಬೆಸೆಯುವಲ್ಲಿ ಜಾತ್ರೆಗಳು ಪ್ರಮುಖ ಪಾತ್ರ ವಹಿಸುತ್ತವೆ ಎಂದು ತಾಪಂ ಮಾಜಿ ಅಧ್ಯಕ್ಷ ಬಸವರಾಜ ಗುಂಡಗೋವಿ ಅಭಿಪ್ರಾಯಪಟ್ಟರು. ತಾಲೂಕಿನ ಮನಗುಂಡಿ ಗ್ರಾಮದಲ್ಲಿ ಮೇ 1 ರಿಂದ ಆರಂಭವಾಗಿರುವ ಗ್ರಾಮ ದೇವಿಯರ ಜಾತ್ರಾ ಮಹೋತ್ಸವದ 3ನೇ ದಿನದಂದು ಹಮ್ಮಿಕೊಂಡಿದ್ದ ಹನಮಂತ ದೇವರ ರಥೋತ್ಸವದ ಉದ್ಘಾಟನಾ ಕಾರ್ಯಕ್ರಮದ ಅಧ್ಯಕ್ಷತೆವಹಿಸಿ ಅವರು ಮಾತನಾಡಿದರು. ದೇವರ ಮೇಲಿನ ನಂಬಿಕೆಯು ಪೂರ್ವಜರ ಕಾಲದಿಂದ ನಿರಂತರ ಸಾಗಿ ಬಂದಿದೆ. ಗ್ರಾಮೀಣ ಭಾಗದಲ್ಲಿ ನಡೆಯುವ ಹಬ್ಬ, ಜಾತ್ರೆಗಳಲ್ಲಿ ಎಲ್ಲ ಧರ್ಮೀಯರು ಭಾಗವಹಿಸುವುದರಿಂದ ಸಹಬಾಳ್ವೆ ಸಾಧಿಸಲು ಪೂರಕವಾಗುತ್ತದೆ. ಜತೆಗೆ ಆರ್ಥಿಕವಾಗಿ, ಸಾಮಾಜಿಕವಾಗಿ ಬೆಳವಣಿಗೆ ಹೊಂದಲು ಸಾಧ್ಯ ಎಂದರು. ಸ್ಥಳೀಯ ವಿರಕ್ತಮಠದ ಪ.ಪೂ. ಸಿದ್ಧಲಿಂಗ ಮಹಾಸ್ವಾಮಿಗಳು ಸಾನಿಧ್ಯವಹಿಸಿದ್ದ ಕಾರ್ಯಕ್ರಮದಲ್ಲಿ ಗ್ರಾಪಂ ಸದಸ್ಯರಾದ ಗಂಗಾಧರ ಕಲ್ಲಾಗೌಡತಿ, ಪುಂಡಲೀಕ ಜಕ್ಕನವರ, ಹಿರಿಯರಾದ ಯಲ್ಲಪ್ಪ ಹುತ್ತಕ್ಕನವರ, ಪರಮೇಶ ಸಲಗಾರ, ನಾಗಪ್ಪ ಅಮ್ಮಿನಭಾವಿ, ನಿಂಗಪ್ಪ ಸಾಲಗಟ್ಟಿ, ಗಂಗಾಧರ ರಾಜಾಪೂರ,ಕರೆಪ್ಪ ಮುಶೆಲ್ಲನವರ, ಬಸಪ್ಪ ಮೆಟಿ ವೇದಿಕೆಯಲ್ಲಿದ್ದರು. ಮಂಜುನಾಥ ಕಳ್ಳಿಮನಿ ನಿರೂಪಿಸಿದರು. ಶಿವಾನಂದ ಸಾಲಗಟ್ಟಿ ವಂದಿಸಿದರು.

ವಿರಾಮ
ಪ್ರತಿ ಭಾನುವಾರ

{ಡಿ.ಕೆ.ಶಿವಕುಮಾರ } ಡಿಸಿಎಂ

ಮಾಜಿ ಸಿಎಂ ಬಂಗಾರಪ್ಪ ಅವರ ಅವಧಿಯಲ್ಲಿ ರೈತರ ಪಂಪ್ ಸೆಟ್‌ಗೆ ಉಚಿತ ವಿದ್ಯುತ್ ನೀಡಲಾಯಿತು. 2013 ರ ಕಾಂಗ್ರೆಸ್ ಸರಕಾರದ ವೇಳೆ ನಾನು ಇಂಧನ ಸಚಿವನಾಗಿದ್ದಾಗ ರೈತರ ಪಂಪ್‌ಸೆಟ್‌ಗಳಿಗೆ ನೀಡುವ ತ್ರೀ ಫೇಸ್ ವಿದ್ಯುತ್ ಪೂರೈಕೆಯನ್ನು 6 ಗಂಟೆಯಿಂದ 7 ಗಂಟೆಗೆ ಹೆಚ್ಚಳ ಮಾಡಲಾಯಿತು.



ಯಾದವಾಡ ಗ್ರಾಮದೇವಿಯರ ಜಾತ್ರೆಗೆ 150 ಕ್ವಿಂಟಾಲ್ ಭಂಡಾರ | 5 ಕ್ವಿಂಟಾಲ್ ಹೂವು ಬಳಕೆ

ಜಾತ್ರೆಗಾಗಿ ಹಣ,ದವಸ ಧಾನ್ಯ ಸಂಗ್ರಹ

ವಸೀಮ ಭಾವಿಮನಿ ಧಾರವಾಡ

ಇದು ಅಂತ ಹಿಂತ ಜಾತ್ರೆಯಲ್ಲಾ. ಒಗ್ಗಟಿನಲ್ಲಿ ಬಲ ಇದೆ ಎಂದು ಸರ್ವ ಧರ್ಮದವರು ಕೂಡಿ ಮಾಡುತ್ತಿರುವ ಜಾತ್ರೆ. ಜಾತ್ರೆಗಾಗಿ ಗ್ರಾಮಸ್ಥರು ಬರೋಬ್ಬರಿ 60 ಲಕ್ಷ ಹಣ ಕೂಡಿಸಿದ್ದು, ರೈತರಿಂದ 50 ಕ್ವಿಂಟಾಲ್ ಕಾಳು ಕಡಿ ಸಂಗ್ರಹಿಸಿದ್ದಾರೆ. ಅದರಲ್ಲೂ ಪ್ರತಿಯೊಂದು ಮನೆಯ ಸದಸ್ಯರು, ಈ ಅಪರೂಪದ ಜಾತ್ರೆಯಲ್ಲಿ ಭಾಗಿಯಾಗಿದ್ದು ಇನ್ನೊಂದು ವಿಶೇಷ.

ಜಾತ್ರೆ ಎಂದರೆ ಪ್ರತಿಯೊಂದು ಊರಿನಲ್ಲಿ ಹಬ್ಬದ ಸಂಭ್ರಮ ಸಡಗರ ಜೋರಾಗಿರುತ್ತೆ. ಊರಿನ ಬಂಧು-ಬಳಗ, ಬೀಗರಿಗೂ ಆಮಂತ್ರಣ ಇರುತ್ತೆ. ಇಂತಹದರಲ್ಲಿ 21 ವರ್ಷದ ಬಳಿಕ ನಡೆಯುತ್ತಿರುವ ಯಾದವಾಡ ಜಾತ್ರೆ ಇನ್ನಷ್ಟು ವಿಶೇಷ ವಿಭನ್ನತೆಯಿಂದ ಕೂಡಿ, ಸರ್ವಧರ್ಮದ ಭಾವೈಕತೆಗೆ ಸಾಕ್ಷಿಯಾಗಿ, ಧಾರವಾಡ ಜಿಲ್ಲೆಯಷ್ಟೇ ಅಲ್ಲದೇ ರಾಜ್ಯಕ್ಕೂ ಮಾದರಿಯಾಗಿದೆ.

ಯಾದವಾಡ ಊರಿನಲ್ಲಿ ದ್ಯಾಮವ್ವ- ದುರ್ಗವ್ವ ಜಾತ್ರೆ ಮೇ 1 ರಿಂದ ಮೇ 9 ರವರೆಗೆ ವಿಶೇಷವಾಗಿ ನಡೆಯುತ್ತಿದೆ. ಪ್ರತಿದಿನವೂ ಆಧ್ಯಾತ್ಮಿಕ ಪ್ರವಚನ ನಡೆಯುತ್ತಿದೆ. ಸವಾಲ - ಜವಾಬ್ ಭಜನಾ ಮಂಡಳಿ ಕಾರ್ಯಕ್ರಮ, ಮನೋರಂಜನೆ ಕಾರ್ಯಕ್ರಮವೂ ಊರಿನಲ್ಲಿ ಇರೋದರಿಂದ ಜಾತ್ರೆಯ ವಿಶೇಷತೆ ವಿಭಿನ್ನತೆಯಿಂದ ಕೂಡಿದೆ.

21 ವರ್ಷದ ಬಳಿಕ ನಡೆಯುತ್ತಿರುವ ಐತಿಹಾಸಿಕ ಜಾತ್ರೆಗೆ ಜಾತಿ- ಮತ-ಪಂಥ ಮರೆತು ಒಗ್ಗಟಾದ ಗ್ರಾಮಸ್ಥ ಕಾರ್ಯಕ್ಕೆ, ಒಗ್ಗಟ್ಟಿನಲ್ಲಿ ಬಲವಿದೆ ಎನ್ನುವುದು ಸಾಬೀತಾಗಿದ್ದು, ಇತರ ಊರಿನವರಿಗೂ ಯಾದವಾಡ ಗ್ರಾಮ ಮಾದರಿಯಾಗಿ ನಿಂತಿದೆ.

ಜಾತ್ರೆಗಾಗಿ ದೇವಿಯರ ಬೆಳ್ಳಿಯ ಮೂರ್ತಿಗಳನ್ನು ಮಾಡಿಸಿರುವ ಭಕ್ತರು.

ಜಾತ್ರೆಯ ನಿಮಿತ್ತ ದೇವಿಯರ ಮೆರವಣಿಗೆಯೊಂದಿಗೆ ಭಂಡಾರದ ಹೋನ್ನಾಟದಲ್ಲಿ ಭಾಗಿಯಾದ ಗ್ರಾಮಸ್ಥರು.

150 ಕ್ವಿಂಟಾಲ್ ಭಂಡಾರ ಜಾತ್ರೆಯಲ್ಲಿ ಬಳಕೆ

ಗ್ರಾಮದೇವಿಯರ ಜಾತ್ರೆಗೆ, 3 ದಿನಗಳ ಕಾಲ ಭಂಡಾರ ಆಡಲು ಒಟ್ಟು 105 ಕ್ವಿಂಟಾಲ್ ಭಂಡಾರವನ್ನು ಮುನವಳ್ಳಿಯಿಂದ ಜಾತ್ರಾ ಕಮೀಟಿಯವರು ತಂದಿದ್ದರು. ಮತ್ತೆ 45 ಕ್ವಿಂಟಾಲ್ ಭಂಡಾರ ತಂದು 3 ದಿನವೂ ಊರಿನಲ್ಲಿ 150 ಕ್ವಿಂಟಾಲ್ ಭಂಡಾರವನ್ನು ಬಳಕೆ ಮಾಡಲಾಗಿದೆ. ಬೆಳಗ್ಗೆ 9ರಿಂದ ಮಧ್ಯಾಹ್ನ1ರವರೆಗೆ ಊರಿನಲ್ಲಿ ಭಂಡಾರ ಆಡುವ ಸಮಯ ನಿಗದಿ ಮಾಡಲಾಗಿತ್ತು.

3 ರಿಂದ 4 ಕ್ವಿಂಟಾಲ್ ಕಾಯಿಪಲ್ಲೆ ಬಳಕೆ

ಜಾತ್ರೆಗಾಗಿ 9 ದಿನಗಳ ಕಾಲ ಊಟದ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ಮಾಡಲಾಗಿದ್ದು, ಬೆಳಗ್ಗೆ ಉಪಹಾರ, ಮಧ್ಯಾಹ್ನದ ಊಟ ಹಾಗೂ ರಾತ್ರಿ ಊಟಕ್ಕೆ ಒಟ್ಟು, 30 ಸಾವಿರ ಜನರು ದಿನವೊಂದಕ್ಕೆ ಬರುತ್ತಿದು, ಇದಕ್ಕಾಗಿ 4 ಕ್ವಿಂಟಾಲ್ ಕಾಯಿಪಲ್ಲೆ ಬಳಕೆ ಮಾಡಲಾಗಿದೆ. ಊಟದಲ್ಲಿ ಗೋಧಿ ಹುಗ್ಗಿ, ಶಾವಿಗೆ ಪಾಯಸಾ, ಬುಂದೆ, ಹೋಳಿಗೆ ಶಿಖರಣೆ ಮಾಡಲಾಗಿದೆ. 30 ಸಾವಿರ ರೊಟ್ಟಿಯನ್ನು ಜಾತ್ರೆಗಾಗಿ ಮಾಡಿಕೊಡಲಾಗಿದೆ.

ಯಾದವಾಡ ಗ್ರಾಮದಲ್ಲಿ ನಾವು 1000 ಜನರು ಮುಸ್ಲಿಂರಿದ್ದು, ನಾವು ಕೂಡ ಭಂಡಾರ ಆಡಿದ್ದೇವೆ. ನಮಗೆ ನಮ್ಮೂರಿನ ಜಾತ್ರೆ ತುಂಬಾನೆ ವಿಶೇಷ. ಇದಕ್ಕಾಗಿ ಹಲವಾರು ತಿಂಗಳಿಂದ ತಯಾರಿ ಮಾಡಿದ್ದೇವೆ. ಜಾತ್ರೆ ಯಶಸ್ವಿಯಾಗಿದೆ.

-ದಾವಲಸಾಬ ಮುಲ್ಲಾನವರ, ಗ್ರಾಮದ ಯುವಕ

ನಮ್ಮೂರಿನಲ್ಲಿ ನಡೆಯುತ್ತಿರುವ ಜಾತ್ರೆಗೆ, ಎಲ್ಲರೂ ಒಗ್ಗಟಾಗಿ ಭಾಗಿಯಾಗಿರುವುದು ನಮ್ಮೆಲ್ಲರಿಗೂ ಖುಷಿಯಾದ ವಿಚಾರ.ಎಲ್ಲಾ ಸಮಾಜದವರು ಜಾತ್ರೆಯಲ್ಲಿ ಭಾಗಿಯಾಗಿ, ಐತಿಹಾಸಿಕ ಜಾತ್ರೆಯನ್ನು ಯಶಸ್ವಿ ಮಾಡಿದ್ದೇವೆ.

-ಬಸವರಾಜ ಬೆಂಡಿಗೇರಿ, ಜಾತ್ರಾ ಕಮೀಟಿ ಸದಸ್ಯ

ಜಾತ್ರೆಗೆ ಮೆರುಗು ತಂದ ಡ್ರೆಸ್ ಕೋಡ್

ಜಾತ್ರೆ ಅಂಗವಾಗಿ ವಿಶೇಷವಾಗಿ ಪುರುಷರು ಶ್ವೇತವಸ್ತ್ರದ ಹಳದಿ ಹಾಗೂ ನೀಲಿ ಪೈಜಾಮ್ ಜುಬ್ಬಾ ಧರಿಸಿ ಎಲ್ಲರೂ ಗಮನ ಸೆಳೆದರು. ಮಹಿಳೆಯರು ಇಳಕಲ್ ಸೀರೆ, ಕೆಂಪು ಬಣ್ಣದ ಸೀರೆ ಸೇರಿದಂತೆ 9 ದಿನವೂ ವಿಭಿನ್ನ ಬಣ್ಣದ ಸೀರೆಯನ್ನು ಧರಿಸಿದ್ದರು. ಇಂತಹ ವಿಶೇಷ ಉಡುಗೆ ಜಾತ್ರೆಯ ಡ್ರೆಸ್‌ಕೋಡ ಆಗಿದ್ದರಿಂದ ಇತರ ಊರಿನ ಜನರಿಗೂ ಯಾದವಾಡ ಗ್ರಾಮದೇವಿಯರ ಜಾತ್ರೆ ಬಗ್ಗೆ ಗೊತ್ತಾಗುವಂತೆ ಆಯಿತು.

ಹುಬ್ಬಳ್ಳಿಯ ದಾಜಿಬಾನ ಪೇಟೆಯಲ್ಲಿರುವ ಸುಪ್ರಸಿದ್ಧ ಶ್ರೀದುರ್ಗಾದೇವಿ ದೇವಸ್ಥಾನದಲ್ಲಿ ನಡೆಯಲಿರುವ ಸಹಸ್ರಚಂಡಿಯಾಗದ ನಿಮಿತ್ತವಾಗಿ ನಿರ್ಮಾಣಗೊಂಡ ಶ್ರೀದುರ್ಗಾದೇವಿಯ ಕಲ್ಯಾಣ ಮಂಟಪದ ಉದ್ಘಾಟನೆಯನ್ನು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ನೇರವೇರಿಸಿದರು. ಈ ಸಂದರ್ಭದಲ್ಲಿ ಶಾಸಕ ಮಹೇಶ ತೆಂಗಿನಕಾಯಿ, ಮಾಜಿ ಶಾಸಕ ಅಶೋಕ ಕಾಟವೆ ಪ್ರಮುಖರಾದ ಗಣೇಶ ಶೇಟ್, ಶಶಿಕುಮಾರ ಮೆಹರವಾಡೆ, ಸತೀಶ ಮೆಹರವಾಡೆ, ವಿಠ್ಠಲ ಲದವಾ, ನಾಗೇಶ, ಭಾಸ್ಕರ್ ಜಿತೂರಿ, ನಿಲಕಂಠ ಜಡಿ, ಪ್ರಕಾಶ ಬುರಬುರೆ ಉಪಸ್ಥಿತರಿದ್ದರು.

ಮಹರ್ಷಿ ಭಗೀರಥರ ಜಯಂತಿ ಆಚರಣೆ

ಗದಗ: ಉಪ್ಪಾರ ಸಮಾಜವು ಅತ್ಯಂತ ಸಣ್ಣಸಮಾಜ. ಸಮಾಜದಲ್ಲಿನ ವಿದ್ಯಾವಂತರು, ಶಿಕ್ಷಕರು ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣವನ್ನು ಅತ್ಯಂತ ಪರಿಣಾಮಕಾರಿಯಾಗಿ ಮುಟ್ಟಿಸಬೇಕು ಎಂದು ವಿಧಾನ ಪರಿಷತ್ ಶಾಸಕ ಎಸ್ .ವಿ.ಸಂಕನೂರ ಅವರು ಹೇಳಿದರು.

ಜಿಲ್ಲಾಡಳಿತ ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಗದಗ ಸಹಯೋಗದಲ್ಲಿ ಭಾನುವಾರ ಮಹರ್ಷಿ ಶ್ರೀಭಗೀರಥ ಜಯಂತಿಯ ಅಂಗವಾಗಿ ಗದಗ ಜಿಲ್ಲಾಡಳಿತ ಭವನದ ಅಡಿಟೋರಿಯಂ ಹಾಲ್‌ನಲ್ಲಿ ಮಹರ್ಷಿ ಶ್ರೀ ಭಗೀರಥರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಅವರು ಮಾತನಾಡಿದರು.

ಸಮಾಜದ ಮಕ್ಕಳನ್ನು ಉತ್ತಮ ಶಿಕ್ಷಣದತ್ತ ಉತ್ತೇಜಿಸುವ ಅಗತ್ಯವಿದೆ ಎಂದು ಹೇಳಿದರು. ಸಾಮಾಜಿಕ ಹಿನ್ನೆಲೆಯಲ್ಲಿ ಬೆಳೆಯುತ್ತಿರುವ ಮಕ್ಕಳಿಗೆ ಶಿಕ್ಷಣವೇ ಶಕ್ತಿ. ಅದನ್ನು ಸದುಪಯೋಗ ಪಡಿಸಿಕೊಂಡರೆ, ಸಮಾಜ ಮತ್ತು ದೇಶಕ್ಕೆ ದೊಡ್ಡ ಕೊಡುಗೆ ನೀಡಬಹುದಾಗಿದೆ ಎಂದು ಹೇಳಿದರು.

ಜಿಲ್ಲಾಧಿಕಾರಿ ಸಿ. ಎನ್.ಶ್ರೀಧರ್ ಅವರು ಮಹರ್ಷಿ ಭಗೀರಥರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು. ಮಹರ್ಷಿ ಭಗೀರಥರ ವ್ಯಕ್ತಿತ್ವ ಮತ್ತು ಕೊಡುಗೆ ಕುರಿತು ಮಂಜುನಾಥ ಹುಯಿಲಗೋಳ ಉಪನ್ಯಾಸ ನೀಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಅಧ್ಯಕ್ಷ ಬಿ.ಬಿ.ಹಸೂಟಿ, ಉಪ್ಪಾರ ಸಮಾಜದ ಜಿಲ್ಲಾಧ್ಯಕ್ಷ ಭೀಮನಗೌಡ ಪಾಟೀಲ, ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಬಿ.ಸಂಕದ, ಹಿರಿಯರಾದ ಹನುಮಂತಪ್ಪ ಗರಗ, ಉಪ್ಪರ ಸಂಘದ ಗೌರವಾಧ್ಯಕ್ಷ ಅನಿಲ ಗರಗ, ಶಾಲಾ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಆರ್.ಎಸ್ ಬುರುಡಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ವೀರಯ್ಯಸ್ವಾಮಿ.ಬಿ, ಉಪ್ಪಾರ ಸಮಾಜದ ಹಿರಿಯರು ಉಪಸ್ಥಿತರಿದ್ದರು.

ಮಹರ್ಷಿ ಶ್ರೀಭಗೀರಥರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮೂಲಕ ಗದಗ ಜಿಲ್ಲಾಡಳಿತದಲ್ಲಿ ಜಯಂತಿ ಆಚರಣೆ

ಮಹರ್ಷಿ ಭಗೀರಥರು ತಮ್ಮ ಅಪಾರ ಪರಿಶ್ರಮದಿಂದ ಭೂಮಿಗೆ ಗಂಗೆಯ ನೀರನ್ನು ತಂದಂತಹ ಮಹಾನ್ ಸಾಧನೆ ಮಾಡಿದ್ದಾರೆ. ಪ್ರಯತ್ನವೇ ಯಶಸ್ಸಿಗೆ ದಾರಿ ಎಂಬುದನ್ನು ಅವರು ಸಾಬೀತುಪಡಿಸಿದ್ದಾರೆ.

-ಎಸ್.ವಿ.ಸಂಕನೂರ, ಶಾಸಕ

ರ‍್ಯಾಂಕ್ ಪಡೆದ ವಿದ್ಯಾರ್ಥಿಗಳಿಗೆ ಸನ್ಮಾನ

ನರಗುಂದ: ತಾಲೂಕಿನ ಹದಲಿ ಗ್ರಾಮದ ಭೀರಲಿಂಗೇಶ್ವರ ದೇವಸ್ಥಾನದಲ್ಲಿ ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದಲ್ಲಿ ರಾಜ್ಯಕ್ಕೆ 12ನೇ ರ‍್ಯಾಂಕ್‌ಗಳಿಸಿದ ದಿವ್ಯಾ ಶರಣಪ್ಪ ಯಲಿಗಾರ ಹಾಗೂ ಎಸ್ಎಸ್ ಎಲ್‌ಸಿಯಲ್ಲಿ ಅತೀ ಹೆಚ್ಚು ಅಂಕ ಪಡೆದ ಪ್ರಿಯಾಂಕಾ ಜಗದೀಶ ಚಿಕ್ಕರಡ್ಡಿ, ಸರಸ್ವತಿ ಪ್ರಭು ಬಾವಿಕಟ್ಟಿ ಅವರನ್ನು ಬೀಳಗಿ ತಾಲೂಕು ಚಿಕ್ಕಗಲ್ಗಲಿ ಶ್ರದ್ದಾನಂದ ಸ್ವಾಮಿಗಳ ಮಠದ ಜನಾರ್ಧನ ಮಹಾಸ್ವಾಮಿಗಳು ಸನ್ಮಾನಿಸಿ ಆಶೀರ್ವದಿಸಿದರು.

ಬನಹಟ್ಟಿಯ ಸರಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯರಾದ ಸಿ.ಜಿ ಖಾನಾಪುರ ವಿದ್ಯಾರ್ಥಿನಿಯರ ಸಾಧನೆಯನ್ನು ಕೊಂಡಾಡಿದರು. ಕಾರ್ಯಕ್ರಮದಲ್ಲಿ ವೈ.ವೈ.ದಳವಾಯಿ, ಗೂಳಪ್ಪ ಅಂಕಲಿ, ಚಂದ್ರಪ್ಪ ಗುದಗೇರಿ, ಮಂಜು ಯಲಿಗಾರ, ಯಲ್ಲಪ್ಪ ಅಂಕಲಿ, ಸಿದ್ದಪ್ಪ ಅಂಕಲಿ, ಪ್ರಭು ಬಾವಿಕಟ್ಟಿ, ಕೆ. ಎಂ.ವಿಟ್ಟಪ್ಪನವರ್, ಭೀರಪ್ಪ ಅಂಕಲಿ, ಕರಿಯಪ್ಪ ಅಂಕಲಿ ಸೇರಿದಂತೆ ಗ್ರಾಮದ ಗುರು ಹಿರಿಯರು ಭಾಗಿಯಾಗಿದ್ದರು.

ಎಸ್ಸೆಸ್ಸೆಲ್ಸಿ ಫಲಿತಾಂಶ: ಸ್ವಾತಿ ಟಾಪರ್

ಧಾರವಾಡ: ಎಸ್.ಎಸ್.ಎಲ್.ಸಿ ವಾರ್ಷಿಕ ಪರೀಕ್ಷೆ-1 ಶುಕ್ರವಾರ ಪ್ರಕಟಗೊಂಡಿದ್ದು ತಾಲೂಕಿನ ಅಮ್ಮಿನಬಾವಿ ಗ್ರಾಮದ ಶ್ರೀಶಾಂತೇಶ್ವರ ಪ್ರೌಢ ಶಾಲೆಯ ಸ್ವಾತಿ ಹಾರೋಬೆಳವಡಿ ಶೇ.93.44 (584/625) ಅಂಕ ಸಂಪಾದಿಸಿ ಶಾಲೆಗೆ ಪ್ರಥಮ ಸ್ಥಾನ ಪಡೆದಿದ್ದಾಳೆ. ಒಟ್ಟು 10 ವಿದ್ಯಾರ್ಥಿಗಳು ಶೇ. 90ಕ್ಕಿಂತ ಅಧಿಕ ಅಂಕ ಸಂಪಾದಿಸಿ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಶೇ.90ಕ್ಕಿಂತ ಅಧಿಕ ಅಂಕಗಳಿಸಿದ ಇತರೇ ವಿದ್ಯಾರ್ಥಿಗಳ ವಿವರ ಹೀಗಿದೆ. ರಕ್ಷಿತಾ ಚವ್ಹಾಣ (ಶೇ.92.80), ಶಿಲ್ಪಾ ಹೊಂಬಳ (ಶೇ. 92.48), ರಕ್ಷಿತಾ ಧನಶೆಟ್ಟಿ (ಶೇ.92.48), ಅನಿತಾ ಬೆಳದಡಿ (ಶೇ.92), ನಿಖಿತಾ ಶಿಂಧೆ (ಶೇ.91.34), ಗಂಗಾಧರ ಬಂಡಿವಾಡ (ಶೇ.90.88), ಅಂಜಲಿ ತಳವಾರ (ಶೇ.90.72), ಗೂಳಪ್ಪ ಕಡ್ಲೆಪ್ಪನವರ (ಶೇ.90.40) ಹಾಗೂ ಪ್ರೀತಿ ಹುಲಗೂರ (ಶೇ.90.24). ಪರೀಕ್ಷೆಗೆ ಹಾಜರಾಗಿದ್ದ ಒಟ್ಟು 175 ವಿದ್ಯಾರ್ಥಿಗಳಲ್ಲಿ 143 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, ಶಾಲೆಯ ಒಟ್ಟು ಶೇ. 81.71ಫಲಿತಾಂಶವಾಗಿದೆ. ಅಮ್ಮಿನಬಾವಿ ಸಂಸ್ಥಾನ ಪಂಚಗೃಹ ಹಿರೇಮಠದ ಶ್ರೀಅಭಿನವ ಶಾಂತಲಿಂಗ ಶಿವಾಚಾರ್ಯ ಸ್ವಾಮೀಜಿ ಸೇರಿದಂತೆ ಶಾಲೆಯ ಆಡಳಿತ ಮಂಡಳಿಯ ಎಲ್ಲ ಪದಾಧಿಕಾರಿಗಳು ಹಾಗೂ ಮುಖ್ಯಾಧ್ಯಾಪಕರು ಅಧಿಕ ಅಂಕ ಸಂಪಾದಿಸಿದ ವಿದ್ಯಾರ್ಥಿಗಳಿಗೆ ಶುಭ ಹಾರೈಸಿದ್ದಾರೆ.

ರಾಜೀವ ಗಾಂಧಿ ಶಾಲೆ ವಿದ್ಯಾರ್ಥಿಗಳ ಸಾಧನೆ

ಧಾರವಾಡ: ಇಲ್ಲಿನ ರಾಜೀವ ಗಾಂಧಿ ಆಂಗ್ಲ ಮಾಧ್ಯಮ ಪ್ರೌಢ ಶಾಲೆಯ ವಿದ್ಯಾರ್ಥಿಗಳು ಪ್ರಸಕ್ತ ವರ್ಷದ ಎಸ್. ಎಸ್.ಎಲ್.ಸಿ ಪರೀಕ್ಷೆಯ ಫಲಿತಾಂಶ ಉತ್ತಮ ರೀತಿಯಲ್ಲಿ ಮಾಡಿದ್ದು, ಪರೀಕ್ಷೆಯಲ್ಲಿ 3 ವಿದ್ಯಾರ್ಥಿಗಳು ೦+ ಗ್ರೇಡ್, 12 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್, 51 ವಿದ್ಯಾರ್ಥಿಗಳು ಪ್ರಥಮ ಶ್ರೇಣಿ, 23 ವಿದ್ಯಾರ್ಥಿಗಳು ದ್ವಿತೀಯ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ.

ಸಫಿಯಾ ಮಿಶ್ರೀಕೋಟಿ (92.96%), ಶಿವಾಣಿ ತೋಟಗೇರ (91%), ಪರ್ವತಗೌಡ ಕಲ್ಲಣಗೌಡರ (90.72%), ಉಮ್ಮೆ ಮೋಬಶಿರಿನ ಫತಾಣ (89.92), ಆದರ್ಶ ಬಕಾಲಿ (89.76), ನಿರಂಜನ ಚಕ್ರಸಾಲಿ (89.44%), ಸಂಕಲ್ಪ ಸೂರ್ಯವಂಶಿ (88.08%), ಜ್ಯೋತಿಕಾ ಚೌಕಿಮಠ (88.16%). ಶಿವಪ್ರಸಾದ ಮುಶನ್ನವರ (87.52%), ಅನುಶ್ಕಾ ಅನವೇಕರ (87%), ಅಂಕದೊಂದಿಗೆ ಗಮನಾರ್ಹ ಸಾದನೆ ಮಾಡಿದ್ದಾರೆ.

ಸಮೀಕ್ಷಾ ಮಹಾಕಾಳೆ (85.12%), ಪ್ರಶಾಂತ ಸವದತ್ತಿ (85.76%), ಕಮ್ಮಾಕುಮಾರಿ ಪ್ರಜಾಪತ (84.96%), ಜ್ಯೋತಿಕಾ ನಿರಲಗಿ (84.96%), ಬಸವರಾಜ ಹವಳೆರ (83.84%), ಆರತಿ ಘೊನಿಸ್ವಾಮಿ (83.68%), ಶ್ರದ್ದಾ ಮುದಕ್ಕನ್ನವರ (83.20%), ಆಯಿಶಾ ಖಾಜಿ (82.72%), ಮೆಹನಾಶ ಶೇಖ (81.76%), ವಿನಾಯಕ ಗಾಣಿಗೇರ (81.12%), ಅನ್ನಪೂರ್ಣ ಪಾಟೀಲ (81.12%), ಜೋಹಾ ಮುಕ್ತಿ (80.96%), ಪ್ರಾರ್ಥನಾ ಕುಲಕರ್ಣಿ (80.96%) ಎಚ್. ಕೆ. ಮೋನಿಷಾ (80.64%), ಸುಯೋಗರಾಜ ಗೋಟಿ (80.64%). ಶ್ರೇಯಾ ದವಳೆ (80%) ಅಂಕ ಪಡೆದಿದ್ದಾರೆ. ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ದಕ್ಷಿಣ ಭಾರತ ಹಿಂದಿ ಪ್ರಚಾರ ಸಭೆಯ ಅದ್ಯಕ್ಷರಾದ ರಾಘವೇಂದ್ರ ತವನಪ್ಪನವರ, ಕಾರ್ಯಾದ್ಯಕ್ಷರಾದ ಈರೇಶ ಅಂಚಟಗೇರಿ, ಶಾಲೆಯ ಅಧ್ಯಕ್ಷ ಜಿ.ಜಿ.ಹಿರೇಮಠ, ದ.ಭಾ.ಹಿ.ಪ್ರ ಸಭೆಯ ಕಾರ್ಯದರ್ಶಿ ಎಸ್. ರಾಧಾಕೃಷ್ಣನ್, ಸಭೆಯ ಪದಾಧಿಕಾರಿಗಳು ಹಾಗೂ ಶಾಲೆಯ ಪ್ರಾಂಶುಪಾಲರಾದ ವೀಣಾ ತುಪ್ಪದ, ಶಾಲೆಯ ಉಪ ಪ್ರಾಂಶುಪಾಲರಾದ ಸುಧಾ ಕಾಳೆ ಹಾಗೂ ಶಿಕ್ಷಕರು ಸಿಬ್ಬಂದಿ ವರ್ಗದವರೂ, ಅಭಿನಂದಿಸಿದ್ದಾರೆ.



ಧಾರವಾಡ ತಾಲೂಕಿನ ನಿಗದಿ ಸಮೀಪದ ಬೆನಕನಕಟ್ಟಿ ಗ್ರಾಮದಲ್ಲಿ, ಗ್ರಾಮ ದೇವಿಯ ಜಾತ್ರೆ ನಿಮಿತ್ತ ರಥವನ್ನು ಬೈಲ ಹೊಂಗಲ ತಾಲೂಕಿನ ನಯಾನಗರ ಸುಕ್ಷೇತ್ರದ ಶ್ರೀ ಅಭಿನವ ಸಿದ್ಧ ಲಿಂಗ ಸ್ವಾಮೀಜಿ ಅವರ ಸನ್ನಿಧಾನದಲ್ಲಿ ಎಳೆಯಲಾಯಿತು. ಈ ಸಂದರ್ಭದಲ್ಲಿ ಗ್ರಾಮದ ಗುರುಹಿರಿಯರಿಂದ ಪೂಜ್ಯರಿಗೆ ಸನ್ಮಾನ ಕಾರ್ಯಕ್ರಮ ನೆರವೇರಿಸಲಾಯಿತು. ಈ ಸಂದರ್ಭದಲ್ಲಿ ದ್ಯಾಮಣ್ಣ ರೇವಣ್ಣವರ್, ಈರಣ್ಣ ಕಾನಣ್ಣವರ್, ದಾನಪ್ಪ ಜೋಡಳ್ಳಿ, ಬಸಪ್ಪ ಗಂಜಿಕಟ್ಟಿ, ಗಣಪತಿ , ದ್ಯಾಮಣ್ಣಾ ಮಾದನಭಾವಿ ಇದ್ದರು.

ಕಾರ್ಮಿಕ ಶಕ್ತಿಯಿಂದ ದೇಶದ ಅಭಿವೃದ್ಧಿ: ಶ್ರೀ

ನರಗುಂದ: ಪೂಜೆ, ಪುನಸ್ಕಾರಗಳಿಗೆ ಮಹತ್ವ ನೀಡದೆ ಬಸವಣ್ಣನವರು ಕಾಯಕವೇ ಕೈಲಾಸ ಎಂದು ಹೇಳಿದ ಹಾಗೆ ಸತ್ಯ, ಶುದ್ಧ, ಕಾಯಕ ಮಾಡಿ ಮುಂದೆ ಬನ್ನಿ, ಕಾರ್ಮಿಕ ಈ ದೇಶದ ಶಕ್ತಿ ಕಾರ್ಮಿಕನಿಂದಲೇ ನಮ್ಮ ದೇಶದ ಕೃಷಿ, ಕೈಗಾರಿಕೆಗಳು ಬೆಳೆದು ಸ್ವಾವಲಂಬನೆಯನ್ನು ಹೊಂದಿ ಜಗತ್ತಿನಲ್ಲಿ ಒಂದು ಉತ್ತಮ ದೇಶವಾಗಲು ಅದು ಕಾರ್ಮಿಕ ಶಕ್ತಿಯಿಂದ ಮಾತ್ರ ಸಾಧ್ಯ ಎಂದು ಗದಗ ತೋಂಟದಾರ್ಯ ಮಠದ ಡಾ.ಸಿದ್ಧರಾಮ ಸ್ವಾಮೀಜಿ ಹೇಳಿದರು.

ತಾಲೂಕಿನ ಶಿರೋಳದ ತೋಂಟದಾರ್ಯ ಶಾಖಾಮಠದ ನೂತನ ಗದ್ದುಗೆ ಶಿಲಾ ಮಂಟಪ ಉದ್ಘಾಟನೆ ಮತ್ತು ಗೋಪುರ ಕಳಸಾರೋಹಣ ನಿಮಿತ್ತ ಪೌರಕಾರ್ಮಿಕರನ್ನು ಸನ್ಮಾನಿಸಿದರು.

ಮುಖ್ಯ ಅಥಿತಿಯಾಗಿ ಲೈಯನ್ಸ ಕ್ಲಬ್ ಅಧ್ಯಕ್ಷ ಉಮೇಶಗೌಡ ಪಾಟೀಲ ಮಾತನಾಡಿ, ಬಸವಣ್ಣನವರು ತಮ್ಮ ವಚಣಗಳಲ್ಲಿ ಕಾಯಕದ ಬಗ್ಗೆ ಉತ್ತಮವಾಗಿ ಹೇಳಿದ್ದಾರೆ ಅಲ್ಲದೆ ಒಂದು ಕಂಪನಿ ಬೆಳೆಯಲು ಹೇಗೆ ಕಾರ್ಮಿಕನ ಅವಶ್ಯಕತೆ ಇದೆಯೂ ಹಾಗೆ ಆ ಕಾರ್ಮಿಕ ಉತ್ತಮ ಕೆಲಸ ನಿರ್ವಹಿಸಿ ಮುಂದೆ ಮಾಲೀಕನಾಗಲು ಸಾಧ್ಯ ಎಂದರು.

ದಾನಿಗಳಾದ ಐ.ಎಸ್.ಕಟಗೇರಿ, ಉಮೇಶಗೌಡ ಪಾಟೀಲ, ಪ್ರವೀಣ ಯಾವಗಲ್ಲ ಹಾಗೂ ಶಿರೋಳ ಗ್ರಾಪಂ ಪೌರಕಾರ್ಮಿಕರನ್ನು ಸನ್ಮಾನಿಸಲಾಯಿತು. ಈ ಸಂದರ್ಬದಲ್ಲಿ ಬದಾಮಿ ನವಗ್ರಹ ಹಿರೇಮಠದ ಶಿವಪೂಜಾ ಶಿವಾಚಾರ್ಯರು, ಉಪಾಧ್ಯಕ್ಷ ಪ್ರಕಾಶಗೌಡ ತಿರಕನಗೌಡ್ರ, ಕಾರ್ಯದರ್ಶಿ ವಿರಯ್ಯ ದೊಡಮನಿ, ಕಟ್ಟಡ ಸಮಿತಿಯ ಉಪಾದ್ಯಕ್ಷ ಗುರುಬಸು ಶೆಲ್ಲಿಕೇರಿ, ಕಾರ್ಯದರ್ಶಿ ಹನಮಂತ ಕಾಡಪ್ಪನವರ, ದ್ಯಾಮಣ್ಣ ಕಾಡಪ್ಪನವರ, ನಾಗನಗೌಡ್ರ ತಿಮ್ಮನಗೌಡ್ರ, ವಿ.ಕೆ.ಮರಿಗುದ್ದಿ, ಲೋಕಪ್ಪ ಕರಕಿಕಟ್ಟಿ, ಗುರುಬಸಯ್ಯ ನಾಗಲೋಟಿಮಠ, ಪ್ರವೀಣ ಶೆಲ್ಲಿಕೆರಿ, ಲಾಲಸಾಬ ಅರಗಂಜಿ, ಶರಣಪ್ಪಗೌಡ ತಿರಕನಗೌಡ್ರ, ರಮ್‌ಜಾನಸಾಬ್ ನದಾಪ, ಈರಯ್ಯ ಮಠದ, ಶಿವಾನಂದ ಯಲಬಳ್ಳಿ, ಶ್ರೀಧರ ಶಿಫ್ರೀ, ದ್ಯಾಮಣ್ಣ ಶಾಂತಗೇರಿ, ಬಸವರಾಜ ಕುರಿ, ಬಸಣ್ಣ ಕುಪ್ಪಸ್ತ, ಸಂಗಣ್ಣ ಕಿತ್ತಲಿ, ಮಂಜು ಕವಡಿಮಟ್ಟಿ, ಗುಡುಸಾಬ ಯಲಿಗಾರ,ಬಸವರಾಜ ಗಡ್ಡಿ, ದುರಗಪ್ಪ ಮೂಲಿಮನಿ, ಮೈಬುಸಾಬ್ ನದಾಪ, ವೇಂಕಪ್ಪ ಶಾಂತಗೇರಿ, ಶರಣಪ್ಪ ಕುಪ್ಪಸ್ತ ಹಾಗೂ ಕಟ್ಟಡ, ದಾಸೋಹ, ಕಾರ್ಯಕ್ರಮ, ಪ್ರಚಾರ ಸಮಿತಿ, ಸಲಹಾ ಮತ್ತು ಮಹಿಳಾ ಸಮಿತಿ ಪಧಾದಿಕಾರಿಗಳು ಪಾಲ್ಗೊಂಡಿದ್ದರು. ಶಿಕ್ಷಕ ಬಾಪುಗೌಡ್ರ ತಿಮ್ಮಗೌಡ್ರ, ಬಿ.ಎಸ್.ಸಾಲಿಮಠ, ಎಸ್ .ವಿ.ಕುಪ್ಪಸ್ತ ನಿರೂಪಿಸಿದರು.



ಶಾಖಾಮಠದ ಗದ್ದುಗೆ ಶಿಲಾ ಮಂಟಪ ಮತ್ತು ಗೋಪುರ ಕಳಸಾರೋಹಣ ಕಾರ್ಯಕ್ರಮದಲ್ಲಿ ಗ್ರಾಪಂ ಪೌರ ಕಾರ್ಮಿಕರನ್ನು ಸನ್ಮಾನಿಸಲಾಯಿತು.

ಕಾರ್ಮಿಕರನ್ನು ಗೌರವಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಈ ಕಾರ್ಯವನ್ನು ಕಾಯಕ ದಿನದಂದು ಗೌರವಿಸುತ್ತಿರುವುದು ಶಿರೋಳ ತೋಂಟದಾರ್ಯಮಠದ ಕಾರ್ಯ ಶ್ಲಾಘನಿಯ.

-ಡಾ.ಸಿದ್ಧರಾಮ ಸ್ವಾಮೀಜಿ, ತೋಂಟದಾರ್ಯ ಮಠ

ಸಮಾಚಾರ ಸಣ್ಣದಲ್ಲ

ರಸ್ತೆಯಲ್ಲಿ ಹೊತ್ತಿ ಉರಿದ ಲಾರಿ

ತುಮಕೂರು: ಚಲಿಸುತ್ತಿದ್ದ ಲಾರಿಯಲ್ಲಿ ಏಕಾಏಕಿ ಬೆಂಕಿ ಕಾಣಿಸಿಕೊಂಡ ಪರಿಣಾಮ ಲಾರಿ ಸಂಪೂರ್ಣ ಸುಟ್ಟು ಕರಕಲಾಗಿರುವ ಘಟನೆ ತುಮಕೂರಿನ ಕ್ಯಾತಸಂದ್ರ ಬಳಿಯ ರಾಷ್ಟ್ರೀಯ ಹೆದ್ದಾರಿ 48ರಲ್ಲಿ ನಡೆದಿದೆ. ಲಾರಿ ಡಾಬಸ್ ಪೇಟೆಯಿಂದ ವಸಂತ ನರಸಾಪುರ ಕಡೆಗೆ ತೆರಳುತ್ತಿತ್ತು. ಈ ವೇಳೆ ಲಾರಿಯ ಎಂಜಿನ್‌ನಲ್ಲಿ ಬೆಂಕಿ ಕಾಣಿಸಿಕೊಂಡಿದೆ. ಕೂಡಲೇ ಲಾರಿಯನ್ನು ಬಿಟ್ಟು ಚಾಲಕ ಕೆಳಗೆ ಇಳಿದಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾನೆ. ಬೆಂಕಿ ಕೆನ್ನಾಲಿಗೆಗೆ ಲಾರಿ ಸುಟ್ಟು ಭಸ್ಮವಾಗಿದೆ. ಸ್ಥಳಕ್ಕೆ ಅಗ್ನಿಶಾಮಕ ದಳದ ಸಿಬ್ಬಂದಿ ಭೇಟಿ ನೀಡಿ ಬೆಂಕಿ ನಂದಿಸುವಲ್ಲಿ ಯಶಸ್ವಿಯಾಗಿದ್ದಾರೆ. ಲಾರಿ ಖಾಲಿಯಿದ್ದ ಹಿನ್ನೆಲೆ ಘಟನೆಯಿಂದ ಯಾವುದೇ ಸಾವು ನೋವು ಸಂಭವಿಸಿಲ್ಲ.

ಬೈಕ್‌ಗೆ ಲಾರಿ ಡಿಕ್ಕಿ: ಕಾನ್‌ಸ್ಟೇಬಲ್ ಸಾವು

ಹಾಸನ: ಚಲಿಸುತ್ತಿದ್ದ ಬೈಕ್‌ಗೆ ಲಾರಿ ಡಿಕ್ಕಿಯಾದ ಪರಿಣಾಮ ಪೊಲೀಸ್ ಕಾನ್‌ಸ್ಟೇಬಲ್ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಹಾಸನ ಹೊರವಲಯದ ಕೆಂಚನಹಳ್ಳಿ ಬಳಿ ನಡೆದಿದೆ. ಪ್ರಕಾಶ್(38) ಮೃತಪಟ್ಟ ಪೊಲೀಸ್ ಕಾನ್‌ಸ್ಟೇಬಲ್. 11ನೇ ಕರ್ನಾಟಕ ರಾಜ್ಯ ಮೀಸಲು ಪೊಲೀಸ್ ಪಡೆಯ ಪೊಲೀಸ್ ಕಾನ್‌ಸ್ಟೇಬಲ್ ಪ್ರಕಾಶ್ ಅವರು ಹಾಸನ ನಗರದಿಂದ ಸರಕಾರಿ ದ್ವಿಚಕ್ರ ವಾಹನದಲ್ಲಿ ಗಾಡೇನಹಳ್ಳಿಗೆ ಕರ್ತವ್ಯಕ್ಕೆ ತೆರಳುತ್ತಿದ್ದರು. ಈ ವೇಳೆ ಬೈಕ್‌ಗೆ ಲಾರಿ ಡಿಕ್ಕಿ ಹೊಡೆದಿದೆ. ಪರಿಣಾಮ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಘಟನಾ ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ, ಪರಿಶೀಲನೆ ನಡೆಸಿದ್ದಾರೆ. ಸಂಚಾರಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಈ ಘಟನೆ ನಡೆದಿದೆ.

ಅಪಘಾತ: ವಿದ್ಯಾರ್ಥಿಗೆ 1 ಕೋಟಿ ನಷ್ಟ ಪರಿಹಾರ

ಕಾಸರಗೋಡು: ವಾಹನ ಅಪಘಾತದಲ್ಲಿ ಗಂಭೀರ ಗಾಯಗೊಂಡಿದ್ದ ವಿದ್ಯಾರ್ಥಿಗೆ ಒಂದು ಕೋಟಿ ರು. ನಷ್ಟ ಪರಿಹಾರ ನೀಡುವಂತೆ ಕಾಸರಗೋಡು ಮೋಟಾರ್ ಆ್ಯಕ್ಸಿಡೆಂಟ್ ಕ್ಲೈಮ್ ಟ್ರಿಬ್ಯೂನಲ್ ತೀರ್ಪು ನೀಡಿದೆ. ಪ್ಲಸ್ ವನ್ ವಿದ್ಯಾರ್ಥಿ, ಚೆಮ್ನಾಡ್ ಪಂಚಾಯತ್‌ನ ವಶಪೋತ್ ತಾನಂ ಪುರಕ್ಕಲ್ ವೀಡಿನ ಸುಕುಮಾರನ್ ಅವರ ಪುತ್ರ ಅಭಿಜಿತ್ (17)ಗೆ ಕೋಮಲ್ ಸುಂದರಂ ಜನರಲ್ ಇನ್ಶೂರೆನ್ಸ್ ಕಂಪೆನಿ ಈ ನಷ್ಟ ಪರಿಹಾರ ನೀಡಬೇಕಾಗಿದೆ. ಚೆಮ್ನಾಡು ಸರಕಾರಿ ಹೈಯರ್ ಸೆಕೆಂಡರಿ ಶಾಲೆಯ ವಿದ್ಯಾರ್ಥಿ ಅಭಿಜಿತ್ 2022ರ ಏ.27ರಂದು ಬೆಳಗ್ಗೆ ಶಾಲೆಗೆ ನಡೆದು ಹೋಗುತ್ತಿದ್ದಾಗ ಪರವನಡ್ಕದಲ್ಲಿ ಪಿಕಪ್ ವ್ಯಾನ್ ಡಿಕ್ಕಿ ಹೊಡೆದಿತ್ತು. ಇದರ ಪರಿಣಾಮವಾಗಿ ಮಂಗಳೂರು ಮತ್ತು ವಯನಾಡು ಆಸ್ಪತ್ರೆಗಳಲ್ಲಿ 10 ತಿಂಗಳ ತನಕ ಚಿಕಿತ್ಸೆ ಪಡೆಯಬೇಕಾಗಿ ಬಂದಿತ್ತು. ಈ ಬಗ್ಗೆ ನಷ್ಟ ಪರಿಹಾರ ಕೋರಿ ನ್ಯಾಯಾಲಯಕ್ಕೆ ಮೊರೆ ಹೋಗಲಾಗಿತ್ತು.

ತಂದೆಯ ಅಂತ್ಯಕ್ರಿಯೆಯಲ್ಲಿ ಪಾಲ್ಗೊಂಡ ಬನ್ನಂಜೆ ರಾಜಾ

ಉಡುಪಿ: ತಂದೆಯ ಅಂತ್ಯಕ್ರಿಯೆಯಲ್ಲಿ ಭಾಗವಹಿಸುವ ಸಲುವಾಗಿ ಬೆಳಗಾಂ ಜೈಲಿನಲ್ಲಿದ್ದ ಬನ್ನಂಜೆ ರಾಜಾ ಹೈಕೋರ್ಟ್‌ಗೆ ತುರ್ತು ಪೆರೋಲ್ಗಾಗಿ ಅರ್ಜಿ ಸಲ್ಲಿಸಿದ್ದ.

ಹೈಕೋರ್ಟ್ ಕೆಲವೊಂದು ಷರತ್ತುಗಳನ್ನು ನೀಡಿದ್ದು, ಆತನಿಗೆ ಮೇ 3ರಿಂದ 14ರ ವರೆಗೆ ಪೆರೋಲ್ ರಜೆ ನೀಡಿತ್ತು. ಈ ಸಂದರ್ಭದಲ್ಲಿ ಆತನಿಗೆ ಕೆಲವೊಂದು ಷರತ್ತುಗಳನ್ನು ವಿಧಿಸಲಾಗಿದೆ. ಅವನು ಸಹಚರರೊಂದಿಗೆ ಸೇರಿ ಮತ್ತೆ ಯಾವುದೇ ಕೃತ್ಯದಲ್ಲಿ ಭಾಗಿಯಾಗಬಾರದು. ಮೊಬೈಲ್, ಇಂಟರ್‌ನೆಟ್ ಬಳಕೆ ಮಾಡಬಾರದು. ಅಂತಿಮ ಸಂಸ್ಕಾರ ಹೊರತು ಪಡಿಸಿ ಮನೆಯ ಆಚೆಗೆ ಬರಬಾರದು ಸಹಿತ ಕೆಲ ಷರತ್ತುಗಳನ್ನು ವಿಧಿಸಲಾಗಿದೆ. ಮೇ 14ರ ಬಳಿಕ ಆತನನ್ನು ಮತ್ತೆ ಬೆಳಗಾವಿ ಜೈಲಿಗೆ ಕರೆದುಕೊಂಡು ಹೋಗಲಾಗುವುದು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ ಕೆ.ಅರುಣ್ ತಿಳಿಸಿದ್ದಾರೆ.

{ ಈಶ್ವರ್ ಖಂಡ್ರೆ } ಸಚಿವ

ಮಾಜಿ ಪ್ರಧಾನಿ ಇಂದಿರಾಗಾಂಧಿ ಅವರ ರೀತಿಯಲ್ಲಿ ಪಾಕಿಸ್ತಾನದ ಮೇಲೆ ಕ್ರಮಕೈಗೊಳ್ಳಿ, ಸುಮ್ಮನೆ ಬೊಗಳೆ ಬಿಡಬೇಡಿ. ಪಹಲ್ಗಾಮ್‌ನಲ್ಲಿ ಭದ್ರತಾ ವೈಫಲ್ಯ ಆಗಿದ್ದು ಇಡೀ ದೇಶಕ್ಕೆ ಗೊತ್ತಿರುವ ವಿಚಾರ. ಕಂದಹಾರ ವಿಮಾನ ಅಪಹರಣ, ಸಂಸತ್ತು, ಅಕ್ಷರಧಾಮದ ಮೇಲಿನ ದಾಳಿಯಾಗಿದ್ದು ಬಿಜೆಪಿ ಆಡಳಿತಾವಧಿಯಲ್ಲಿ.



ಪ್ರಕರಣವನ್ನು ಎನ್‌ಐಗೆ ವಹಿಸುವ ಅಗತ್ಯವಿಲ್ಲ : ಪರಂ | ಕೊಲೆ ಮಾಡಿದವರ ರಕ್ಷಣೆಗೆ ಸರಕಾರ ಮುಂದಾಗಬಾರದು: ಸೋಮಣ್ಣ

ಸುಹಾಸ್ ಕೊಲೆ ಎನ್‌ಐಎಗೆ: ಪರ ವಿರೋಧ ಚರ್ಚೆ

ಬೆಂಗಳೂರು/ತುಮಕೂರು: ಮಂಗಳೂರಿನ ಸುಹಾಸ್ ಶೆಟ್ಟಿ ಕೊಲೆ ನಡೆದು ನಾಲ್ಕು ದಿನದ ಬಳಿಕ ಕರಾವಳಿ ಸಹಜ ಸ್ಥಿತಿಯತ್ತ ವಾಲುತ್ತಿದೆ. ಆದರೀಗ ಈ ಪ್ರಕರಣವನ್ನು ಎನ್‌ಐಎಗೆ ವಹಿಸಬೇಕು ಎನ್ನುವ ವಿಷಯಕ್ಕೆ ಪರ-ವಿರೋಧ ಚರ್ಚೆ ಆರಂಭವಾಗಿದೆ. ಗೃಹ ಸಚಿವ ಪರಮೇಶ್ವರ ಸೇರಿದಂತೆ ಹಲವು ಕಾಂಗ್ರೆಸಿಗರು ಸ್ಥಳೀಯ ಪೊಲೀಸರೇ ತನಿಖೆ ನಡೆಸಲಿ ಎಂದು ಸಮರ್ಥಿಸಿಕೊಳ್ಳುತ್ತಿದ್ದರೆ, ಬಿಜೆಪಿಗರು ಎನ್‌ಐಎ ತನಿಖೆಗೆ ಆಗ್ರಹಿಸಿದ್ದಾರೆ.

ಬೆಂಗಳೂರಿನಲ್ಲಿ ಈ ಸಂಬಂಧ ಮಾತನಾಡಿರುವ ಗೃಹ ಸಚಿವ ಡಾ.ಜಿ. ಪರಮೇಶ್ವರ, ಸುಹಾಸ್ ಶೆಟ್ಟಿ ಪ್ರಕರಣ ಎನ್‌ಐಎಗೆ ಕೊಡುವ ಅವಶ್ಯಕತೆ ಇಲ್ಲ. ನಮ್ಮ ಪೊಲೀಸರೇ ತನಿಖೆ ನಡೆಸುತ್ತಾರೆ. ಇದು ಪ್ರತೀಕಾರಕ್ಕೆ ನಡೆದಿದೆಯಾ ಇಲ್ಲವೇ ಎನ್ನುವುದು ಗೊತ್ತಿಲ್ಲ. ಏನೇ ಕಾರಣ ಇದ್ದರೂ ತನಿಖೆ ನಡೆಸಿದ ಮೇಲೆ ಗೊತ್ತಾಗುತ್ತದೆ. ನಾವು ಊಹೆ ಮಾಡಿ ಇದೇ ಕಾರಣ ಅಂತ ಹೇಳಕ್ಕಾಗುವುದಿಲ್ಲ. ತನಿಖೆ ಮುಗಿಯೋವರೆಗೂ ಏನೂ ಹೇಳಲಾಗುವುದಿಲ್ಲ. ಬಿಜೆಪಿಯವರು ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ ಎಂದು ಆರೋಪ ಮಾಡುತ್ತಾರೆ. ಅವರ ಕಾಲದಲ್ಲಿ ನಮಗಿಂತಲೂ ಹೆಚ್ಚಿನ ಕೊಲೆಗಳಾಗಿವೆ. ಕಳೆದೆರಡು ವರ್ಷಗಳಲ್ಲಿ ನಡೆದ ಕೊಲೆ ಪ್ರಕರಣದಲ್ಲಿ ಶೇ.99ರಷ್ಟು ಕ್ರಮ ತಗೊಂಡಿದ್ದೇವೆ. ಆರೋಪಿಯ ಬಂಧನ ಮಾಡಿದ್ದೇವೆ ಎಂದರು.

ಅಪರಾಧ ತಡೆಗೆ ಕಠಿಣ ಕ್ರಮ: ಜಿ.ಪರಮೇಶ್ವರ

ಹುಬ್ಬಳ್ಳಿ: ರಾಜ್ಯದಲ್ಲಿ ಕಠಿಣವಾದ ಕಾನೂನು ಇದ್ದರೂ ಕೆಲವು ಕಡೆ ಕೊಲೆ, ಗುಂಪು ಘರ್ಷಣೆ ಪ್ರಕರಣಗಳು ನಡೆಯುತ್ತಿವೆ. ಅದನ್ನು ತಡೆಗಟ್ಟಲು ಸರಕಾರ ಕಠಿಣ ಕ್ರಮ ಕೈಗೊಳ್ಳಲಿದೆ' ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮಂಗಳೂರು ಕೊಲೆ ಪ್ರಕರಣದ ಕುರಿತು ನಾನು ಯಾರನ್ನೂ ದೂಷಿಸುವುದಿಲ್ಲ. ಈಗಾಗಲೇ 8 ಮಂದಿಯನ್ನು ಬಂಧಿಸಲಾಗಿದೆ. ಕಾನೂನು ಸುವ್ಯವಸ್ಥೆ ಕಾಪಾಡುವುದು ನಮ್ಮ ಕೆಲಸ. ಪ್ರಕರಣಕ್ಕೆ ಸಂಬಂಧಿಸಿ ಇಬ್ಬರಿಗೆ ಬೆದರಿಕೆ ಹಾಕಿದ್ದಾರೆ ಎನ್ನಲಾಗುತ್ತಿದೆ. ಅದು ಸತ್ಯವಾಗಿದ್ದರೆ, ಕಾನೂನು ಮೀರಿ ಯಾರಾದರೂ ಕೆಲಸ ಮಾಡಿದರೆ ಪೊಲೀಸ್ ಇಲಾಖೆ ಸೂಕ್ತ ಕ್ರಮ ಕೈಗೊಳ್ಳಲಿದೆ ಎಂದು ಎಚ್ಚರಿಸಿದರು. ಅಪರಾಧ ಪ್ರಕರಣಗಳಿಗೆ ಸಂಬಂಧಿಸಿ ಪೊಲೀಸ್ ಇಲಾಖೆ ಸರಿಯಾದ ಕ್ರಮ ಕೈಗೊಳ್ಳುತ್ತಿದೆ. ರಾಜ್ಯ ಸರಕಾರ ಪೊಲೀಸರಿಗೆ ಫ್ರೀ ಹ್ಯಾಂಡ್ ನೀಡುತ್ತಿಲ್ಲ ಎನ್ನುವ ಕೇಂದ್ರ ಸಚಿವ ವಿ. ಸೋಮಣ್ಣ ಅವರ ಹೇಳಿಕೆಯಲ್ಲಿ ಹುರುಳಿಲ್ಲ. ಸಂದರ್ಭ ಬಂದಾಗ ಅವರಿಗೆ ಅಂಕಿ-ಸಂಖ್ಯೆ ಸಮೇತ ಉತ್ತರ ನೀಡುತ್ತೇನೆ ಎಂದರು.

ನ್ಯಾಯ ಕೊಡಿಸುವ ಕೆಲಸ ಸರಕಾರ ಮಾಡಲಿದೆ: ಇನ್ನು ಸುಹಾಸ್ ಶೆಟ್ಟಿ ನಿವಾಸಕ್ಕೆ ಭೇಟಿ ನೀಡದಿರುವ ಬಗ್ಗೆ ಪ್ರತಿಕ್ರಿಯಿಸಿದ ಪರಮೇಶ್ವರ ಅವರು, ಮಂಗಳೂರಿನ ಬಜಪೆ ಬಳಿ ಕೊಲೆಯಾದ ಸುಹಾಸ್ ಶೆಟ್ಟಿ ಮೇಲೆ ಐದು ಕೇಸ್‌ಗಳಿವೆ. ಹಾಗಾಗಿ ನಾವು ಯಾರೂ ಅವರ ಮನೆಗೆ ಭೇಟಿ ಕೊಟ್ಟಿಲ್ಲ. ಇದೊಂದು ಕೊಲೆ ಪ್ರಕರಣ. ಆದರೆ ಸುಹಾಸ್ ಶೆಟ್ಟಿ ಮನೆಗೆ ನ್ಯಾಯ ಕೊಡಿಸುವ ಕೆಲಸ ಸರಕಾರ ಮಾಡಲಿದೆ ಎಂದು ಸ್ಪಷ್ಟಪಡಿಸಿದರು. ಮಂಗಳೂರು ಭೇಟಿ ವೇಳೆ ಕೇವಲ ಮುಸ್ಲಿಂ ಸಮುದಾಯದೊಂದಿಗೆ ಸಭೆ ನಡೆಸಿದ್ದಕ್ಕೆ ಪ್ರತಿಕ್ರಿಯಿಸಿ, ನಾವು ಸಭೆ ಕರೆದಿಲ್ಲ. ಅವರು ಬಂಗಾದ ಬೇಡ ಎನ್ನಲು ಆಗುವುದೇ? ಇತರೆ ಸಮುದಾಯದವರು ಬಂದಿದ್ದರೆ ಅವರೊಂದಿಗೂ ಮಾತನಾಡುತ್ತಿದ್ದೆ ಎಂದು ಸ್ಪಷ್ಟಪಡಿಸಿದರು.

ರಾಜ್ಯ ಸರಕಾರ ನಿಷ್ಕ್ರಿಯವಾದಾಗ ಎನ್‌ಐಎ ಎಂಟ್ರಿ: ತುಮಕೂರಿನಲ್ಲಿ ಮಂಗಳೂರು ಹತ್ಯೆಗೆ ಸಂಬಂಧಿಸಿದಂತೆ ಮಾತನಾಡಿದ ಕೇಂದ್ರ ಸಚಿವ ವಿ. ಸೋಮಣ್ಣ, ಬಹಿರಂಗವಾಗಿ, ರಾಜಾರೋಷವಾಗಿ ಕೊಲೆ ಬೆದರಿಕೆ ಹಾಕುವವರ ಹೆಡೆಮುರಿ ಕಟ್ಟಲು ರಾಜ್ಯ ಸರಕಾರ ಪೊಲೀಸರಿಗೆ ಫ್ರೀ ಹ್ಯಾಂಡ್ ನೀಡಬೇಕು. ಇಂತಹ ಗಂಭೀರ ವಿಚಾರಗಳಲ್ಲಿ ರಾಜ್ಯ ಸರಕಾರ ನಿಷ್ಕ್ರಿಯವಾದಾಗ ಎನ್‌ಐಎ ಪ್ರವೇಶವಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯನವರೇ ರಾಜ್ಯದ ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳಬೇಕು. ಬೆದರಿಕೆ ಹಾಕುವಂತಹ ದುಷ್ಕರ್ಮಿಗಳು, ಸಮಾಜಘಾತಕ ಶಕ್ತಿಯನ್ನು ಪೊಲೀಸರಿಗೆ ಫ್ರೀ ಹ್ಯಾಂಡ್ ಕೊಟ್ಟು ಹುಟ್ಟಡಗಿಸಬೇಕು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತನಗೆ ಬೆದರಿಕೆ ಕರೆ ಬಂದಿದೆ ಎಂದಾಗ ನನ್ನ ಮನಸ್ಸಿಗೆ ತುಂಬಾ ನೋವಾಯಿತು. ನನ್ನ ಈ ನೋವನ್ನು ಬಗೆಹರಿಸಲಿಕ್ಕಾದರೂ ಮುಖ್ಯಮಂತ್ರಿ ಸಿದ್ದರಾಮಯ್ಯನವರು ರಾಜ್ಯದ ಪೊಲೀಸರಿಗೆ ಫ್ರೀ ಹ್ಯಾಂಡ್ ಕೊಟ್ಟು ದುಷ್ಟಶಕ್ತಿಗಳನ್ನು ಬಲಿ ಹಾಕಲಿ.

-ವಿ.ಸೋಮಣ್ಣ, ಕೇಂದ್ರ ಸಚಿವ

ದುಷ್ಕರ್ಮಿಗಳ ಹೆಡೆಮುರಿ ಕಟ್ಟುತ್ತೇವೆಂದು ಹೇಳಿ, ಅವರ ಜತೆ ಒಳ ಒಪ್ಪಂದ ಮಾಡಿಕೊಳ್ಳುವುದನ್ನು ರಾಜ್ಯ ಸರಕಾರ ಬಿಡಬೇಕು. ಜೀವ ತೆಗೆಯುತ್ತೇವೆ ಎಂದು ಬಹಿರಂಗವಾಗಿ ಬೆದರಿಕೆ ಹಾಕುವ ಪಟ್ಟಭದ್ರ ಹಿತಾಸಕ್ತಿಗಳಿಗೆ ಕನಿಕರ ತೋರಿಸಬೇಡಿ ಎಂದು ಹೇಳಿದರು. ರಾಜ್ಯದ ಕಾಂಗ್ರೆಸ್ ಸರಕಾರ ಮಾತನಾಡುವುದನ್ನು ಕಡಿಮೆ ಮಾಡಿ, ಬೇರೆಯವರ ಮನೆಗೆ ಬೆಂಕಿ ಬಿದ್ದಿರುವುದನ್ನು ಕಂಡು ಖುಷಿ ಪಡುವುದನ್ನು ಬಿಡಬೇಕು, ಆ ಬೆಂಕಿ ನಿಮ್ಮ ಮನೆಗೂ ಬೀಳುತ್ತದೆ ಎಂಬುದು ನೆನಪಿರಲಿ ಎಂದರು.

ಕೋಮುದ್ವೇಷ ಭಾಷಣ
ಶಾಸಕ ಪೂಂಜಾ ಮೇಲೆ ಎಫ್‌ಐಆರ್ ದಾಖಲು

ಮಂಗಳೂರು: ಜಿಲ್ಲೆಯ ಬೆಳ್ತಂಗಡಿ ತಾಲೂಕಿನ ತೆಕ್ಕಾರು ಗೋಪಾಲಕೃಷ್ಣ ದೇವಸ್ಥಾನದ ಬ್ರಹ್ಮಕಲಶೋತ್ಸವ ಪ್ರಯುಕ್ತ ಶನಿವಾರ ಏರ್ಪಡಿಸಿದ್ದ ಧಾರ್ಮಿಕ ಸಭೆಯಲ್ಲಿ 'ಬ್ಯಾರಿ' ಸಮುದಾಯದ ವಿರುದ್ಧ ಅವಹೇಳನಕಾರಿ ಪದ ಬಳಸಿದ ಹಾಗೂ ಧರ್ಮಗಳ ನಡುವೆ ದ್ವೇಷ ಹುಟ್ಟಿಸಲು ಯತ್ನಿಸಿದ ಬಗ್ಗೆ ಶಾಸಕ ಹರೀಶ್ ಪೂಂಜಾ ವಿರುದ್ಧ ಉಪ್ಪಿನಂಗಡಿ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ನಾನು ಬ್ರಹ್ಮಕಲಶೋತ್ಸವದ ಸಭೆಯಲ್ಲಿ ಭಾಗವಹಿಸಿದ್ದೆ. ಆ ಸಭೆಯಲ್ಲಿ ಮಾತನಾಡಿದ್ದ ಹರೀಶ್ ಪೂಂಜಾ ಅವರು, ಇಲ್ಲಿರುವ ಕಂತ್ರಿ ಬ್ಯಾರಿಗಳು ದಿನ ಬೆಳಗಾಗುವಾಗ ಟ್ಯೂಬ್ಲೈಟ್ ಒಡೆಯುತ್ತಿದ್ದಾರೆ. ಡೀಸೆಲ್ ಕದಿಯುತ್ತಿದ್ದಾರೆ ಎಂದು ಊರಿನ ಯುವಕರು ಬಂದು ಹೇಳಿದರು. ಯಾರೂ ತಲೆ ಬಿಸಿ ಮಾಡಬೇಡಿ. ದೃಢಕಲಶ ಆಗುವ ಮುನ್ನ ಇದನ್ನು ಯಾರು ಮಾಡಿದ್ದು ಎಂದು ಗೊತ್ತಾಗುತ್ತದೆ ಎಂದು ಹೇಳಿದ್ದರು ಎಂದು ಇಬ್ರಾಹಿಂ ದೂರಿನಲ್ಲಿ ಆರೋಪಿಸಿದ್ದಾರೆ.

ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ವೈರಲ್ | ಸೂಕ್ತ ಕ್ರಮಕ್ಕೆ ಸಾರ್ವಜನಿಕರ ಆಗ್ರಹ

ಮತ್ತೊಬ್ಬ ಹಿಂದೂ ಕಾರ್ಯಕರ್ತನಿಗೆ ಕೊಲೆ ಬೆದರಿಕೆ

ಮಂಗಳೂರು: ಸುಹಾಸ್ ಶೆಟ್ಟಿ ಹತ್ಯೆ ಪ್ರಕರಣ ಚರ್ಚೆಯಲ್ಲಿರುವಾಗಲೇ ಮತ್ತೊಬ್ಬ ಹಿಂದೂ ಕಾರ್ಯಕರ್ತನಿಗೆ ಜೀವ ಬೆದರಿಕೆಯನ್ನು ಹಾಕಲಾದ ಪೋಸ್ಟ್ ಸೋಶಿಯಲ್ ಮೀಡಿಯಾದಲ್ಲಿ ವೈರಲ್ ಆಗಿದೆ.

ಹಿಂದೂ ಕಾರ್ಯಕರ್ತನಾಗಿರುವ ಭರತ್ ಕುಮ್ಡೇಲು ಅವರಿಗೆ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮೂಲಕ ಜೀವ ಬೆದರಿಕೆಯನ್ನು ಹಾಕಲಾಗಿದೆ. ಮೇ 5 ರಂದು ರಾತ್ರಿ 9:30ಕ್ಕೆ ನಿನ್ನ ಸ್ಥಳದಲ್ಲೇ ಬಂದು ಕೊಲೆ ಮಾಡುತ್ತೇವೆ ಎಂದು ಜೀವ ಬೆದರಿಕೆವುಳ್ಳ ಬರಹವನ್ನು ಹಾಕಿ ಪೋಸ್ಟ್ ಮಾಡಲಾಗಿದೆ. ಸುಹಾಸ್ ಶೆಟ್ಟಿ ಫೋಟೋಗೆ ರೈಟ್ ಮಾರ್ಕ್ ಹಾಕಿ ಪೋಸ್ಟ್ ಹಾಕಿದ್ದು, ಅದರ ಬದಿಯಲ್ಲಿ ಭರತ್ ಅವರ ಫೋಟೋವನ್ನು ಹಾಕಲಾಗಿದೆ. ಭರತ್ ಕುಮ್ಡೇಲು ಎಸ್‌ಡಿಪಿಐ ಮುಖಂಡ ಅಶ್ರಫ್ ಕಲಾಯಿ ಹತ್ಯೆಯ ಆರೋಪಿಯಾಗಿದ್ದಾರೆ.

ಭರತ್ ಮಾತ್ರವಲ್ಲದೆ, ಸುಹಾಸ್ ಹತ್ಯೆ ಬಳಿಕ ಹಿಂದೂ ಮುಖಂಡ ಶರಣ್ ಪಂಪ್‌ವೆಲ್ ಸೇರಿದಂತೆ 3 ರಿಂದ 5 ಮಂದಿ ಹಿಂದೂ ಮುಖಂಡರಿಗೆ ಜೀವ ಬೆದರಿಕೆಯನ್ನು ಹಾಕಲಾಗಿದೆ ಎನ್ನಲಾಗಿದೆ. ಸದ್ಯ ಸಾಮಾಜಿಕ ಜಾಲತಾಣದಲ್ಲಿ ಜೀವ ಬೆದರಿಕೆಯ ಪೋಸ್ಟ್ ವೈರಲ್ ಆಗಿದ್ದು, ಪೊಲೀಸರು ಸಂಬಂಧ ಪಟ್ಟವರ ವಿರುದ್ಧ ಕ್ರಮಕೈಗೊಳ್ಳಬೇಕೆಂದು ಸಾರ್ವಜನಿಕರು ಆಗ್ರಹಿಸಿದ್ದಾರೆ. ಸುಹಾಸ್ ಶೆಟ್ಟಿ ಪ್ರಕರಣ ಸಂಬಂಧ ಪೊಲೀಸರು 8 ಮಂದಿ ಆರೋಪಿಗಳನ್ನು ಈಗಾಗಲೇ ಬಂಧಿಸಿದ್ದಾರೆ.





ಚೂರಿ ಇರಿತ ಪ್ರಕರಣ: ಏಳು ಜನ ಬಂಧನ

ಮಂಗಳೂರು: ಸುಹಾಸ್ ಶೆಟ್ಟಿ ಹತ್ಯೆ ಬಳಿಕ ನಡೆದ ಚೂರಿ ಇರಿತ ಹಾಗೂ ಹಲ್ಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಏಳು ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಮಂಗಳೂರು ಪೊಲೀಸ್ ಕಮಿಷನರ್ ಅನುಪಮ್ ಅಗ್ರವಾಲ್ ತಿಳಿಸಿದ್ದಾರೆ. ಕಂಕನಾಡಿ ನಗರ ಪೊಲೀಸ್ ಠಾಣೆಯ ವ್ಯಾಪ್ತಿಯ ಕಣ್ಣೂರಿನಲ್ಲಿ ಶುಕ್ರವಾರ ನಸುಕಿನಲ್ಲಿ ನೌಷಾದ್ ಅಹ್ಮದ್ (39) ಎಂಬುವರಿಗೆ ಚೂರಿ ಇರಿದ ಪ್ರಕರಣ ಸಂಬಂಧ ಮೂವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ. ಮುಡಿಪುವಿನ ಲೋಹಿತಾಶ್ವ (32), ವೀರನಗರದ ಪುನೀತ್ (28), ಕುತ್ತಾರಿನ ಗಣೇಶ ಪ್ರಸಾದ (23) ಬಂಧಿತರು ಎಂದು ಅವರು ತಿಳಿಸಿದ್ದಾರೆ. ಅಲೇಕಳ ನಿವಾಸಿ ಫೈಝಲ್ (40) ಎಂಬುವರಿಗೆ ಉಳ್ಳಾಲ ಠಾಣೆ ವ್ಯಾಪ್ತಿಯ ತೊಕ್ಕೊಟ್ಟಿನಲ್ಲಿ ಗುರುವಾರ ತಡರಾತ್ರಿ ಚೂರಿ ಇರಿದದ್ದು ನಾವೇ ಎಂದು ಮೇಲಿನ ಆರೋಪಿಗಳು ವಿಚಾರಣೆ ವೇಳೆ ಒಪ್ಪಿಕೊಂಡಿದ್ದಾರೆ. ಕಾವೂರು ಠಾಣಾ ವ್ಯಾಪ್ತಿಯ ದೇರೇಬೈಲ್ ಕೊಂಚಾಡಿ ಬಳಿ ಮೀನುಮಾರುವ ಮಹಮ್ಮದ್ ಲುಕ್ಮಾನ್ ಅವರ ಮೇಲೆ ಶುಕ್ರವಾರ ನಸುಕಿನಲ್ಲಿ ಹಲ್ಲೆ ನಡೆಸಿದ ಪ್ರಕರಣ ಸಂಬಂಧ ನಾಲ್ವರು ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಕಮಿಷನರ್ ತಿಳಿಸಿದ್ದಾರೆ.

ಮುಸ್ಲಿಂ ಸಮುದಾಯದ ಪ್ರತ್ಯೇಕ ಸಭೆ ಕರೆದಿರಲಿಲ್ಲ

ಮಂಗಳೂರು: ಸುಹಾಸ್ ಶೆಟ್ಟಿ ಹತ್ಯೆ ಬಳಿಕ ದಕ್ಷಿಣ ಕನ್ನಡ ಜಿಲ್ಲೆಗೆ ಭೇಟಿ ನೀಡಿದ್ದ ವೇಳೆ ಪೊಲೀಸ್ ಅಧಿಕಾರಿಗಳ ಉಪಸ್ಥಿತಿಯಲ್ಲಿ ಮುಸ್ಲಿಂ ಮುಖಂಡರೊಂದಿಗೆ ಪ್ರತ್ಯೇಕವಾಗಿ ಸಭೆಯನ್ನು ಕರೆದಿರಲಿಲ್ಲ ಎಂದು ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಸ್ಪಷ್ಟನೆ ನೀಡಿದ್ದಾರೆ. ಅಹಿತಕರ ಘಟನೆಗಳ ಬೆನ್ನಲ್ಲೇ ಕಾನೂನು ಸುವ್ಯವಸ್ಥೆ ಕುರಿತಂತೆ ಗೃಹ ಸಚಿವರಾದ ಜಿ. ಪರಮೇಶ್ವರ ಅವರೊಂದಿಗೆ ಮೇ 3 ರಂದು ಮಂಗಳೂರಿಗೆ ಭೇಟಿ ನೀಡಿ ಪೊಲೀಸ್ ಅಧಿಕಾರಿಗಳ ಜತೆ ಸಭೆ ನಡೆಸಿ ಅಗತ್ಯ ನಿರ್ದೇಶನಗಳನ್ನು ನೀಡಲಾಗಿದೆ .ಆದರೆ ಕೆಲವು ಮಾಧ್ಯಮಗಳಲ್ಲಿ ಕೇವಲ ಮುಸ್ಲಿಂ ಸಮುದಾಯದ ಮುಖಂಡರೊಂದಿಗೆ ಮಾತ್ರ ಸಭೆ ನಡೆಸಿದ್ದಾರೆ ಎಂದು ತಪ್ಪಾಗಿ ವರದಿಯಾಗಿದೆ ಎಂದು ಹೇಳಿದ್ದಾರೆ.

ಕಠಿನ ಕಾನೂನು ಕ್ರಮಗಳನ್ನ ಕೈಗೊಳ್ಳುವ ಕುರಿತಂತೆ ಪೊಲೀಸ್ ಅಧಿಕಾರಿಗಳೊಂದಿಗೆ ಮಾತ್ರ ಸಭೆ ನಡೆಸಲಾಗಿದೆ. ಸರ್ಕಿಟ್ ಹೌಸ್‌ನಲ್ಲಿ ಇದ್ದ ವೇಳೆ ಮುಸ್ಲಿಂ ಸೇರಿದಂತೆ ಇತರ ಸಮುದಾಯದ ಹಾಗೂ ಸಂಘ ಸಂಸ್ಥೆಗಳ ಮುಖಂಡರ ನಿಯೋಗ ಭೇಟಿ ನೀಡಿತ್ತು. ನಿಯೋಗದ ಅಹವಾಲುಗಳನ್ನ ಆಲಿಸಲಾಗಿದೆಯೇ ಹೊರತು ಪೊಲೀಸರ ಸಮಕ್ಷಮದಲ್ಲಿ ಮುಸ್ಲಿಂ ಮುಖಂಡರ ಜತೆ ಯಾವುದೇ ಸಭೆ ನಡೆಸಿಲ್ಲ ಎಂದು ಹೇಳಿದರು.

ಯಾವುದೇ ಒಂದು ಸಮುದಾಯವನ್ನ ಓಲೈಸುವ ಪ್ರಶ್ನೆಯಿಲ್ಲ. ತಪ್ಪಿತಸ್ಥರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲು ಪೊಲೀಸ್ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದೇವೆ.ಕೇವಲ ಮುಸ್ಲಿಂ ಮುಖಂಡರೊಂದಿಗೆ ಸಭೆ ನಡೆಸಿದ್ದಾರೆ ಎಂಬ ತಪ್ಪು ಸಂದೇಶಗಳನ್ನು ರವಾನಿಸುವುದು ಸರಿಯಲ್ಲ. ಈ ರೀತಿಯ ವರದಿಗಳನ್ನು ಬಿತ್ತರಿಸುವಾಗ ಅತ್ಯಂತ ಜವಾಬ್ದಾರಿಯಿಂದ ಎಚ್ಚರಿಕೆ ವಹಿಸಬೇಕು.

-ದಿನೇಶ್ ಗುಂಡೂರಾವ್, ಸಚಿವ

ಮಹಿಳೆಗೆ ಜೀವ ಬೆದರಿಕೆ ಒಡ್ಡಿದ ಪಾತ್ರಿ

ಪಡುಬಿದ್ರಿ: ನಡ್ಸಾಲು ಗ್ರಾಮದ ಬೊಗ್ಗರ್‌ಲಚ್ಚಿಲ್ ನಿವಾಸಿ ಸೀತಾ (69) ಅವರಿಗೆ ಮೇ 2ರಂದು ವಿಟ್ಟು ಪಾತ್ರಿ ಅವರು ಕೈಯಿಂದ ಹಲ್ಲೆ ನಡೆಸಿ, ತನ್ನ ಮನೆಯ ಎದುರಿನ ಸಾರ್ವಜನಿಕ ರಸ್ತೆಯಲ್ಲಿ ನಡೆಯಬಾರದೆಂದು ಜೀವ ಬೆದರಿಕೆ ಒಡ್ಡಿರುವ ಬಗ್ಗೆ ಪಡುಬಿದ್ರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಸೀತಾ ಅವರು ರಸ್ತೆಯಲ್ಲಿ ಹೋಗುತ್ತಿದ್ದಾಗ ಮನೆಯಿಂದ ಹೊರ ಬಂದ ಆರೋಪಿಯು ಅವಾಚ್ಯ ಶಬ್ದಗಳಿಂದ ಬೈದು ಸೀತಾ ಅವರ ಸೀರೆ ಹಿಡಿದೆಳೆದಿದ್ದರು. ನಿಯಂತ್ರಣವನ್ನು ಕಳೆದುಕೊಂಡು ಸೀತಾ ಅವರು ರಸ್ತೆಗೆ ಬಿದ್ದಾಗ ಅವರ ಬೆನ್ನ ಮೇಲೆ ಕೈಯಿಂದ ಹಲ್ಲೆ ನಡೆಸಿದ ಆರೋಪಿ ವಿಟ್ಟು ಪಾತ್ರಿಯು ತನ್ನ ಮನೆಯೆದುರಿನ ರಸ್ತೆಯಲ್ಲಿ ನಡೆಯಬಾರದು. ಮುಂದೆ ನೋಡಿದರೆ ಕೊಲ್ಲದೇ ಬಿಡುವುದಿಲ್ಲ ಎಂಬುದಾಗಿ ಕಬ್ಬಿಣದ ರಾಡ್ ಹಿಡಿದು ಜೀವ ಬೆದರಿಕೆ ಒಡ್ಡಿದ್ದರೆಂದು ಪೊಲೀಸರಿಗಿತ್ತ ದೂರಲ್ಲಿ ತಿಳಿಸಲಾಗಿದೆ.

ಅಂಕೋಲಾ ತಾಲೂಕಿನ ಬಾವಿಕೇರಿಯ ರಾಘವೇಂದ್ರ, ಭಟ್ ಅವರು ತಲಾ 1 ಲಕ್ಷ ರು. ಬೆಲೆಬಾಳುವ ಬೆಲ್ಜಿಯಂ ಮೆಲಿನೋಯ್ಸ್ ತಳಿಯ ಎರಡು ನಾಯಿ ಮರಿಗಳನ್ನು ದೇಶ ಸೇವೆಗಾಗಿ ಸಿಆರ್‌ಪಿಎಫ್‌ಗೆ ಭಾನುವಾರ ಹಸ್ತಾಂತರಿಸಿದರು. ಎರಡು ವರ್ಷಗಳ ಹಿಂದೆ ಇದೇ ತಳಿಯ 17 ನಾಯಿಮರಿಗಳನ್ನು ಭಾರತೀಯ ಸೇನೆ ಖರೀದಿಸಿತ್ತು.

3 ಬಾಲಕರು ನೀರುಪಾಲು

ಯಾದಗಿರಿ: ಹೊಂಡದಲ್ಲಿ ನೀರು ಕುಡಿಯಲು ಹೋಗಿ ಜಾರಿ ಬಿದ್ದು ಮೂವರು ಕುರಿಗಾಹಿ ಬಾಲಕರು ಸಾವನ್ನಪ್ಪಿರುವ ದಾರುಣ ಘಟನೆ ಭಾನುವಾರ ನಡೆದಿದೆ. ಯಾದಗಿರಿ ತಾಲೂಕಿನ ಅಚ್ಚೋಲಾ ತಾಂಡಾದಲ್ಲಿ ಈ ದುರ್ಘಟನೆ ಸಂಭವಿಸಿದ್ದು, ಅಚ್ಚೋಲಾ ತಾಂಡಾದ ನಿವಾಸಿಗಳಾದ ಅಮರ್ (12) ಜಯ ರಾಠೋಡ (14) ಕೃಷ್ಣ ರಾಠೋಡ್ (10) ಮೃತ ದುರ್ದೈವಿಗಳಾಗಿದ್ದಾರೆ. ಬೇಸಿಗೆ ರಜೆ ಸಂಬಂಧವಾಗಿ ಕುರಿ ಕಾಯಲು ಹೋಗಿದ್ದ ಮೂವರು ಬಾಲಕರು, ಹೊಂಡದಲ್ಲಿ ನೀರು ಕುಡಿಯಲು ಹೋದಾಗ ಕಾಲುಜಾರಿ ಬಿದ್ದು ನೀರು ಪಾಲಾಗಿದ್ದಾರೆ ಎನ್ನಲಾಗಿದೆ.

ಕಣಿವೆನಾಡಲ್ಲಿ ಕರುನಾಡ ಪೂಜೆ

← ಮೊದಲಪುಟದಿಂದ

ಕೆಲ ದಿನಗಳ ಹಿಂದೆ ನಡೆದ ಶಂಕರ ಜಯಂತಿಯಂದು ಈ ವಿಶೇಷ ಪೂಜಾ ಕಾರ್ಯವನ್ನು ನೆರವೇರಿಸಿರುವ ತಂಡ, ಜಮ್ಮು-ಕಾಶ್ಮೀರದಲ್ಲಿ ನೆಮ್ಮದಿ, ಶಾಂತಿ ನೆಲಸಬೇಕು. ಪಾಕಿಸ್ತಾನದ ವಿರುದ್ಧದ ಹೋರಾಟಕ್ಕೆ ಸೈನ್ಯಕ್ಕೆ 'ಬಲ' ಸಿಗಲಿ ಎನ್ನುವ ಪ್ರಾರ್ಥನೆಯನ್ನು ಸಲ್ಲಿಸಲಾಗಿದೆ ಎಂದು ಪೂಜಾ ಕೈಂಕರ್ಯದಲ್ಲಿ ಭಾಗವಹಿಸಿದ್ದ ಪುರೋಹಿತರು ಹೇಳಿದ್ದಾರೆ.

13 ಜನರ ತಂಡ: ಮೈಸೂರು ಹಾಗೂ ಬೆಂಗಳೂರಿನಿಂದ ಈ ವಿಶೇಷ ಹೋಮ ಹವನದಲ್ಲಿ ಭಾಗವಹಿಸಲು 13 ಜನರ ತಂಡ ತೆರಳಿತ್ತು. ಶಂಕರ ಜಯಂತಿಯ ವಿಶೇಷ ಆಚರಣೆಯ ವೇಳೆ ಪೂಜಾ ಕೈಂಕರ್ಯಗಳನ್ನು ನಡೆಸಿದ್ದಾರೆ. ಬೆಳಗ್ಗೆ 4 ಗಂಟೆಯಿಂದ ಆರಂಭಗೊಂಡ ಈ ಪೂಜಾ ಕಾರ್ಯಕ್ರಮ, ಸಂಜೆ 5ಗಂಟೆಯವರೆಗೆ ನಡೆದಿದೆ. ರುದ್ರಾಭಿಷೇಕ, ಮೃತ್ಯುಂಜಯ ಜಪ ಸೇರಿದಂತೆ ಹಲವು ರೀತಿಯ ಪೂಜಾ ಕೈಂಕರ್ಯ ನೆರವೇರಿತು. ಈ ವೇಳೆ ವಿಶೇಷ ಹಮನ-ಹೋಮದಲ್ಲಿ ಜಮ್ಮು-ಕಾಶ್ಮೀರ ಪೊಲೀಸ್ ತಂಡದಿಂದ ವಿಶೇಷ ವಾದ್ಯಗೋಷ್ಠಿ ನೆರವೇರಿತು. ಇದರೊಂದಿಗೆ ಜಿಲ್ಲಾಡಳಿತ ಅಧಿಕಾರಿಗಳು ವಿಶೇಷ ಪೂಜೆಯಲ್ಲಿ ಭಾಗವಹಿಸಿದ್ದರು.

ಇಡೀ ದಿನದ ಈ ಕಾರ್ಯಕ್ರಮದಲ್ಲಿ ಡಾ.ನಾಗಲಕ್ಷ್ಮಿ ನಾಗಾರ್ಜುನ್ ಮೈಸೂರು ತಂಡದಿಂದ ಭರತನಾಟ್ಯ, ಆದಿ ಶಂಕರಚಾರ್ಯ ಜೀವನದ ಭರತನಾಟ್ಯ, ಸಾಧು ಸುಬೇಂದ್ರ ಬಾನಿ, ಸ್ವಾಮಿ ವಿಶ್ವನಾಥನಂದ ಸರಸ್ವತಿ ಸುಬೇಂದ್ರ ಬಾನಿ ಮಹಾ ಮಂಡಲೇಶ್ವರ ಶ್ರೀ ಅಕ್ಷಗಾನನಂದ ಅವರು ಉಪಸ್ಥಿತಿತರಿದ್ದರು.

ಚಿಕ್ಕಮಗಳೂರು ಬಂದ್‌ಗೆ ಕರೆ

ಚಿಕ್ಕಮಗಳೂರು: ಕಾಶ್ಮೀರದ ಪಹಲ್ಗಾಮ್‌ನಲ್ಲಿ ನಡೆದ ಉಗ್ರರ ದಾಳಿ ಹಾಗೂ ಮಂಗಳೂರು ಹಿಂದೂ ಕಾರ್ಯಕರ್ತ ಸುಹಾಸ್ ಶೆಟ್ಟಿ ಹತ್ಯೆ ಖಂಡಿಸಿ ಚಿಕ್ಕಮಗಳೂರು ಜಿಲ್ಲೆ ಸ್ವಯಂ ಘೋಷಿತ ಬಂದ್‌ಗೆ ವಿಶ್ವಹಿಂದೂ ಪರಿಷತ್ ಹಾಗೂ ಬಜರಂಗದಳ ಕರೆ ನೀಡಿದೆ.



ದೇಶದ ಬೇರೆಬೇರೆ ಕಡೆಗಳಲ್ಲಿ ಪಾಕಿಸ್ತಾನ ಪ್ರೇರೇಪಿತ ಮುಸ್ಲಿಮರು ಹಾಗೂ ಬಾಂಗ್ಲಾ ನುಸುಳುಕೋರರು ಪಹಲ್ಗಾಮ್, ಪಶ್ಚಿಮ ಬಂಗಾಳ ಸೇರಿದಂತೆ ಹಿಂದೂಗಳನ್ನು ಹತ್ಯೆಗೈಯುತ್ತಿದ್ದಾರೆ. ಇದರ ಮಧ್ಯೆ ಮೂರು ದಿನದ ಹಿಂದೆ ಮಂಗಳೂರಿನಲ್ಲಿ ಹಿಂದೂ ಕಾರ್ಯಕರ್ತ ಸುಹಾಸ್ ಶೆಟ್ಟಿಯನ್ನ ಹಿಂದೂ ಎಂಬ ಕಾರಣಕ್ಕೆ ತಿಂಗಳುಗಳಿಂದ ಸಂಚು ರೂಪಿಸಿ ಕೊಲೆ ಮಾಡಿದ್ದಾರೆ. ಇಡೀ ದೇಶದಲ್ಲಿ ಹಿಂದೂಗಳನ್ನ ಹತ್ಯೆ ಮಾಡುವ ಕೆಲಸ ನಡೆಯುತ್ತಿದೆ. ಹಾಗಾಗಿ ವಿಶ್ವ ಹಿಂದೂ ಪರಿಷತ್, ಬಜರಂಗದಳ ಚಿಕ್ಕಮಗಳೂರು ಜಿಲ್ಲೆ ಸ್ವಯಂ ಘೋಷಿತ ಬಂದ್‌ಗೆ ಕರೆ ಕೊಟ್ಟಿದೆ ಎಂದು ವಿಶ್ವ ಹಿಂದೂ ಪರಿಷತ್ ಜಿಲ್ಲಾ ಕಾರ್ಯದರ್ಶಿ ರಂಗನಾಥ್ ತಿಳಿಸಿದ್ದಾರೆ.

ಕರಾವಳಿ ಕಾವಲು ಪಡೆ: ವಿಶೇಷ ಕಣ್ಗಾವಲು

ಉಡುಪಿ: ಪಹಲ್ಗಾಮ್‌ನಲ್ಲಿ ನಡೆದ ಘಟನೆ ಹಾಗೂ ಇತ್ತೀಚೆಗೆ ನಡೆಯುತ್ತಿರುವ ವಿದ್ಯಮಾನಗಳ ಹಿನ್ನೆಲೆಯಲ್ಲಿ ಕರಾವಳಿ ತೀರದಲ್ಲಿ ಭದ್ರತೆಯನ್ನು ಹೆಚ್ಚಿಸಲಾಗಿದೆ. ನೌಕಾಪಡೆ ಹಾಗೂ ಕರಾವಳಿ ಕಾವಲು ಪಡೆಯ ಪೊಲೀಸರು ಜಂಟಿಯಾಗಿ ಭದ್ರತಾ ಕಾರ್ಯಾಚರಣೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಸಮುದ್ರದಲ್ಲಿ ಗಸ್ತು ಕಾರ್ಯಾಚರಣೆಯ ಅವಧಿಯನ್ನು ಹೆಚ್ಚಿಸಲಾಗಿದೆ. ಮೂರು ಜಿಲ್ಲೆಯ ಕರಾವಳಿ ತೀರದ 324 ಕಿ.ಮೀ.ನಲ್ಲಿ 1 ಕಿ.ಮೀ.ಗೆ ತಲಾ ಇಬ್ಬರಂತೆ ಸಿಬಂದಿ ನಿಯೋಜನೆಗೊಳಿಸಲಾಗಿದೆ.

ರೆಸಾರ್ಟ್‌ಗಳಲ್ಲಿ ತಪಾಸಣೆ: ರಜಾ ಸಮಯವಾದ ಕಾರಣ ಸಮುದ್ರ ತೀರದ ಸಮೀಪವಿರುವ ರೆಸಾರ್ಟ್‌ಗಳಿಗೆ ಹಲವಾರು ಮಂದಿ ಭೇಟಿ ನೀಡಿ ಕಾಲ ಕಳೆಯುತ್ತಾರೆ. ಈ ಬಗ್ಗೆ ಮುಂಚಿತವಾಗಿ ರೆಸಾರ್ಟ್ ಮಾಲಕರಿಗೂ ಸೂಚನೆ ನೀಡಲಾಗಿದ್ದು, ಅನುಮಾನಾಸ್ಪದ ವ್ಯಕ್ತಿಗಳ ಬಗ್ಗೆ ಮಾಹಿತಿ ನೀಡುವಂತೆ ಸೂಚಿಸಲಾಗಿದೆ. ಮುಖ್ಯವಾಗಿ ವಿದೇಶಿ ಪ್ರಜೆಗಳ ಚಲನವಲನ ಹಾಗೂ ಸಮುದ್ರ ತೀರ ಪ್ರದೇಶಗಳಿಗೆ ಭೇಟಿ ನೀಡುವವರ ಬಗ್ಗೆ ನಿಗಾ ಇರಿಸುವಂತೆ ಸೂಚನೆ ನೀಡಲಾಗಿದೆ. ಸ್ಥಳೀಯರೊಂದಿಗೂ ಪೊಲೀಸರು ಸಂಪರ್ಕ ಇರಿಸಿದ್ದು, ಅವರಿಂದಲೂ ವಿವಿಧ ರೀತಿಯ ಮಾಹಿತಿ ಸಂಗ್ರಹದಲ್ಲಿ ನಿರತರಾಗಿದ್ದಾರೆ.

ಗಂಭೀರ ಪ್ರಕರಣ ಪತ್ತೆಯಾಗಿಲ್ಲ

ಕರಾವಳಿ ಕಾವಲು ಪಡೆಯಲ್ಲಿ ಈಗಾಗಲೇ 340ಕ್ಕೂ ಅಧಿಕ ಮಂದಿ ಸಿಬ್ಬಂದಿಯಿದ್ದಾರೆ. 180 ಮಂದಿ ಕರಾವಳಿ ನಿಯಂತ್ರಣ ದಳದಲ್ಲಿದ್ದಾರೆ. 30 ಮಂದಿ ತಾಂತ್ರಿಕ ಸಿಬಂದಿ, 13 ಬೋಟ್‌ಗಳು ಹಾಗೂ ಜೆಟ್‌ಸ್ಕೀಗಳ ಮೂಲಕ ನಿರಂತರ ಗಸ್ತು ಕಾರ್ಯಾಚರಣೆ ನಡೆಯುತ್ತಿದೆ. ಅನುಮಾನಾಸ್ಪದ ವ್ಯಕ್ತಿಗಳನ್ನು ವಿಚಾರಣೆ ಗೊಳಪಡಿಸುವ ಪ್ರಕ್ರಿಯೆಯೂ ನಿರಂತರವಾಗಿ ನಡೆಯುತ್ತಿದ್ದು, ಇದುವರೆಗೆ ಗಂಭೀರ ಪ್ರಕರಣಗಳು ಪತ್ತೆಯಾಗಿಲ್ಲ ಎಂದು ಕರಾವಳಿ ಕಾವಲು ಪಡೆಯ ಎಸ್ಪಿ ಮಿಥುನ್ ಅವರು ತಿಳಿಸಿದ್ದಾರೆ.

ಪಾಕ್ ಬತ್ತಳಿಕೆ ಖಾಲಿ

← ಮೊದಲಪುಟದಿಂದ

ಇನ್ನು ಮದ್ದುಗುಂಡುಗಳ ಕೊರತೆಯ ಬಗ್ಗೆ ಪಾಕಿಸ್ತಾನದ ಸೇನೆಯೇ ಒಪ್ಪಿಕೊಂಡಿದ್ದು, ತೀವ್ರ ಕಳವಳ ವ್ಯಕ್ತಪಡಿಸಿದೆ. ಮೇ 2ರಂದು ವಿಶೇಷ ಕಾರ್ಪ್ಸ್ ಕಮಾಂಡರ್‌ಗಳ ಸಮ್ಮೇಳನದಲ್ಲಿ ಇದನ್ನು ಚರ್ಚಿಸಲಾಗಿದೆ. ಮಾಜಿ ಸೇನಾ ಮುಖ್ಯಸ್ಥ ಜನರಲ್ ಕಮರ್ ಜಾವೇದ್ ಬಾಜ್ವಾ ಅವರು ಈ ಮಿತಿಗಳನ್ನು ಈ ಹಿಂದೆ ಒಪ್ಪಿಕೊಂಡಿದ್ದರು. ಭಾರತದೊಂದಿಗೆ ಸುದೀರ್ಘ ಸಂಘರ್ಷದಲ್ಲಿ ತೊಡಗಿಸಿಕೊಳ್ಳಲು ಪಾಕಿಸ್ತಾನಕ್ಕೆ ಯುದ್ಧ ಸಾಮಗ್ರಿ ಮತ್ತು ಆರ್ಥಿಕ ಶಕ್ತಿಯ ಕೊರತೆಯಿದೆ ಎಂದು ಹೇಳಿದ್ದಾರೆ.

ಪಾಕ್‌ಗೆ ಮತ್ತೊಂದು ಶಾಕ್: ಪಹಲ್ಗಾಮ್ ಉಗ್ರ ದಾಳಿ ಬಳಿಕ ಪಾಕಿಸ್ತಾನಕ್ಕೆ ಭಾರತ ಸರಕಾರ ಮತ್ತೊಂದು ಶಾಕ್ ನೀಡಿದೆ. ಈಗಾಗಲೇ ಸಿಂಧೂ ನದಿಯ ನೀರು ಸ್ಥಗಿತ ಮಾಡಿರುವ ಭಾರತ ಇದೀಗ ಬಾಗ್ಲಿಹಾರ್ ಅಣೆಕಟ್ಟು ಸೇರಿದಂತೆ 2 ಅಣೆಕಟ್ಟುಗಳ ನೀರನ್ನೂ ಭಾರತ ನಿಲ್ಲಿಸಿದೆ. ಭಾರತವು ಚೆನಾಬ್ ನದಿಯ ಬಾಗ್ಲಿಹಾರ್ ಅಣೆಕಟ್ಟಿನ ಮೂಲಕ ನೀರಿನ ಹರಿವನ್ನು ಸ್ಥಗಿತಗೊಳಿಸಿದೆ. ಇದಲ್ಲದೆ ಝೀಲಂ ನದಿಯ ಕಿಶನ್‌ಗಂಗಾ ಅಣೆಕಟ್ಟಿನಲ್ಲೂ ಇದೇ ರೀತಿಯ ಕ್ರಮಗಳನ್ನು ಯೋಜಿಸುತ್ತಿದೆ ಎಂದು ಮೂಲಗಳು ತಿಳಿಸಿವೆ. ಈ ಎರಡೂ ಅಣೆಕಟ್ಟುಗಳು ಜಲವಿದ್ಯುತ್ ಕೇಂದ್ರಗಳಾಗಿದ್ದು, ಜಮ್ಮುವಿನ ರಾಂಬನ್‌ನಲ್ಲಿರುವ ಬಾಗ್ಲಿಹಾರ್ ಮತ್ತು ಉತ್ತರ ಕಾಶ್ಮೀರದ ಕಿಶನ್‌ಗಂಗಾ-ಭಾರತಕ್ಕೆ ನೀರು ಬಿಡುಗಡೆಯ ಸಮಯವನ್ನು ನಿಯಂತ್ರಿಸುವ ಸಾಮರ್ಥ್ಯವನ್ನು ನೀಡುತ್ತವೆ ಎಂದು ಹೇಳಲಾಗಿದೆ.

ಮಾಸ್ಕೋಗೆ ರಾಜನಾಥ್ ಸಿಂಗ್ ಗೈರು: ಮೇ 9ರಂದು ಮಾಸ್ಕೋದಲ್ಲಿ ನಡೆಯಲಿರುವ 'ವಿಜಯ ದಿನಾಚರಣೆ'ಯಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಭಾಗವಹಿಸುತ್ತಿಲ್ಲ. ಅವರ ಬದಲಿಗೆ ರಕ್ಷಣಾ ಇಲಾಖೆ ರಾಜ್ಯ ಸಚಿವ ಸಂಜಯ್ ಸೇಠ್ ಅಲ್ಲಿ ಭಾರತವನ್ನು ಪ್ರತಿನಿಧಿಸಲಿದ್ದಾರೆ ಎನ್ನಲಾಗಿದೆ. ಪಹಲ್ಗಾಮ್ ದಾಳಿಯ ಬಳಿಕ ಪ್ರಧಾನಿ ನರೇಂದ್ರ ಮೋದಿ ಅವರು ವಿಜಯ ದಿನಾಚರಣೆಯಲ್ಲಿ ಭಾಗವಹಿಸುವುದಿಲ್ಲ ಎಂದು ಕೇಂದ್ರ ಸ್ಪಷ್ಟಪಡಿಸಿತ್ತು. ಆದರೆ ರಾಜನಾಥ್ ಸಿಂಗ್ ಭಾಗವಹಿಸಲಿದ್ದಾರೆ ಎನ್ನಲಾಗಿತ್ತು. ಆದರೀಗ ರಾಜನಾಥ್ ಸಿಂಗ್ ಸಹ ಗೈರಾಗುತ್ತಿರುವುದು ಗಡಿ ತೀವ್ರತೆ ಇನ್ನಷ್ಟು ಹೆಚ್ಚಾಗಲಿದೆ ಎನ್ನುವುದಕ್ಕೆ ಸಾಕ್ಷಿ ಎನ್ನಲಾಗಿದೆ.

ಟ್ವೀಟೂ-ಖಾರಾ

ಕರ್ನಾಟಕ ಕಾಂಗ್ರೆಸ್

ಕರಾವಳಿ ಜಿಲ್ಲೆಗಳಾದ ದಕ್ಷಿಣ ಕನ್ನಡ ಮತ್ತು ಉಡುಪಿಯಲ್ಲಿ ಕೋಮು ದುಷ್ಕೃತ್ಯಗಳನ್ನು ಮಟ್ಟ ಹಾಕಲು ನಕ್ಸಲ್ ನಿಗ್ರಹ ಪಡೆಯ ರೀತಿಯಲ್ಲಿಯೇ ಪ್ರತ್ಯೇಕ 'ಆ್ಯಂಟಿ ಕಮ್ಯುನಲ್ ಟಾಸ್ಕ್ ಫೋರ್ಸ್' (ಕೋಮು ಹಿಂಸಾಚಾರ ನಿಗ್ರಹ ಕಾರ್ಯಪಡೆ) ರಚಿಸಲಾಗುವುದು. ಕೋಮು ಸಂಬಂಧಿ ಪ್ರಕರಣಗಳ ನಿಗ್ರಹಕ್ಕೆ ಈ ಟಾಸ್ಕ್ ಫೋರ್ಸ್‌ಗೆ ಸಂಪೂರ್ಣ ಅಧಿಕಾರ ನೀಡಲಾಗುವುದು.

ಓಂ

ನಿಮ್ಮ ಮತ ಬ್ಯಾಂಕ್ ಮಂಗಳೂರಿನಲ್ಲಿ ನಡೆದ ಗೃಹ ಸಚಿವರ ಮೀಟಿಂಗ್ ಅಲ್ಲಿ. ನಿಮ್ಮ ಪಕ್ಷಕ್ಕೆ ಮತ್ತು ಗೃಹ ಸಚಿವರಿಗೆ ಯಾವ ರೀತಿಯ ಮರ್ಯಾದೆ ಕೊಟ್ಟಿದ್ದಾರೆ.? ನೋಡಿದ್ರಾ..? ನೀವು ದೇಶದ ಮತ್ತು ರಾಜ್ಯದ ಪರ ಕೆಲಸ ಮಾಡ್ತೀವಿ ಅಂತಾ ಹೇಳಬಹುದು, ಆದರೆ ಅದು ಸತ್ಯಕ್ಕೆ ದೂರವಾದ ಮಾತು. ಅಲ್ಲಿನ ಕೆಲವು ವಿಡಿಯೊಗಳು ಹರಿದಾಡುತ್ತಿವೆ ನೋಡಿಕೊಳ್ಳಿ.

ವಿಶ್ವವಾಣಿ ಕ್ಲಬ್ ಹೌಸ್
05.05.2025
ಸಂಜೆ: 06.55 ರಿಂದ 08.05 ರವರೆಗೆ
ಸೋಮವಾರದ ಅತಿಥಿ
ಪ್ರೊ. ಪ್ರಶಾಂತ್ ಹೆಗಡೆ
ವಿಷಯ
ಕಗ್ಗದ ಜೀವನ ಮೌಲ್ಯಗಳು
vishwavani.news

ಮೋದಿ ಜತೆ ಸೇರುವ ಮೊದಲು ಏನೆಲ್ಲ ಮಾತಾಡಿದ್ದರು?: ಮುಖ್ಯಮಂತ್ರಿ ಸಿದ್ದರಾಮಯ್ಯ

ದೇವೇಗೌಡರದ್ದು ಇಬ್ಬಗೆಯ ನೀತಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು/ಹಾವೇರಿ/ಹುಬ್ಬಳ್ಳಿ

ಪಾಕಿಸ್ತಾನ ಯುದ್ಧದ ವಿಷಯದಲ್ಲಿ ಸಿದ್ದರಾಮಯ್ಯ ಅವರನ್ನು ಇಬ್ಬಗೆಯ ನೀತಿ ಅನುಸರಿಸುತ್ತಿದ್ದಾರೆ ಎನ್ನುವ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರ ಹೇಳಿಕೆ ತೀವ್ರ ವಿವಾದಕ್ಕೆ ಕಾರಣವಾಗಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಜೆಡಿಎಸ್ ನಡುವಿನ ವಾಕ್ಸಮರಕ್ಕೆ ನಾಂದಿ ಹಾಡಿದೆ.

ದೇವೇಗೌಡರ ಹೇಳಿಕೆಗೆ ಹಾವೇರಿಯಲ್ಲಿ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ ಅವರು, ದೇವೇಗೌಡರು ಬಿಜೆಪಿ ಜತೆ ಸೇರುವ ಮೊದಲು ನರೇಂದ್ರ ಮೋದಿಯವರ ಬಗ್ಗೆ ಏನು ಮಾತನಾಡುತ್ತಿದ್ದರು? ಈಗ ಏನು ಮಾತನಾಡುತ್ತಿದ್ದಾರೆ? ಇಬ್ಬಗೆಯ ನೀತಿ ಇರುವುದೇ ದೇವೇಗೌಡರಿಗೆ ಎಂದು ವಾಗ್ದಾಳಿ ನಡೆಸಿದ್ದಾರೆ.

ಸಿದ್ದರಾಮಯ್ಯ ಅವರ ಈ ಹೇಳಿಕೆಗೆ ತಿರುಗೇಟು ನೀಡಿರುವ ಜೆಡಿಎಸ್, ನರೇಂದ್ರ ಮೋದಿ ಅವರ ನಿರ್ಣಯದ ಜಾತಿ ಗಣತಿಯನ್ನು ಜೆಡಿಎಸ್ ಸ್ವಾಗತಿಸಿದೆ. ಆದರೆ, ನಿಮ್ಮ ಜಾತಿಗಣತಿಯನ್ನು ಜೆಡಿಎಸ್ ವಿರೋಧಿಸಿಲ್ಲ, ನೆನಪಿರಲಿ. ನಿಮ್ಮ ಗಣತಿ ಕ್ರಮಬದ್ಧವಾಗಿಲ್ಲ ಎಂಬ ಕಾರಣಕ್ಕೆ ವಿರೋಧಿಸಿದೆ. ದೇವೇಗೌಡರ ಗರಡಿಯಲ್ಲೇ ಬೆಳೆದು ರಾಜಕೀಯ ಬದುಕು ಕಟ್ಟಿಕೊಂಡ ಸಿದ್ದರಾಮಯ್ಯನವರು ಇಬ್ಬಗೆಯ ನೀತಿ ಬಗ್ಗೆ ಆಣಿಮುತ್ತು ಉದುರಿಸಿದ್ದಾರೆ! ಆಣಿಮುತ್ತು ಉದುರಿಸುವ ಭರದಲ್ಲಿ ತಾವೇನು? ತಮ್ಮ ನಿಜಬಣ್ಣವೇನು ಎಂಬುದನ್ನು ಮತ್ತೊಮ್ಮೆ ಲೋಕಾರ್ಪಿತ ಮಾಡಿದ್ದಾರೆ! ಸಿದ್ದರಾಮಯ್ಯನವರು ಎಂದರೆ ಹಾಗೆಯೇ.. ದೇಹವೊಂದು, ನಾಲಿಗೆ ಎರಡು!! ಎಂದು ಟೀಕಿಸಿದೆ.

ದೇವೇಗೌಡರು ಸಕ್ರಿಯ ರಾಜಕಾರಣದಲ್ಲಿದ್ದಾರೆ. ಅವರ ಬಗ್ಗೆ ಸಿದ್ದರಾಮಯ್ಯನವರು ಸಹಜ, ಸಕಾರಾತ್ಮಕ ಟೀಕೆ ಮಾಡಲಿ. ಬೇಡ ಎಂದವರು ಯಾರು? ಆದರೆ, ಅದೇ ನಿತ್ಯಕೃಷಿ ಎಂಬಂತೆ ನಿರಂತರವಾಗಿ ರಾಜಕೀಯ ಜನ್ಮಕೊಟ್ಟ ಮೇರು ನಾಯಕನ ಬಗ್ಗೆಯೇ ವಿಷಕಾರುವುದು ಎಷ್ಟು ಸರಿ? ಸಿದ್ದರಾಮಯ್ಯನವರು ಜನತಾ ಪರಿವಾರದಲ್ಲಿದ್ದಾಗ ಇಂದಿರಾ ಗಾಂಧಿ ಅವರ ಬಗ್ಗೆ ಉದುರಿಸಿದ್ದ ಭಾರೀ ಭಾರೀ ಆಣಿಮುತ್ತುಗಳನ್ನು ಜೀರ್ಣಿಸಿಕೊಳ್ಳಲು ಕಾಂಗ್ರೆಸ್ ನಾಯಕರಿಂದ ಸಾಧ್ಯವಿದೆಯಾ? ಇಂದಿರಾ ಗಾಂಧಿ ಅವರು ನಮ್ಮ ನಡುವೆ ಇಲ್ಲ. ಹೀಗಾಗಿ ಅವರ ಬಗ್ಗೆ ಸಿದ್ದರಾಮಯ್ಯನವರು ಉದುರಿಸಿದ್ದ ಆಣಿಮುತ್ತುಗಳನ್ನು ಉಲ್ಲೇಖಿಸುವುದು ಅಪ್ರಸ್ತುತ ಎಂದು ಸ್ಪಷ್ಟಪಡಿಸಿದೆ.

ಸುದ್ದಿಗಾರರೊಂದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿದರು.

> ಗೋವಾ ರಾಜ್ಯಕ್ಕೆ ಹೆದರಿಕೊಂಡು ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಮಹದಾಯಿಗೆ ಅನುಮತಿ ಕೊಡಿಸುತ್ತಿಲ್ಲ. ಮಹದಾಯಿ ಯೋಜನೆಗೆ ಎನ್ವಿರಾನ್ಮೆಂಟ್ ಕ್ಲಿಯರೆನ್ಸ್ ಯಾಕೆ ಕೊಡಿಸ್ತಿಲ್ಲಾ? ಗೋವಾಕ್ಕೆ ಹೆದರಿಕೊಂಡು ಮೋದಿ ಅವರು ಅನುಮತಿ ಕೊಡಿಸ್ತಿಲ್ಲಾ. ಪ್ರಲ್ಹಾದ್ ಜೋಶಿ ಆ ಬಗ್ಗೆ ಅವರ ಮುಂದೆ ಮಾತಾಡ್ತಿಲ್ಲಾ. ನಾವು ಅನೇಕ ಸಲ ಕೇಂದ್ರಕ್ಕೆ ಹೋಗಿ ಮನವಿ ಮಾಡಿದ್ದೇವೆ. ಆದರೂ ಪ್ರಯೋಜನವಾಗಿಲ್ಲ.
> ಸಿದ್ದರಾಮಯ್ಯ, ಮುಖ್ಯಮಂತ್ರಿ

ವಿಶೇಷ ಪಡೆಯ ಅಗತ್ಯ

ಸಮಾಜಘಾತಕ ಶಕ್ತಿಗಳನ್ನು ಮಟ್ಟಹಾಕಲು ಹಾಗೂ ಪತ್ತೆ ಹಚ್ಚಲು ಒಂದು ವಿಶೇಷ ಪಡೆಯ ಅಗತ್ಯವಿದೆ ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು. ಕರಾವಳಿಯಲ್ಲಿ ಕೋಮು ಹಿಂಸೆ ನಿಗ್ರಹ ಕಾರ್ಯಪಡೆ ರಚಿಸಲು ಸರಕಾರ ಮುಂದಾಗಿರುವ ಬಗ್ಗೆ ಮಾತನಾಡಿದ ಅವರು, ಗೃಹ ಸಚಿವರೊಂದಿಗೆ ಮಾತನಾಡಿ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು. ಮಂಗಳೂರಿನಲ್ಲಿ ಫಾಜಿಲ್ ಹತ್ಯೆಯಾದಾಗ ಸರಕಾರ 25 ಲಕ್ಷ ರು.ಗಳ ಪರಿಹಾರ ನೀಡಿತ್ತು. ಅದೇ ಪರಿಹಾರದ ಹಣದಲ್ಲಿ ಅವರ ಸಹೋದರ ಸುಹಾಸ್ ಶೆಟ್ಟಿ ಹತ್ಯೆಗೆ ಸುಪಾರಿ ನೀಡಿದ್ದಾರೆ ಎಂದು ಪೊಲೀಸರು ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದು, ಸರಕಾರದ ಹಣ ದುರ್ಬಳಕೆಯಾಗಿದೆಯೇ ಎಂಬ ಸುದ್ದಿಗಾರ ಪ್ರಶ್ನೆಗೆ ಉತ್ತರಿಸಿದ ಮುಖ್ಯಮಂತ್ರಿಗಳು ಈ ಬಗ್ಗೆ ನನಗೆ ತಿಳಿದಿಲ್ಲ. ಸಚಿವ ದಿನೇಶ್ ಗುಂಡೂರಾವ್ ಹಾಗೂ ಗೃಹ ಸಚಿವ ಜಿ.ಪರಮೇಶ್ವರ್ ಇಬ್ಬರೂ ಮಂಗಳೂರಿಗೆ ಭೇಟಿ ನೀಡಿದ್ದಾರೆ. ಅವರೊಂದಿಗೆ ಮಾತನಾಡಿದ ನಂತರ ಪ್ರತಿಕ್ರಿಯೆ ನೀಡುವುದಾಗಿ ತಿಳಿಸಿದರು.

ಜಾತಿಗಣತಿ: ಶಂಖದಿಂದ ಬಂದರೆ ಮಾತ್ರ ತೀರ್ಥ

ಇದಕ್ಕೂ ಮೊದಲು ಮಾತನಾಡಿದ ಸಿದ್ದರಾಮಯ್ಯ ಅವರು, ಜಾತಿಗಣತಿಯನ್ನು ಮಾಡಿಸುವ ಮೂಲಕ ಸಿದ್ದರಾಮಯ್ಯ ಜಾತಿ ಜಾತಿಗಳ ನಡುವೆ ಸಂಘರ್ಷಕ್ಕೆ ಎಡೆಮಾಡಿಕೊಡುತ್ತಿದ್ದಾರೆ ಎಂದು ಟೀಕೆ ಮಾಡುತ್ತಿದ್ದವರು ಕೇಂದ್ರ ಸರಕಾರ ಜಾತಿಗಣತಿ ಮಾಡಿಸುವುದನ್ನು ಮುಕ್ತ ಮನಸ್ಸಿನಿಂದ ಸ್ವಾಗತ ಮಾಡುತ್ತಿದ್ದಾರೆ. ಶಂಖದಿಂದ ಬಂದರೆ ಮಾತ್ರ ತೀರ್ಥ ಎಂಬಂತಾಗಿದೆ. ಮೊದಲು ರಾಜಕೀಯವಾಗಿ ಹೇಳುತ್ತಿದ್ದರು. ವಾಸ್ತವಿಕತೆಯ ಆಧಾರದ ಮೇಲೆ ಹೇಳುತ್ತಿರಲಿಲ್ಲ ಎಂದು ಅರ್ಥವಾಗುತ್ತದೆ ಅಲ್ಲವೇ ? ಎಂದು ಮುಖ್ಯಮಂತ್ರಿಗಳು ಪ್ರಶ್ನಿಸಿದರು.

ಬೊಮ್ಮನಕಟ್ಟೆ ಶ್ರೀ ರಾಘವೇಂದ್ರ ಮಠದಲ್ಲಿ ಮಾತುಕತೆ

ಸುತ್ತೂರು, ಮಂತ್ರಾಲಯ ಸ್ವಾಮೀಜಿಗಳ ಸಮಾಗಮ

ಶಿವಮೊಗ್ಗದ ಬೊಮ್ಮನಕಟ್ಟೆಯ ರಾಘವೇಂದ್ರ ಮಠಕ್ಕೆ ಆಗಮಿಸಿದ ಮಂತ್ರಾಲಯದ ಶ್ರೀ ಸುಬುಧೇಂದ್ರ ತೀರ್ಥರು ಮೈಸೂರಿನ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಶ್ರೀಗಳನ್ನು ಸನ್ಮಾಸಿದರು.

ಶಿವಮೊಗ್ಗ: ಸುತ್ತೂರು ಶ್ರೀಗಳು ಸಾಮಾಜಿಕ ಮತ್ತು ಶೈಕ್ಷಣಿಕ ಕ್ಷೇತ್ರದಲ್ಲಿ ತಮ್ಮದೇ ಆದ ವಿಶಿಷ್ಟ ರೀತಿಯಲ್ಲಿ ಛಾಪುನ್ನು ಛಾಪಿಸಿದ್ದಾರೆ ಎಂದು ಮಂತ್ರಾಲಯದ ಪೀಠಾಧಿಪತಿಗಳಾದ ಶ್ರೀಸುಬುಧೇಂದ್ರ ತೀರ್ಥರು ನುಡಿದರು.

ಮಂತ್ರಾಲಯ ಶ್ರೀಗಳು ಧಾರ್ಮಿಕ ಕಾರ್ಯಕ್ರಮ ನಿಮಿತ್ತ ಉಡುಪಿ ಪಲಿಮಾರು ಮಠಕ್ಕೆ ಹೋಗಿ ಬರುವ ಮಧ್ಯದಲ್ಲಿ ಶಿವಮೊಗ್ಗದ ಬೊಮ್ಮನಕಟ್ಟೆ ಶಾಖಾ ಮಠವಾದ ರಾಘವೇಂದ್ರ ಮಠದಲ್ಲಿ ತಂಗಿದ್ದರು.

ಇದೇ ಸಂದರ್ಭದಲ್ಲಿ ಖಾಸಗಿ ಕಾರ್ಯಕ್ರಮಕ್ಕೆ ಬೊಮ್ಮನಕಟ್ಟೆ ಬಡಾವಣೆಗೆ ಸುತ್ತೂರು ಶ್ರೀಗಳು ಆಗಮಿಸಿ ದ್ದನ್ನು ಗಮನಿಸಿ ಶಾಖಾ ಮಠಕ್ಕೆ ಆಹ್ವಾನ ನೀಡಿದ್ದರು. ಸರಳಸ್ವಭಾವ ಮಿತಭಾಷಿ ಮಂದಸ್ಮಿತರಾದ ಸುತ್ತೂರು ಸ್ವಾಮಿಗಳು ನಮ್ಮ ಪರಮಗುರುಗಳ ಕಾಲದಿಂದಲೂ ನಮ್ಮ ಮಠದ ಜತೆ ನಿಕಟಬಾಂಧವ್ಯ ಹೊಂದಿದ್ದಾರೆ. ಅನೇಕ ಧಾರ್ಮಿಕ ಕಾರ್ಯಕ್ರಮ ನಡೆಸಿದ್ದೇವೆ ಎಂದು ಮಂತ್ರಾಲಯದ ಶ್ರೀಗಳು ತಿಳಿಸಿದರು. ಈ ಎರಡೂ ಮಠ ಒಂದೆಡೆ ಸೇರಿದ ಐತಿಹಾಸಿಕ ಸನ್ನಿವೇಶಕ್ಕೆ ಶಿವಮೊಗ್ಗದ ಜನತೆ ಸಾಕ್ಷಿಯಾಗಿದ್ದೀರ ಎಂದು ಹೇಳಿದರು.

ಉಭಯ ಮಠಗಳ, ಸ್ವಾಮಿಗಳ ಭಾಂದವ್ಯ ನಿರಂತರವಾಗಿರಲಿ ಎನ್ನುತ್ತಾ ಮಂತ್ರಾಲಯ ಮಠಕ್ಕೆ ಬರುವಂತೆ ಸುತ್ತೂರು ಶ್ರೀ ಗಳಿಗೆ ಮಂತ್ರಾಲಯ ಶ್ರೀಗಳು ಆಹ್ವಾನವಿತ್ತರು.

ನಂಜನಗೂಡಿನಲ್ಲಿರುವ ನಮ್ಮ ಮಠ ಮತ್ತು ರಾಘವೇಂದ್ರ ಮಠಗಳ ನಡುವೆ ಅನ್ಯೋನ್ಯತೆಯಿಂದ ಇದೆ ಎಂದು ಸುತ್ತೂರು ಶ್ರೀ ಗಳು ಹೇಳಿದರು. ಇಂದು ನಮಗೆ ರಾಯರ ಮಠಕ್ಕೆ ಆಹ್ವಾನ ಇತ್ತು ಶ್ರೀ, ರಾಘವೇಂದ್ರ ಸ್ವಾಮಿಗಳ ದರ್ಶನಕ್ಕೆ ಅವಕಾಶ ನೀಡಿದಿರಿ ಎಂದು ಸಂತಸ ವ್ಯಕ್ತಪಡಿಸಿದರು.

ಮಂತ್ರಾಲಯ ಅಭಿವೃದ್ಧಿಗೆ ಸುತ್ತೂರು ಶ್ರೀ ಮೆಚ್ಚುಗೆ: ಈಗಿನ ಮಂತ್ರಾಲಯ ಶ್ರೀಗಳಿಂದ ಮಂತ್ರಾಲಯ ತುಂಬಾ ಬದಲಾಗಿ ಅಭಿವೃದ್ಧಿ ಹೊಂದಿರುವುದನ್ನು ಮೆಚ್ಚಿ ಮಾತನಾಡಿದರು.

ನೆರೆ ರಾಜ್ಯಗಳಿಗಿಂತ ನಮ್ಮಲ್ಲಿ ಬೆಲೆ ಕಡಿಮೆ ಇದೆ: ತಿಮ್ಮಾಪುರ

ರಾಜ್ಯದಲ್ಲಿ ಬಿಯರ್ ದರದಲ್ಲಿ ಮಾತ್ರ ಏರಿಕೆ

ಬಾಗಲಕೋಟೆ: ರಾಜ್ಯದಲ್ಲಿ ಬಿಯರ್ ದರಲ್ಲಿ 10 ರು. ಹೆಚ್ಚಳವಾಗಿದೆ. ನೆರೆ ರಾಜ್ಯಗಳಿಗಿಂತ ನಮ್ಮಲ್ಲಿ ಬೆಲೆ ಇನ್ನೂ ಕಡಿಮೆ ಇದೆ. ಮಹಾರಾಷ್ಟ್ರ, ಆಂಧ್ರ, ತಮಿಳುನಾಡು ಪೋರ್ಸ್ ಸ್ಲ್ಯಾಬ್ ಗಿಂತ ಕಡಿಮೆ ಇದೆ ಎಂದು ಅಬಕಾರಿ ಸಚಿವ ಆರ್.ಬಿ.ತಿಮ್ಮಾಪುರ ಹೇಳಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ನಾವು ಬಿಯರ್ ಬೆಲೆ ಮಾತ್ರ ಏರಿಕೆ ಮಾಡಿದ್ದೇವೆ. ಪ್ರೀಮಿಯಮ್ ಬ್ರ್ಯಾಂಡ್ ಏರಿಕೆ ಮಾಡಿಲ್ಲ. ಬೆಲೆ ಏರಿಕೆಯಿಂದ ಕುಡುಕರ ಸಂಖ್ಯೆ ಕಡಿಮೆ ಆದರೆ ಒಳ್ಳೆಯದಲ್ಲ. ನಾವು ಕ್ವಾಲಿಟಿ ಡ್ರಿಂಕ್ಸ್ ಕೊಡಬೇಕು ಅಂತಾ ಬೆಲೆ ಹೆಚ್ಚಳ ಮಾಡಿದ್ದೇವೆ. ಪೋರ್ತ್ ಸ್ಲ್ಯಾಬ್ ಗಿಂತ ನಮ್ಮ ಡ್ರಿಂಕ್ಸ್ ಕ್ವಾಲಿಟಿ ಇದೆ ಎಂದರು. ಮದ್ಯ ಬೆಲೆ ಹೆಚ್ಚಳದಿಂದ ಸರಕಾರ ಪ್ರತಿಭಟನೆ ಬಿಸಿ ಎದುರಿಸಬೇಕು ಎಂಬ ವಿಚಾರಕ್ಕೆ ಪ್ರತಿಕ್ರಿಯಿಸಿದ ಅವರು, ಈ ವಿಚಾರಕ್ಕೆ ಪ್ರತಿಭಟನೆ ಆಗುವುದಿಲ್ಲ. ಕುಡಿಯುವರ ಸಂಖ್ಯೆ ಕಡಿಮೆ ಆದರೆ ಒಳ್ಳೆಯದಲ್ವಾ. ಎಲ್ಲ ಸರಕಾರಗಳ ಅವಧಿಯಲ್ಲೂ ಮದ್ಯದ ಬೆಲೆ ಏರಿಸುತ್ತಾ ಬಂದಿದ್ದಾರೆ. ನಮ್ಮ ಸರಕಾರದಲ್ಲೂ ಸ್ವಲ್ಪ ಬೆಲೆ ಏರಿಕೆ ಮಾಡಲಾಗಿದೆ ಎಂದರು.

ಯತ್ನಾಳ ಮಾತನಾಡಿದ್ದು ಸರಿಯಲ್ಲ

ಶಾಸಕ ಯತ್ನಾಳ ಹಾಗೂ ಸಚಿವ ಶಿವಾನಂದ ಪಾಟೀಲ ನಡುವೆ ರಾಜೀನಾಮೆ ಸವಾಲ್ ವಿಚಾರಕ್ಕೆ ಪ್ರತಿಕ್ರಿಯಿಸಿದ ಅವರು, ಅದು ಅವರಿಬ್ಬರ ನಡುವಿನ ವಾಗ್ವಾದ. ಯತ್ನಾಳ್ ಅವರು ಚಾಲೆಂಜ್ ಮಾಡಿದ್ದರು. ಸಚಿವ ಶಿವಾನಂದ ಪಾಟೀಲ್ ರಾಜೀನಾಮೆ ಕೊಟ್ಟಿದ್ದಾರೆ . ರಾಜಕಾರಣದಲ್ಲಿ ಯಾರಿಗೂ ಮನಸಿಗೆ ನೋವು ಆಗೋ ತರ ಮಾತನಾಡಬಾರದು. ಇತಿ-ಮಿತಿ ಅರಿತು ರಾಜಕಾರಣಿಗಳು ಮಾತನಾಡಬೇಕು. ಯತ್ನಾಳ ಅವರು ಮಿತಿ ಮೀರಿ ಮಾತನಾಡಿದ್ದಾರೆ. ರಾಜಕಾರಣಿಗಳ ಮಾತು ಸಾರ್ವಜನಿಕರಲ್ಲಿ ಚರ್ಚೆ ಆಗುತ್ತವೆ. ಅವರ ಅಪ್ಪಗ ಹುಟ್ಟಿದ್ದರೇ ಅಂತಾ ಯತ್ನಾಳ ಮಾತನಾಡಿದ್ದು ಸರಿಯಲ್ಲ ಎಂದರು.

ಕೋಡಿಮಠದ ಶಿವಾನಂದ ಶಿವಯೋಗಿ ರಾಜೇಂದ್ರ ಸ್ವಾಮೀಜಿ ಭವಿಷ್ಯ

ಸಂಕ್ರಾಂತಿವರೆಗೆ ಸಿಎಂ ಬದಲಾವಣೆಯಾಗಲ್ಲ

ಬಾಗಲಕೋಟೆ: ಸಂಕ್ರಾಂತಿವರೆಗೆ ಸಿಎಂ ಬದಲಾವಣೆಯಾಗಲ್ಲ. ಒಳ ಹಡ್ಡ ಬಂದಿದೆ ಬದಲಾವಣೆ ವಿಚಾರದಲ್ಲಿ. ಹೊಳೆಯನ್ನು ಈಜಿದರೆ ಬದಲಾವಣೆ ಆಗಬಹುದು. ಆ ಶಕ್ತಿ ಇದ್ದರೆ ಹಾಲುಮತದವರಿಗೆ ಅಧಿಕಾರ ಬಂದರೆ ಬಿಡಿಸಿಕೊಳ್ಳೋದು ಕಷ್ಟ ಎಂದು ಕೋಡಿಮಠದ ಶಿವಾನಂದ ಶಿವಯೋಗಿ ರಾಜೇಂದ್ರ ಸ್ವಾಮೀಜಿ ಭವಿಷ್ಯ ನುಡಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಅವರಾಗಿಯೇ ಬಿಡಬೇಕು. ಯಾಕೆಂದರೆ ವಿಜಯನಗರ ಸಾಮ್ರಾಜ್ಯ ಹಕ್ಕಬುಕ್ಕರು ಕಟ್ಟಿದ್ದು. ಇವತ್ತು ಅದೇ ಚಿಹ್ನೆ ಇರೋದು ಮೈಸೂರು ದಸರಾ ಅದೇ ಚಿಹ್ನೆಯಲ್ಲಿ ನಡಿತಿರೋದು. ಹಾಲು ಕೆಟ್ಟರು ಹಾಲುಮತ ಕೆಡುವುದಿಲ್ಲ. ಅಂಥವರ ಕೈಯಲ್ಲಿ ಅಧಿಕಾರ ಸಿಕ್ಕಿರೋದರಿಂದ ಬಿಡಿಸೋದು ಕಷ್ಟ ಎಂದರು.

ಪಹಲ್ಗಾಮ್‌ನಲ್ಲಿ ಧರ್ಮ ಕೇಳಿ ಹತ್ಯೆ ವಿಚಾರಕ್ಕೆ ಪ್ರತಿಕ್ರಿಯಿಸಿದ ಅವರು, ಹಿಂದೆ ರಾಜರು ಮಹಾರಾಜರು ಚಕ್ರವರ್ತಿಗಳು ಇದ್ದರು. ಅವರ ಹತ್ತಿರ ಒಂದು ಸೀಟ್ ಯಾವಾಗಲೂ ಗುರುಗಳಿಗೆ ಅಂತ ಇತ್ತು. ಅವರು ಏನೇ ಮಾಡುತ್ತಿದ್ದರು ಗುರುಗಳನ್ನು ಕೇಳುತ್ತಿದ್ದರು. ಗುರು ಅಂದರೆ ಧರ್ಮ ಅಂತ, ಧರ್ಮ ಬಿಟ್ಟು ಏನು ಮಾಡುತ್ತಿರಲಿಲ್ಲ. ಈಗ ಬರುವಂತವರಿಗೆ ಗುರಿನೂ ಇಲ್ಲ ಗುರುನೂ ಇಲ್ಲ. ಅವರು ಹೇಳಿದ್ದೇ ಧರ್ಮ ಮಾಡಿದ್ದೇ ಆಚಾರ. ಇಂತಹ ಪ್ರಸಂಗ ಇರುವಾಗ ಯಾವುದೇ ಧರ್ಮ ಇರಲಿ ಮಾನವೀಯ ಮೌಲ್ಯ ಒಳಗೊಂಡಿರಬೇಕು ಎಂದರು.

ದೇಶದಲ್ಲಿ ಯುದ್ಧದ ಭೀತಿ ಇದೆ

ದೇಶದಲ್ಲಿ ಯುದ್ಧದ ಭೀತಿ ಇದ್ದು, ಅಲ್ಲಗಳೆಯುವ ಹಾಗಿಲ್ಲ. ಮತೀಯ ಮತಾಂಧತೆ ಗೊಂದಲ ಬಹಳ ಹೆಚ್ಚಾಗುತ್ತದೆ. ಜನಗಳಲ್ಲಿ ಸಾವು ನೋವುಗಳು ಹೆಚ್ಚಾಗುತ್ತದೆ. ಯುಗಾದಿ ಭವಿಷ್ಯದಲ್ಲಿ ನಾವು ಹೇಳಿದಂತೆ, ಉತ್ತರದ ನಾಡಿನಲ್ಲಿ ಹಗೆಯ ಹೆಬ್ಬೆಗೆ ಹಬ್ಬಿದೆ. ಸುತ್ತುವರೆದು ಬರುವಾಗ ಜಗವೆಲ್ಲ ಕೋಳಾದೀತು ಸಾಮೂಹಿಕ ಹತ್ಯೆಯಾಗುತ್ತದೆ ಎಂದಿದ್ದೇವು. ಅದು ಹೇಳಿದ ಕೆಲ ದಿನಗಳಲ್ಲಿ ಕಾಶ್ಮೀರದಲ್ಲಿ ಹತ್ಯೆ ಆಯಿತು ಎಂದು ಕೋಡಿಮಠದ ಶಿವಾನಂದ

ಸಮಾಚಾರ ಸಣ್ಣದಲ್ಲ

ತಲ್ವಾರ್ ಪ್ರದರ್ಶನ: ಇಬ್ಬರು ಬಂಧನ

ಚಿಕ್ಕೋಡಿ: ಸಾರ್ವಜನಿಕ ಸ್ಥಳದಲ್ಲಿ ತಲ್ವಾರ್ ಪ್ರದರ್ಶನ ಮಾಡಿದ ಇಬ್ಬರು ಯುವಕರನ್ನು ಪೊಲೀಸರು ವಶಕ್ಕೆ ಪಡೆದಿರುವ ಘಟನೆ ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲೂಕಿನ ಶಹಾಬಂದರ ಗ್ರಾಮದ ಬಳಿ ನಡೆದಿದೆ. ಬೆಳಗಾವಿ ತಾಲೂಕಿನ ಬಮ್ಮನಟ್ಟಿ ಗ್ರಾಮದ ನಿವಾಸಿ ಹಾಲಪ್ಪ ದ್ಯಾಮಪ್ಪ ಕಾಟಾಬಳಿ(25), ಹುಕ್ಕೇರಿ ತಾಲೂಕಿನ ಚಿಕಲದಿನ್ನಿ ಗ್ರಾಮದ ನಿವಾಸಿ ನಾಗರಾಜ ದ್ಯಾಮಪ್ಪ ಕಟಾಬಳಿ(21) ಬಂಧಿತರು.ಇತ್ತೀಚೆಗೆ ಹಾಲಪ್ಪ ಹಾಗೂ ದ್ಯಾಮಪ್ಪ ಶಹಬಂದರ ಕ್ರಾಸ್‌ನ ವಾಲ್ಮೀಕಿ ಸರ್ಕಲ್ ಬಳಿ ಕೈಯಲ್ಲಿ ತಲ್ವಾರ್ ಹಿಡಿದು ಓಡಾಡಿದ್ದರು. ಅಲ್ಲದೇ ಜನರನ್ನ ನಿಂದಿಸಿ, ಭಯದ ವಾತಾವರಣ ನಿರ್ಮಾಣ ಮಾಡಿದ್ದರು. ವಿಷಯ ತಿಳಿದ ಯಮಕನಮರಡಿ ಪೊಲೀಸರು ಇಬ್ಬರು ಆರೋಪಿಗಳನ್ನು ವಶಕ್ಕೆ ಪಡೆದಿದ್ದಾರೆ. ಘಟನೆಯ ಕುರಿತು ಯಮಕನಮರಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಶಿಮಾರ್ಝ್ ಆಯಿಷಾಗೆ ಶೇ.92 ರಷ್ಟು ಅಂಕ

ಬೆಂಗಳೂರು: ಹಿರಿಯ ಪತ್ರಕರ್ತ ಅಕ್ರಮ್ ಹಸನ್ ಮತ್ತು ಕೌನ್ಸಿಲರ್ ಶಹನಾರ್ಝ್ ದಂಪತಿಯ ಪುತ್ರಿ ಶಿಮಾರ್ಝ್ ಆಯಿಷ ಝುಲೇಖಾ ಉಳ್ಳಾಲದ ಭಾರತಿ ಆಂಗ್ಲ ಮಾಧ್ಯಮ ಶಾಲೆಯ ವ್ಯಾಸಂಗ ಮಾಡುತ್ತಿದ್ದು, 2024-25 ನೇ ಸಾಲಿನ ಹತ್ತನೇ ತರಗತಿ ಪರೀಕ್ಷೆಯಲ್ಲಿ ಒಟ್ಟು 574 ಅಂಕ ಪಡೆಯುವುದರೊಂದಿಗೆ ಶಾಲೆಯಲ್ಲಿ ಎರಡನೇ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿನಿಯಾಗಿದ್ದಾರೆ.

ಮರಕ್ಕೆ ಕಾರು ಡಿಕ್ಕಿ: ಮೂವರ ಸಾವು

ಚನ್ನಪಟ್ಟಣ: ತಾಲ್ಲೂಕಿನ ಅಮ್ಮಳ್ಳಿದೊಡ್ಡಿ ಬಳಿ ಭಾನುವಾರ ಕಾರು ಮರಕ್ಕೆ ಡಿಕ್ಕಿ ಹೊಡೆದಿದ್ದರಿಂದ ಬೆಂಗಳೂರು ಮೂಲದ ಮೂವರು ಯುವಕರು ಮೃತಪಟ್ಟಿದ್ದು, ಮತ್ತೊಬ್ಬರು ಗಂಭೀರವಾಗಿ ಗಾಯಗೊಂಡಿದ್ದಾರೆ. ಮೃತರನ್ನು ಬೆಂಗಳೂರಿನ ಕಾಮಾಕ್ಷಿಪಾಳ್ಯದ ಅಭಿ (21), ಮಧು (32) ಹಾಗೂ ದೀಪು (22) ಎಂದು ಗುರುತಿಸಲಾಗಿದೆ. ಗಂಭೀರವಾಗಿ ಗಾಯಗೊಂಡಿರುವ ಚಿರು ಅವರಿಗೆ ಚಾಮುಂಡೇಶ್ವರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗಾಗಿ ನಿಮ್ಹಾನ್ಸ್ ಆಸ್ಪತ್ರೆಗೆ ಕಳಿಸಿ ಕೊಡಲಾಗಿದೆ. ಸ್ನೇಹಿತರಾದ ನಾಲ್ವರೂ ಕನಕಪುರ ತಾಲ್ಲೂಕಿನ ಕಬ್ಬಾಳಿಗೆ ಕಾರ್ಯಕ್ರಮವೊಂದರ ಸಲುವಾಗಿ ಬಂದಿದ್ದರು. ಕಾರ್ಯಕ್ರಮ ಮುಗಿಸಿಕೊಂಡು ಸಂಜೆ 6.45ರ ಸುಮಾರಿಗೆ ತಮ್ಮ ಸ್ವಿಫ್ಟ್ ಕಾರಿನಲ್ಲಿ ಬೆಂಗಳೂರಿಗೆ ಹೊರಟ್ಟಿದ್ದರು. ಅಮ್ಮಳ್ಳಿದೊಡ್ಡಿ ಬಳಿ ವೇಗವಾಗಿ ಬರುವಾಗ ಚಾಲನೆ ಮಾಡುತ್ತಿದ್ದವರು, ಕಾರಿನ ನಿಯಂತ್ರಣ ಕಳೆದುಕೊಂಡು ಮರಕ್ಕೆ ಡಿಕ್ಕಿ ಹೊಡೆದಿದ್ದಾರೆ ಎಂದು ಅಕ್ಕೂರು ಠಾಣೆ ಪೊಲೀಸರು ತಿಳಿಸಿದರು. ಡಿಕ್ಕಿಯ ರಭಸಕ್ಕೆ ಕಾರು ಸಂಪೂರ್ಣ ನಜ್ಜುಗುಜ್ಜಾಗಿ, ನಾಲ್ವರೂ ಗಂಭೀರವಾಗಿ ಗಾಯಗೊಂಡರು. ಕೂಡಲೇ ಸ್ಥಳೀಯರು ಎಲ್ಲರನ್ನೂ ಕಾರಿನಿಂದ ಹೊರಗೆಳೆದು ಚಾಮುಂಡೇಶ್ವರಿ ಆಸ್ಪತ್ರೆಗೆ ಕರೆದೊಯ್ಯುವಾಗ ಮಾರ್ಗ ಮಧ್ಯೆ ಮೂವರು ಕೊನೆಯುಸಿರೆಳೆದರು.

ಚಾಮುಂಡಿ ದೇವಸ್ಥಾನ: 100 ಮೀ. ವ್ಯಾಪ್ತಿ ವ್ಯಾಪಾರ ನಿರ್ಬಂಧ

ಮೈಸೂರು: ಚಾಮುಂಡಿ ಬೆಟ್ಟದ ಚಾಮುಂಡೇಶ್ವರಿ ದೇವಸ್ಥಾನದ ಸುತ್ತಲಿನ 100 ಮೀ. ಪ್ರದೇಶದ ವ್ಯಾಪ್ತಿಯಲ್ಲಿ ವ್ಯಾಪಾರ ವಹಿವಾಟಿಗೆ ನಿರ್ಬಂಧ ವಿಧಿಸಲಾಗಿದೆ.

ದೇವಾಲಯಕ್ಕೆ ಆಗಮಿಸುವ ಗಣ್ಯ, ಅತಿಗಣ್ಯ ವ್ಯಕ್ತಿಗಳು, ಪ್ರವಾಸಿಗರು, ವಿದೇಶಿ ಪ್ರವಾಸಿಗರು ಹಾಗೂ ಭಕ್ತಾಧಿಗಳಿಗೆ ಸುಲಲಿತ ವಾಗಿ ಚಲಿಸುವ, ಯಾವುದೇ ಅಡೆತಡೆಯಾಗದ ರೀತಿಯಲ್ಲಿ ಈ ಅಗತ್ಯ ಮುಂಜಾಗ್ರತೆ ಕ್ರಮ ವಹಿಸಲಾಗಿದೆ. ಈ ನಿಟ್ಟಿನಲ್ಲಿ ಪ್ರಾಧಿಕಾರವು ಚಾಮುಂಡೇಶ್ವರಿ ದೇವಾಲಯದ ಸುತ್ತಲೂ 100 ಮೀಟರ್ ಪರಿಮಿತಿಯಲ್ಲಿ ಯಾವುದೇ ವ್ಯಾಪಾರ ವಹಿವಾಟು ಮಾಡದಂತೆ ನಿರ್ಬಂಧಿಸಿ ಆದೇಶಿಸಿದೆ. ಈ ಹಿನ್ನೆಲೆಯಲ್ಲಿ ಚಾಮುಂಡಿ ಬೆಟ್ಟದ ಸ್ಥಳೀಯ ಗ್ರಾಮಸ್ಥರು, ವ್ಯಾಪಾರಸ್ಥರು ಹಾಗೂ ಭಕ್ತಾಧಿಗಳು ಪ್ರವಾಸಿಗರು ಪ್ರಾಧಿಕಾರ ದೊಂ ದಿಗೆ ಸಹಕರಿಸಬೇಕು ಎಂದು ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಪ್ರವಾಸಿಗರು ಮತ್ತು ಭಕ್ತರ ಅನುಕೂಲ ದೃಷ್ಟಿಯಿಂದ ಚಾಮುಂಡೇಶ್ವರಿ ದೇವಸ್ಥಾನದ ಸುತ್ತಲಿನ 100 ಮೀ. ಪ್ರದೇಶಲ್ಲಿ ಯಾವುದೇ ವ್ಯಾಪಾರ ವಹಿವಾಟು ನಡೆಸದಂತೆ ನಿರ್ಬಂಧ ವಿಧಿಸಲಾಗಿದೆ. ಸಾರ್ವಜನಿಕರು ನಮಗೆ ಸಹಕಾರ ನೀಡಬೇಕಿದೆ ಎಂದು ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಎಂ.ಜೆ.ರೂಪಾ ಮನವಿ ಮಾಡಿದ್ದಾರೆ.

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ತೀರ್ಮಾನಕ್ಕೆ ಬದ್ಧ

ಕಾಶ್ಮೀರದ ವಿಚಾರದಲ್ಲಿ ಪ್ರಧಾನಿ ಮೋದಿಯಿಂದ ಬಿಗಿ ಕ್ರಮ

ಹಾಸನ: ಕಾಶ್ಮೀರದ ವಿಚಾರದಲ್ಲಿ ಪ್ರಧಾನಮಂತ್ರಿಗಳು ಬಹಳ ಬಿಗಿ ಕ್ರಮ ತೆಗೆದುಕೊಂಡಿದ್ದಾರೆ. ಈ ವಿಷಯದಲ್ಲಿ ರಾಷ್ಟ್ರದ ಎಲ್ಲಾ ರಾಜಕೀಯ ಪಕ್ಷಗಳು ಐಕ್ಯತೆಯನ್ನು ತೋರಿಸಿದ್ದಾರೆ ಎಂದು ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಹೇಳಿದರು.

ಅವರು ಹಾಸನ ಜಿಲ್ಲೆಯ ದ್ಯಾಪಲಾಪುರ ಗ್ರಾಮದಲ್ಲಿ ನೂತನವಾಗಿ ನಿರ್ಮಾಣವಾಗಿರುವ ಶ್ರೀ ಆಂಜನೇಯಸ್ವಾಮಿ ದೇವಾಲಯ ಉದ್ಘಾಟನಾ ಮಹೋತ್ಸವ ಹಾಗೂ ಮಹಾಕುಂಭಾಭಿಷೇಕ ಕಾರ್ಯಕ್ರಮಕ್ಕೆ ಆಗಮಿಸಿದ್ದರು. ಈ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ದೇಶದ 150 ಕೋಟಿ ಜನ, ಏಕಮುಖವಾಗಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ತೀರ್ಮಾನಕ್ಕೆ ಬದ್ಧರಾಗಿರಬೇಕು. ಆಗ ಮಾತ್ರ ಇಂತಹ ದುರ್ಘಟನೆ ನಡೆಯುವುದಿಲ್ಲ ಎಂದರು.

ಪಹಲ್ಗಾಮ್‌ನಲ್ಲಿ 26 ಪ್ರವಾಸಿಗರನ್ನು ಹತ್ಯೆ ಮಾಡಿದ್ದಾರೆ. ಇದರಲ್ಲಿ ಒಬ್ಬ ವಿದೇಶಿಗ. ನಮ್ಮ ದೇಶದ 25 ಜನರು ಇದ್ದು, ನಿಷ್ಕರುಣೆಯಿಂದ ಅವರನ್ನು ಹತ್ಯೆ ಮಾಡಿದಂತಹ ಉಗ್ರಗಾಮಿಗಳನ್ನು ಸಂಪೂರ್ಣವಾಗಿ ನಾಶ ಮಾಡುವವರೆಗೂ ಪ್ರಧಾನ ಮಂತ್ರಿಗಳು ಏನೆಲ್ಲಾ ಕ್ರಮ ತೆಗೆದುಕೊಳ್ಳಬೇಕು ತೆಗೆದುಕೊಂಡಿದ್ದಾರೆ. ಈ ವಿಷಯದಲ್ಲಿ ನನ್ನ ಅನುಭವದಿಂದ ಅಭಿಪ್ರಾಯವನ್ನು ತಿಳಿಸಿದ್ದೇನೆ ಎಂದು ಹೇಳಿದರು.

> ಇದು ಸೂಕ್ಷ್ಮವಾದ ವಿಚಾರ. ಇದರ ಕುರಿತು ಕೇಂದ್ರ ಕೈಗೊಳ್ಳುವ ಕ್ರಮಕ್ಕೆ ನನ್ನದು, ನನ್ನ ಪಕ್ಷದ್ದು ಪೂರ್ಣ ಬೆಂಬಲವಿದೆ ಎಂದು ಈಗಾಗಲೇ ಹೇಳಿದ್ದೇನೆ. ಮುಂದೆ ಕೂಡ ಏನು ಕ್ರಮ ತೆಗೆದುಕೊಳ್ಳುತ್ತಾರೋ ಆ ಕ್ರಮಕ್ಕೆ ಇಡೀ ದೇಶ ಪಕ್ಷ ಭೇದ ಇಲ್ಲದೇ ಎಲ್ಲರೂ ಒಗ್ಗಟ್ಟಾಗಿ ಬೆಂಬಲ ನೀಡಬೇಕು. ಮುಂದೆ ಇಂತಹ ದುಷ್ಕೃತ್ಯ ನಡೆಯಬಾರದು. ಅವರಿಗೆ ಪಾಠ ಕಲಿಸಬೇಕು ಎಂದು ಪ್ರಧಾನಮಂತ್ರಿಗಳು ಪ್ರತಿಜ್ಞೆ ಮಾಡಿದ್ದು, ಅವರ ಹಿಂದೆ ನಿಲ್ಲುತ್ತೇವೆ.
> -ಎಚ್.ಡಿ.ದೇವೇಗೌಡ, ಮಾಜಿ ಪ್ರಧಾನಿ

ಜಾತಿ ಗಣತಿ ಬಗ್ಗೆ ಬಿಜೆಪಿಗೆ ಒಮ್ಮೆಲೇ ಪ್ರೀತಿ ಬಂದು ಬಿಟ್ಟಿದೆ

ಯೂ ಟರ್ನ್ ಹೊಡೆದ ಕೇಂದ್ರ ಸರಕಾರ: ಸಚಿವ ಜಾರಕಿಹೊಳಿ

ಹುಬ್ಬಳ್ಳಿ: ಜಾತಿ ಗಣತಿ ವಿರೋಧಿಸುತ್ತಿದ್ದ ಕೇಂದ್ರ ಸರಕಾರ, ಇದೀಗ ಒಮ್ಮೆಲೆ ಯೂಟರ್ನ್ ಹೊಡೆದು, ತಾನು ಸಹ ಜಾತಿ ಗಣತಿ ಮಾಡಲು ಹೊರಟಿದೆ ಎಂದು ಲೋಕೋಪಯೋಗಿ ಇಲಾಖೆ ಸಚಿವ ಸತೀಶ ಜಾರಕಿಹೊಳಿ ವ್ಯಂಗ್ಯವಾಡಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜಾತಿ ಗಣತಿ ಬಗ್ಗೆ ಬಿಜೆಪಿಗೆ ಒಮ್ಮೆಲೆ ಪ್ರೀತಿ ಬಂದು ಬಿಟ್ಟಿದೆ. ಅವರು ಗಣತಿ ಮಾಡುವುದಾಗಿದ್ದರೆ, ಇಷ್ಟು ದಿನ ನಮ್ಮ ನಿಲುವು ವಿರೋಧಿಸಿದ್ದು ಯಾಕೆ' ಎಂದು ಪ್ರಶ್ನಿಸಿದರು.

ಜಾತಿ ಗಣತಿಯ ಕುರಿತು ಚರ್ಚಿಸಲು ಮೇ 9ರಂದು ಸಚಿವ ಸಂಪುಟ ಸಭೆ ನಡೆಯಲಿದೆ. ಅಲ್ಲಿ ಎಲ್ಲ ಸಚಿವರ ಅಭಿಪ್ರಾಯ ಸಂಗ್ರಹಿಸಿ ಚರ್ಚಿಸಲಾಗುವುದು. ಈ ಕುರಿತು ಮುಖ್ಯಮಂತ್ರಿ ಈಗಾಗಲೇ ಎಲ್ಲ ಸಚಿವರಿಗೆ ಲಿಖಿತವಾಗಿ ತಮ್ಮ ಅಭಿಪ್ರಾಯ ಸಲ್ಲಿಸುವಂತೆ ಸೂಚಿಸಿದ್ದಾರೆ. ಜನರ ಬೇಕು, ಬೇಡಗಳನ್ನು ಸರಕಾರಕ್ಕೆ ತಿಳಿಸುವುದು ಸಚಿವರ ಹಕ್ಕು. ಸ್ವೀಕರಿಸುವುದು, ಬಿಡುವುದು ಸರಕಾರಕ್ಕೆ ಬಿಟ್ಟಿದ್ದು' ಎಂದರು.

ರಾಜ್ಯ ಸರಕಾರ ಪೊಲೀಸರಿಗೆ ಫ್ರೀ ಹ್ಯಾಂಡ್ ನೀಡುತ್ತಿಲ್ಲ' ಎನ್ನುವ ಕೇಂದ್ರ ಸಚಿವ ವಿ. ಸೋಮಣ್ಣ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, 'ಮಂಗಳೂರಿನಲ್ಲಿ ನಡೆದ ಕೊಲೆ ಪ್ರಕರಣಕ್ಕೆ ಸಂಬಂಧಿಸಿ ಬಿಜೆಪಿಯವರು ರಾಜಕೀಯ ಮಾಡುತ್ತಿರುವುದು ಸರಿಯಲ್ಲ. ಆರೋಪಿಗಳನ್ನು ಈಗಾಗಲೇ ಬಂಧಿಸಲಾಗಿದೆ. ತನಿಖೆ ನಡೆಯುತ್ತಿದ್ದು, ಪೊಲೀಸರು ಮುಕ್ತವಾಗಿ ಕಾರ್ಯನಿರ್ವಹಿಸದಿದ್ದರೆ ಆರೋಪಿಗಳು ಇಷ್ಟು ಬೇಗ ಬಂಧನವಾಗುತ್ತಿದ್ದರೆ' ಎಂದು ಪ್ರಶ್ನಿಸಿದರು.

ಪಾಕಿಸ್ತಾನಕ್ಕೆ ಜಮೀರ್ ಹೋಗುವ ಅಗತ್ಯವಿಲ್ಲ

ಪಾಕಿಸ್ತಾನದ ವಿರುದ್ಧ ಭಾರತ ಕಟ್ಟುನಿಟ್ಟಿನ ನಿರ್ಧಾರ ತೆಗೆದುಕೊಳ್ಳಲಿದೆ. ಆ ಕುರಿತು ಕೇಂದ್ರ ಸರಕಾರ ತನ್ನದೇ ಆದ ರಣನೀತಿ ಅನುಸರಿಸಲಿದೆ. ಆರ್ಥಿಕ, ಸಾಮಾಜಿಕ ಪರಿಸ್ಥಿತಿ ಅವಲೋಕಿಸಿ, ನಿರ್ಧಾರ ಕೈಗೊಳ್ಳಬೇಕಾಗುತ್ತದೆ. ದೇಶದ ರಕ್ಷಣೆಗೆ 22 ಲಕ್ಷ ಸೈನಿಕರು ಇದ್ದಾರೆ. ಪಾಕಿಸ್ತಾನದ ವಿರುದ್ಧ ಹೋರಾಡಲು ಸಚಿವ ಜಮೀರ್ ಅಹ್ಮದ್ ಹೋಗುವ ಅಗತ್ಯವಿಲ್ಲ ಎಂದು ಸಚಿವ ಸತೀಶ ಜಾರಕಿಹೊಳಿ ಹೇಳಿದರು.

> ಕಲಬುರಗಿಯಲ್ಲಿ ನೀಟ್ ಪರೀಕ್ಷೆ ವೇಳೆ ಕಾಲೇಜು ಸಿಬ್ಬಂದಿ ಜನಿವಾರ ತೆಗೆಸಿರಬಹುದು. ಆ ಕುರಿತು ಸರಕಾರ ಸೂಕ್ತ ಕ್ರಮ ಕೈಗೊಳ್ಳಲಿದೆ. ಅಲ್ಲದೆ, ಅದು ಖಾಸಗಿ ಸಂಸ್ಥೆಯಲ್ಲಿ ನಡೆಯುತ್ತಿದ್ದ ಪರೀಕ್ಷೆ. ಅದಕ್ಕೂ ಸರಕಾರಕ್ಕೂ ಯಾವ ಸಂಬಂಧವೂ ಇಲ್ಲ. ಕೆಲವು ಕಡೆ ಸರಕಾರಕ್ಕೆ ಕೆಟ್ಟ ಹೆಸರು ತರಲು ಇಂಥ ಘಟನೆಗಳು ನಡೆದಿರಲೂಬಹುದು.
> – ಸತೀಶ್ ಜಾರಕಿಹೊಳಿ, ಸಚಿವ

ಬಿಜೆಪಿ ನಾಯಕರ ವಿರುದ್ಧ ಸಚಿವ ಎಂ.ಬಿ.ಪಾಟೀಲ್ ಕಿಡಿ

ಗ್ಯಾರಂಟಿ ನಕಲು ಮಾಡಿ ಅನ್ಯ ರಾಜ್ಯದಲ್ಲಿ ಬಿಜೆಪಿ ಅಧಿಕಾರ

ಜಗಳೂರು: ಕಾಂಗ್ರೆಸ್ ಸರಕಾರ ಕರ್ನಾಟಕ ರಾಜ್ಯದಲ್ಲಿ ಜಾರಿಗೆ ತಂದಿರುವ ಯೋಜನೆಗಳನ್ನು ಬಿಜೆಪಿ ನಕಲು ಮಾಡುತ್ತಿದೆ ಎಂದು ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಕೇಂದ್ರ ಬಿಜೆಪಿ ಸರಕಾರ ಕರ್ನಾಟದಲ್ಲಿನ ಐದು ಗ್ಯಾರಂಟಿ ಯೋಜನೆ ಅಪಹಾಸ್ಯ ಮಾಡಿ, ರಾಜ್ಯದಲ್ಲಿ ಗ್ಯಾರಂಟಿ ಯೋಜನೆಗಳಿಂದ ಅಭಿವೃದ್ಧಿ ಕುಂಠಿತ ಎಂದು ಆರೋಪಿಸುತ್ತಿದ್ದ. ಆದರೆ, ದೆಹಲಿ ಮಹಾರಾಷ್ಟ್ರದಲ್ಲಿ ನಮ್ಮದೆ ಯೋಜನೆಯನ್ನು ಬೇರೆ ಹೆಸರಿನಲ್ಲಿ ನೀಡಲಾಗುತ್ತಿದೆ, ಬಿಜೆಪಿ ಮಾಡಿದರೆ ಅಭಿವೃದ್ಧಿ, ಕಾಂಗ್ರೆಸ್ ಮಾಡಿದರೆ ಅಭಿವೃದ್ಧಿ ಕುಂಠಿತ ಎಂದು ನಮ್ಮ ಗ್ಯಾರಂಟಿಗಳನ್ನು ಬಿಜೆಪಿ ಕಾಪಿ ಮಾಡಿ ದೆಹಲಿ, ಮಹಾರಾಷ್ಟ್ರದಲ್ಲಿ ಅಧಿಕಾರಕ್ಕೆ ಬಂತು, ಆದರೆ ಇಲ್ಲಿನ ಬಿಜೆಪಿ ನಾಯಕರು ಗ್ಯಾರಂಟಿಗಳನ್ನು ವಿರೋಧಿ ಸುತ್ತಾರೆ ಎಂದು ಹರಿಹಾಯ್ದರು.

ಗ್ರಾಮೀಣ ಪ್ರದೇಶದಲ್ಲಿ ಬೃಹತ್ ಉದ್ಯಮ ಸ್ಥಾಪನೆ ಮಾಡಿ ಎಂದು ಪತ್ರಕರ್ತರು ಕೇಳಿದ ಪ್ರಶ್ನೆಗೆ ಎಂ.ಬಿ ಪಾಟೀಲ್ ಪ್ರತಿಕ್ರಿಯಿಸಿ, ಜಗಳೂರು ತಾಲೂಕಿನ ದೊಣೆಹಳ್ಳಿ ರಾಷ್ಟ್ರೀಯ ಹೆದ್ದಾರಿ ಹಾದು ಹೋಗಿದೆ. ವಿಶೇಷವಾಗಿ ಮಹಿಳೆಯರಿಗೆ ಉದ್ಯೋಗ ಸೃಷ್ಟಿಸಲು ಗಾರ್ಮೆಂಟ್ಸ್ ಅತ್ಯವಶ್ಯಕ. ಎಐ ನಂತಹ ತಂತ್ರಜ್ಞಾನದಿಂದ ಉದ್ಯೋಗ ಸೃಷ್ಟಿಗೆ ಹೊಡೆತ ಬೀಳುತ್ತದೆ ಎಂಬ ಮಾತನ್ನು ಒಪ್ಪುವುದಿಲ್ಲ. ವಿಶೇಷವಾಗಿ ಮಹಿಳೆಯರಿಗೆ ಉದ್ಯೋಗ ಸೃಷ್ಟಿಯಾಗಬೇಕೆಂದರೆ ಕೈಗಾರಿಕೆಗಳು ಮತ್ತು ಗಾರ್ಮೆಂಟ್ಸ್‌ಗಳ ಸ್ಥಾಪನೆ ಅತ್ಯಗತ್ಯ. ನಾಲ್ಕು ಜಿಲ್ಲೆಗಳ ಕೇಂದ್ರಗಳಿಗೆ ಅನುಕೂಲವಾಗುವಂತೆ ಸರಕಾರಿ ಜಾಗ ನೋಡಿ ಬೃಹತ್ ಉದ್ಯಮ ಸ್ಥಾಪನೆಗೆ ಮಾಡುವ ಸಲುವಾಗಿ ಅಧಿಕಾರಿಗಳಿಂದ ವರದಿ ತರಿಸಿಕೊಂಡು ಉದ್ಯಮ ಸ್ಥಾಪನೆಗೆ ಕಾನೂನಾತ್ಮಕವಾಗಿ ಗಮನ ಹರಿಸುತ್ತೇನೆ ಎಂದು ಹೇಳಿದರು.

ನಾನು ಸಮಯಕ್ಕಾಗಿ ಕಾಯ್ತಾ ಇದ್ದೀನಿ: ರೇವಣ್ಣ

ಬಡ್ಡಿ ಸಮೇತ ತೀರಿಸದೇ ಹೋದ್ರೆ ನಾನು ದೇವೇಗೌಡ್ರ ಮಗನೇ ಅಲ್ಲ

ಹಾಸನ: ನಾನು ಸಮಯಕ್ಕಾಗಿ ಕಾಯ್ತಾ ಇದ್ದೀನಿ, ಎಲ್ಲವನ್ನೂ ಬಡ್ಡಿ ಸಮೇತ ತೀರಿಸದೇ ಹೋದ್ರೆ ನಾನು ದೇವೇಗೌಡರ ಮಗನೇ ಅಲ್ಲ ಎಂದು ಮಾಜಿ ಸಚಿವ ಎಚ್.ಡಿ ರೇವಣ್ಣ ಗುಡುಗಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಕೆಲವರು ಹೇಳ್ತಾರೆ ದೇವೇಗೌಡರದು, ರೇವಣ್ಣ ಅವರದ್ದು ಮುಗಿತು ಅಂತಾರೆ. ಈ ಜಿಲ್ಲೆಗೆ ದೇವೇಗೌಡರ ಕೊಡುಗೆ ಏನೆಂದು ಜನರಿಗೆ ಗೊತ್ತಿದೆ ಎಂದು ಹೇಳಿದರು.

ಕೆಲವು ಅಧಿಕಾರಿಗಳು ರೇವಣ್ಣ ಹಾಗೂ ದೇವೇಗೌಡರದು ಮುಗೀತು ಎಂದು ತಿಳಿದುಕೊಂಡಿದ್ದಾರೆ. ಹಿಂದೆ ಕೂಡ ಜಿಲ್ಲೆಯಲ್ಲಿ ಎಲ್ಲಾ ಸ್ಥಾನ ಸೋತಿದ್ದೆವು. ಬಳಿಕ ಐದೇ ವರ್ಷಕ್ಕೆ ದೇವೇಗೌಡರು ಅಧಿಕಾರಕ್ಕೆ ಬಂದಿದ್ದರು. ಹಾಸನಕ್ಕೆ ದೇವೇಗೌಡರ ಕೊಡುಗೆ ಏನು ಅಂತಾರೆ. ರೈಲ್ವೆ ಯೋಜನೆ, ಎಂಜಿನಿಯರಿಂಗ್, ಮೆಡಿಕಲ್ ಕಾಲೇಜು, ನರ್ಸಿಂಗ್ ಕಾಲೇಜು ಮಾಡಿದ್ದು ಯಾರು? ಹಾಸನ ಜಿಲ್ಲೆಯ ಶಿಕ್ಷಣಕ್ಕೆ ಕುಮಾರಸ್ವಾಮಿ ಐದು ಸಾವಿರ ಕೋಟಿ ರು. ಕೊಟ್ಟಿದ್ರು, ಎಂದು ತಿಳಿಸಿದರು.



> ಕಾಂಗ್ರೆಸ್‌ನವರು ಹಾಸನ - ಮೈಸೂರು ರೈಲ್ವೆ ಯೋಜನೆ ಸ್ಥಗಿತ ಮಾಡಿದ್ದರು. ಆದರೆ ದೇವೇಗೌಡರು ಪ್ರಧಾನಿಯಾಗಿ ಹತ್ತೆ ತಿಂಗಳಿಗೆ ಆ ಯೋಜನೆ ಮಾಡಿದ್ರು. ಕಾಂಗ್ರೆಸ್‌ನವರು ಈ ಜಿಲ್ಲೆಯಲ್ಲಿ ಸುಳ್ಳು ಹೇಳಿಕೊಂಡು ರಾಜಕಾರಣ ಮಾಡುತ್ತಿದ್ದಾರೆ. ಈ ಜಿಲ್ಲೆ ಲೂಟಿಕೋರರ ಕೈ ಸೇರಿದೆ. ನಾನೂ ಇಲ್ಲೇ ಇರ್ತಿನೆ, ಇದೆಲ್ಲಾ ಎಷ್ಟು ದಿನ ಇರುತ್ತದೆ ನೋಡೋಣ. ಈ ದೇಶ ಉಳಿಯಬೇಕಾದರೆ ಮೋದಿಯವರು ಇರಲೇಬೇಕು. ಅವರಿಗೆ ನಮ್ಮ ಪಕ್ಷದ ಸಂಪೂರ್ಣ ಬೆಂಬಲ ಇದೆ.
> -ಎಚ್.ಡಿ ರೇವಣ್ಣ, ಮಾಜಿ ಸಚಿವ

ಆರ್‌ಸಿಬಿ ಗೆಲುವು: ಹಾಸ್ಟೆಲ್ ಸಾಮಗ್ರಿ ಧ್ವಂಸ

ಚಿತ್ರದುರ್ಗ: ಐಪಿಎಲ್ ಕ್ರಿಕೆಟ್ ಪಂದ್ಯಾವಳಿಯಲ್ಲಿ ಆರ್‌ಸಿಬಿ ವಿರುದ್ಧ ಸಿಎಸ್‌ಕೆ ಸೋತಿದ್ದಕ್ಕೆ ಸಿಟ್ಟುಗೊಂಡು ವಿದ್ಯಾರ್ಥಿಗಳು ಹಾಸ್ಟೆಲ್ ಸಾಮಗ್ರಿಗಳನ್ನು ಧ್ವಂಸಗೊಳಿಸಿರುವ ಘಟನೆ ನಡೆದಿದೆ. ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ಪಟ್ಟಣದ ಹೊರವಲಯದಲ್ಲಿನ ಸರ್ಕಾರಿ ಮೆಟ್ರಿಕ್ ನಂತರದ ಹಾಸ್ಟೆಲ್‌ನಲ್ಲಿ ವಿದ್ಯಾರ್ಥಿಗಳು ಸಾಮಗ್ರಿಗಳನ್ನು ಧ್ವಂಸ ಮಾಡಿದ್ದಾರೆ.

ಬೆಂಗಳೂರು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಪಂದ್ಯದಲ್ಲಿ ಸಿಎಸ್‌ಕೆ ವಿರುದ್ಧ ಆರ್‌ಸಿಬಿ 2 ರನ್‌ಗಳ ರೋಚಕ ಜಯ ಸಾಧಿಸಿತು. ಹಾಸ್ಟೆಲ್‌ನಲ್ಲಿ ಸಿಎಸ್‌ಕೆ ಫ್ಯಾನ್ಸ್ ರೊಚ್ಚಿಗೆದ್ದು, ಹಾಸ್ಟೆಲ್‌ನಲ್ಲಿರುವ ತಟ್ಟೆ, ಲೋಟ ಮತ್ತು ಟ್ರಂಕ್ ಸೇರಿದಂತೆ ಸರಕಾರಿ ಹಾಸ್ಟೆಲ್‌ಗೆ ಸೇರಿದ ಹಲವು ಸಾಮಗ್ರಿಗಳನ್ನು ಎತ್ತಿ ಹಾಕಿ ದಾಂಧಲೆ ಮಾಡಿದ್ದಾರೆ.

ಐಪಿಎಲ್ ಶುರುವಾದಾಗಿನಿಂದಲೂ ಈ ಹಾಸ್ಟೆಲ್ನಲ್ಲಿ ಇಂತಹ ಘಟನೆ ಮಾಮೂಲಿಯಾಗಿದ್ದು, ಐಪಿಎಲ್ ಪ್ರಿಯರ ಆಟೋಟೋಪಗಳಿಂದ ಇಲ್ಲಿ ಓದುತ್ತಿರುವ ಪ್ರಾಮಾಣಿಕ ವಿದ್ಯಾರ್ಥಿಗಳು ಹೈರಾಣಾಗಿದ್ದಾರೆ. ಇದರಿಂದಾಗಿ ವಿದ್ಯಾರ್ಥಿಗಳಿಗೆ ಇನ್ನಿಲ್ಲದ ತೊಂದರೆ ಉಂಟಾಗುತ್ತಿದೆ. ವಿದ್ಯಾರ್ಥಿಗಳ ಈ ವರ್ತನೆಯನ್ನು ತಹಬದಿಗೆ ತರಲು ಇಲ್ಲಿರುವ ವಾರ್ಡನ್ ಸಹ ಮುಂದಾಗಿಲ್ಲ ಎಂಬುದು ಹಲವು ವಿದ್ಯಾರ್ಥಿಗಳ ಆರೋಪವಾಗಿದೆ.

ವಿಶ್ವವಾಣಿ

ಸಂಪಾದಕೀಯ

ಜನರು ಸೂಕ್ಷ್ಮಮತಿಗಳು, ಮರೆಯದಿರಿ!

ನುಡಿದರೆ ಮುತ್ತಿನ ಹಾರದಂತಿರಬೇಕು, ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು' ಎಂದಿದ್ದಾರೆ ಭಕ್ತಿಭಂಡಾರಿ ಬಸವಣ್ಣನವರು. ಎಷ್ಟೋ ಸಂದರ್ಭದಲ್ಲಿ ನಾವಾಡುವ ಮಾತೇ ಆಗಬೇಕಿರುವ ನಮ್ಮ ಕೆಲಸವನ್ನು ಸರಾಗವಾಗಿಸಿಬಿಡುತ್ತದೆ. ಆದರೆ ಇಲ್ಲೊಬ್ಬರು ಜನನಾಯಕರು ತಮ್ಮ 'ರಾಜಕೀಯ-ಬೇಳೆ' ಬೇಯಿಸಿಕೊಳ್ಳಲೆಂದು, ಸಮಯ-ಸಂದರ್ಭದ ಔಚಿತ್ಯವನ್ನೂ ಅರಿಯದೆ, ಸಾರ್ವಜನಿಕವಾಗಿ ಬಾಯಿಗೆ ಬಂದಂತೆ ಮಾತನಾಡಿ ನಗೆಪಾಟಲಿಗೆ ಈಡಾಗಿದ್ದಾರೆ. 'ಪಾಕಿಸ್ತಾನ ನಮ್ಮ ವಿರೋಧಿ ರಾಷ್ಟ್ರ, ಅದರ ಮೇಲೆ ಕೇಂದ್ರ ಸರಕಾರವು ಯುದ್ಧ ಸಾರಿದರೆ ನನಗೆ ಅವಕಾಶ ನೀಡಲಿ; ನಾನು ಗಡಿಯಲ್ಲಿ ಯುದ್ಧಕ್ಕೆ ಹೋಗಲು ಸಿದ್ಧ' ಎಂಬ ಆಣಿಮುತ್ತುಗಳನ್ನು ಉದುರಿಸಿಬಿಟ್ಟಿದ್ದಾರೆ ಈ ಜನನಾಯಕರು. ಒಂದೊಮ್ಮೆ ಯುದ್ಧದ ಘೋಷಣೆಯಾದರೂ, ಅಲ್ಲಿ ಹೋರಾಡುವವರು ನಿಯೋಜಿತ ಯೋಧರೇ ಹೊರತು ತಾವಲ್ಲ ಎಂಬುದು ನಮ್ಮ ಜನರಿಗೂ ಗೊತ್ತಿದೆ, ಹೀಗೊಂದು 'ಭೀಷ್ಮ ಪ್ರತಿಜ್ಞೆ' ಮಾಡಿದ ಸದರಿ ಜನನಾಯಕರಿಗೂ ಗೊತ್ತಿದೆ. ಇಷ್ಟಾಗಿಯೂ ಇಂಥ ಮಾತುಗಳು ಹೊಮ್ಮುವುದೇ ತಮಾಷೆಯ ಸಂಗತಿ. ಆದ್ದರಿಂದಲೇ ಈ ಮಾತಿಗೆ ಅವರ ರಾಜಕೀಯ ಎದುರಾಳಿಯೊಬ್ಬರು, 'ನೀವು ಸುಮ್ಮನಿದ್ದರೆ ಅದೇ ದೊಡ್ಡ ಸೇವೆ. ಮಿಲಿಟರಿಯನ್ನು ನಂಬಿ ಸುಮ್ಮನಿರಿ' ಎಂದು ಟಾಂಗ್ ಕೊಟ್ಟಿದ್ದಾರೆ. ಒಂದು ಕಾಲಕ್ಕೆ ಶ್ರೀಸಾಮಾನ್ಯರು ಇಂಥ ಮಾತುಗಳನ್ನು ನಂಬುತ್ತಿದ್ದುದುಂಟು, ಇಂಥವರಿಂದ ಕಾಲಾನುಕಾಲಕ್ಕೆ ಹಣೆಯ ಮೇಲೆ 'ಡಬಲ್ ವೈಟ್, ಸಿಂಗಲ್ ರೆಡ್' ಗುರುತನ್ನು ಹಾಕಿಸಿಕೊಳ್ಳುತ್ತಿದ್ದುದೂ ಉಂಟು. ಆದರೀಗ ಕಾಲ ಬದಲಾಗಿದೆ, ಜನರೂ ಬದಲಾಗಿದ್ದಾರೆ ಮತ್ತು ಸೂಕ್ಷ್ಮಮತಿಗಳಾಗಿದ್ದಾರೆ. ಇಂಥ ಹೇಳಿಕೆಗಳಿಗೆ ಮನಸೋತು 'ಉಘೇ ಉಘೇ' ಎನ್ನುತ್ತಾ 'ಇರುಳು ಕಂಡ ಬಾವಿಯಲ್ಲಿ ಹಗಲಲ್ಲಿ ಬೀಳುವ' ಮುಠ್ಠಾಳತನ ಜನರಲ್ಲಿ ಈಗ ಇಲ್ಲ. ಇಂಥ 'ನವರಂಗಿ ನಾಟಕ'ಗಳನ್ನು ಕಣ್ತುಂಬಿಕೊಳ್ಳುವಷ್ಟು ಸಮಯವಾಗಲೀ ತಾಳ್ಮೆಯಾಗಲೀ ಜನರಲ್ಲಿ ಇಲ್ಲ. ಚುನಾಯಿತ ಪ್ರತಿನಿಧಿಯೊಬ್ಬರು ತಮ್ಮ ಪಾಲಿನ ಜನಕಲ್ಯಾಣದ ಕಾರ್ಯಗಳನ್ನು ಪ್ರಾಮಾಣಿಕವಾಗಿ ಮತ್ತು ಸಮರ್ಪಣಾಭಾವದಿಂದ ನಿರ್ವಹಿಸಿದರೆ ಸಾಕು ಎಂಬುದಷ್ಟೇ ನಮ್ಮ ಜನರ ಆಶಯ ಮತ್ತು ನಿರೀಕ್ಷೆ.

ಸೊಂಪಾದಕೀಯ

ಯುದ್ಧ ಬೇಕಾ ಯುದ್ಧ?

ಸಾಮಾಜಿಕ ಜಾಲತಾಣಗಳಲ್ಲಿ ನಾವು ಯುದ್ಧದ ಪರ ಮತ್ತು ವಿರೋಧ ಇದ್ದೇವೆ ಎನ್ನುವ ರೀತಿಯ ಚರ್ಚೆಗಳು ನಡೆಯುತ್ತಿದೆ. ಊರಲ್ಲಿ ಇದ್ದುಕೊಂಡು ತಮ್ಮ ಪಾಡಿಗೆ ತಮ್ಮ ಕೆಲಸ ಮಾಡಿಕೊಂಡು, ತಮ್ಮ ಹೊಟ್ಟೆಪಾಡು ನೋಡಿಕೊಂಡು, ಅದೇ ಸಮಯದಲ್ಲಿ ಎದೆ ತಟ್ಟಿಕೊಂಡು, ನಮಗೆ ಯುದ್ಧ ಬೇಕು, ಪಾಕಿಸ್ತಾನ ಧೂಳೀಪಟ ಆಗಲಿ ಅಂತ ಯುದ್ಧದ ಬಗ್ಗೆ ಉದ್ದುದ್ದ ಮಾತನಾಡುವವರೂ ಮತ್ತು ಅದರಿಂದ ಯಾವ ಪರಿಹಾರವೂ ಸಿಗುವುದಿಲ್ಲ ಎನ್ನುವವರೂ ಇದ್ದಾರೆ. ಹೀಗೆ ಸಾಮಾಜಿಕ ಜಾಲತಾಣಗಳಲ್ಲಿ ಕೂಡ ಶಾಂತಿಯ ಪ್ರತಿಪಾದಕರು ಮತ್ತು ಕಾಲು ಕೆರೆದು ಯುದ್ಧ ಮಾಡೋಣ ಎನ್ನುವ ಅತಿ ಉತ್ಸಾಹಿಗಳನ್ನು ನಾವು ನೋಡಬಹುದು. ನಮ್ಮ ಮೀಡಿಯಾದವರು ಕೂಡಾ ನಾವೂ ಏನೂ ಕಮ್ಮಿ ಇಲ್ಲ ಎನ್ನುವಂತೆ ರಸ್ತೆಯಲ್ಲಿ ಕಂಡ ಕಂಡವರಿಗೆ ಯುದ್ಧ ಬೇಕಾ ಬೇಡ್ವಾ ಅಂತ ಲಾಲಿಪಾಪ್ ಬೇಕಾ ಅಂತ ಕೇಳುವಷ್ಟೇ ಸಹಜವಾಗಿ ಕೇಳುತ್ತಿದ್ದಾರೆ. ಈಗ ನೇರವಾಗಿ ಯುದ್ಧ ಬೇಕು ಎಂದು ಹೇಳದಿದ್ದರೂ ಕಾಂಗ್ರೆಸ್ ನಾಯಕ ಜಮೀರ್ ಅಹ್ಮದ್, 'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಯುದ್ಧ ಬೇಡ ಎಂದು ಹೇಳಿದ್ದರೂ, ನಾನು ಪಾಕಿಸ್ತಾನಕ್ಕೆ ಹೋಗಿ ಯುದ್ಧ ಮಾಡಲು ಸಿದ್ಧ' ಅಂತ ಘೋಷಣೆ ಮಾಡಿದ್ದಾರೆ. ಅಲ್ಲದೆ ಅವರು ಅಲ್ಲಾ ದೇವರ ಆಣೆಯಾಗಿಯೂ ಸೂಸೈಡ್ ಬಾಂಬರ್ ಆಗುವ ಇಂಗಿತವನ್ನು ವ್ಯಕ್ತಪಡಿಸಿದ್ದಾರೆ. 'ಮೋದಿಯವರಿಗೆ ಹೇಳಿ ಬಿಜೆಪಿಯವರು ನನ್ನನ್ನು ಪಾಕಿಸ್ತಾನಕ್ಕೆ ಕಳಿಸಲಿ, ನಾನು ಯುದ್ಧ ಮಾಡಲು ಸಿದ್ಧ, ದೇಶಕ್ಕಾಗಿ ಪ್ರಾಣತ್ಯಾಗಕ್ಕೂ ಸಿದ್ಧ' ಎಂದು ಗುಡುಗಿದ್ದಾರೆ ಜಮೀರ್. ಅವರ ಧೈರ್ಯ ನೋಡಿ ಇದು ಎಕ್ಸಾಸಿರೇಷನ್ ಅಂತ ಕೆಲವರಿಗೆ ಅನ್ನಿಸಿದರೂ ಇನ್ನು ಕೆಲವರಿಗೆ ಇದು ಕಂಗ್ರಾಜುಲೇಷನ್ಸ್ ಹೇಳಬೇಕಾದ ವಿಷಯ ಅಂತಲೂ ಅನ್ನಿಸಬಹುದು. ಇನ್ನು ಕೆಲವರಿಗೆ ಇದು ಹೈಟ್ಸ್ ಆಫ್ ಕರೇಜ್ ಅಂತಲೂ ಅನ್ನಿಸಬಹುದು. ಆದರೆ ನಿಜಕ್ಕೂ ಹೈಟ್ ವಿಷಯಕ್ಕೆ ಬಂದರೆ ಆರ್ಮಿ ಸೇರಲು ಹೈಟ್ ನೋಡುತ್ತಾರೆ ಸರ್ ಅಂತ ಇದುವರೆಗೆ ಯಾರೂ, ಜಮೀರ್ ಅಹ್ಮದ್ ಅವರಿಗೆ ಕಿವಿಮಾತು ಹೇಳಿದ ಬಗ್ಗೆ ವರದಿಯಾಗಿಲ್ಲ.

ಸಂಪಾದಕರ ಸದ್ಯಶೋಧನೆ

ಕಾಗದ ಕಲೆಯಾಗಿ ಅರಳುವ ಪರಿ

ಜಪಾನಿಯರ ಕೈಗೆ ರದ್ದಿ ಅಥವಾ ಹರಿದು, ಸುಕ್ಕಾದ ಕಾಗದವನ್ನು ಕೊಟ್ಟರೂ ಅವರು ಅದನ್ನೊಂದು ಅದ್ಭುತ ಕಲಾಕೃತಿಯನ್ನಾಗಿ ಮಾಡುತ್ತಾರೆ ಎಂಬ ಮಾತನ್ನು ನಾನು ಅನೇಕ ವರ್ಷಗಳಿಂದ ಕೇಳುತ್ತಾ ಬಂದಿದ್ದೆ. ಜಪಾನಿನಲ್ಲಿದ್ದಾಗ ಇದನ್ನು ಖುದ್ದಾಗಿ ಗಮನಿಸುವ ಅವಕಾಶ ಸಿಕ್ಕಿತು. ಜಪಾನಿಯರು ಒಂದು ಸಾಮಾನ್ಯ ಕಾಗದವನ್ನೂ ಒಂದು ಕಲಾಕೃತಿಯಂತೆ ನೋಡುತ್ತಾರೆ ಎಂಬ ಮಾತಿನಲ್ಲಿ ಉತ್ಪ್ರೇಕ್ಷೆ ಇಲ್ಲ. ಇದನ್ನು ಅವರು ಒರಿಗಾಮಿ ಅಂತ ಕರೆಯುತ್ತಾರೆ. ಅಷ್ಟಕ್ಕೂ ಒರಿಗಾಮಿ ಎಂದರೇನು? ಜಪಾನಿ ಭಾಷೆಯಲ್ಲಿ 'ಒರಿ' ಅಂದರೆ ಮಡಿಕೆ ಮತ್ತು 'ಗಾಮಿ' ಅಂದರೆ ಕಾಗದ ಎಂದರ್ಥ. ಒರಿಗಾಮಿ ಅಂದರೆ ಕಾಗದವನ್ನು ಮಡಿಸಿ ಆಕೃತಿಗಳನ್ನು ಸೃಷ್ಟಿಸುವ ಒಂದು ಸರಳ, ಸುಲಭ, ಸೃಜನಶೀಲ ಕಲೆ. ಇದು ಸುಮಾರು 17ನೇ ಶತಮಾನದಲ್ಲಿ ಜಪಾನಿನಲ್ಲಿ ಕಲೆಯಾಗಿ ಆರಂಭವಾಯಿತು. ಆದರೆ ಇದರ ಬೇರುಗಳು ಚೀನಾದಿಂದಲೂ ಬಂದಿರಬಹುದು ಎಂದೂ ನಂಬಲಾಗಿದೆ. ಇತ್ತೀಚಿನ ದಿನಗಳಲ್ಲಿ ಇದು ಜಾಗತಿಕವಾಗಿ ಜನಪ್ರಿಯವಾಗಿ, ಕೇವಲ ಮಕ್ಕಳ ಆಟವಲ್ಲದೇ ಗಣಿತ, ವಿಜ್ಞಾನ, ವೈದ್ಯಕೀಯ ಮತ್ತು ಆಧುನಿಕ ತಂತ್ರಜ್ಞಾನದಲ್ಲಿಯೂ ಉಪಯೋಗವಾಗುತ್ತಿದೆ. ಆರಂಭದಲ್ಲಿ ಕಾಗದ ಬಹಳ ದುಬಾರಿಯಾಗಿದ್ದುದರಿಂದ, ಒರಿಗಾಮಿಯನ್ನು ಧಾರ್ಮಿಕ ವಿಧಿವಿಧಾನಗಳಲ್ಲಿ ಮಾತ್ರ ಉಪಯೋಗಿಸುತ್ತಿದ್ದರು. ಉದಾಹರಣೆಗೆ, ಶಿಂಟೋ ಧರ್ಮದ ಪೂಜಾ ವಿಧಾನಗಳಲ್ಲಿ ಕಾಗದಗಳನ್ನು ಮಡಿಸಿ ದೇವರ ಅರ್ಪಣೆಗೆ ಬಳಸಲಾಗುತ್ತಿತ್ತು. ಮಧ್ಯಯುಗದಲ್ಲಿ ಒರಿಗಾಮಿ ಜನಸಾಮಾನ್ಯರ ನಡುವೆ ತಲುಪಿತು. ಈ ಕಾಲದಲ್ಲಿ ಕಾಗದ ಹೆಚ್ಚಿನ ಪ್ರಮಾಣದಲ್ಲಿ ಲಭ್ಯವಾಗುತ್ತಿದ್ದರಿಂದ ಇದು ಮಕ್ಕಳ ಆಟ, ಕಲಾತ್ಮಕ ಅಭ್ಯಾಸ ಹಾಗೂ ಉಡುಗೊರೆ ತಯಾರಿಕೆಯಲ್ಲಿ ಬಳಕೆಯಾಗತೊಡಗಿತು. ಒರಿಗಾಮಿ ಕೇವಲ ಕಾಗದ ಮಡಿಸುವ ಕಲೆಯಲ್ಲ. ಇದು ಧೈರ್ಯ, ಶಿಸ್ತು, ಸಹನೆ ಮತ್ತು ತಾಳ್ಮೆಯ ಪಾಠ ಕಲಿಸುವ ಕಲೆಯೂ ಹೌದು. ಜಪಾನಿ ಸಂಸ್ಕೃತಿಯಲ್ಲಿ ಒರಿಗಾಮಿಯನ್ನು ಜೀವನಚಕ್ರದ ಪ್ರತಿಬಿಂಬ ಎಂಬಂತೆ ಪರಿಗಣಿಸಲಾಗಿದೆ. ಅಂದರೆ ಏನೂ ಇಲ್ಲದ ಶೂನ್ಯದಿಂದ (ಸಾದಾ ಕಾಗದ) ಸೃಷ್ಟಿಯ ಅಂತ್ಯವಾಗುವ (ಆಕೃತಿ) ಒಂದು ಪ್ರಕ್ರಿಯೆ ಎಂದು ಭಾವಿಸಲಾಗಿದೆ. ಕಾಗದವನ್ನು ಮಡಿಸುವ ಪ್ರಕ್ರಿಯೆಗಳಲ್ಲಿ ಶ್ರದ್ಧೆ ಮತ್ತು ನಿಖರತೆ ಮುಖ್ಯವಾಗಿವೆ. ಯಾವ ಜೋಡಣೆ ಅಥವಾ ಅಂಟು ವಸ್ತುಗಳನ್ನು ಬಳಸದೆ ಕಲಾತ್ಮಕ ಬಗೆಯನ್ನು ರೂಪಿಸುವುದು ಶುದ್ಧತೆಯ ಸಂಕೇತವಾಗಿದೆ. ಪ್ರತಿ ಮಡಿಕೆಯೂ ಪರಿಣಾಮಕಾರಿ ಆಗಬೇಕು, ಇಲ್ಲದಿದ್ದರೆ ಅಂತಿಮ ಆಕೃತಿಗೆ ಹಾನಿಯಾಗಬಹುದು. ಕಡಿಮೆ ಮಡಿಕೆಗಳಿಂದ ಸರಳ ಆಕೃತಿಗಳನ್ನು ತಯಾರಿಸುವುದರಿಂದ, ಹೆಚ್ಚು ಮಡಿಕೆಗಳು, ತಂತ್ರಜ್ಞಾನ ಆಧಾರಿತ ಮ್ಯಾಥಮೆಟಿಕಲ್ ಮಾದರಿಗಳಿಂದ, ಹಲವು ಕಾಗದದ ತುಂಡುಗಳನ್ನು ಪ್ರತ್ಯೇಕವಾಗಿ ಮಡಿಸಿ, ನಂತರ ಅವುಗಳನ್ನು ಸಂಯೋಜಿಸಿ ಒಂದು ದೊಡ್ಡ ಆಕೃತಿಯನ್ನಾಗಿ ರೂಪಿಸುವ ತನಕ ಒರಿಗಾಮಿಯ ವಿಭಿನ್ನ ಶೈಲಿಗಳು ರೂಪುಗೊಂಡಿವೆ. ಪಿಂಕಿ ಕ್ರೇನ್ ಹೆಸರಿನಲ್ಲಿ ಪ್ರಸಿದ್ಧವಾದ ಸಾಧನೆ ಮಾಡಿದ 'ಸಾಡಾಕೋ ಸಸಾಕಿ' ಎಂಬ ಹಿರೋಷಿಮಾ ಬಾಂಬ್ ಬಾಧಿತ ಬಾಲಕಿ ಸಾವಿರ ಕ್ರೇನ್‌ಗಳ ಕಲಾಕೃತಿ ರಚಿಸಿ ಶಾಂತಿಯ ಸಂದೇಶ ನೀಡಿದ್ದನ್ನು ಮರೆಯುವಂತೆಯೇ ಇಲ್ಲ. ಕಮಲದ ಹೂ, ಗುಲಾಬಿ, ಚೆರ್ರಿ ಬ್ಲಾಸಮ್ ಮುಂತಾದ ಪುಷ್ಪಗಳಿಂದ ಹಿಡಿದು, ಡ್ರ್ಯಾಗನ್, ಎಲೆ, ಕಾಗೆ, ಸಿಂಹ, ಆನೆ, ಒಂಟೆ ಇತ್ಯಾದಿ ಪ್ರಾಣಿಗಳನ್ನು ಕಾಗದದಲ್ಲಿ ಮಾಡುವ ಜಪಾನಿಯರ ಈ ಕಲೆ ಜಗತ್ತಿನಾದ್ಯಂತ ಪ್ರಸಿದ್ಧ. ಇತ್ತೀಚಿನ ವರ್ಷಗಳಲ್ಲಿ ಒರಿಗಾಮಿಯನ್ನು ಹಲವಾರು ವಿಜ್ಞಾನ ಹಾಗೂ ತಂತ್ರಜ್ಞಾನ ಕ್ಷೇತ್ರಗಳಲ್ಲಿ ಉಪಯೋಗಿಸುತ್ತಿದ್ದಾರೆ. ಅಂತರಿಕ್ಷ ತಂತ್ರಜ್ಞಾನದಲ್ಲಿ ನಾಸಾ ಉಪಗ್ರಹಗಳ ಸೌರ ಪ್ಯಾನೆಲ್‌ಗಳನ್ನು ಒರಿಗಾಮಿ ತಂತ್ರಜ್ಞಾನದಿಂದ ಮಡಿಸಿ ಸಾಗಿಸಬಹುದು. ಸ್ಟೆಂಟ್‌ಗಳನ್ನು ಒರಿಗಾಮಿ ತಂತ್ರದಿಂದ ಸಂಕುಚಿತ ಸ್ಥಿತಿಯಲ್ಲಿ ಇಟ್ಟು, ದೇಹದೊಳಗೆ ವಿಸ್ತರಿಸುವ ವೈದ್ಯಕೀಯ ಉಪಕರಣಗಳ ತಯಾರಿಕೆಯಲ್ಲಿ ಪ್ರಾತ್ಯಕ್ಷಿಕೆಗಳಾಗಿ ಬಳಸಲಾಗುತ್ತಿದೆ. ಫೋಲ್ಡಿಂಗ್ ತಂತ್ರಗಳನ್ನು ಬಳಸಿಕೊಂಡು, ರೂಪ ಬದಲಾಯಿಸಬಲ್ಲ ರೋಬೋಟ್ ಯಂತ್ರಗಳ ತಯಾರಿಕೆಯಲ್ಲೂ ಉಪಯೋಗಕ್ಕೆ ಬರುತ್ತಿದೆ. ಒರಿಗಾಮಿ ಮಡಿಕೆಗಳು ಜ್ಯಾಮಿತಿಯ ತತ್ವಗಳನ್ನು ಪ್ರತಿಬಿಂಬಿಸುತ್ತವೆ. ಕೆಲವು ರೀತಿಯಲ್ಲಿ, ಈ ಮಡಿಕೆಗಳು ಗಣಿತದ ಸಮಸ್ಯೆಗಳಿಗೆ ಹೊಸದೊಂದು ದಾರಿಯನ್ನೂ ನೀಡುತ್ತವೆ. ಜಪಾನಿನಲ್ಲಿ ಒರಿಗಾಮಿ ಕಲಿಕೆ ಮಕ್ಕಳ ಶಿಕ್ಷಣದ ಅವಿಭಾಜ್ಯ ಅಂಗವಾಗಿದೆ. ಇದರಿಂದ ಮಕ್ಕಳು ಕೌಶಲ, ಶಿಸ್ತಿನ ಅಭ್ಯಾಸ ಮತ್ತು ಸೃಜನಶೀಲ ಗುಣವನ್ನು ಕಲಿಯುತ್ತಾರೆ. ಜಪಾನಿನ ಈ ಶ್ರೇಷ್ಠ ಕಲಾ ಪರಂಪರೆ ಇಂದು ಜಗತ್ತಿಗೆ ಹೊಸ ಪ್ರೇರಣೆಯಾಗಿದೆ.

ಯೋಗಿಯ ಯೋಗ ನೀರಿನಿಂದ ನೀರಾ ತನಕ

ಮೂರ್ತಿಪೂಜೆ
ಆರ್.ಟಿ.ವಿಠ್ಠಲಮೂರ್ತಿ
vveditoped@gmail.com

ಇತ್ತೀಚೆಗೆ ನಡೆದ ಚನ್ನಪಟ್ಟಣ ಕ್ಷೇತ್ರದ ಉಪಚುನಾವಣೆಯಲ್ಲಿ ಬಂಪರ್ ಗೆಲುವು ಸಾಧಿಸಿದ ಮಾಜಿ ಸಚಿವ ಸಿ.ಪಿ.ಯೋಗೇಶ್ವರ್ ಈಗ ಉದ್ಯಮಿಯ ಗೆಟಪ್ಪು ಧರಿಸುತ್ತಿದ್ದಾರೆ. ಅಂದ ಹಾಗೆ, ಬಿಜೆಪಿಯಿಂದ ಹೊರಬಂದು ಕಾಂಗ್ರೆಸ್ ಹಡಗು ಹತ್ತಿದ ಯೋಗೇಶ್ವರ್, ಚನ್ನಪಟ್ಟಣ ಕ್ಷೇತ್ರದ ಉಪಚುನಾವಣೆಯಲ್ಲಿ ಮಾಜಿ ಸಿಎಂ ಕುಮಾರಸ್ವಾಮಿ ಅವರ ಪುತ್ರ ನಿಖಿಲ್ ಕುಮಾರಸ್ವಾಮಿ ಅವರನ್ನು ಮಣಿಸಿದ್ದರು. ಅವರ ಈ ಗೆಲುವಿನಲ್ಲಿ ಡಿಸಿಎಂ ಡಿ.ಕೆ.ಶಿವಕುಮಾರ್ ಮತ್ತು ಅವರ ಸಹೋದರ ಡಿ.ಕೆ.ಸುರೇಶ್ ಅವರ ಪಾತ್ರ ಇತ್ತಾದರೂ, ಸ್ವತಃ ಯೋಗೇಶ್ವರ್ ಅವರ ವೋಟ್‌ಬ್ಯಾಂಕು ನಿರ್ಣಾಯಕ ಪಾತ್ರ ವಹಿಸಿತ್ತು.

ವಾಸ್ತವವಾಗಿ ಸಿ.ಪಿ.ಯೋಗೇಶ್ವರ್ ಅವರ ಗೆಲುವು ಅವರಿಗಿಂತ ಹೆಚ್ಚಾಗಿ ಕಾಂಗ್ರೆಸ್ ಪಾಳಯದ ಆತ್ಮವಿಶ್ವಾಸವನ್ನು ಹೆಚ್ಚಿಸಿತು ಎಂಬುದೇ ಹೆಚ್ಚು ನಿಜ. ಯಾಕೆಂದರೆ ಲೋಕಸಭಾ ಚುನಾವಣೆಯ ಹೊತ್ತಿಗೆ ಮೇಲೆದ್ದು ನಿಂತ ಬಿಜೆಪಿ-ಜೆಡಿಎಸ್ ಮೈತ್ರಿಕೂಟವು ಕೈ ಪಾಳಯದ 'ಗುಡ್‌ದಾ' ಅಲುಗಾಡುವಂತೆ ಬಾರಿಸಿತ್ತು. ಕಳೆದ ವಿಧಾನಸಭಾ ಚುನಾವಣೆಯ ಬಂಪರ್ ಗೆಲುವು ರಿಪೀಟ್ ಆದರೆ ಕರ್ನಾಟಕದ ಇಪ್ಪತ್ತೆಂಟು ಲೋಕಸಭಾ ಕ್ಷೇತ್ರಗಳ ಪೈಕಿ ಮಿನಿಮಮ್ ಇಪ್ಪತ್ತರಲ್ಲಿ ಗೆಲುವು ಗ್ಯಾರಂಟಿ ಅಂತ ಕಾಂಗ್ರೆಸ್ ನಂಬಿತ್ತು. ಎಲ್ಲಕ್ಕಿಂತ ಮುಖ್ಯವಾಗಿ ಸರಕಾರ ಅಸ್ತಿತ್ವಕ್ಕೆ ಬಂದ ನಂತರ ಜಾರಿಗೊಳಿಸಿದ ಪಂಚ ಗ್ಯಾರಂಟಿ ಯೋಜನೆಗಳು ಜನರ ಮನ ಮುಟ್ಟಿವೆ. ಹೀಗಾಗಿ ತನ್ನ ದಿಗ್ವಿಜಯಕ್ಕೆ ಅಡ್ಡಿಯೇ ಇಲ್ಲ ಅಂತ ಅದು ಭಾವಿಸಿತ್ತು.

ಆದರೆ ಲೋಕಸಭಾ ಚುನಾವಣೆಯ ಫಲಿತಾಂಶ ಕಾಂಗ್ರೆಸ್ಸಿನ ನಿರೀಕ್ಷೆಗಳನ್ನು ಹುಸಿಗೊಳಿಸಿದ್ದಷ್ಟೇ ಅಲ್ಲ, ಬಿಜೆಪಿ-ಜೆಡಿಎಸ್ ಮೈತ್ರಿಕೂಟಕ್ಕೆ ಹತ್ತೊಂಬತ್ತು ಕ್ಷೇತ್ರಗಳಲ್ಲಿ ಗೆಲುವು ದಕ್ಕಿಸಿಕೊಟ್ಟಿತ್ತು. ಯಾವಾಗ ತನ್ನ ನಿರೀಕ್ಷೆ ತಲೆಕೆಳಗಾಗಿ ಬಿಜೆಪಿ-ಜೆಡಿಎಸ್ ಮೈತ್ರಿಕೂಟ 'ಡೆಡ್ಲಿ ಪವರ್' ಆಗಿ ತಲೆ ಎತ್ತಿತೋ, ಆಗ ಸಹಜವಾಗಿಯೇ ಕಾಂಗ್ರೆಸ್ ಪಾಳಯದಲ್ಲಿ ಆತಂಕ ಶುರುವಾಗಿದೆ. ಇದಕ್ಕೆ ಪೂರಕವಾದ ಮತ್ತೊಂದು ಕಾರಣವೆಂದರೆ ಕಾಂಗ್ರೆಸ್ ವಿರೋಧಿ ಮತಗಳನ್ನು ಈ ಮೈತ್ರಿಕೂಟ ಕನ್ಸಾಲಿಡೇಟ್ ಮಾಡಲು ಶಕ್ತವಾಗಿದೆ ಎಂಬುದು. ಯಾವಾಗ ಇದು ಮನದಟ್ಟಾಯಿತೋ, ಆಗ ಕಾಂಗ್ರೆಸ್ ಪಾಳಯ, ಮೈತ್ರಿಕೂಟದ ವಿರುದ್ಧ ಬಳಸಬಹುದಾದ ಅಸ್ತ್ರಗಳ ಕಡೆ ಕಣ್ಣು ಹಾಯಿಸತೊಡಗಿತು. ಇಂಥ ಸಂದರ್ಭದಲ್ಲೇ ಅದಕ್ಕೆ ಕಂಡದ್ದು 'ಯೋಗಾಸ್ತ್ರ' ಮತ್ತು ಇದು ಕಾಣುವ ವೇಳೆಗೆ ಚನ್ನಪಟ್ಟಣ ಸೇರಿದಂತೆ ಕರ್ನಾಟಕದ ಮೂರು ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆ ಘೋಷಣೆಯಾಗಿತ್ತು. ಅಂದ ಹಾಗೆ, ಈ ಸಂದರ್ಭದಲ್ಲಿ ಚನ್ನಪಟ್ಟಣ ಕ್ಷೇತ್ರದಿಂದ ಮೈತ್ರಿಕೂಟದ ಅಭ್ಯರ್ಥಿಯಾಗಿ ಸಿ.ಪಿ.ಯೋಗೇಶ್ವರ್ ಕಣಕ್ಕಿಳಿಯಲಿ ಅಂತ ಜೆಡಿಎಸ್ ನಾಯಕ ಎಚ್.ಡಿ.ಕುಮಾರಸ್ವಾಮಿ ಹೇಳಿದ್ದರೆ ಆಟವೇ ಬದಲಾಗುತ್ತಿತ್ತು. ಆದರೆ ಯೋಗೇಶ್ವರ್ ಅವರಿಗೆ ಟಿಕೆಟ್ ಕೊಟ್ಟರೆ ತಮ್ಮ ಪಕ್ಷದ ನೆಲೆ ಅಭದ್ರವಾಗಬಹುದು ಎಂಬ ಲೆಕ್ಕಾಚಾರಕ್ಕಿಳಿದ ಕುಮಾರಸ್ವಾಮಿ ತಮ್ಮ ಪುತ್ರ ನಿಖಿಲ್ ಅವರಿಗೆ ಟಿಕೆಟ್ ನೀಡುವ ಲೆಕ್ಕಾಚಾರಕ್ಕೆ ಬಂದಿದ್ದರು. ಯಾವಾಗ ಇದು ಕನ್‌ಫರ್ಮ್ ಆಯಿತೋ, ಆಗ ಯೋಗೇಶ್ವರ್ ಕಾಂಗ್ರೆಸ್ ಕಡೆ ತಿರುಗಿದರು. ಮತ್ತದನ್ನೇ ನಿರೀಕ್ಷಿಸುತ್ತಿದ್ದ ಸಿದ್ದು, ಡಿಕೆಶಿ ಕೂಡಾ ಸಟಕ್ಕಂತ ಕೈ ನೀಡಿ ಯೋಗೇಶ್ವರ್ ಅವರನ್ನು ಕಾಂಗ್ರೆಸ್ ಹಡಗಿಗೆ ಹತ್ತಿಸಿಕೊಂಡರು. ಫೈನಲಿ, ಉಪಚುನಾವಣೆ ನಡೆದಾಗ ಚನ್ನಪಟ್ಟಣದ ಮತಬ್ಯಾಂಕ್ ಸಾಲಿಡ್ಡಾಗಿ ಯೋಗೇಶ್ವರ್ ಅವರ ಕೈಹಿಡಿಯಿತು. ಆ ಮೂಲಕ ದೈತ್ಯನಂತೆ ಮೇಲೆದ್ದು ನಿಂತಿದ್ದ ಬಿಜೆಪಿ-ಜೆಡಿಎಸ್ ಮೈತ್ರಿಕೂಟ ಬಕಾಬರಲೆ ಮಲಗಿ ಕೈ ಪಾಳಯದ ಆತ್ಮವಿಶ್ವಾಸ ಮರುಕಳಿಸುವಂತೆ ಮಾಡಿತು.

ಯೋಗಿ ಮಂತ್ರಿ ಆಗದಿದ್ದರೆ ಆಪತ್ತು

ಹೀಗೆ ಚನ್ನಪಟ್ಟಣದಲ್ಲಿ ಯೋಗೇಶ್ವರ್ ಗೆದ್ದು ಕಾಂಗ್ರೆಸ್ ಪಾಲಿಗೆ ಟಾನಿಕ್ ನೀಡಿದ್ದೇನೋ ಆಯಿತು. ಆದರೆ ಮುಂದೇನು? ಎಂಬ ಪ್ರಶ್ನೆ ಎದ್ದಾಗ ಕೈ ಪಾಳಯದ ಕೆಲವರು ಅನುಮಾನದ ಮಾತನಾಡಿದ್ದರು. ''ಇವತ್ತೇನೋ ಯೋಗೇಶ್ವರ್ ಗೆದ್ದಿದ್ದಾಯಿತು. ಆದರೆ ಇನ್ನು ಆರು ತಿಂಗಳಲ್ಲಿ ಅವರು ಮಂತ್ರಿಯಾಗದಿದ್ದರೆ ಆಟ ಶುರುವಾಗುತ್ತದೆ. ಯೋಗೇಶ್ವರ್ ಅವರಿಗೆ ಸುಮ್ಮನೆ ಕುಳಿತು ಅಭ್ಯಾಸವಿಲ್ಲ. ಎಷ್ಟೇ ಆದರೂ ಈ ಹಿಂದೆ ಕಾಂಗ್ರೆಸ್-ಜೆಡಿಎಸ್ ಸರಕಾರವನ್ನು ಉರುಳಿಸಲು ಯಡಿಯೂರಪ್ಪ ಅವರ ಜತೆಗಿದ್ದ 'ಮಾಸ್ಟರ್ ಮೈಂಡ್' ಅವರೇ.ಹೀಗಿದ್ದಾಗ ಕಾಂಗ್ರೆಸ್‌ನವರು ಅವರನ್ನು ಕರೆದು ಕೆಲಸವಿಲ್ಲದೆ ಕೂರಿಸಿದರೆ ಸುಮ್ಮನಿರುತ್ತಾರಾ? ಡೆಫಿನೆಟ್ಲಿ ಭಸ್ಮಾಸುರ ಆಗುತ್ತಾರೆ'' ಎಂದಿದ್ದರು.

ಆದರೆ ಉಪಚುನಾವಣೆ ಮುಗಿದ ಕೆಲವೇ ದಿನಗಳಲ್ಲಿ ಯೋಗೇಶ್ವರ್ ಫುಲ್ ಕೂಲಾದರು. ವಿಧಾನಸಭೆಯ ಕಾರಿಡಾರುಗಳಲ್ಲೇ ಆಗಲಿ, ಶಾಸನಸಭೆಯ ಮೊಗಸಾಲೆಯಲ್ಲಿಯೇ ಆಗಲಿ ಅವರು ಕಾಣಿಸಲಿಲ್ಲ. ಒಬ್ಬ ಶಾಸಕ ಆಡಳಿತ ಕೇಂದ್ರದಲ್ಲಿ ಅಪರೂಪಕ್ಕೂ ಕಾಣುತ್ತಿಲ್ಲ ಎಂದರೆ ಏನರ್ಥ? ಎಂಬ ಅಚ್ಚರಿ ಶುರುವಾಗುವ ಕಾಲಕ್ಕೇ ಅವರು ಹೊಸ ಗೆಟಪ್ಪಿನಲ್ಲಿ ಕಾಣಿಸತೊಡಗಿದ್ದಾರೆ. ಅರ್ಥಾತ್, ಅವರೀಗ ಸರಕಾರದಿಂದ ಅನುದಾನ ತರಲು ಬಡಿದಾಡುವ ಶಾಸಕ ಎಂಬುದಕ್ಕಿಂತ ಮುಖ್ಯವಾಗಿ, ತಾವು ಪ್ರತಿನಿಧಿಸುತ್ತಿರುವ ಚನ್ನಪಟ್ಟಣ ಕ್ಷೇತ್ರದ ಆರ್ಥಿಕ ನಕಾಶೆಯನ್ನು ಬದಲಿಸಲು, ಆ ಮೂಲಕ ಕ್ಷೇತ್ರದ ರೈತರಿಗೆ ಶಕ್ತಿ ತುಂಬಲು ಉದ್ಯಮಿಯ ಗೆಟಪ್ಪು ಧರಿಸುತ್ತಿದ್ದಾರೆ. ಇದಕ್ಕಾಗಿ ದೇಶದಲ್ಲೇ ವಿಶಿಷ್ಟವಾದ ನೀರಾ ಫ್ಯಾಕ್ಟರಿಯನ್ನು ಸ್ಥಾಪಿಸುವುದು ಯೋಗೇಶ್ವರ್ ಅವರ ಲೇಟೆಸ್ಟು ಪ್ಲಾನ್.

ನೀರಿನಿಂದ ನೀರಾ ತನಕ

ಅಂದ ಹಾಗೆ, ರಾಜಕಾರಣಿಯಾಗಿ ಯೋಗೇಶ್ವರ್ ಏನೇ ವಿವಾದಗಳಿಗೆ ಸಿಲುಕಲಿ, ಆದರೆ ಒಂದು ಕ್ಷೇತ್ರದ ಜನಪ್ರತಿನಿಧಿಯಾಗಿ ಯೋಗಿ ರೋಲ್ ಮಾಡೆಲ್. ಈ ಹಿಂದೆ ಚನ್ನಪಟ್ಟಣ ಕ್ಷೇತ್ರದ ಶಾಸಕರಾಗಿದ್ದ ಕಾಲದಲ್ಲಿ ಅವರು ಮಾಡಿದ ಬಹುದೊಡ್ಡ ಕೆಲಸವೆಂದರೆ ಕ್ಷೇತ್ರದಾದ್ಯಂತ ಇರುವ ಕೆರೆಗಳನ್ನು ದುರಸ್ತಿಗೊಳಿಸಿ ನೀರು ತುಂಬಿಸಿದ್ದು. ಸದಾಕಾಲ ಬರಗಾಲದಿಂದ ತತ್ತರಿಸುತ್ತಾ, ನೀರಿಗಾಗಿ ಹವಣಿಸುತ್ತಿದ್ದ ಚನ್ನಪಟ್ಟಣ ಕ್ಷೇತ್ರ, ಯೋಗೇಶ್ವರ್ ಅವರ ಕೆರೆ ತುಂಬಿಸುವ ಕೆಲಸದಿಂದ ಮೈ ಕೊಡವಿ ಮೇಲೆದ್ದು ನಿಂತಿತು. ಅಷ್ಟೇ ಅಲ್ಲ, ಕ್ಷೇತ್ರದ ಮೂಲೆ ಮೂಲೆಗೂ ತಲುಪಿದ ನೀರಾವರಿಯಿಂದ ನಳನಳಿಸುತ್ತಾ ತನ್ನ ಆರ್ಥಿಕ ಸ್ಥಿತಿಯನ್ನು ಟಾಪ್ ಲೆವೆಲ್ಲಿಗೆ ಏರಿಸಿಕೊಂಡಿತು. ಇವತ್ತು ಚನ್ನಪಟ್ಟಣ ಕ್ಷೇತ್ರದ ಜನ ಯೋಗೇಶ್ವರ್ ಅವರನ್ನು ಭಗೀರಥ ಅಂತ ಕರೆಯುವುದು ಇದೇ ಕಾರಣಕ್ಕಾಗಿ.

ಅಂದ ಹಾಗೆ, ಈ ಹಿಂದೆ ಇಂಥ ಸಾಧನೆ ಮಾಡಿದ್ದೇನೋ ಆಯಿತು. ಆದರೆ ಈಗ ಮಾಡುವುದೇನು? ರಾಜಕಾರಣದ ಚದುರಂಗಕ್ಕೆ ಕೈ ಹಾಕಿ ಕಾಯಿಗಳನ್ನು ನಡೆಸಬೇಕೆಂದರೆ ಜಿಲ್ಲೆಯ ರಾಜಕಾರಣದಲ್ಲಿ ಇವತ್ತು 'ದಿ ಗ್ರೇಟ್ ಬ್ರದರ್ಸ್ ಡಿಕೆಶಿ ಮತ್ತು ಡಿಕೆಸು' ಅವರದ್ದೇ ಹವಾ. ಮೈತ್ರಿಕೂಟದ ಶಾಸಕರಾಗಿದ್ದರೆ ಈ ಗ್ರೇಟ್ ಬ್ರದರ್ಸ್ ಎದುರು ಆಟ ಆಡಬಹುದಿತ್ತು. ಆದರೆ ಗೆದ್ದಿರುವುದೇ ಕಾಂಗ್ರೆಸ್ ಪಕ್ಷದಿಂದ. ಸಾಲದೆಂಬಂತೆ ಮೈತ್ರಿಕೂಟ ತೊರೆದು ಬಂದಾಗ ಸ್ನೇಹದ ಕೈ ಚಾಚಿದ್ದೇ ಗ್ರೇಟ್ ಬ್ರದರ್ಸ್. ಹೀಗಿರುವಾಗ ತಾವು ಮಾಡುವುದೇನು? ಅಂತ ಯೋಗೇಶ್ವರ್ ಯೋಚಿಸಿದ್ದಾರೆ. ಅದರ ಬೆನ್ನಲ್ಲೇ ಕ್ಷೇತ್ರದ ಮತದಾರರ ಋಣ ತೀರಿಸಲು ಬೃಹತ್ ನೀರಾ ಫ್ಯಾಕ್ಟರಿಯ ಸ್ಥಾಪನೆಗೆ ಸಜ್ಜಾಗಿದ್ದಾರೆ.

ಇಲ್ಲಿ ಏಳಲಿದೆ ಯೋಗಿಯ ಫ್ಯಾಕ್ಟರಿ

ಹೀಗೆ ನೀರಾ ಫ್ಯಾಕ್ಟರಿ ಸ್ಥಾಪಿಸಲು ಯೋಗೇಶ್ವರ್ ಅವರ ನೀಲನಕ್ಷೆಯೇನೋ ತಯಾರಾಗಿದೆ. ಚನ್ನಪಟ್ಟಣದ ಕಾಫಿ ಡೇ ಹಿಂಭಾಗದಲ್ಲಿರುವ ಐವತ್ತು ಎಕರೆ ಭೂಮಿಯಲ್ಲಿ ಈ ಫ್ಯಾಕ್ಟರಿ ಕಟ್ಟಬೇಕು ಎಂಬುದು ಯೋಗಿ ಲೆಕ್ಕಾಚಾರ. ಆದರೆ ಇದರ ಸ್ಥಾಪನೆಗೂ ಮುನ್ನ ನೀರಾ ತಯಾರಿಕೆಯಲ್ಲಿ ಇರುವ ತಾಂತ್ರಿಕ ತೊಡಕುಗಳನ್ನು ನಿವಾರಿಸಿಕೊಳ್ಳುವ ಕಸರತ್ತಿಗೆ ಅವರು ಇಳಿದಿದ್ದಾರೆ.

ಅಂದ ಹಾಗೆ, ಚನ್ನಪಟ್ಟಣ ಕ್ಷೇತ್ರದ ವ್ಯಾಪ್ತಿಯಲ್ಲಿರುವ ರೈತರಿಂದ ಪ್ರತಿದಿನ ಮೂರು ಲಕ್ಷ ಲೀಟರುಗಳಷ್ಟು ನೀರಾ ಸಂಗ್ರಹಿಸಬಹುದು. ಆದರೆ ಇದನ್ನು ಸಂಸ್ಕರಿಸುವ ವಿಧಾನ ಅತ್ಯುಚ್ಚ ಮಟ್ಟದಲ್ಲಿರಬೇಕು. ಇಲ್ಲದಿದ್ದರೆ ತೆಂಗಿನ ಮರದಿಂದ ಇಳಿಸುವ ನೀರಾ ಕೆಲವೇ ಹೊತ್ತಿನಲ್ಲಿ ಹೆಂಡವಾಗಿ ಪರಿವರ್ತನೆಯಾಗುತ್ತದೆ. ಹೀಗಾಗಿ ಇಳಿಸಿದ ನೀರಾ ಮೈನಸ್ ಐದು ಡಿಗ್ರಿ ಟೆಂಪರೇಚರಿನಲ್ಲೇ ಇರುವಂತೆ ನೋಡಿಕೊಳ್ಳಬೇಕು ಮತ್ತು ಅದೇ ಸ್ಥಿತಿಯಲ್ಲಿ ಗ್ರಾಹಕರಿಗೆ ಪೂರೈಕೆ ಆಗಬೇಕು. ವಸ್ತುಸ್ಥಿತಿ ಎಂದರೆ ನೀರಾ ಅನ್ನು ಜನರ ಕೈಗೆ ತಲುಪಿಸಲು ಈ ಹಿಂದೆ ಹಲವರು ಯತ್ನಿಸಿದ್ದಾರೆ. ಇಂಥ ಪ್ರಯತ್ನ ಯಶಸ್ವಿಯಾದರೆ ಕೋಕಾಕೋಲಾ, ಪೆಪ್ಸಿಯಂಥ ಪಾನೀಯಗಳಿಗೆ ಸಡ್ಡು ಹೊಡೆಯಲು ಸಾಧ್ಯವಾಗುತ್ತದೆ. ಆ ಮೂಲಕ ರೈತರ ಆರ್ಥಿಕ ಸ್ಥಿತಿಯನ್ನು ಬಲಗೊಳಿಸಿದಂತಾಗುತ್ತದೆ ಎಂದು ಲೆಕ್ಕ ಹಾಕಿದ್ದಾರೆ.

ಆದರೆ ಯಾರೆಷ್ಟೇ ಪ್ರಯತ್ನಿಸಿದರೂ ನೀರಾ ಹೆಂಡವಾಗಿ ಬದಲಾಗುವ ಪ್ರಕ್ರಿಯೆಯನ್ನು ತಡೆಯಲು ಸಾಧ್ಯವಾಗುತ್ತಿಲ್ಲ. ಹೀಗಾಗಿ ತಮ್ಮ ಕನಸಿನ ನೀರಾ ಫ್ಯಾಕ್ಟರಿಯನ್ನು ಸ್ಥಾಪಿಸುವ ಮುನ್ನ ಯೋಗೇಶ್ವರ್ ಜಗತ್ತಿನ ವಿವಿಧ ದೇಶಗಳಿಗೆ ಹೋಗಿ ಬರುತ್ತಿದ್ದಾರೆ. ಈ ದಿಸೆಯಲ್ಲಿ ಜಪಾನ್ ಪ್ರವಾಸ ಮುಗಿಸಿ ಬಂದಿರುವ ಅವರು ಸದ್ಯದಲ್ಲೇ ಫಿಲಿಪೈನ್ಸ್, ವಿಯೆಟ್ನಾಮ್, ಥಾಯ್ಲೆಂಡ್ ಕಡೆ ಹೋಗುತ್ತಿದ್ದಾರೆ. ಕಾರಣ? ಇವತ್ತು ಜಗತ್ತಿನಲ್ಲಿ ಅತ್ಯಂತ ಹೆಚ್ಚು ಪ್ರಮಾಣದಲ್ಲಿ ನೀರಾ ಇಳಿಸುತ್ತಿರುವ ರಾಷ್ಟ್ರಗಳೆಂದರೆ ಈ ಮೂರೇ. ಅಲ್ಲಿ ಇಳಿಸಲಾಗುತ್ತಿರುವ ನೀರಾದಿಂದ ಸ್ಥಳೀಯ ರೈತರು ಬಂಪರ್ ಲಾಭ ಪಡೆಯುತ್ತಿದ್ದಾರೆ. ಆದರೆ ಇಷ್ಟೆಲ್ಲದರ ನಡುವೆ ಅಲ್ಲಿ ಇಳಿಕೆಯಾಗುತ್ತಿರುವ ಬಹುತೇಕ ನೀರಾ, ರಮ್ ಆಗುತ್ತಿದೆ. ಆದರೆ ಇಳಿಸಿದ ನೀರಾ ನೀರಾ ಆಗಿಯೇ ಉಳಿದು ಗ್ರಾಹಕರಿಗೆ ಪೌಷ್ಟಿಕಾಂಶ ಒದಗಿಸುವ ಪೇಯವಾಗಬೇಕು ಎಂಬುದು ಯೋಗಿಯ ಬಯಕೆ. ತಮ್ಮ ಈ ಬಯಕೆಗೆ ಪೂರಕವಾಗಿ ಅವರು ಮೈಸೂರು ಮತ್ತು ಕಾಸರಗೋಡಿನಲ್ಲಿರುವ ಕೇಂದ್ರ ಸರಕಾರದ ಆಹಾರ ಸಂಸ್ಕರಣಾ ಘಟಕಗಳ ಜತೆ ಒಪ್ಪಂದ ಮಾಡಿಕೊಳ್ಳುತ್ತಿದ್ದಾರೆ.

ಅವರ ಈ ಪ್ರಯೋಗ ಯಶಸ್ವಿಯಾಗಿ ನೀರಾ ಫ್ಯಾಕ್ಟರಿ ತಲೆ ಎತ್ತಿದರೆ, ಒಂದು ತೆಂಗಿನ ಮರದಿಂದ ವಾರ್ಷಿಕ ಎರಡು ಸಾವಿರ ರುಪಾಯಿಗಳಷ್ಟು ಆದಾಯ ಪಡೆಯುತ್ತಿರುವ ರೈತರು, ಐದು ಸಾವಿರ ರುಪಾಯಿಗಳನ್ನು ಪಡೆಯುತ್ತಾರೆ ಮತ್ತು ಆ ಮೂಲಕ ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ಆರ್ಥಿಕ ನಕಾಶೆಯೇ ಬದಲಾಗುತ್ತದೆ ಎಂಬುದು ಯೋಗಿಯ ಲೆಕ್ಕಾಚಾರ. ಹೀಗೆ ತಮ್ಮ ಲೆಕ್ಕಾಚಾರವನ್ನು ಬದಲಿಸಿರುವ ಅವರು ನಿತ್ಯದ ರಾಜಕೀಯ ಜಂಜಡಗಳಿಗೆ ತಪ್ಪಿಯೂ ಕೈ ಹಾಕುತ್ತಿಲ್ಲ.

ಲಾಸ್ಟ್ ಸಿಪ್: ಇನ್ನು ಉದ್ಯಮಿಯ ಗೆಟಪ್ಪು ಧರಿಸುತ್ತಿರುವ ಯೋಗಿಯನ್ನು ಬಿಜೆಪಿಗೆ ಮರಳಿ ಕರೆತರುವ ಯತ್ನವೂ ಜಾರಿಯಲ್ಲಿದೆ. ಹಾಗೆ ನೋಡಿದರೆ, ಬಿಜೆಪಿಯಲ್ಲಿದ್ದಾಗ ಯೋಗಿ ಪ್ರಳಯಾಂತಕ ಪ್ರಯೋಗಗಳನ್ನು ಮಾಡಿದವರು. 2019ರಲ್ಲಿ ಕಾಂಗ್ರೆಸ್-ಜೆಡಿಎಸ್ ಮೈತ್ರಿಕೂಟ ಸರಕಾರ ಬಿತ್ತಲ್ಲ? ಇದನ್ನು ಉರುಳಿಸಿದ ಮೂಲವೇ ಯೋಗಿ. ಅವರು ಹೋಗಿ ಯಡಿಯೂರಪ್ಪ ಮತ್ತವರ ಆಪ್ತರಿಗೆ ಈ ಸರಕಾರವನ್ನು ಬೀಳಿಸಬಹುದು ಅಂತ ವಿವರಿಸಿದಾಗ, 'ಓ! ಭ್ರಮೆ' ಅಂದಿದ್ದರಂತೆ ಯಡಿಯೂರಪ್ಪ ಆಪ್ತರು. ಈ ಕೆಲಸಕ್ಕೆ ಕೈ ಹಾಕಿದರೆ ಹಣ ಕಳೆದುಕೊಳ್ಳಬಹುದೇ ಹೊರತು ಬೇರೇನೂ ಆಗಲ್ಲ ಅಂತ ಅವರು ಹೇಳಿದಾಗ, ಇದು ಹೇಗೆ ಸಾಧ್ಯ? ಅಂತ ಯೋಗಿ ವಿವರಿಸಿ ಬೆಚ್ಚಿ ಬೀಳಿಸಿದ್ದರು. ಮುಂದಿನದು ಇತಿಹಾಸ. ಇಂಥ ಯೋಗಿ ಈಗ ಕಾಂಗ್ರೆಸ್ಸಿನಲ್ಲಿದ್ದರೂ ಮುಂದೊಂದು ದಿನ ಅವರನ್ನು ಮರಳಿ ಮನೆಗೆ ಕರೆತರುವುದು ಕೆಲ ಬಿಜೆಪಿ ನಾಯಕರ ಬಯಕೆ. ಮುಂದೇನಾಗುತ್ತದೋ?

ಭೀಮವ್ವಾ, ಬೊಂಬೆ ಹೇಳುತ್ತೈತೆ ನೀನೇ ರಾಜಕುಮಾರಿ!

ಗುಣಗಾನ
ರವೀ ಸಜಂಗದ್ದೆ
vveditoped@gmail.com

ಅಂದು ಏಪ್ರಿಲ್ 28ರ ಸೋಮವಾರ. ರಾಷ್ಟ್ರಪತಿ ಭವನದಲ್ಲಿ 2025ನೇ ಸಾಲಿನ ನಾಗರಿಕ ಪುರಸ್ಕಾರ ಸಮಾರಂಭ ಆಯೋಜನೆಗೊಂಡಿತ್ತು. ಸಭಾಂಗಣ ಕಿಕ್ಕಿರಿದು ತುಂಬಿತ್ತು. 'ಭೀಮವ್ವ ದೊಡ್ಡ ಬಾಳಪ್ಪ ಶಿಳ್ಳೇಕ್ಯಾತರ' ಎಂಬ ಹೆಸರನ್ನು ಉದ್ಘೋಷಕರು ಕರೆದಾಗ, ಸಣ್ಣ ಸಣ್ಣ ಹೆಜ್ಜೆ ಇಡುತ್ತಾ ಪ್ರಶಸ್ತಿ ಸ್ವೀಕರಿಸಲು ಬಂದ ಭೀಮವ್ವ ಅಂದಿನ ಆಕರ್ಷಣೆಯ ಕೇಂದ್ರಬಿಂದು! ಸಭಾಂಗಣದ ಕೆಂಪುಹಾಸಿನ ಬಳಿ ತಲುಪಿದಾಗ ಆಕೆ ಮೊದಲು ಅಲ್ಲೇ ಕುಳಿತಿದ್ದ ಪ್ರಧಾನಿ ನರೇಂದ್ರ ಮೋದಿಯವರಿಗೆ ಕೃತಜ್ಞತಾಪೂರ್ವಕವಾಗಿ ನಮಸ್ಕರಿಸಿದರು. ವಯಸ್ಸಿನ ಕಾರಣದಿಂದಾಗಿ ಭೀಮವ್ವ ನಡೆಯಲು ತ್ರಾಸಪಡುತ್ತಿರುವುದನ್ನು ಗಮನಿಸಿದ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಶಿಷ್ಟಾಚಾರವನ್ನು ಬದಿಗೊತ್ತಿ ವೇದಿಕೆಯಿಂದ ಕೆಳಗಿಳಿದು ಭೀಮವ್ವ ಇದ್ದಲ್ಲಿಗೇ ಆಗಮಿಸಿ 'ಪದ್ಮಶ್ರೀ' ಪುರಸ್ಕಾರವನ್ನು ನೀಡಿ ಆಕೆಯನ್ನು ಗೌರವಿಸಿ ವಂದಿಸಿದಾಗ, ನೆರೆದ ಎಲ್ಲರಿಂದಲೂ ಮುಗಿಲು ಮುಟ್ಟುವ ಕರತಾಡನ. ಅಲ್ಲಿ ನೆರೆದಿದ್ದು ಆ ಕ್ಷಣಗಳನ್ನು ನೇರವಾಗಿ ಕಣ್ತುಂಬಿಕೊಂಡ ಮತ್ತು ಆಮೇಲೆ ಆ ವಿಡಿಯೋ ತುಣುಕು ವೀಕ್ಷಿಸಿದ ಹಲವರ ಕಣ್ಣುಗಳಲ್ಲಿ ಅವರಿಗೇ ಅರಿವಿಲ್ಲದಂತೆ ತುಂಬಿಕೊಂಡಿತ್ತು ಆನಂದಬಾಷ್ಪ! ಅದು ತಮ್ಮ ಮನೆಯ ಹಿರಿಯಜ್ಜಿಗೇ ಪ್ರಶಸ್ತಿ ಬಂದಷ್ಟು ಸಂತಸ-ಸಂಭ್ರಮ-ಆಪ್ಯಾಯತೆಯ ಕ್ಷಣ. ಇಂಥ ವ್ಯಕ್ತಿಗಳು ಮತ್ತು ಕ್ಷಣಗಳೇ ನಾಗರಿಕ ಪುರಸ್ಕಾರಗಳ ಹಾಗೂ ಅವುಗಳನ್ನು ಪ್ರದಾನಿಸುವ ಸಮಾರಂಭಗಳ ಮೌಲ್ಯವನ್ನು ಹೆಚ್ಚಿಸಿರುವುದು ಎಂದರೆ ಅತಿಶಯೋಕ್ತಿ ಆಗಲಾರದು.

2014ರಲ್ಲಿ ಕೇಂದ್ರದಲ್ಲಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ ಬಿಜೆಪಿ ಸರಕಾರ ಅಸ್ತಿತ್ವಕ್ಕೆ ಬಂದ ಬಳಿಕ ಹಲವಾರು ಸುಧಾರಣೆಗಳು, ಅಭಿವೃದ್ಧಿ ಕಾರ್ಯಗಳು ಆಗಿರುವುದು, ಜನಸ್ನೇಹಿ ನೀತಿಗಳು ಜಾರಿ ಆಗಿರುವುದು ಸರ್ವವಿದಿತ. ಇಂಥ ಅದೆಷ್ಟೋ ಸಾಧನೆ-ಸತ್ಕಾರ್ಯಗಳಲ್ಲಿ ಜನರ ಮನಸ್ಸಿಗೆ ಮುದ ಮತ್ತು ನೆಮ್ಮದಿ ನೀಡಿದ ಸಂಗತಿಯೆಂದರೆ 'ಪದ್ಮ ಪ್ರಶಸ್ತಿ'ಗಳಿಗೆ ಆಯ್ಕೆಮಾಡುವಾಗ ಅನುಸರಿಸಲಾಗುವ ಪರಿಪಾಠ. ದೇಶದ ಮೂಲೆ ಮೂಲೆಗಳಿಂದ ಹೆಕ್ಕಿ ತೆಗೆದ ಅಮೂಲ್ಯ ರತ್ನಗಳ ಇಂಥ ಪಟ್ಟಿಯೇ ನಿಬ್ಬೆರಗಾಗಿಸುವಂಥದ್ದು. ನಿಜಾರ್ಥದಲ್ಲಿ ಪದ್ಮ ಪ್ರಶಸ್ತಿಗಳ ಗೌರವ ಹೆಚ್ಚಿಸಿದ ಕೀರ್ತಿ ಕೇಂದ್ರ ಸರಕಾರಕ್ಕೆ ಮತ್ತು ಹೀಗೆ ಆಯ್ಕೆಗೊಂಡ ಅಮೂಲ್ಯ ರತ್ನಗಳಿಗೆ ಸಲ್ಲುತ್ತದೆ.

2015ರಿಂದೀಚೆಗೆ 'ಪದ್ಮಶ್ರೀ' ಪುರಸ್ಕೃತರಾದ ಕರ್ನಾಟಕದ ಎಲೆಮರೆಯ ಕಾಯಿಗಳ ಬಗ್ಗೆ ಒಮ್ಮೆ ಕಣ್ಣು ಹಾಯಿಸೋಣ. ಹರಿಯುವ ತೊರೆ-ನದಿಯ ನೀರಿನ ಮೇಲಿಂದ ಜನರಿಗೆ ಓಡಾಡಲು ಅನುಕೂಲ ಮಾಡಿ, ದೇಶಾದ್ಯಂತ 125ಕ್ಕೂ ಹೆಚ್ಚಿನ ತೂಗುಸೇತುವೆ ನಿರ್ಮಿಸಿದ 'ತೂಗು ಸೇತುವೆಗಳ ಸರದಾರ' ಗಿರೀಶ್ ಭಾರದ್ವಾಜ್; ಬಸ್ ನಿಲ್ದಾಣದಲ್ಲಿ ಕಿತ್ತಳೆ ಹಣ್ಣು ಮಾರಿ ಬಂದ ದುಡ್ಡಿನಿಂದ ತನ್ನೂರಿಗೆ ಶಾಲೆ ತರಲು ಹೋರಾಡಿ ಯಶಸ್ವಿಯಾದ 'ಅಕ್ಷರಸಂತ' ಹರೇಕಳ ಹಾಜಬ್ಬ; ತನ್ನ ಕೃಷಿಭೂಮಿಗೆ ಮತ್ತು ದೈನಂದಿನ ಉಪಯೋಗಕ್ಕೆ, ತಾನೇ ದುಡಿದು ಸುರಂಗ ಕೊರೆದು ನೀರುಪಡೆದು, ಬೋಳುಗುಡ್ಡೆಯನ್ನು ನಂದನವನ ಮಾಡಿದ 'ಸಾಹಸಿ ಕೃಷಿಕ' ಅಮೈ ಮಹಾಲಿಂಗ ನಾಯ್ಕ; ತನ್ನ ಪಾಲಿನ ಕೆಲವೇ ಸೆಂಟ್ಸ್ ಜಾಗದಲ್ಲಿ 650ಕ್ಕೂ ಹೆಚ್ಚಿನ ಅಪರೂಪದ ಭತ್ತದ ತಳಿಗಳನ್ನು ಪ್ರೀತಿಯಿಂದ ಬೆಳೆದು ಸಂರಕ್ಷಿಸುತ್ತಿರುವ 'ಬತ್ತದ ಚಿಲುಮೆಯ ಕೃಷಿಕ' ಕಾಸರಗೋಡು ಕನ್ನಡಿಗ ಸತ್ಯನಾರಾಯಣ ಬೇಳೇರಿ; ಮದ್ಯಪಾನ ವಿರೋಧಿ ಹೋರಾಟಗಾರ್ತಿ ಮತ್ತು 'ಹಾಲಕ್ಕಿ ಜಾನಪದ ಕೋಗಿಲೆ' ಬಿರುದಾಂಕಿತೆ, ಬುಡಕಟ್ಟು ಜನಾಂಗದ ಸುಕ್ರಿ ಬೊಮ್ಮಗೌಡ; ಜನಪದ ವೈದ್ಯಕೀಯ ಪದ್ಧತಿಯ ರಾಯಭಾರಿಯಾಗಿ 15,000ಕ್ಕೂ ಹೆಚ್ಚು ಯಶಸ್ವಿ ಮಾಮೂಲು ಹೆರಿಗೆ ಮಾಡಿಸಿದ ಸೂಲಗಿತ್ತಿ ನರಸಮ್ಮ; ತಮ್ಮ ಜೀವಿತಾವಧಿಯುದ್ದಕ್ಕೂ 8,000ಕ್ಕೂ ಹೆಚ್ಚು ಗಿಡಗಳನ್ನು ನೆಟ್ಟು ಸಂರಕ್ಷಣೆ ಮಾಡಿದ 'ಪರಿಸರವಾದಿ' ಸಾಲುಮರದ ತಿಮ್ಮಕ್ಕ; ಉತ್ತರ ಕನ್ನಡದ 'ವೃಕ್ಷಮಾತೆ' ಹಾಗೂ ಪರಿಸರ ಸಂರಕ್ಷಣೆಗೆ ಇಡೀ ಜೀವನ ಮುಡಿಪಾಗಿರಿಸಿದ ಬುಡಕಟ್ಟು ಹೋರಾಟಗಾರ್ತಿ ತುಳಸಿಗೌಡ- ಹೀಗೆ ಹಲವು 'ನಿಜಸಾಧಕ'ರ ಮುಡಿಗೇರಿದ ಸೌಭಾಗ್ಯ ಪದ್ಮಶ್ರೀ ಪ್ರಶಸ್ತಿಯದ್ದು. ಇಂಥ ಅರ್ಹ ಸಾಧಕರನ್ನು ಹುಡುಕಿ ಪ್ರಶಸ್ತಿ

ಪ್ರದಾನ ಮಾಡುತ್ತಿರುವುದು ಹೆಮ್ಮೆಯ ಸಂಗತಿ. ಈ ಶ್ರೇಷ್ಠರ ಸಾಲಿಗೆ, ಈ ಬಾರಿ ಪದ್ಮಶ್ರೀ ಪ್ರಶಸ್ತಿಗೆ ಭಾಜನರಾದ 96 ವರ್ಷದ ಭೀಮವ್ವ ದೊಡ್ಡ ಬಾಳಪ್ಪ ಶಿಳ್ಳೇಕ್ಯಾತರ ಸೇರುತ್ತಾರೆ. ಇವರು ಕೊಪ್ಪಳ ಜಿಲ್ಲೆಯ ತೊಗಲುಗೊಂಬೆಯಾಟದ ಕಲಾವಿದೆ.

ಭೀಮವ್ವ ಅವರು ಈ ಪ್ರಶಸ್ತಿಗೆ ಭಾಜನರಾಗಿರುವುದು ಇಡೀ ಕರ್ನಾಟಕ ಹೆಮ್ಮೆ ಪಡುವ ವಿಷಯ. ತಲೆತಲಾಂತರದಿಂದ ಕೆಲವೇ ಕೆಲವು ಪರಿವಾರಗಳ ಕೌಟುಂಬಿಕ ಕಲೆಯಾಗಿ ನಡೆದುಕೊಂಡು ಬಂದಿರುವ ತೊಗಲುಗೊಂಬೆಯಾಟವು ಇಂದಿನ ದಿನಗಳಲ್ಲಿ ನೇಪಥ್ಯಕ್ಕೆ ಸರಿಯುತ್ತಿದೆ. ಸುಮಾರು 7 ದಶಕಕ್ಕೂ ಹೆಚ್ಚು ಕಾಲದಿಂದ ತೊಗಲುಗೊಂಬೆಯಾಟವನ್ನೇ ವೃತ್ತಿಯಾಗಿಸಿಕೊಂಡು, ಪ್ರೀತಿ ಮತ್ತು ಆಸ್ಥೆಯಿಂದ ನಡೆಸಿಕೊಂಡು ಬಂದಿರುವ ಭೀಮವ್ವ, ತಮ್ಮ ನೆಲದ ಕಲೆಯನ್ನು ದೇಶ-ವಿದೇಶಗಳಿಗೂ ಪರಿಚಯಿಸಿ ಪ್ರದರ್ಶಿಸಿ ಸೈ ಎನಿಸಿಕೊಂಡಿದ್ದಾರೆ. ಈ ಅಪರೂಪದ ಜಾನಪದ ಕಲೆಯನ್ನು ಜತನದಿಂದ ಕಾಪಾಡಿಕೊಂಡು ಬಂದಿದ್ದಾರೆ.

ಆಧುನಿಕತೆ, ತಂತ್ರಜ್ಞಾನ, ಸಿನಿಮಾ, ಒಟಿಟಿ, ಸಾಮಾಜಿಕ ಜಾಲತಾಣಗಳ ಅಬ್ಬರ ಮತ್ತು ಹಲವು ಸವಾಲುಗಳ ನಡುವೆಯೂ, ಈ ಗ್ರಾಮೀಣ ಕಲೆಯನ್ನು ಉಳಿಸಿ-ಬೆಳೆಸಿದ ಕೀರ್ತಿ ಭೀಮವ್ವನವರಿಗೆ ಸಲ್ಲುತ್ತದೆ. ಶಿಳ್ಳೇಕ್ಯಾತ ಸಮುದಾಯದ ಸಂಜೀವಪ್ಪ-ಹೊಳೆಯಮ್ಮ ದಂಪತಿಯ ಮಗಳಾದ ಭೀಮವ್ವ ಅನಕ್ಷರಸ್ಥೆ. ವಂಶಪಾರಂಪರ್ಯವಾಗಿ ಬಂದ ತೊಗಲುಗೊಂಬೆಯಾಟ ಕಲೆಗೆ ಮಾರುಹೋಗಿ 14ನೇ ವಯಸ್ಸಿನಿಂದಲೇ ಈ ಕಲಾಪ್ರದರ್ಶನಕ್ಕೆ ಒಡ್ಡಿಕೊಂಡ ಇವರು, ರಾಮಾಯಣ, ಮಹಾಭಾರತ ಸೇರಿದಂತೆ ಇತರ ಕಥೆಗಳನ್ನು ಪ್ರದರ್ಶಿಸುವಲ್ಲಿ ಸಿದ್ಧಹಸ್ತರು. ಇದಕ್ಕೆ ಕುಟುಂಬದವರೂ ಸಾಥ್ ನೀಡುತ್ತಾರೆ. ಲವ-ಕುಶ ಕಾಳಗ, ಕುರುಕ್ಷೇತ್ರ, ವಿರಾಟಪರ್ವ, ಕರ್ಣಪರ್ವ, ಆದಿಪರ್ವ, ದ್ರೌಪದಿ ವಸ್ತ್ರಾಪಹರಣ ಮುಂತಾದ ಕಥನಗಳು ಇವರಿಗೆ ಕರತಲಾಮಲಕ. ವಿವಿಧ ಪಾತ್ರಗಳ ತೊಗಲುಗೊಂಬೆಗಳ ತಯಾರಿಕೆ, ಅದಕ್ಕೆ ಬೇಕಾಗುವ ಪರಿಕರಗಳನ್ನು ಬಳಸಿ ಬಣ್ಣ ಮಾಡುವುದು, ಗೊಂಬೆಗಳನ್ನು ಜತನದಿಂದ ಕಾಪಾಡುವುದು ಹೀಗೆ ಈ ಕಲೆಗೆ ಅಗತ್ಯವಿರುವ ಎಲ್ಲ ಕೌಶಲಗಳೂ ಅವರಿಗೆ ಕರಗತ.

ಭಾರತ, ಅಮೆರಿಕ, ಇಟಲಿ, ಇರಾನ್ ಸ್ವಿಜರ್ಲೆಂಡ್, ಇರಾಕ್, ಪ್ಯಾರಿಸ್, ಹಾಲೆಂಡ್ ಮುಂತಾದ ದೇಶಗಳಲ್ಲಿ ಇದುವರೆಗೂ 20,000ಕ್ಕೂ ಹೆಚ್ಚಿನ ಕಲಾಪ್ರದರ್ಶನ ನೀಡಿರುವುದು ಇವರ ಹೆಗ್ಗಳಿಕೆ. ಸುಮಾರು 200 ವರ್ಷಗಳಷ್ಟು ಹಳೆಯ ಗೊಂಬೆಗಳೂ ಇವರ ಸಂಗ್ರಹದಲ್ಲಿವೆ. ''ಅತಿ ಚಿಕ್ಕ ಮತ್ತು ಹಿಂದುಳಿದ ಹಳ್ಳಿಯಿಂದ ಬಂದವಳು ನಾನು. ಇಂಥ ಹಳ್ಳಿಗಳ ಕಲೆ ಮತ್ತು ಕಲಾವಿದರು ಬೆಳಕಿಗೆ ಬರುವುದೇ ಇಲ್ಲ. ಕೇಂದ್ರ ಸರಕಾರ ನನ್ನನ್ನು ಅಷ್ಟು ದೊಡ್ಡ ಪ್ರಶಸ್ತಿಗೆ ಆಯ್ಕೆ ಮಾಡಿರುವುದು ಆಶ್ಚರ್ಯ ಮತ್ತು ಸಂತೋಷ ಎರಡನ್ನೂ ತಂದಿದೆ. ಅವರಿಗೆ ಎಷ್ಟು ಕೃತಜ್ಞತೆ ಹೇಳಿದರೂ ಕಮ್ಮಿಯೇ'' ಎಂದು ಪ್ರತಿಕ್ರಿಯಿಸುವಾಗ ಇಳಕಲ್ ಸೀರೆಯುಟ್ಟಿದ್ದ ಭೀಮವ್ವ ಆನಂದಬಾಷ್ಪ ಸುರಿಸಿ ನಗುವಾದರು, ಮಗುವಾದರು.

ಆಧುನಿಕತೆ ಮತ್ತು ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವದಿಂದಾಗಿ ಅನೇಕ ಗ್ರಾಮೀಣ ಕಲೆ, ಜಾನಪದ ಕಲೆ ಮತ್ತು ಇತರ ಕಲಾಪ್ರಕಾರಗಳು ನಶಿಸುತ್ತಿವೆ, ಹಲವು ಈಗಾಗಲೇ ಕಣ್ಮರೆಯಾಗಿವೆ. ಸಾಂಪ್ರದಾಯಿಕ ಮನರಂಜನಾ ವಿಧಾನಗಳ ಬಗ್ಗೆ ಈಗಿನ ಪೀಳಿಗೆಗೆ ಅರಿವಿಲ್ಲದಿರುವುದು ಮತ್ತು ಇವುಗಳ ಬಗೆಗಿನ ಸಮಾಜದ ಅಸಡ್ಡೆಯೂ ಈ ಪರಿಸ್ಥಿತಿಗೆ ಪ್ರಮುಖ ಕಾರಣ. ವಯೋಸಹಜವಾಗಿ ಕಣ್ಣಿನ ದೃಷ್ಟಿ ಮಬ್ಬಾಗಿದ್ದರೂ, ಕಿವಿ ಮಂದವಾಗಿದ್ದರೂ, 96ರ ಈ ಇಳಿವಯಸ್ಸಿನಲ್ಲೂ ಭೀಮವ್ವರ ಜೀವನೋತ್ಸಾಹ, ಕಲಾಸೇವೆಯ ತುಡಿತ ಕಮ್ಮಿಯಾಗಿಲ್ಲ! ಭೀಮವ್ವನಂಥ ಹಲವರ ಸಮರ್ಪಣಾ ಮನೋಭಾವದಿಂದಾಗಿ ಹಲವಾರು ಜಾನಪದ ಕಲೆಗಳು ಇನ್ನೂ ಉಸಿರಾಡುತ್ತಿವೆ. ಗ್ರಾಮೀಣ ಕಲೆ, ಜಾನಪದ ಸಂಸ್ಕೃತಿಗಳು ಇತಿಹಾಸದ ಪುಟ ಸೇರುತ್ತಿರುವ ಇಂದಿನ ಕಾಲಘಟ್ಟದಲ್ಲಿ, ಕಲಾಸೇವೆಗೆ ಬದುಕನ್ನು ಸಮರ್ಪಿಸಿ, ಅದನ್ನು ಜನಮಾನಸದಲ್ಲಿ ಉಳಿಸುತ್ತಿರುವ ಕೆಲವೇ ಸಾಧಕರಲ್ಲಿ ಭೀಮವ್ವ ಒಬ್ಬರು. ಅವರ ತಪಸ್ಸು, ಸೇವೆ, ಸಾಧನೆ ಮುಂದಿನ ಪೀಳಿಗೆಗಳಿಗೂ ಸ್ಫೂರ್ತಿಯಾಗಲಿ, ಹಲವು ತಲೆಮಾರುಗಳಿಗೆ ಪ್ರೇರಣೆಯಾಗಲಿ.

ತಾಯಿ ಭೀಮವ್ವಾ, 'ಬೊಂಬೆ ಹೇಳುತ್ತೈತೆ, ಮತ್ತೆ ಹೇಳುತ್ತೈತೆ ನೀನೇ ರಾಜಕುಮಾರಿ!'

(ಲೇಖಕರು ಪ್ರಚಲಿತ ವಿದ್ಯಮಾನಗಳ ವಿಶ್ಲೇಷಕರು)

ಓದುಗರ ಓಣಿ
ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಇದು ಪ್ರಜೆಯ ಹೊಣೆ

ಸರ್ವಾಧಿಕಾರಿ ಹಿಟ್ಲರನ ಅವಸಾನವಾದ ಎಂಟು ದಿನಗಳ ನಂತರ, ಅಂದರೆ 1945ರ ಮೇ 8ರಂದು, ಜರ್ಮನಿಯ ಶರಣಾಗತಿಯೊಂದಿಗೆ ಎರಡನೇ ವಿಶ್ವಯುದ್ಧದ ಪರಿಸಮಾಪ್ತಿಯ ಆಶಾಕಿರಣ ಮೂಡಿತು. 80 ವರ್ಷಗಳ ನಂತರ ಇದೀಗ, ಮೇ 8ರ ಆಸುಪಾಸಿನಲ್ಲಿಯೇ, ಮೂರನೇ ವಿಶ್ವಯುದ್ಧಕ್ಕೆ ಅಂಕುರಾರ್ಪಣವಾಗುವ ಆತಂಕ ಎದುರಾಗಿದೆ! ಪಹಲ್ಗಾಮ್ ದಾಳಿಗೆ ಪ್ರತ್ಯುತ್ತರವಾಗಿ ಪಾಕಿಸ್ತಾನದ ವಿರುದ್ಧ ಸೂಕ್ತ ಕಾರ್ಯಾಚರಣೆ ನಡೆಸಲು ನಮ್ಮ ಸೇನೆಗೆ ಸ್ವಾತಂತ್ರ್ಯ ನೀಡಲಾಗಿದೆ. ಇದೇ ವೇಳೆ ಪಾಕಿಸ್ತಾನವು, ಕದನವಿರಾಮವನ್ನು ಪದೇಪದೆ ಉಲ್ಲಂಘಿಸುತ್ತ ನಮ್ಮ ಸೇನೆಯನ್ನು ಕಾರ್ಯಾಚರಣೆಯ ಅನಿವಾರ್ಯ ಸ್ಥಿತಿಯತ್ತ ಸೆಳೆಯುತ್ತಿದೆ. ಈ ಒಟ್ಟು ಬೆಳವಣಿಗೆಯು ಮೂರನೇ ವಿಶ್ವಯುದ್ಧಕ್ಕೆ ನಾಂದಿಯಾದರೆ ಆಶ್ಚರ್ಯವಿಲ್ಲ.

ಯುದ್ಧವೆಂಬುದು ಎಂದಿಗೂ ವಿನಾಶಕಾರಿಯೇ. 1962, 1971ರ ಯುದ್ಧಗಳ ಘೋರ ಪರಿಣಾಮಗಳನ್ನು ಕಣ್ಣಾರೆ ಕಂಡ, ಅನುಭವಿಸಿದ ಹಿರಿಯರು ಇಂದು ದೇಶದಲ್ಲಿ ನಾವು ಸಾಕಷ್ಟು ಸಂಖ್ಯೆಯಲ್ಲಿ ಇದ್ದೇವೆ. ನಮಗಿಂದು ಯುದ್ಧಗಳು ಬೇಡವಾಗಿವೆ. ಆದರೆ, ಬಿಸಿ ರಕ್ತದ ತರುಣರು ಬಹುತೇಕರಿಗೆ ಯುದ್ಧವೆಂಬುದೊಂದು ರೋಚಕ ಸಂಗತಿಯಾಗಿದೆ. ಈ ಸಂದರ್ಭದಲ್ಲಿ, ಯುದ್ಧಪ್ರಿಯರು ಮಾತ್ರವಲ್ಲ, ಭಾರತದ ಪ್ರಜೆಗಳಾದ ನಾವೆಲ್ಲರೂ ಪಾಲಿಸಬೇಕಾದ ಹಲವು ಕರ್ತವ್ಯಗಳಿವೆ. ಅಣ್ವಸ್ತ್ರಗಳ ಉಪಸ್ಥಿತಿಯಿಂದಾಗಿ ಇಂದಿನ ಸಂಘರ್ಷಗಳು, ಯುದ್ಧಗಳು, ಹಿಂದಿನಂತಲ್ಲದೆ ಅತಿ ಘೋರವೂ ವ್ಯಾಪಕವೂ ಆಗುವುದು ನಿಶ್ಚಿತ. ಜತೆಗೆ, ಭಾರತ-ಪಾಕ್ ಸಂಘರ್ಷದಲ್ಲಿ ಮತೀಯ ಭಾವನೆಯೂ ಪ್ರಮುಖ ಪಾತ್ರ ವಹಿಸುತ್ತಿದ್ದು, ತತ್ಕಾರಣವಾಗಿ ಭಾರತದಲ್ಲಿ ಆಂತರಿಕ ಘರ್ಷಣೆಗಳು ಉಲ್ಬಣಗೊಳ್ಳುವ ಸಾಧ್ಯತೆಯೂ ಇಲ್ಲದಿಲ್ಲ. ಹೀಗಿರುವಾಗ, ಭಾರತದ ಪ್ರತಿಯೊಬ್ಬ ಪ್ರಜೆಗೆ, ಮುಖ್ಯವಾಗಿ ಯುದ್ಧ ಬೇಕೆನ್ನುವ ಬಿಸಿರಕ್ತದ ತರುಣರಿಗೆ, ಗರಿಷ್ಠ ಮಟ್ಟದ ಸಹನೆ ಇರಬೇಕಾಗುತ್ತದೆ. 'ಸಹನಾವವತು, ಸಹನೌ ಭುನಕ್ತು...' ಎಂಬ ತೈತ್ತರೀಯ ಉಪನಿಷತ್ತಿನ ಶಾಂತಿ ಮಂತ್ರವನ್ನು ಹಿಂದೂಗಳೂ, ಕುರಾನಿನ 17:70, 5:8, 60:8, ಈ 'ಅಯಾತ್'ಗಳು ('ಅಯಾಹ್'ಗಳು) ಸಾರುವ ಸೌಹಾರ್ದವನ್ನು ಮುಸ್ಲಿಮರೂ ಪಾಲಿಸುವುದು ಉಭಯರಿಗೂ ಹಿತಕರ. ಆಂತರಿಕವಾಗಿ ಮತೀಯ ಘರ್ಷಣೆಗಳು ಭುಗಿಲೇಳದಂತೆ ನೋಡಿಕೊಳ್ಳುವುದು ಪ್ರತಿಯೊಬ್ಬ ಪ್ರಜೆಯ ಕರ್ತವ್ಯವಾಗಿದೆ. ಸಾಮಾಜಿಕ ಜಾಲತಾಣಗಳಲ್ಲಿ ಪುಂಖಾನುಪುಂಖವಾಗಿ ಬರುವ ಸುಳ್ಳು ಸುದ್ದಿಗಳನ್ನು ನಂಬದಿರುವುದು ಮತ್ತು ಪ್ರಚೋದನಕಾರಿ ಮಾತುಗಳಿಗೆ ಮರುಳಾಗದಿರುವುದು ಈ ನಿಟ್ಟಿನಲ್ಲಿ ಅತ್ಯವಶ್ಯ.

ಜಾತಿ-ಮತಗಳ ಭೇದಭಾವವಿಲ್ಲದೆ ಭಾರತೀಯರೆಲ್ಲ ಒಂದಾಗಿ ನಿಲ್ಲಬೇಕಾದದ್ದು ಈ ಸಂದರ್ಭದಲ್ಲಿ ದೇಶದ ಹಿತದೃಷ್ಟಿಯಿಂದ ಅನಿವಾರ್ಯ. ಇಂಥ ವಿವೇಕ ಪ್ರತಿಯೊಬ್ಬ ಪ್ರಜೆಯಲ್ಲಿಯೂ ಜಾಗೃತವಾಗಬೇಕು. ಸರಕಾರ ಹಾಗೂ ಸೇನೆಗಳ ಹೊಣೆಗಾರಿಕೆಗಳಂತೆ, ಪ್ರಜೆಗಳ ಈ ಹೊಣೆಗಾರಿಕೆಗಳೂ ಈ ಸಂದರ್ಭದಲ್ಲಿ, ದೇಶದ ಅಳಿವು ಉಳಿವುಗಳ ವಿಷಯದಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸುತ್ತವೆ.

- ಎಚ್.ಆನಂದರಾಮ ಶಾಸ್ತ್ರೀ, ಬೆಂಗಳೂರು

ಹೀಗೊಂದು ಬಿನ್ನಹ...

2021ರಲ್ಲಿ ಮುದ್ರಣಗೊಂಡು ರಾಜ್ಯಮಟ್ಟದ ಆಯ್ಕೆ ಸಮಿತಿಯಿಂದ ಆಯ್ಕೆಯಾದ ಪುಸ್ತಕಗಳ ಪಟ್ಟಿಯು ಮಾರ್ಚ್ 15ರಂದು ಪ್ರಕಟಗೊಂಡಿತ್ತು. ಆಯ್ಕೆಯಾದ ಪುಸ್ತಕಗಳ ಸರಬರಾಜಿಗೆ ಇನ್ನೇನು ಗ್ರಂಥಾಲಯ ಇಲಾಖೆಯಿಂದ ಆದೇಶ ಬರುತ್ತದೆ ಎಂದು ಕಾದಿದ್ದ ಲೇಖಕರು-ಪ್ರಕಾಶಕರು ಸಂಭ್ರಮಿಸಿದ್ದೂ ಆಯಿತು. ಆದರೆ ಒಂದೂವರೆ ತಿಂಗಳು ಕಳೆದರೂ ಸರಬರಾಜು ಆದೇಶದ ಬಗ್ಗೆ ಮಾಹಿತಿಯಿಲ್ಲ. ಗ್ರಂಥಾಲಯ ಇಲಾಖೆಯನ್ನು ಸಂಪರ್ಕಿಸಿದರೆ, ''ಸರಕಾರದಿಂದ ಅನುದಾನ ಬಿಡುಗಡೆಯಾದ ಬಳಿಕ ಆದೇಶ ಕಳಿಸಲಾಗುತ್ತದೆ'' ಎಂಬ ಉತ್ತರ ಸಿಕ್ಕಿದೆ. ನಿಗದಿತ ಸಮಯ ಅವರಿಗೂ ತಿಳಿಯದು. ಅವರೂ ಲೇಖಕರಂತೆ ಸರಕಾರದ ಅನುದಾನಕ್ಕಾಗಿ ಕಾದಿದ್ದಾರೆ.

ಕರ್ನಾಟಕ ಪ್ರಕಾಶಕರ ಸಂಘವು ಸಲ್ಲಿಸಿದ್ದ ಮನವಿಗೆ ಸ್ಪಂದಿಸಿದ ಮುಖ್ಯಮಂತ್ರಿಗಳು ಸಗಟು ಪುಸ್ತಕ ಖರೀದಿಗೆ ಸೂಕ್ತಕ್ರಮ ಕೈಗೊಳ್ಳುವ ಭರವಸೆ ನೀಡಿದ್ದರು. ಆದರೂ ಇಂದಿನ ಸ್ಥಿತಿಗತಿಯಲ್ಲಿ (ಯುದ್ಧದ ಕಾರ್ಮೋಡ ಕವಿದಿದ್ದು ಆರ್ಥಿಕ ವ್ಯತ್ಯಯವಾಗುವ ಸಾಧ್ಯತೆಯಿರುವ ಇಂದಿನ ಸನ್ನಿವೇಶದಲ್ಲಿ) ಅನುದಾನ ಸಿಗುವುದೇ ಎಂಬ ಶಂಕೆ ಲೇಖಕರದು. ಇಂಥ ಸಂದಿಗ್ಧ ಸಮಯದಲ್ಲಿ 'ಅನುದಾನ ಬಿಡುಗಡೆ ಮಾಡಿ' ಎಂಬ ಬಿನ್ನಹಕ್ಕೆ ಬಾಯಿಲ್ಲವಾದರೂ ಒಂದು ಮನವಿ: 2021, 2022, 2023 ಮತ್ತು 2024ರ ವರ್ಷಗಳಲ್ಲಿ ಮುದ್ರಿತವಾದ ಪುಸ್ತಕಗಳು ಕಪಾಟಿನಲ್ಲಿ ತುಂಬಿವೆ. ಇದರಿಂದ ಒದಗುವ ಆರ್ಥಿಕ ಹೊರೆ ಒಂದು ಕಡೆಯಾದರೆ, ಮತ್ತೊಂದೆಡೆ ತಮ್ಮ ಪುಸ್ತಕಗಳು ಕಾಲವಿಳಂಬದಿಂದಾಗಿ ಓದುಗರಿಗೆ ಸಕಾಲದಲ್ಲಿ ತಲುಪದೆ 'ಔಟ್ ಡೇಟೆಡ್' ಆಗಿಬಿಟ್ಟರೆ?' ಎಂಬ ಆತಂಕವೂ ಲೇಖಕರನ್ನು ಕಾಡುತ್ತಿದೆ. ಆದ್ದರಿಂದ ಲೇಖಕರು-ಪ್ರಕಾಶಕರು ಕೇಳುವುದಿಷ್ಟೇ- ಪುಸ್ತಕದ ಖರೀದಿ ಮೊತ್ತವನ್ನು ತಕ್ಷಣ ಕೊಡುವುದು ಬೇಡ, ಆದರೆ ಪುಸ್ತಕಗಳ ಸರಬರಾಜಿಗೆ ಆದೇಶ ಕೊಡಿ. ಇದರಿಂದ ಕಪಾಟಿನ ಹೊರೆ ಕಡಿಮೆಯಾಗುತ್ತದೆ. ಅದಕ್ಕೂ ಮುಖ್ಯವಾಗಿ, ತಪಸ್ಸಿನಂತೆ ತನ್ಮಯರಾಗಿ ರಚಿಸಿದ ತಮ್ಮ ಕೃತಿಗಳು ಓದುಗರಿಗೆ ತಲುಪುವುದು ಇವರ ಪಾಲಿಗೆ ದೊಡ್ಡ ಭಾಗ್ಯವಾಗುತ್ತದೆ. ಒಂದೊಮ್ಮೆ ಏಕಗವಾಕ್ಷಿ ಯೋಜನೆ ರದ್ದಾದರೂ ಚಿಂತೆಯಿಲ್ಲ. ಹಣ ಕೊಡದಿದ್ದರೂ ಉಚಿತ ಸರಬರಾಜು ಮಾಡುವುದಾಗಿ ಮುಚ್ಚಳಿಕೆ ಬರೆದು ಕೊಡಲು ಕೆಲವು ಲೇಖಕರು ಸಿದ್ಧರಾಗಿದ್ದಾರೆ. ಅಂಥವರ ಕೃತಿಗಳಿಗಾದರೂ ಸರಬರಾಜಿಗೆ ಆದೇಶ ಕೊಡಲಿ ಎಂದು ಕೋರಿಕೆ.

- ಸತ್ಯಬೋಧ, ಬೆಂಗಳೂರು

ಮುದ ನೀಡಿದ ಅಂಕಣಗಳು

ಮೋಹನ್ ವಿಶ್ವ ಅವರು 'ವೀಕೆಂಡ್ ವಿತ್ ಮೋಹನ್' ಅಂಕಣದಲ್ಲಿ (ಮೇ 3) ಆರ್ಥಿಕತೆಗೆ ಹಿಂದೂ ಹಬ್ಬಗಳು ನೀಡುವ ಕೊಡುಗೆಯ ಕುರಿತು ಚೆನ್ನಾಗಿ ವಿವರಿಸಿದ್ದಾರೆ. ಹೌದು, ಇಡೀ ವಿಶ್ವದಲ್ಲಿ ವರ್ಷವಿಡೀ ಒಂದಲ್ಲಾ ಒಂದು ಹಬ್ಬ-ಹರಿದಿನವನ್ನು ಆಚರಿಸಿ ಆನಂದಿಸುವ ದೇಶವೊಂದಿದ್ದರೆ ಅದು ಭಾರತವೇ. ಹಿಂದೂ ವರ್ಷಾರಂಭ ಯುಗಾದಿಯಿಂದ ಹಿಡಿದು ಮಾಘ ಮಾಸದ ಸಂಕ್ರಾಂತಿವರೆಗೆ ನಾವು ಆಚರಿಸುವ ಎಲ್ಲಾ ಹಬ್ಬಗಳ ನೇಪಥ್ಯದಲ್ಲಿ ಯೋಗ್ಯ ಸಾಮಾಜಿಕ, ಪೌರಾಣಿಕ, ದೈವಿಕ, ಸಾಂದರ್ಭಿಕ ಕಾರಣಗಳು ಇದ್ದೇ ಇವೆ. ಆದರೆ 'ಆಧುನಿಕ' (?!) ಮನಸ್ಥಿತಿಯ ಕೆಲ ಅತಿಬುದ್ಧಿವಂತರು ಈ ಹಬ್ಬಗಳ ಕುರಿತು ಆಕ್ಷೇಪಿಸಿ ಅವುಗಳ ಮಹತ್ವ ತಗ್ಗಿಸಲು ನೋಡುತ್ತಿರುವುದು ದುರದೃಷ್ಟಕರ ಸಂಗತಿ. ಅಂಕಣಕಾರರು ತಿಳಿಸಿರುವಂತೆ, ದೇಶ-ವಿದೇಶಗಳ ಕಂಪನಿಗಳು ತಮ್ಮ ಉತ್ಪನ್ನಗಳ ಮಾರಾಟಕ್ಕೆಂದು ನಮ್ಮ ದೇಸಿ ಹಬ್ಬಗಳ ನೆರವು ಪಡೆಯುವುದು ಸರ್ವೇಸಾಮಾನ್ಯ. ಇಂಥ ಸಂಭ್ರಮ-ಸಡಗರದ ಮಧ್ಯೆ ದೇಶದ ಆರ್ಥಿಕತೆಗೆ ಹಬ್ಬಗಳು ನೀಡುವ ಕೊಡುಗೆ ಅಪಾರ.

ಇನ್ನು ಡಾ.ಸಾಧನಶ್ರೀ ಅವರು ಕೂಡ ತಮ್ಮ ಅಂಕಣದಲ್ಲಿ (ಮೇ 3) ಷೋಡಶ ಸಂಸ್ಕಾರಗಳ ಕುರಿತಾಗಿ ಸೊಗಸಾಗಿ ವಿವರಿಸಿದ್ದಾರೆ. ನಮ್ಮ ಪೂರ್ವಜರು ಮಾನವನ ಉತ್ತಮ ಬದುಕಿಗೆಂದು ಎಷ್ಟೆಲ್ಲಾ ಸಂಸ್ಕಾರಗಳನ್ನು ಶಾಸ್ತ್ರೋಕ್ತವಾಗಿ ಮತ್ತು ಕರಾರುವಾಕ್ಕಾಗಿ ರೂಪಿಸಿಕೊಟ್ಟು, ನಮಗೆ ಉಪಕರಿಸಿದ್ದಾರೆ. ಇವನ್ನು ಅರಿತು ಪಾಲಿಸಿದರೆ ನಿಜಕ್ಕೂ ಸಂಸ್ಕಾರವಂತರಾಗುತ್ತೇವೆ; 'ಗೊಡ್ಡು ಸಂಪ್ರದಾಯ' ಅಂತ ತಾತ್ಸಾರ ಮಾಡಿದರೆ ನಷ್ಟವಾಗುವುದು ನಮಗೇ! ಆಯ್ಕೆ ನಮ್ಮ ಎದುರೇ ಇದೆ.

- ಲಕ್ಷ್ಮೀಕಾಂತ ಪಾಟೀಲ್, ಮೈಸೂರು

ಭಟ್ಟರ್ ಸ್ಕಾಚ್

- **ಪ್ರವೀಣ ದೀಕ್ಷಿತ್, (ಇಮೇಲ್ ಮೂಲಕ)**
  ನಿಮ್ಮ ಕ್ಷಣದ ನೋವು, ಬೇಸರ, ವಿಷಾದ ಏನು ಭಟ್ರೇ?
- **ಲಕ್ಷ್ಮೀಶ ತೋಳ್ಪಾಡಿ ಅವರಂತೆ ಬರೆಯಲು ಆಗುತ್ತಿಲ್ಲವಲ್ಲ ಎಂಬುದು!**

- **ನವೀನ ಬಾರಕೂರು, (ಇಮೇಲ್ ಮೂಲಕ)**
  ಭಟ್ರೇ, ನೈಟಿ ಧರಿಸಿ ಜಿಮ್‌ಗೆ ಹೋಗಬಹುದಾ?
- **ಆದರೆ ಜಿಮ್ ಟ್ರೇನರ್ ಕಚ್ಚೆ ಪಂಚೆ ಧರಿಸಿರಬೇಕು!**

- **ನಾರಾಯಣ ಸಾಲಗಾಮೆ, ಶಿವಮೊಗ್ಗ**
  ಭಟ್ರೇ, ನಿಮ್ಮನ್ನು ದಡ್ಡ ಅಂತ ಕರೀತೀನಿ, ಆಗಬಹುದಾ?
- **ಏನ್ಮಾಡ್ಲಿ... ನಾನು ಕಾಂಪ್ಲಾನ್ ಕುಡಿಯದೇ ದೊಡ್ಡವನಾಗಿಬಿಟ್ಟೆ!**

- **ಸೌಮ್ಯ, ಬೆಂಗಳೂರು**
  ಸುಂದರ ಹುಡುಗಿಯರು 'ಭಟ್ರೇ' ಅಂದ್ರೆ ಬೇಸರವಾಗುತ್ತಾ?
- **ಅಂಕಲ್, ತಾತಾ ಅಂದ್ರೆ ಆಗುತ್ತೆ!**

- **ಕೆ.ವಿ.ಮೂರ್ತಿ, ಮಂಡ್ಯ**
  ಭಟ್ರೇ, 'ವಿಶ್ವವಾಣಿ' ಓದುಗರಿಗೆ ಬಿಸಿಯೂಟ ಏರ್ಪಾಟು ಹೇಗೆ?
- **ದಿನವೂ ನಾವು ಬೆಳಗ್ಗೆ ಬೆಳಗ್ಗೆ ಕೊಡೋದು ಬಿಸಿಯೂಟವೇ ಅಲ್ಲವಾ?!**

- **ವೀಣಾ ಶೆಟ್ಟಿ, ಕುಂದಾಪುರ**
  ಭಟ್ರೇ, ಇಲ್ಲೊಬ್ಬ ನನಗೆ ಏಳು ಮಂದಿ ಗರ್ಲ್ ಫ್ರೆಂಡ್ಸ್ ಅಂತ ಹೇಳ್ತಾ ಇದ್ದಾನಲ್ಲ?
- **ಲೇಡೀಸ್ ಹಾಸ್ಟೆಲ್ ವಾರ್ಡನ್‌ಗಳು ಒಮ್ಮೊಮ್ಮೆ ಹೀಗೆ ಕನವರಿಸ್ತಾವೆ!**

- **ಸೂರಿ, (ಇಮೇಲ್ ಮೂಲಕ)**
  ಭಟ್ರೇ, ಹೊಟ್ಟೆ ಇಲ್ಲದವರಿಗೆ ಪೈಜಾಮ ಚೆನ್ನಾಗಿ ಕಾಣುತ್ತದಂತೆ?
- **ಹೊಟ್ಟೆ ಇದ್ದವರಿಗೆ ಪೈಜಾಮ ಅದರ ಮೇಲೆ ಚೆನ್ನಾಗಿ ನಿಲ್ಲುತ್ತೆ!**

- **ವಸಂತ ಹಿರೇಮಠ, ಬೆಳಗಾವಿ**
  ಭಟ್ರೇ, ಸಿದ್ದರಾಮಯ್ಯ 'ಅಧಿಕಾರ ನನ್ನ ಜನ್ಮಸಿದ್ಧ ಹಕ್ಕು' ಅಂತ ಭಾವಿಸಿದ್ದಾರಾ?
- **'ಅಧಿಕಾರ ನನ್ನ ಜನ್ಮಸಿದ್ಧ ಹಕ್ಕು' ಎಂಬ ಮಾತಿನಲ್ಲೇ ಸಿದ್ದ ಇದೆಯಲ್ಲ?!**

- **ವಿನಾಯಕ ಮಠದ, ಧಾರವಾಡ**
  ಭಟ್ರೇ, ಶ್ರೀಮಂತಿಕೆ ಬರುತ್ತಿದ್ದಂತೆ ಮಂದಿ ನಾಯಿಯನ್ನು ಸಾಕುತ್ತಾರಲ್ಲ?
- **ಇನ್ನೇನು ಕತ್ತೆ ಸಾಕಬೇಕಾಗಿತ್ತಾ?!**

- **ರಾಜಕುಮಾರ ವಿ., (ಇಮೇಲ್ ಮೂಲಕ)**
  ಭಟ್ರೇ, ಇಲ್ಲೊಬ್ಬಳು 'ಮೊಡವೆಯೇ ನನ್ನ ಒಡವೆ' ಅಂತ ಹೇಳ್ತಾಳಲ್ಲ?
- **ಒಡವೆ ಕೊಡಿಸದ ಗಂಡ ಕೇಳಿಸಿಕೊಳ್ಳಲಿ ಎಂದು ಹಾಗೆ ಅಂದಿರಬೇಕು!**

ಹಾಂಗ್ ಕಾಂಗ್‌ನಲ್ಲಿ ಹರಿಶ್ಚಂದ್ರ...!

ವಿದೇಶವಾಸಿ

ಕಿರಣ್ ಉಪಾಧ್ಯಾಯ ಬಹ್ರೈನ್
dhyapaa@gmail.com

ಕಳೆದ ಏಪ್ರಿಲ್ ತಿಂಗಳಿನ ಕೊನೆಯ ಒಂದು ವಾರ ಹಾಂಗ್ ಕಾಂಗ್ ದೇಶದಲ್ಲಿದ್ದೆ. ನನ್ನ ಜತೆ ಒಂದು ತಂಡವೇ ಇತ್ತು. ಹೆಚ್ಚೇನೂ ಹೇಳದೆ 2-3 ಜನರಿಗೆ ಆದ ಅನುಭವವನ್ನು ನಿಮ್ಮೊಂದಿಗೆ ಹಂಚಿಕೊಂಡರೆ ಅಷ್ಟೇ ಸಾಕು, ಅಲ್ಲಿಯ ಜನ ಹೇಗೆ ಎಂಬುದು ಮನದಟ್ಟಾಗುತ್ತದೆ. ಜತೆಗೆ, ನಮ್ಮ ದೇಶಕ್ಕೂ ಆ ದೇಶಕ್ಕೂ ಇರುವ ವ್ಯತ್ಯಾಸದ ಅರಿವಾಗುತ್ತದೆ.

ಅಂದು ರಾತ್ರಿ ಸುಮಾರು ಹನ್ನೊಂದೂವರೆ ಆಗಿತ್ತು. ನಾವು ಉಳಿದುಕೊಂಡ ಹೋಟೆಲಿನಿಂದ ಪೇಟೆ, ಅಂಗಡಿಗಳು ದೂರವೇ ಇದ್ದವು. ಹೋಟೆಲ್‌ನಿಂದ ವಿಮಾನ ನಿಲ್ದಾಣಕ್ಕೆ ಪ್ರತಿ ಅರ್ಧ ಗಂಟೆಗೆ ಉಚಿತ ಬಸ್ ವ್ಯವಸ್ಥೆ ಇತ್ತು. ಆದರೆ ಅದು ಹನ್ನೊಂದು ಗಂಟೆಗೇ ಕೊನೆಯಾಗುತ್ತಿತ್ತು. ಹೋಟೆಲ್‌ನಿಂದ ವಿಮಾನ ನಿಲ್ದಾಣಕ್ಕೆ ಬಸ್ ಅಥವಾ ಕಾರಿನಲ್ಲಿ ಹೋದರೆ ಐದರಿಂದ ಆರು ನಿಮಿಷದ ದಾರಿಯಾಗಿತ್ತು. ನಮ್ಮ ಜತೆ ಬಂದವರಲ್ಲೊಬ್ಬರಿಗೆ ತುರ್ತಾಗಿ ಏನೋ ಖರೀದಿಸಬೇಕಾಗಿತ್ತು. ''ಇಲ್ಲಿ ಹತ್ತಿರದಲ್ಲಿ ಪೇಟೆಯಾಗಲಿ, ಅಂಗಡಿಯಾಗಲಿ ಇದೆಯೇ?'' ಎಂದು ಕೇಳಿದರು. ''ಹತ್ತಿರದಲ್ಲಿ ಇರುವುದೆಲ್ಲ ಈಗ ಮುಚ್ಚಿರುತ್ತದೆ. ನಿಮಗೆ ತೀರಾ ಅವಶ್ಯಕತೆ ಇದ್ದರೆ ವಿಮಾನ ನಿಲ್ದಾಣದಲ್ಲಿ ಅಂಗಡಿಗಳಿವೆ, ಅಲ್ಲಿಗೇ ಹೋಗುವುದು ಒಳಿತು'' ಎಂದು ಹೇಳಿದೆ. ಆ ಸಂದರ್ಭದಲ್ಲಿ ಟ್ಯಾಕ್ಸಿಯಲ್ಲಿ ಹೋಗುವ ಅವಕಾಶ ಮಾತ್ರ ಇತ್ತು. ಅವರು ಟ್ಯಾಕ್ಸಿ ಹಿಡಿದು ವಿಮಾನ ನಿಲ್ದಾಣದ ಕಡೆಗೆ ಹೋದರು.

ಮಾರನೆಯ ದಿನ ಬೆಳಗ್ಗೆ ತಿಂಡಿ ತಿನ್ನುವಾಗ ಅವರು ಪುನಃ ಭೇಟಿಯಾದರು. ''ನಿನ್ನೆ ರಾತ್ರಿ ನಿಮ್ಮ ಕೆಲಸ ಆಯಿತೇ?'' ಎಂದು ಕೇಳಿದೆ. ಅದಕ್ಕೆ ಅವರು ನಗುತ್ತಾ ಕೈ ಮುಗಿದು, ''ಇದು ಎಂಥ ದೇಶ ಸ್ವಾಮಿ! ರಾತ್ರಿ ನಾನು ವಿಮಾನ ನಿಲ್ದಾಣಕ್ಕೆ ಹೋಗಿ ಬೇಕಾದ ವಸ್ತುವನ್ನು ಖರೀದಿಸಿದೆ. ಅಲ್ಲಿಂದ ಹಿಂತಿರುಗಿ ಬರುವಾಗ ಪುನಃ ಟ್ಯಾಕ್ಸಿಯಲ್ಲಿ ಕುಳಿತು ನಮ್ಮ ಹೋಟೆಲ್ ಹೆಸರು ಹೇಳಿದೆ, ಆ ಟ್ಯಾಕ್ಸಿ ಚಾಲಕ ನನ್ನನ್ನು ಕುಳ್ಳಿರಿಸಿಕೊಂಡು ಹೊರಟ. ಸುಮಾರು ಒಂದು ಗಂಟೆ ಪ್ರಯಾಣಿಸಿದೆವು. ಆತ 4-5 ಹೋಟೆಲ್ ಎದುರು ಟ್ಯಾಕ್ಸಿ ನಿಲ್ಲಿಸಿದ್ದ. ಆದರೆ ನಮ್ಮ ಹೋಟೆಲ್ ಸಿಗಲಿಲ್ಲ. ರಾತ್ರಿ 2 ಗಂಟೆ ಆಗುತ್ತಿದ್ದಂತೆ ನಮ್ಮಿಬ್ಬರಲ್ಲೂ ಆತಂಕ ಶುರುವಾಯಿತು. ಅಲ್ಲಿಯವರೆಗೆ ಟ್ಯಾಕ್ಸಿಯ ಮೀಟರ್‌ನಲ್ಲಿ 400 ಹಾಂಗ್ ಕಾಂಗ್ ಡಾಲರ್ ಆಯಿತು ಎಂದು ತೋರಿಸುತ್ತಿತ್ತು. ನನ್ನ ಬಳಿ ಅಷ್ಟು ಹಣ ಇರದ ಕಾರಣ ನಾನು ಅತೀವ ಆತಂಕಕ್ಕೆ ಒಳಗಾಗಿದ್ದೆ'' ಎಂದರು. ''ನಿಮ್ಮ ಬಳಿ ನನ್ನ ನಂಬರ್ ಇತ್ತಲ್ಲ, ನನಗೆ ಕರೆ ಮಾಡಬಹುದಿತ್ತಲ್ಲ?'' ಎಂದೆ. ಅದಕ್ಕೆ, ''ನಾನು ಚಾರ್ಜರ್ ಮರೆತು ಬಿಟ್ಟು ಬಂದಿದ್ದೆ. ಅದನ್ನು ತರಲೆಂದೇ ಅಂಗಡಿ ಹುಡುಕಿಕೊಂಡು ಹೊರಟಿದ್ದೆ. ನನ್ನ ಫೋನ್ ಡೆಡ್ ಆಗಿತ್ತು, ಯಾರಿಗೂ ಫೋನ್ ಮಾಡುವ ಸ್ಥಿತಿಯಲ್ಲಿ ಇರಲಿಲ್ಲ. ಅಂಥದ್ದರಲ್ಲಿ ನಡುರಾತ್ರಿ 2-3 ತಾಸು ಅಪರಿಚಿತ ದೇಶದಲ್ಲಿ, ಭಾಷೆ ಅರ್ಥವಾಗದವನೊಂದಿಗೆ ಅಲೆದಾಡುವಾಗ ಆತಂಕವಾಗದೇ ಇದ್ದೀತೇ?'' ಎಂದರು. ''ಆಮೇಲೆ ಏನಾಯಿತು?'' ಎಂದೆ. ಅದಕ್ಕೆ, ''ನಮ್ಮ ಹೋಟೆಲ್ ವಿಮಾನ ನಿಲ್ದಾಣದಿಂದ ಕೇವಲ ಐದರಿಂದ ಆರು ನಿಮಿಷ ದೂರದಲ್ಲಿದೆ, ನಾವು ಖಂಡಿತವಾಗಿಯೂ ದಾರಿ ತಪ್ಪಿದ್ದೇವೆ'' ಎಂದಾಗ ಆತ ಪುನಃ ವಿಮಾನ ನಿಲ್ದಾಣದ ಬಳಿ ಕರೆದುಕೊಂಡು ಬಂದು, ಅದರ ಸುತ್ತಮುತ್ತಲಿರುವ ಹೋಟೆಲ್‌ಗಳನ್ನೆಲ್ಲ ಹುಡುಕಾಡಿದ. ಅಂತೂ ಬೆಳಗಿನ ಜಾವ 3 ಗಂಟೆಯ ಹೊತ್ತಿಗೆ ಸರಿಯಾದ ಜಾಗಕ್ಕೆ ಬಂದು ತಲುಪಿದೆವು. ಹೋಟೆಲ್ ಎದುರು ಬಂದು ನಿಂತಾಗ ಮೀಟರ್‌ನಲ್ಲಿ 400 ಡಾಲರ್ ಎಂದು ತೋರಿಸುತ್ತಿತ್ತು. ನನ್ನ ಬಳಿ ಅಷ್ಟು ಹಣವೂ ಇರಲಿಲ್ಲ. ಏನು ಮಾಡುವುದೆಂದು ಯೋಚಿಸುತ್ತಿರುವಾಗಲೇ, ಆತ ನನ್ನನ್ನು ಇಳಿಸಿ ''15 ಡಾಲರ್ ಕೊಡಿ'' ಎಂದ. ನಾನೇ ತಪ್ಪು ಕೇಳಿಸಿಕೊಳ್ಳುತ್ತಿದ್ದೇನೆ ಅನಿಸಿತು. ಇನ್ನೊಮ್ಮೆ ಅವನಲ್ಲಿ ಖಚಿತಪಡಿಸಿಕೊಂಡೆ. ''ಮೀಟರ್‌ನಲ್ಲಿ ಅಷ್ಟು ತೋರಿಸುತ್ತಿದೆ ನಿಜ. ಆದರೆ ನಿಮ್ಮ ಹೋಟೆಲ್ ವಿಮಾನ ನಿಲ್ದಾಣಕ್ಕೆ ತೀರಾ ಹತ್ತಿರದಲ್ಲಿದೆ. ಅಲ್ಲಿಂದ ಇಲ್ಲಿಗೆ ನೇರವಾಗಿ ಬಂದರೆ 15 ಡಾಲರ್ ಅಷ್ಟೇ ಆಗುವುದು. ನಾನು ಸುಮಾರು ಎರಡೂವರೆಯಿಂದ ಮೂರು ತಾಸು ನಿಮ್ಮನ್ನು ಮಧ್ಯರಾತ್ರಿಯಲ್ಲಿ ವಿನಾಕಾರಣ ಸುತ್ತಾಡಿಸಿದೆ, ಇದರಲ್ಲಿ ನಿಮ್ಮ ತಪ್ಪೇನೂ ಇರಲಿಲ್ಲ. ನನ್ನಿಂದಾಗಿ ನಿಮ್ಮ ಸಮಯ, ನಿದ್ರೆ ಎರಡೂ ಹಾಳಾಯಿತು. ದಯವಿಟ್ಟು ಕ್ಷಮಿಸಿ, ನಿಲ್ದಾಣದಿಂದ ಇಲ್ಲಿಗೆ ಬಂದರೆ ಎಷ್ಟು ಬಾಡಿಗೆ ಆಗುತ್ತದೆಯೋ ಅಷ್ಟನ್ನೇ ಕೊಡಿ ಸಾಕು'' ಎಂದ. ನಾನು ಹೋಟೆಲ್ ವಿಳಾಸವನ್ನು ಸರಿಯಾಗಿ ಹೇಳದೇ ಇದ್ದುದರಿಂದ ಇದರಲ್ಲಿ ನನ್ನ ತಪ್ಪೂ ಇದೆ, ಪೂರ್ತಿ ಅವನದ್ದೇ ಅಲ್ಲ ಎಂದು 100 ಡಾಲರ್ ಕೊಟ್ಟೆ. ಆತ 85 ಡಾಲರ್ ಹಿಂತಿರುಗಿಸಿ, ಮತ್ತೊಮ್ಮೆ ಕ್ಷಮೆ ಕೇಳಿ ಅಲ್ಲಿಂದ ಹೊರಟುಹೋದ. ಜನ ಇಷ್ಟು ಪ್ರಾಮಾಣಿಕರಾಗಿರುತ್ತಾರೆಯೇ ಎಂದು ನನಗೆ ಆಶ್ಚರ್ಯವಾಯಿತು ಎಂದರು.

ಇದೇ ರೀತಿಯ ಅನುಭವ ಇನ್ನಿಬ್ಬರಿಗೂ ಆಗಿತ್ತು. ಅವರೂ ತಮ್ಮ ಅನುಭವ ಹಂಚಿಕೊಂಡರು. ಅವರಿಬ್ಬರೂ ಆ ರಾತ್ರಿ ಏನೋ ಕೊಳ್ಳಲು ಟ್ಯಾಕ್ಸಿ ಹತ್ತಿ ಹೊರಟರಂತೆ. ತಮಗೆ ಬೇಕಾದ ವಸ್ತು ಎಲ್ಲಿ ಸಿಗುತ್ತದೆಯೋ ಅಲ್ಲಿಗೆ ಕರೆದುಕೊಂಡು ಹೋಗು ಎಂದು ಟ್ಯಾಕ್ಸಿಯವನಲ್ಲಿ ಹೇಳಿದರಂತೆ. ಅವನು ಎಲ್ಲಿಗೆ ಹೋದರೂ ಆ ಅಂಗಡಿಗಳು ಮುಚ್ಚಿದ್ದವಂತೆ. ಸುಮಾರು ಅರ್ಧ-ಮುಕ್ಕಾಲು ಗಂಟೆ ಸುತ್ತಿದರೂ ಪ್ರಯೋಜನವಾಗದಿದ್ದಾಗ, ಪುನಃ ಹೋಟೆಲ್‌ಗೆ ಬಂದರಂತೆ. ಎಷ್ಟಾಯಿತು ಎಂದು ಕೇಳಿದಾಗ, ಆ ಟ್ಯಾಕ್ಸಿ ಚಾಲಕ ಹಣ ಬೇಡ ಎಂದನಂತೆ. ಕಾರಣ ಕೇಳಿದಾಗ, ''ನಿಮ್ಮ ಕೆಲಸ ಆಗಲಿಲ್ಲ, ಸುಮ್ಮನೆ ನಿಮ್ಮ ಸಮಯ ಹಾಳಾಯಿತು, ಕ್ಷಮಿಸಿ'' ಎಂದು ಹೊರಟುಬಿಟ್ಟನಂತೆ.

ಇದಾಗಿ ಎರಡು ದಿನವಾಗಿತ್ತು. ನಾವೆಲ್ಲ ಪಕ್ಕದಲ್ಲೇ ಇರುವ ಮಕಾವು ದೇಶಕ್ಕೆ ಹೋಗಿ ಹಿಂತಿರುಗಿ ಬರುತ್ತಿದ್ದೆವು. ಹಾಂಗ್ ಕಾಂಗ್‌ನಿಂದ ಮಕಾವುಗೆ ಹೋಗಿ ಬರಲು ಮೂರು ವಿಧಾನವಿದೆ. ವಾಯು ಮಾರ್ಗ, ಸೇತುವೆಯ ಅಥವಾ ಜಲಮಾರ್ಗ. ಹಾಂಗ್ ಕಾಂಗ್‌ನಿಂದ ಆ ಪುಟ್ಟ ದೇಶಕ್ಕೆ ಹೋಗಿ ಬರಲು ನಾಲ್ಕು ಸೇತುವೆಗಳಿವೆ. ಸೇತು ಮಾರ್ಗವಾಗಲಿ, ಜಲಮಾರ್ಗವಾಗಲಿ, ಪ್ರಯಾಣಕ್ಕೆ ಒಂದು ಗಂಟೆಯ ಸಮಯ ಬೇಕು. ಕೆಲವು ಕಾರಣಗಳಿಂದ ಬಹುತೇಕ ಮಂದಿ ಜಲಮಾರ್ಗವಾಗಿ, ಫೆರ್ರಿ ಅಥವಾ ದೊಡ್ಡ ದೋಣಿಯಲ್ಲಿ ಹೋಗುವುದನ್ನು ಇಷ್ಟಪಡುತ್ತಾರೆ. ನಮ್ಮ ತಂಡವೂ ಅದನ್ನೇ ಆಯ್ದುಕೊಂಡಿತ್ತು.

ನಮ್ಮ ತಂಡದಲ್ಲಿ ಒಬ್ಬರು ಶಾಸಕರಿದ್ದರು. ಮಕಾವುನಿಂದ ಹಿಂತಿರುಗಿ ಹಾಂಗ್ ಕಾಂಗ್‌ಗೆ ಬಂದು ಇಳಿದು ಇಮಿಗ್ರೇಷನ್ ಮುಗಿಸಿ ಹೊರಗೆ ಬಂದ ನಂತರ ತಾವು ದೋಣಿಯಲ್ಲಿ ಮೊಬೈಲ್ ಫೋನ್ ಬಿಟ್ಟು ಬಂದಿರುವುದು ಅವರ ಅರಿವಿಗೆ ಬಂತು. ಹಿಂತಿರುಗಿ ಹೋಗಿ ದೋಣಿಯಲ್ಲಿರುವ ಮೊಬೈಲ್ ತೆಗೆದುಕೊಂಡು ಬರಬೇಕೆಂದರೆ, ಆಗಲೇ ಕಾನೂನುಬದ್ಧವಾಗಿ ಹಾಂಗ್ ಕಾಂಗ್ ದೇಶದ ಒಳಗೆ ಬಂದಾಗಿತ್ತು. ದಡದಲ್ಲಿ ಇರುವ ದೋಣಿಗೆ ಹೋಗಬೇಕೆಂದರೂ ಕಾನೂನುಬದ್ಧವಾಗಿ ದೇಶದಿಂದ ಹೊರಗೆ ಹೋಗಿ, ಮೊಬೈಲ್ ಪಡೆದು, ಪುನಃ ದೇಶದೊಳಗೆ ಬರುವಾಗ ಯಾವ ನಡಾವಳಿಗಳಿವೆಯೋ, ಪ್ರಕ್ರಿಯೆಗಳಿವೆಯೋ ಅವನ್ನೆಲ್ಲ ಪೂರೈಸಿಯೇ ಬರಬೇಕಾಗಿತ್ತು. ಶಾಸಕರಿಗೆ ಹೊಸ ಮೊಬೈಲ್ ಖರೀದಿಸುವುದು ದೊಡ್ಡ ವಿಷಯವೇನೂ ಆಗಿರಲಿಲ್ಲ. ಇಲ್ಲಿ ಹಣದ ವಿಷಯ ಪ್ರಧಾನವೇ ಆಗಿರಲಿಲ್ಲ. ಆದರೆ ಅದರಲ್ಲಿರುವ ಸಾವಿರಾರು ದೂರವಾಣಿ ಸಂಖ್ಯೆಗಳು, ಒಂದಷ್ಟು ಫೋಟೋಗಳು, ಆಧಾರ್ ಕಾರ್ಡ್, ಪಾನ್ ಕಾರ್ಡ್‌ನಂಥ ಕೆಲವು ದಾಖಲೆಗಳು ಕಳೆದುಹೋದರೆ ಯಾರಿಗಾದರೂ ಕಷ್ಟವೇ. ನಮ್ಮ ಜತೆಗಿದ್ದ ಗೈಡ್ ಶಾಸಕರನ್ನು ಕರೆದುಕೊಂಡು ಹೋಗಿ, ಅಧಿಕಾರಿಗಳ ಜತೆ ಸಂಪರ್ಕ ಸಾಧಿಸಿ, ವಿಷಯವನ್ನು ವಿವರಿಸಿದರು. ಆದರೆ, ನಾವು ಬಂದಿದ್ದ ದೋಣಿ ಆಗಲೇ ಹಾಂಗ್ ಕಾಂಗ್ ಬಿಟ್ಟು ಮಕಾವು ಕಡೆಗೆ ತೆರಳಿತ್ತು. ಹಾಂಗ್ ಕಾಂಗ್‌ನಿಂದ ಮಕಾವುಗೆ ಹೋಗಲು ಒಂದು ಗಂಟೆ, ಅಲ್ಲಿ ಜನರನ್ನು ಇಳಿಸಿ, ಬೇರೆಯವರನ್ನು ಹತ್ತಿಸಿಕೊಳ್ಳಲು ಒಂದು ಗಂಟೆ, ಹಿಂತಿರುಗಿ ಬರಲು ಒಂದು ಗಂಟೆ, ಹೀಗೆ ಕನಿಷ್ಠ ಮೂರು ಗಂಟೆ ಬೇಕಾಗಿತ್ತು. ಶಾಸಕರ ಬಳಿ ಸಮಯದ ಕೊರತೆಯೇನೂ ಇರಲಿಲ್ಲ. ಆದರೆ ಮೂರು ಗಂಟೆ ಆ ಬಂದರಿನಲ್ಲಿ ಏನು ಮಾಡುವುದು? ಅಷ್ಟಕ್ಕೂ ಮೊಬೈಲ್ ಸಿಕ್ಕೇಬಿಡುತ್ತದೆ ಎನ್ನುವ 'ಗ್ಯಾರಂಟಿ' ಯಾದರೂ ಏನು? ದೂರು ಕೊಟ್ಟು, ಜತೆಗಿದ್ದ ಅವರ ಮಗನ ದೂರವಾಣಿ ಸಂಖ್ಯೆಯನ್ನು ನೀಡಿ, ಮೊಬೈಲ್ ಸಿಕ್ಕಿದರೆ ತಿಳಿಸಿ ಎಂದು ಕೇಳಿಕೊಂಡು, ನಮ್ಮ ಜತೆ ಅವರೂ ಹೊರಟರು. ಬರೋಬ್ಬರಿ ಮೂರು ಗಂಟೆಯ ನಂತರ ಶಾಸಕರ ಮಗನಿಗೆ ಬಂದರಿನ ಅಧಿಕಾರಿಗಳಿಂದ ಕರೆ ಬಂತು. ಮೊಬೈಲ್ ಸಿಕ್ಕಿರುವುದಾಗಿಯೂ, ಬಂದು ತೆಗೆದುಕೊಂಡು ಹೋಗಬೇಕೆಂದೂ ಅಲ್ಲಿಯ ಅಧಿಕಾರಿಗಳು ತಿಳಿಸಿದರು. ಶಾಸಕರ ಅದೃಷ್ಟ ಚೆನ್ನಾಗಿತ್ತು. ಏನಿಲ್ಲವೆಂದರೂ ಐದು ನೂರು ಜನ ಹೋಗಿ ಬರುವಂಥ ಒಂದು ದೋಣಿಯಲ್ಲಿ ಕಳೆದುಕೊಂಡ ಮೊಬೈಲ್ ಪುನಃ ಸಿಕ್ಕಿದ್ದನ್ನು ಕಂಡು ಶಾಸಕರಿಗೇ ಆಶ್ಚರ್ಯವಾಗಿರಬೇಕು!

ಇನ್ನೊಂದು ಸಣ್ಣ, ಪ್ರಮುಖ ಘಟನೆ ಹೇಳಿಬಿಡುತ್ತೇನೆ. ನಾವು ಉಳಿದುಕೊಂಡಿದ್ದ ಹೋಟೆಲ್‌ನ ರಿಸೆಪ್ಶನ್‌ನಲ್ಲಿ ಯಾರೋ ಒಂದು ಸಣ್ಣ ಬಗಲಚೀಲವನ್ನು ಮರೆತು ಹೋಗಿದ್ದರು. ನಮ್ಮ ತಂಡದವರದ್ದೇ ಇರಬೇಕೆಂದು ಕೇಳಿದರೆ, ಅದು ನಮ್ಮವರದ್ದಾಗಿರಲಿಲ್ಲ. ಸರಿ, ಯಾರೋ ಮರೆತಿರಬೇಕೆಂದು ಅದನ್ನು ಹೋಟೆಲ್ ಸಿಬ್ಬಂದಿಗೆ ಕೊಟ್ಟೆ. ಆ ಹೋಟೆಲಿನ ರಿಸೆಪ್ಶನ್‌ನಲ್ಲಿ ನಾಲ್ಕು ಜನರಿದ್ದರು. ನನ್ನಿಂದ ಚೀಲ ಪಡೆದಾಕೆ ಉಳಿದ ಮೂವರನ್ನೂ ಕರೆದಳು. ಅವರ ಸಮ್ಮುಖದಲ್ಲಿ ಚೀಲ ತೆರೆದು ನೋಡಿದರೆ ಒಂದು ಕಂತೆ ಡಾಲರ್, ಒಂದಷ್ಟು ಚೀಟಿಗಳಿದ್ದವೇ ವಿನಾ ಪರಿಚಯದ ಯಾವ ಕುರುಹುಗಳೂ ಇರಲಿಲ್ಲ. ಮಾರನೆಯ ದಿನ ನಾನು ರಿಸೆಪ್ಶನ್‌ಗೆ ಹೋದಾಗ, ಅಲ್ಲಿ ಕೆಲಸ ಮಾಡುವವರು ಬದಲಾಗಿದ್ದರು. ಆದರೆ ಆ ಚೀಲ ಅಲ್ಲಿಯೇ ಇತ್ತು. ಅಲ್ಲಿಗೆ ಆಗಲೇ ಸುಮಾರು ಮೂವತ್ತಾರು ಗಂಟೆ ಕಳೆದಿತ್ತು. ಒಂದು ತಂಡ, ನಾಲ್ಕು ದಿನದ ಪ್ರವಾಸ, ನಾಲ್ಕು ಘಟನೆಗಳು, ಅನುಭವಗಳು!

ಇದನ್ನೆಲ್ಲ ಕೇಳಿದಾಗ, ಕಂಡಾಗ, ಹರಿಶ್ಚಂದ್ರ ಹುಟ್ಟಿದ್ದು ಭಾರತದಲ್ಲೋ ಅಥವಾ ಹಾಂಗ್ ಕಾಂಗ್‌ನಲ್ಲೋ ಎಂಬ ಅನುಮಾನ ಬಂದದ್ದು ಸುಳ್ಳಲ್ಲ. ಭಾರತದಲ್ಲೇ ಹುಟ್ಟಿದ್ದರೂ, ಹಾಂಗ್ ಕಾಂಗ್‌ಗೆ ಎಂದಾದರೂ ಬಂದು ಹೋಗಿದ್ದನೇ? ಅಥವಾ ಹರಿಶ್ಚಂದ್ರನಂಥವರು ಯಾರಾದರೂ ಆ ದೇಶದಲ್ಲೂ ಹುಟ್ಟಿದ್ದರೇ ಎಂಬ ಸಂಶಯ ಮೂಡಿದ್ದಂತೂ ಸತ್ಯ. ನಮ್ಮ ದೇಶದಲ್ಲಿ ಪ್ರಾಮಾಣಿಕರು ಇಲ್ಲವೇ ಇಲ್ಲವೆಂದಲ್ಲ. ಆದರೆ, ಹಾಂಗ್ ಕಾಂಗ್‌ಗೆ ಹೋಲಿಸಿದರೆ ತೀರಾ ಕಡಿಮೆ ಎಂದೇ ಹೇಳಬೇಕು. ಹೊಸಬರು, ಪ್ರವಾಸಿಗರು ಎಂದು ತಿಳಿಯುತ್ತಿದ್ದಂತೆಯೇ ವಿನಾಕಾರಣ ಊರು ಸುತ್ತಿಸುವ ಟ್ಯಾಕ್ಸಿ ಅಥವಾ ಆಟೋರಿಕ್ಷಾ ಚಾಲಕರ ಸಂಖ್ಯೆ ಎಷ್ಟಿಲ್ಲ? ನನ್ನ ನಾಲ್ಕು ಬಾರಿಯ ಹಾಂಗ್ ಕಾಂಗ್ ಪ್ರವಾಸದಲ್ಲಿ ಮೀಟರ್ ಹಾಕದೇ ನಡೆಸಿದ ಟ್ಯಾಕ್ಸಿಯನ್ನು ಒಮ್ಮೆಯೂ ಕಂಡಿಲ್ಲ. ಮೀಟರ್ ಮೇಲೆ ಇಂತಿಷ್ಟು ಕೊಡಿ, ಅಲ್ಲಿಂದ ಹಿಂತಿರುಗಿ ಬರುವಾಗ ಬಾಡಿಗೆ ಸಿಗುವುದಿಲ್ಲ ಎಂಬ ಸಬೂಬು ಹೇಳಿದವರನ್ನು ನೋಡಿಲ್ಲ. ಹೋಗಲಿ, ಸಾವಿರಾರು ರೂಪಾಯಿ ಬೆಲೆಬಾಳುವ ಮೊಬೈಲ್ ಸಿಕ್ಕಿದಾಗ ಹಿಂತಿರುಗಿ ತಲುಪಿಸುವ ಜನ ನಮ್ಮಲ್ಲಿ ಎಷ್ಟಿದ್ದಾರೆ ಎನ್ನುವುದನ್ನು ನಾವೇ ಪ್ರಶ್ನಿಸಿಕೊಳ್ಳೋಣ. ಇಂಥ ವಿಷಯ ಬಂದಾಗ, ನಮ್ಮಲ್ಲಿ ಘಟಿಂಗರ ಸಂಖ್ಯೆ ಪ್ರಾಮಾಣಿಕರಿಗಿಂತ ಹೆಚ್ಚೇ ಇದೆ ಎಂದು ಪ್ರಾಮಾಣಿಕವಾಗಿ ಒಪ್ಪಿಕೊಳ್ಳೋಣ.

ಹಾಗಾದರೆ ನಾವು ಎಲ್ಲಿ ಎಡವುತ್ತಿದ್ದೇವೆ? ಕೇವಲ ಹರಿಶ್ಚಂದ್ರ ಹುಟ್ಟಿದ ನಾಡು ಎನ್ನುವ ಕಾರಣಕ್ಕಾಗಿ ಪ್ರಾಮಾಣಿಕತೆ ರಕ್ತಗತವಾಗಿ ಬರುವುದಿಲ್ಲ, ಜನರ ಬಾಯಲ್ಲಿ ಸತ್ಯವೇ ಹೊರಗೆ ಬರುವುದಿಲ್ಲ ಎನ್ನುವುದಕ್ಕೆ ನಮ್ಮ ದೇಶವೇ ಸಾಕ್ಷಿ. ಇಂದಿನ ತಲೆಮಾರಿನಲ್ಲಿ ಅದೆಷ್ಟೋ ಜನರಿಗೆ ಹರಿಶ್ಚಂದ್ರನ ಕಥೆಯೇ ಗೊತ್ತಿಲ್ಲ. ಹರಿಶ್ಚಂದ್ರ ಹುಟ್ಟದಿದ್ದರೂ, ಭೇಟಿಕೊಡದಿದ್ದರೂ, ಇನ್ನೊಂದು ದೇಶದಲ್ಲಿ ಪ್ರಾಮಾಣಿಕತೆ ಮತ್ತು ಸತ್ಯ ನೆಲೆಯೂರಿದೆ ಎಂದರೆ, ಅದು ಅಲ್ಲಿಯ ಮಕ್ಕಳಿಗೆ ಅವರ ಮನೆಯಿಂದಲೇ ಸಿಗುವ ಸಂಸ್ಕಾರ ಎಂದೇ ಹೇಳಬೇಕು. ಬಹುಶಃ ನಮ್ಮಲ್ಲಿ ಕೊರತೆಯಾಗುತ್ತಿರುವುದು ಇದೇ. ಲೆಕ್ಕಾಚಾರ, ಗಣಿತ, ವಿಜ್ಞಾನ, ತಂತ್ರಜ್ಞಾನ, ಭಾಷೆ, ಸ್ಪರ್ಧಾತ್ಮಕ ಪರೀಕ್ಷೆಗೆ ನಮ್ಮ ಮಕ್ಕಳನ್ನು ತಯಾರುಮಾಡುವ ಭರದಲ್ಲಿ ನಾವು ಮಕ್ಕಳಿಗೆ ನೀತಿಪಾಠ ಹೇಳಿಕೊಡುವುದನ್ನೇ ಮರೆಯುತ್ತಿದ್ದೇವೆ ಎಂದೆನಿಸುತ್ತದೆ. ನಮ್ಮ ಮಕ್ಕಳಿಗೆ ಪ್ರಾಮಾಣಿಕತೆಯ ಪಾಠವನ್ನು ನಾವೇ ಹೇಳಿಕೊಡಬೇಕೇ ವಿನಾ, ಪಕ್ಕದ ಪಾಕಿಸ್ತಾನದಿಂದ ಬಯಸಿದರೆ ಯಾವ ಪ್ರಯೋಜನವೂ ಇಲ್ಲ!

ಅಭಿಮತ

ಡಾ. ರಾಜೇಂದ್ರಕುಮಾರ್ ಕೆ.ಮುದ್ನಾಳ್

ಇದು ಬಸವಣ್ಣನ ಸ್ಥಾವರೀಕರಣ

'ಎನ್ನ ಕಾಲೇ ಕಂಬ, ದೇಹವೇ ದೇಗುಲ, ಶಿರವೇ ಹೊನ್ನಕಳಸ' ಎಂದ ಬಸವಣ್ಣನನ್ನು ನಾವು ದೇವಾಲಯದಲ್ಲಿಟ್ಟು ಪೂಜಿಸುತ್ತಾ, ವಚನಗಳನ್ನು ನಿರಾಕರಿಸಿದ್ದೇವೆ. ಭಕ್ತಿಭಂಡಾರಿ, ಜಗಜ್ಯೋತಿ, ವಿಶ್ವ ಗುರು, ಸಾಂಸ್ಕೃತಿಕ ನಾಯಕ ಎಂಬೆಲ್ಲಾ ಬಿರುದು-ಬಾವಲಿಗಳಿಂದ ಬಸವಣ್ಣನನ್ನು ಮೆರೆಸಿದ್ದೇವೆ, ಆದರೆ ಅವರ ವಿಚಾರಗಳನ್ನು ಮರೆತಿದ್ದೇವೆ.

'ಎನ್ನ ನಡೆಯೊಂದು ಪರಿ, ಎನ್ನ ನುಡಿಯೊಂದು ಪರಿ' ಎಂದ ಬಸವಣ್ಣ, ತನ್ನನ್ನು ತಾನು ಪ್ರಾಯಶ್ಚಿತ್ತಕ್ಕೆ ಒಳಪಡಿಸಿಕೊಂಡ ಚೇತನ. ಆದರೆ ಬಸವಣ್ಣನ ಅನುಯಾಯಿಗಳು ಎಂದು ಹೇಳಿಕೊಳ್ಳುವವರು ಇಂಥ ಸ್ವವಿಮರ್ಶೆ ಮಾಡಿಕೊಂಡಿದ್ದಾರೆಯೇ? ಇವರಲ್ಲಿ ಕೆಲವರು ತಾವಾಡುವ ಮಾತಿಗೂ, ಇಡುವ ಹೆಜ್ಜೆಗೂ ತಾಳಮೇಳ ಇಲ್ಲದಂತೆ ವರ್ತಿಸುತ್ತಿದ್ದಾರೆ. ಇದು ಬಸವಣ್ಣನ ವಿಚಾರಗಳಿಗೆ ಮಾಡಿದ ಅಪಚಾರ ಎನ್ನಬಹುದು. 'ಕಾಯಕವೇ ಮುಖ್ಯ' ಎಂದ ಶರಣರನ್ನು ನಾವಿಂದು ಜಾತಿಗೆ ಸೀಮಿತಗೊಳಿಸಿದ್ದೇವೆ. ವಚನಕಾರರು ಎಲ್ಲಾ ಜಾತಿಗಳನ್ನೂ ಮೀರಿ 'ಪ್ರೀತಿಯ ಜಾತಿ' ಹಂಚಿದರು. ಅದು ಇಂದು 'ಜಾತಿಯ ಪ್ರೀತಿ'ಯಾಗಿ ಮಾರ್ಪಾಡಾಗಿರುವುದು ದುರಂತ.

ಬಸವಣ್ಣನವರು ಎಲ್ಲಾ ಜಾತಿಯ ಕಾಯಕಜೀವಿಗಳನ್ನು ಒಂದುಗೂಡಿಸಿ ಶರಣತ್ವ-ಕಾಯಕತ್ವ-ದಾಸೋಹತ್ವವನ್ನು ಪ್ರತಿಪಾದಿಸಿದರು, 'ಎನಗಿಂತ ಕಿರಿಯರಿಲ್ಲ, ಶಿವಶರಣರಿಗಿಂತ ಹಿರಿಯರಿಲ್ಲ' ಎನ್ನುವ ಮೂಲಕ ಸಾಂಸ್ಕೃತಿಕ ವ್ಯಕ್ತಿತ್ವಕ್ಕೆ ಸಾಣೆ ಹಿಡಿದರು. ಆದರೆ ಇಂದು ಆಯಾ ಜಾತಿ/ಸಮುದಾಯದ ಮುಖಂಡರು 'ನಮ್ಮ ಜಾತಿಯ ಶರಣನೇ ಶ್ರೇಷ್ಠ' ಎಂದು ಕೊಂಡಾಡುವುದಕ್ಕೆ ಏನನ್ನುವುದು?!

ಶರಣರು ಹೇಳಹೊರಟಿದ್ದು, ಜಾತಿ ಜಗತ್ತನ್ನು ಮೀರಿದ ಸಮಾನತೆಯ ಜಂಗಮತ್ವವನ್ನು. ಆದರೆ ನಾವು ಶರಣರನ್ನು 'ಜಾತಿ ಬಾವಿ'ಗೆ ನೂಕಿ, ಅವರ ವಿಚಾರಗಳು ಬಾವಿ ಬಿಟ್ಟು ಹೊರಬಾರದಂತೆ ಕಣಿವೆ ಸೃಷ್ಟಿಸಿದ್ದೇವೆ. ಏಕೆಂದರೆ, ಆಯಾ ಜಾತಿಯ ಶರಣರ ಜಯಂತಿಯನ್ನು ಆ ಜಾತಿಯ ಜನರಷ್ಟೇ ಆಚರಿಸುವುದು. ಇದು ಯಾವ ಸಮಾಜದ ನಿರ್ಮಾಣಕ್ಕಾಗಿ? 'ಜಾತಿಗಣತಿ'ಗಿಂತ 'ಪ್ರೀತಿಗಣತಿ' ಮುಖ್ಯವಲ್ಲವೇ? ಎಲ್ಲಾ ಜಾತಿ-ಜನಾಂಗದವರು ಶರಣರ ಜಯಂತಿಯನ್ನು ಆಚರಿಸಿದಾಗ, ಶರಣರ ತತ್ವಗಳು ಗಟ್ಟಿಗೊಳ್ಳುತ್ತವೆ. ಇಲ್ಲವಾದಲ್ಲಿ ಬುನಾದಿ ಇಲ್ಲದ ಮನೆಯನ್ನು ಕಟ್ಟಿದಂತೆ.

ಮಾನವೀಯತೆಯ ಉಸಿರಾಟಕ್ಕಾಗಿ ಶರಣರು ಹೋರಾಡಿದ ಕ್ರಮವನ್ನು ಹೇಳಲು ಸಾಧ್ಯವೇ? ಇವನಾರವ ಇವನಾರವ ಇವನಾರವ ಎನ್ನುತ್ತ ಇವ ನಮ್ಮವ, ಇವ ನಮ್ಮವ, 'ಇವ ನಮ್ಮ ಜಾತಿಯವ' ಎಂದು ಬಸವಣ್ಣನ ವಚನಕ್ಕೆ ಅರ್ಥ ಕಲ್ಪಿಸಿಕೊಂಡು ನಿರ್ಜೀವಿಯಂತೆ ವರ್ತಿಸುತ್ತಿದ್ದೇವೆ. ಈ ಜಾತಿ ಅಳಿಸಿ ಪ್ರೀತಿಯ 'ಹುಟ್ಟು' ಹಾಕುವುದಕ್ಕೆ ಸಾಧ್ಯವಾಗುತ್ತಿಲ್ಲವೇಕೆ? ಎಂಬುದೇ ಯಕ್ಷಪ್ರಶ್ನೆಯಾಗಿ ಕಾಡುತ್ತಿದೆ. ಮಹಾಭಾರತದಲ್ಲಿ ಯಕ್ಷ ಕೇಳಿದ ಪ್ರಶ್ನೆಗೆ ಧರ್ಮರಾಜ ಉತ್ತರಿಸಿದ. ಆದರೆ 'ಕಲಿಭಾರತ'ದಲ್ಲಿ ಜಾತಿಯೆಂಬ ಯಕ್ಷನ ಪ್ರಶ್ನೆಗಳಿಗೆ ಉತ್ತರ ಸಿಗದೆ ಕಣ್ಣಿದ್ದೂ ಕುರುಡರಾಗಿದ್ದೇವೆ ಎನಿಸುತ್ತದೆ. ಏಕೆಂದರೆ, ವ್ಯಕ್ತಿಪೂಜೆಯೇ ಗುಡಿ-ಗೋಪುರವಾಗಿ ಶರಣರ ವಿಚಾರಗಳು ಅನಾಥಾಲಯದ ಬಾಗಿಲು ತಲುಪಿವೆ. ''ದ್ವೈತಾದ್ವೈತವನೋದಿ ಏನು ಮಾಡುವಿರಯ್ಯಾ? ನಮ್ಮ ಶರಣಿಗುರಿ (ಯ)ಗರಗಾಗಿ ಕರಗದನ್ನಕ್ಕ, ಸ್ಥಾವರ ಜಂಗಮವೊಂದೆ ಎಂದು ನಂಬದನ್ನಕ್ಕ ಕೂಡಲಸಂಗಮದೇವಾ, ಬರಿಯ ಮಾತಿನ ಮಾಲೆಯಲೇನಹದು?''- ಬಸವಣ್ಣನವರ ಈ ವಚನವು ಸಮಾಜವನ್ನು ನಿರ್ದೇಶಿಸುತ್ತದೆ.

(ಲೇಖಕರು ಹವ್ಯಾಸಿ ಬರಹಗಾರರು)

ಹರ್ಷದ ಕೂಳಿನ ಆಸೆಗೆ, ವರ್ಷದ ಕೂಳು ಕೈತಪ್ಪದಿರಲಿ

ಕಿವಿಮಾತು

ಮಿರ್ಲೆ ಚಂದ್ರಶೇಖರ
vveditoped@gmail.com

2024ರಲ್ಲಿ ನಡೆದ ಯುಪಿಎಸ್‌ಸಿ ಪರೀಕ್ಷೆಯ ಫಲಿತಾಂಶ ಹೊರಬಿದ್ದಿದೆ. ಇದರಲ್ಲಿ ಆಯ್ಕೆಯಾದ 1009 ಮಂದಿಯಲ್ಲಿ ಕರ್ನಾಟಕದ 30ಕ್ಕೂ ಹೆಚ್ಚು ಅಭ್ಯರ್ಥಿಗಳು ಇರುವುದು ಸಂತೋಷದ ವಿಷಯ. ಅಭ್ಯರ್ಥಿಗಳ ಪರಿಶ್ರಮ ಎಷ್ಟಿತ್ತು ಎಂಬುದನ್ನು ಅವರು ಮಾಧ್ಯಮಗಳಲ್ಲಿ ನೀಡಿದ ಸಂದರ್ಶನಗಳಲ್ಲಿ ನೋಡಿದ್ದೇವೆ. ಈಗ ನಮಗೆ ಇವರಷ್ಟೇ ಕಾಣುತ್ತಿರುವುದು. ಆದರೆ ಹಲವಾರು ವರ್ಷಗಳಿಂದ ಹಗಲಿರುಳೂ ಅಭ್ಯಾಸ ಮಾಡಿಯೂ ಯಶಸ್ಸು ಕಾಣದವರು ಲಕ್ಷಾಂತರ ಮಂದಿ ಇದ್ದಾರೆ. ಇಂಥ ಯುವಕ-ಯುವತಿಯರು ಅದೇ ಗುಂಗಿನಲ್ಲಿ ಇರುತ್ತಾರೆ. ಇವರಲ್ಲಿ ಕೆಲವರು ಮುಂದಿನ ಪರೀಕ್ಷೆಗಳಲ್ಲಿ ಆಯ್ಕೆ ಆಗಬಹುದು. ಆದರೆ ನಾವೀಗ ಯೋಚಿಸಬೇಕಿರುವುದು ನಿರಾಶರಾಗಿರುವ ಗಣನೀಯ ಸಂಖ್ಯೆಯ ಅಭ್ಯರ್ಥಿಗಳ ಬಗ್ಗೆ. ಅವರಲ್ಲಿ ಸಾಕಷ್ಟು ಮಂದಿ ಯಾವೊಂದು ಕೆಲಸವನ್ನೂ ದಕ್ಕಿಸಿಕೊಳ್ಳಲಾಗದೆ ಅತಂತ್ರ ಸ್ಥಿತಿಗೆ ತಲುಪಿಬಿಡುತ್ತಾರೆ ಎಂಬುದು ವಿಷಾದನೀಯ. ಈ ವಿಷಯದ ಬಗ್ಗೆ ನಾವು ಗಮನ ಹರಿಸಬೇಕಿದೆ.

ಸುಮಾರು 30 ವರ್ಷಗಳ ಹಿಂದೆ ಮಂಡ್ಯದಲ್ಲಿ ಸರಕಾರಿ ಕರ್ತವ್ಯವನ್ನು ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ, ಆಗ ತಾನೆ ಸಿವಿಲ್ ಎಂಜಿನಿಯರಿಂಗ್ ಪದವಿ ಮುಗಿಸಿದ್ದ ಹುಡುಗನೊಬ್ಬ ಟ್ರೈನಿಯಾಗಿ ನಮ್ಮ ಕಚೇರಿಗೆ ನಿಯೋಜಿತಗೊಂಡಿದ್ದ. ಆತ ಭಾರತೀಯ ನಾಗರಿಕ ಸೇವೆಗೆ ಸೇರಲೆಂದು ಯುಪಿಎಸ್‌ಸಿ ಪರೀಕ್ಷೆಗೆ ತಯಾರಾಗುತ್ತಿದ್ದ. ಅವನಿಗೋ ಬಹಳವೇ ಆತ್ಮವಿಶ್ವಾಸವಿತ್ತು- ಐಎಎಸ್ ಪರೀಕ್ಷೆಯನ್ನು ಪಾಸು ಮಾಡಿಯೇ ಮಾಡುತ್ತೇನೆ ಅಂತ. ಕುಳಿತಲ್ಲಿ ನಿಂತಲ್ಲಿ ಅದೇ ಗುಂಗಿನಲ್ಲಿ ಇರುತ್ತಿದ್ದ. ಅತೀವ ಆಸೆಯನ್ನೂ ನಿರೀಕ್ಷೆಯನ್ನೂ ಇಟ್ಟುಕೊಂಡಿದ್ದ ಆ ಯುವಕ ಅದೇ ಉತ್ಸಾಹದಲ್ಲಿ, ''ಸರ್, ಇನ್ನೆರಡು ವರ್ಷಗಳಲ್ಲಿ ನಾನು ಡೆಪ್ಯುಟಿ ಕಮಿಷನರ್ ಆಗಿಬಿಡುತ್ತೇನೆ'' ಎನ್ನುತ್ತಿದ್ದ. ಅಪರಿಮಿತ ಶ್ರದ್ಧೆ ಮತ್ತು ಪರಿಶ್ರಮ ಇದ್ದಲ್ಲಿ ಯಾರೇ ಆಗಲಿ ಏನನ್ನಾದರೂ ಸಾಧಿಸಬಹುದು ಎಂಬುದು ಸತ್ಯವೇ; ಆದರೆ ಈ ಹುಡುಗನ ವಿಷಯದಲ್ಲಿ ಯಶಸ್ಸು ದೊರಕಲಿಲ್ಲ. ಇವತ್ತಿಗೂ ಆತ ಯಾವುದೇ ಹುದ್ದೆಯನ್ನು ಪಡೆಯುವುದಕ್ಕಾಗಲೀ ಅಥವಾ ಸ್ವಂತ ಉದ್ಯೋಗವನ್ನು ಕೈಗೊಳ್ಳುವುದಕ್ಕಾಗಲೀ ಆಗದೆ ಹಳ್ಳಿಯಲ್ಲಿ ವಾಸವಿದ್ದಾನೆ. ಅವನು ಓದಿದ ವಿದ್ಯೆಯೂ ಈ ನಿಟ್ಟಿನಲ್ಲಿ ಅವನ ಕೈಹಿಡಿಯಲಿಲ್ಲ. ಇದು ಸಾಲದೆಂಬಂತೆ ಪಿತ್ರಾರ್ಜಿತ ಜಮೀನಿನಲ್ಲಿ ವ್ಯವಸಾಯ ಮಾಡುವುದಕ್ಕೂ ಅವನಿಗೆ ಪರಿಣತಿಯಿಲ್ಲ. ಇದೆಂಥಾ ದುರ್ದೈವವಲ್ಲವೇ?!

ನನ್ನ ಆತ್ಮೀಯ ಗೆಳೆಯರೊಬ್ಬರು ಸರಕಾರಿ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದರು. ಅವರ ಏಕೈಕ ಪುತ್ರ ಒಂಬತ್ತು ವರ್ಷಗಳ ಹಿಂದೆ ಎಂಜಿನಿಯರಿಂಗ್ ಪದವಿ ಪಡೆದು ಯುಪಿಎಸ್‌ಸಿ ಪರೀಕ್ಷೆಯನ್ನು ತೆಗೆದುಕೊಳ್ಳಲು ಉದ್ದೇಶಿಸಿದ. ಈ ಸಂಬಂಧವಾಗಿ ದೆಹಲಿಗೆ ತೆರಳಿ ಅಲ್ಲಿನ ಕೇಂದ್ರವೊಂದರಲ್ಲಿ ತರಬೇತಿ ಪಡೆದು ಹಲವು ಬಾರಿ ಪರೀಕ್ಷೆಯನ್ನು ಬರೆದ. ಆದರೆ ಇಲ್ಲಿಯವರೆಗೂ ಪ್ರಿಲಿಮಿನರಿ ಪರೀಕ್ಷೆಯನ್ನು ಕೂಡ ಅವನಿಗೆ ಪಾಸುಮಾಡಲಾಗಿಲ್ಲ. ರಾಜ್ಯ ಸರಕಾರದ ಮಟ್ಟದಲ್ಲಿ ನಡೆಸುವ ಪರೀಕ್ಷೆಗಳನ್ನು ತೆಗೆದುಕೊಳ್ಳಲು ಹೇಳಿದರೂ ಒಪ್ಪದೆ, ಐಎಎಸ್ ಅನ್ನೇ ಪಾಸು ಮಾಡುವುದಾಗಿ ಹಠ ಹಿಡಿದು ಕೂತಿದ್ದಾನೆ. ಅವನ ಮದುವೆಯ ವಯಸ್ಸು ಮೀರುತ್ತಿದೆ, ಉದ್ಯೋಗವೂ ಇಲ್ಲ. ಹೀಗಾಗಿ ಅವನ ಹೆತ್ತವರು, 'ಮಗ ಇನ್ನೂ ದುಡಿಯುತ್ತಿಲ್ಲ, ಅವನ ಭವಿಷ್ಯದ ಬದುಕು ಹೇಗೆ?' ಎಂಬ ಚಿಂತೆಯಲ್ಲೇ ದಿನ ದೂಡುತ್ತಿದ್ದಾರೆ.

ನಿಗದಿತ ಗುರಿ ಸಾಧಿಸಲು ಹಠ, ಶ್ರದ್ಧೆ, ಶ್ರಮ, ನಿರಂತರ ಓದು ಎಲ್ಲವೂ ಬೇಕು. ಮೇಲಿನ ಎರಡೂ ಪ್ರಸಂಗಗಳಲ್ಲಿ ಉಲ್ಲೇಖಿಸಿರುವ ಅಭ್ಯರ್ಥಿಗಳನ್ನು ಮೆಚ್ಚಬೇಕಾದ್ದೇ. ಆದರೆ ಗುರಿ ಮುಟ್ಟುವಲ್ಲಿ ಇಬ್ಬರೂ ವಿಫಲರಾಗಿದ್ದಾರೆ. ಇದಕ್ಕೆ ಕಾರಣ ಅವರುಗಳು ಪಡೆದುಕೊಂಡ ಮಾರ್ಗದರ್ಶನ ಸರಿಯಿಲ್ಲದಿರುವುದು. ಇವರಂತೆ ಲಕ್ಷಾಂತರ ಮಕ್ಕಳು ಪ್ರಯತ್ನದ ಹಾದಿಯಲ್ಲಿ ತೊಡಗಿಸಿಕೊಂಡಿದ್ದರೂ ಎಡವುತ್ತಿದ್ದಾರೆ. ಹಾಗೆ ಆಗದಿರಲೆಂಬುದೇ ಈ ಲೇಖನದ ಉದ್ದೇಶ.

ಕನಸುಗಳು ದೊಡ್ಡದಿರಬೇಕು, ನಿಜ. 'ಮಲಗಿ ಕನಸು ಕಾಣುವುದಲ್ಲ, ಎಚ್ಚರವಿದ್ದು ಕನಸು ಕಾಣಬೇಕು' ಎನ್ನುವ ಮಾತೂ ಸತ್ಯವೇ. ಆದರೆ ಕಾಣುವ ಕನಸುಗಳನ್ನು ನನಸಾಗಿಸಿಕೊಳ್ಳಲು ಇರುವ ಸಾಧಕ-ಬಾಧಕಗಳನ್ನು ತಿಳಿದು ಹೆಜ್ಜೆ ಇಡಬೇಕು. ಮೊದಲು ಜೀವನೋಪಾಯಕ್ಕೆ ಒಂದು ದಾರಿಯನ್ನು ಕಂಡುಕೊಂಡು, ನಂತರದಲ್ಲಿ ಅದರ ಜತೆಜತೆಗೇ ಐಎಎಸ್ ಪಾಸು ಮಾಡುವ ಪ್ರಯತ್ನದಲ್ಲೂ ತೊಡಗಿಸಿಕೊಳ್ಳುವುದು ಕೆಲವರ ವಿಷಯದಲ್ಲಿ ಜಾಣನಡೆ ಎನಿಸಿಕೊಳ್ಳುತ್ತದೆ. ಈ ಯತ್ನದಲ್ಲಿ ಯಶಸ್ಸು ಸಿಕ್ಕಿದರೆ ಅದು 'ಬಂಪರ್ ಲಾಟರಿ' ಹೊಡೆದಂತೆ; ಒಂದೊಮ್ಮೆ ಯಶಸ್ಸು ಸಿಗದಿದ್ದರೂ ಜೀವನೋಪಾಯಕ್ಕೆಂದು ಒಂದು ಉದ್ಯೋಗ ಇರುತ್ತದಲ್ಲಾ? ಹಾಗೆ ನೋಡಿದರೆ, ಯುಪಿಎಸ್‌ಸಿ ಪರೀಕ್ಷೆಯಲ್ಲಿನ ಜಯವು ಇನ್ನೊಂದು ಅರ್ಥದಲ್ಲಿ 'ಬಂಪರ್ ಲಾಟರಿ'ಯೇ ಆಗಿರುತ್ತದೆ ಎನ್ನಿ. ಪೂರ್ಣವಾಗಿ ಅಭ್ಯರ್ಥಿಯ ಬುದ್ಧಿವಂತಿಕೆಯಿಂದಲೇ ಇದು ದಕ್ಕಿರುತ್ತದೆ ಎನ್ನಲಾಗದು. ಏಕೆಂದರೆ, ಪರೀಕ್ಷೆಯನ್ನು ಬರೆದವರಲ್ಲಿ ಹೆಚ್ಚಿನವರು ಬುದ್ಧಿವಂತರೇ ಆಗಿರುತ್ತಾರೆ, ಕಠಿಣವಾದ ತರಬೇತಿಯನ್ನೂ ಪಡೆದಿರುತ್ತಾರೆ. ಆದರೆ ಈ ಪರೀಕ್ಷೆಯಲ್ಲಿ ನಪಾಸಾಗುವವರ ಪ್ರಮಾಣ ಗಣನೀಯವಾಗಿರುತ್ತದೆಯಾದ್ದರಿಂದ ಇದು 'ಹುಲ್ಲಿನ ಬಣವೆಯಲ್ಲಿ ಸೂಜಿಯನ್ನು ಹುಡುಕುವ' ಕಸರತ್ತಿನಂತೆ ಎನಿಸಿಬಿಡುತ್ತದೆ. ಹುಡುಕಿದ ಎಲ್ಲರಿಗೂ ಸೂಜಿ ಸಿಗದು!

ಆದರೆ, ಅಭ್ಯರ್ಥಿಗಳ ಇಂಥ ಬಲಹೀನತೆಯನ್ನು ಅರಿತ ಕೆಲವರು, ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರುಮಾಡುವುದಾಗಿ ಬಿಂಬಿಸಿಕೊಂಡು ತರಬೇತಿ ಕೇಂದ್ರಗಳನ್ನು ತೆರೆದು, ಅದನ್ನು ಹಣ ಮಾಡುವ ದಂಧೆಯಾಗಿಸಿಕೊಂಡಿದ್ದಾರೆ. ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಉದ್ಯಮದಲ್ಲಿ ಪ್ರತಿವರ್ಷ ಅಂದಾಜು 58,000 ಕೋಟಿ ರು. ವ್ಯವಹಾರ ನಡೆಯುತ್ತಿದ್ದು, ಐಎಎಸ್ ಕೋಚಿಂಗ್ ಒಂದೇ ಇದರಲ್ಲಿ 3,000 ಕೋಟಿ ರು.ಗೂ ಹೆಚ್ಚಿನ ಪಾಲನ್ನು ಹೊಂದಿದೆ. 2024ರ ವರ್ಷದಲ್ಲಿ ಭಾರತೀಯ ನಾಗರಿಕ ಸೇವೆಯ ಪರೀಕ್ಷೆಯನ್ನು ಬರೆದವರು 13.40 ಲಕ್ಷ ಅಭ್ಯರ್ಥಿಗಳು. ಆದರೆ ಇವರ ಪೈಕಿ ಮುಖ್ಯ ಪರೀಕ್ಷೆಗೆ ಆಯ್ಕೆಯಾದವರು 14,627 ಅಭ್ಯರ್ಥಿಗಳು ಮಾತ್ರ. ಅಂತಿಮವಾಗಿ ನೇರ ಸಂದರ್ಶನಕ್ಕೆ ಅರ್ಹತೆ ಪಡೆದಿದ್ದು 2,845 ಮಂದಿಯಾದರೆ, ಎಲ್ಲಾ ಹಂತಗಳನ್ನು ಪೂರೈಸಿದ ನಂತರ ಕಟ್ಟಕಡೆಯದಾಗಿ ಸೇವೆಗೆ ಆಯ್ಕೆಯಾದವರು 1009 ಅಭ್ಯರ್ಥಿಗಳು. ಅಂದರೆ ಆಕಾಂಕ್ಷಿಗಳ ಪ್ರಮಾಣವು ಮಿಲಿಯನ್‌ಗಿಂತಲೂ ಹೆಚ್ಚು, ಆದರೆ ಆಯ್ಕೆಯಾದವರು ಸಾವಿರ- ಇದು ಎತ್ತಣಿಂದೆತ್ತ ಸಂಬಂಧವಯ್ಯಾ? ಅಲ್ಲಿಗೆ ಯಶಸ್ಸಿನ ಪ್ರಮಾಣ ಶೇ.1ನ್ನೂ ದಾಟುವುದಿಲ್ಲ. 1000-1200 ಹುದ್ದೆಗಳಿಗಾಗಿ ಉಳಿದುದೆಲ್ಲವನ್ನೂ ಬಿಟ್ಟು ಹೋರಾಟ ಮಾಡುವ ಉದ್ದೇಶವಾದರೂ ಏನು?

ವಿಪರ್ಯಾಸವೆಂದರೆ, ಈ ಮೊದಲು ಆಯ್ಕೆಯಾಗಿ ಕೆಳಹಂತದ ಉದ್ಯೋಗದಲ್ಲಿ ಕೆಲಸ ಮಾಡುತ್ತಿರುವವರು ಅಥವಾ ತರಬೇತಿಯಲ್ಲಿರುವವರು ಕೂಡ ಉನ್ನತ ಹುದ್ದೆಯನ್ನು ಗಳಿಸುವುದಕ್ಕಾಗಿ ಮತ್ತೆ ಪರೀಕ್ಷೆ ಬರೆದು ಪಾಸು ಮಾಡುತ್ತಾರೆ. ಇವರ ಮುಖ್ಯ ಉದ್ದೇಶವಾದರೂ ಏನಿರಬಹುದು? ಮಾಧ್ಯಮಗಳಲ್ಲಿ ಈ ಸಂಬಂಧವಾಗಿ ಕೇಳುವ ಪ್ರಶ್ನೆಗಳಿಗೆ ಇವರುಗಳು ನೀಡುವ ಉತ್ತರ- ''ಐಎಎಸ್ ಶ್ರೇಣಿಗೆ ಆಯ್ಕೆಯಾದರೆ ಜಿಲ್ಲಾಧಿಕಾರಿಯಾಗಿ ಸಾರ್ವಜನಿಕರ ಸೇವೆ ಮಾಡಲು ಹೆಚ್ಚು ಅವಕಾಶ ಸಿಗುತ್ತದೆ'' ಎಂಬುದು. ಇದನ್ನು ನಂಬಲಿಕ್ಕೆ ನಾವು ಕಿವಿಯಲ್ಲಿ ಹೂವಿಟ್ಟುಕೊಂಡಿರಬೇಕು, ಹೌದಲ್ಲವೇ? ಕಾರಣ ಇಂಥ ಸೇವಾಮನೋಭಾವದವರು ಸಿಗುವುದು ಬೆರಳೆಣಿಕೆಯಷ್ಟು ಮಾತ್ರ!

ಇಲ್ಲಿ ಸೇವಾ ಮನೋಭಾವಕ್ಕಿಂತ ಹುದ್ದೆಯ ಆಕರ್ಷಣೆಯೇ ಪ್ರಮುಖ ಪಾತ್ರವನ್ನು ವಹಿಸುತ್ತದೆ. 'ಉನ್ನತ ಹುದ್ದೆ ದಕ್ಕಿದರೆ ಒಂದಿಡೀ ವ್ಯವಸ್ಥೆಯೇ ನನಗೆ ಸೆಲ್ಯೂಟ್ ಹೊಡೆಯುತ್ತದೆ, ಸಾರ್ವಜನಿಕರು ಗೌರವ ನೀಡುತ್ತಾರೆ, ದೊಡ್ಡ ಕಾರಿನಲ್ಲಿ ಓಡಾಡಬಹುದು, ವಾಸಿಸಲು ಬಂಗಲೆ ಕೊಡುತ್ತಾರೆ, ಮದುವೆಗೆ ಶ್ರೀಮಂತ ಸಂಬಂಧಗಳು ಸಿಗುತ್ತವೆ' ಎಂಬುದೇ ಬಹುತೇಕ ಅಭ್ಯರ್ಥಿಗಳ ಆಂತರ್ಯದಲ್ಲಿ ಕೆನೆಗಟ್ಟಿರುವ ಆಕಾಂಕ್ಷೆಗಳಾಗಿರುತ್ತವೆ.

ಸಾರ್ವಜನಿಕ ಸೇವೆ ಮಾಡಲು ಐಎಎಸ್ ಹುದ್ದೆಯೊಂದೇ ಸಾಧನವಲ್ಲ, ಇನ್ನೂ ನೂರೆಂಟು ಮಾರ್ಗಗಳಿವೆ. ಐಎಎಸ್/ಐಪಿಎಸ್‌ನಂಥ ಉನ್ನತ ಗುರಿಗಳನ್ನು ಬೆನ್ನತ್ತಿ ಹೊರಟವರಲ್ಲಿ ಸಾಕಷ್ಟು ಮಂದಿ ಯಶಸ್ಸು ಕಾಣುತ್ತಾರೆ; ಆದರೆ ಇವರ ಪ್ರಮಾಣ ತುಲನಾತ್ಮಕವಾಗಿ ಕಮ್ಮಿ ಎಂಬುದು ಕಹಿಸತ್ಯ. ಇಂಥ ಉನ್ನತ ಪರೀಕ್ಷೆಗಳಲ್ಲಿ ಯಶಸ್ಸು ಕಂಡವರು ಮಾಧ್ಯಮಗಳಲ್ಲೇನೋ ಮಿಂಚುತ್ತಾರೆ; ಆದರೆ ಮಿಕ್ಕ ಗಣನೀಯ ಸಂಖ್ಯೆಯ ಆಕಾಂಕ್ಷಿಗಳು ಮುಂದೆ ಏನಾದರು ಎಂಬುದರ ಬಗ್ಗೆ ವರದಿಯನ್ನು ಯಾರಾದರೂ ಪ್ರಕಟಿಸಿದ್ದಾರೆಯೇ? ಅವರ ಸಂದರ್ಶನಗಳನ್ನು ನಡೆಸಿದ್ದಾರೆಯೇ?

ವಿಪರ್ಯಾಸವೆಂದರೆ, ಇಂಥ ಉನ್ನತ ಹುದ್ದೆಗಳಿಗೆ ಆಯ್ಕೆಯಾದವರಲ್ಲಿ ಹೆಚ್ಚಿನವರು ವೈದ್ಯರು ಹಾಗೂ ಎಂಜಿನಿಯರ್‌ಗಳೇ ಆಗಿರುತ್ತಾರೆ. ಒಬ್ಬ ವೈದ್ಯರನ್ನು ತಯಾರು ಮಾಡಲು ಸರಕಾರವು ಬಹಳಷ್ಟು ಹಣವನ್ನು ಖರ್ಚುಮಾಡುತ್ತದೆ ಹಾಗೂ ವೈದ್ಯವೃತ್ತಿಯು ಈ ಸಮಾಜಕ್ಕೆ ದಕ್ಕಬಹುದಾದ ನಿಜವಾದ ಸೇವಾಮಾರ್ಗವಾಗಿರುತ್ತದೆ. ಜತೆಗೆ, ವೈದ್ಯರ ಕೆಲಸವನ್ನು ಬೇರೆಯವರು ಮಾಡಲಾಗದು. ಸಮಾಜಸೇವೆಯ ನೆಪವನ್ನು ಮುಂದುಮಾಡಿ ಐಎಎಸ್ ಆಕರ್ಷಣೆಗೆ ಒಳಗಾಗಿರುವ ವೈದ್ಯರು ಈ ಸೂಕ್ಷ್ಮವನ್ನು ಗ್ರಹಿಸಬೇಕು, ಐಎಎಸ್ ಹುದ್ದೆಗೇರಬೇಕು ಎಂಬ ಆಶಯಕ್ಕೆ ನಿಯಂತ್ರಣವನ್ನು ಹೇರಿಕೊಳ್ಳಬೇಕು.

ಹಾಗೆ ನೋಡಿದರೆ, ಸಾರ್ವಜನಿಕರು ಅಂದುಕೊಂಡಷ್ಟು ಉನ್ನತ ಹುದ್ದೆಗಳಾಗಿ ಇಂದಿನ ಐಎಎಸ್ ಮತ್ತು ಐಪಿಎಸ್‌ಗಳು ಉಳಿದಿಲ್ಲ. ಇತ್ತೀಚೆಗೆ ಕೆಲವೊಂದು ಜನಪ್ರತಿನಿಧಿಗಳು ಅವರನ್ನು ನಿಕೃಷ್ಟವಾಗಿ ನಡೆಸಿಕೊಳ್ಳುತ್ತಿದ್ದಾರೆ. ಸಾರ್ವಜನಿಕವಾಗಿಯೇ ಅವರನ್ನು ಏಕವಚನಗಳಲ್ಲಿ ನಿಂದಿಸುವವರು, ನಾಲ್ಕು ಗೋಡೆಗಳ ಒಳಗೆ ಹೇಗೆಲ್ಲಾ ವರ್ತಿಸಬಹುದು ಎಂಬುದನ್ನು ಕಲ್ಪಿಸಿಕೊಳ್ಳಲೂ ಆಗದು. ಕೆಲವಷ್ಟು ಉನ್ನತಾಧಿಕಾರಿಗಳು ಹೇಳಿಕೊಳ್ಳುವಂತೆ, ನಾಗರಿಕ ಸೇವಾ ಹುದ್ದೆಗಳ ಕುರ್ಚಿಗಳು 'ಇಂಡಕ್ಷನ್ ಸ್ಟವ್' ಇದ್ದಂತೆ, ಕುಳಿತವರಿಗಷ್ಟೇ ಗೊತ್ತು ಅದರ ಬಿಸಿ; ದಿನದ 24 ಗಂಟೆಯೂ ಕೆಲಸ. ಮನೆ-ಮಠ, ಸಂಸಾರ ಯಾವುದಕ್ಕೂ ಸಮಯ ಕೊಡಲಾಗದು ಹಾಗೂ ಒಂದೇ ಸ್ಥಳದಲ್ಲಿ ಎರಡು ವರ್ಷಗಳಿಗಿಂತ ಹೆಚ್ಚು ಕಾಲ ಇರಲಾಗದು. ಹಾಗಂತ, ಇಲ್ಲಿ ಹೇಳಲಾಗಿರುವ ಅಪ್ರಿಯ ಸತ್ಯಗಳ ಉದ್ದೇಶವು ಪರೀಕ್ಷಾರ್ಥಿಗಳ ಉತ್ಸಾಹವನ್ನು ಕುಂದಿಸುವುದಲ್ಲ. ವ್ಯವಸ್ಥೆಯಲ್ಲಿರುವ ವಾಸ್ತವತೆಯನ್ನು ಅರಿತುಕೊಂಡು, ಯುಪಿಎಸ್‌ಸಿ ಪರೀಕ್ಷೆಯ ಜತೆಜತೆಗೆ ಬದುಕನ್ನೂ ಕಟ್ಟಿಕೊಳ್ಳುವತ್ತ ಇಂಥವರು ಗಮನ ಹರಿಸಬೇಕು, ಪರ್ಯಾಯವಾಗಿ ಗಳಿಕೆಗೊಂದು ಮಾರ್ಗವನ್ನು ಕಂಡುಕೊಂಡಿರಬೇಕು ಎಂಬುದಷ್ಟೇ ಇಲ್ಲಿನ ಆಶಯ. ಇದನ್ನು ಗಮನದಲ್ಲಿ ಇರಿಸಿಕೊಂಡರೆ, ಒಂದೊಮ್ಮೆ 'ಜಟ್ಟಿ ಕೆಳಗೆ ಬಿದ್ದರೂ ಮೀಸೆ ಮಣ್ಣಾಗುವುದಿಲ್ಲ!'.

ಈ ಬಾರಿ ಆಯ್ಕೆಯಾದವರಲ್ಲಿ ಗ್ರಾಮೀಣ ಪ್ರತಿಭೆಗಳು ಹಾಗೂ ಸರಕಾರಿ ಕನ್ನಡ ಶಾಲೆಯಲ್ಲಿ ವ್ಯಾಸಂಗ ಮಾಡಿದವರು ಬೆಳಕಿಗೆ ಬಂದಿರುವುದು ಶ್ಲಾಘನೀಯ ಬೆಳವಣಿಗೆ. ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಲು ಪ್ರತಿಷ್ಠಿತ ಶಾಲೆಗಳಲ್ಲೇ, ಇಂಗ್ಲಿಷ್ ಮಾಧ್ಯಮದಲ್ಲೇ ಓದಬೇಕು ಎಂದೇನಿಲ್ಲ ಎಂಬುದಕ್ಕೆ ಇವರು ತಾಜಾ ನಿದರ್ಶನಗಳಾಗಿದ್ದಾರೆ.

ಸ್ಪರ್ಧಾತ್ಮಕ ಪರೀಕ್ಷೆಗಳ ಕುರಿತಾಗಿ ಯುಟ್ಯೂಬ್ ವಿಡಿಯೋಗಳಲ್ಲಿ ತೋರಿಸುವುದೆಲ್ಲ ಸತ್ಯವಲ್ಲ. ರಾಷ್ಟ್ರಕ್ಕೆ/ರಾಜ್ಯಕ್ಕೆ ಸೇವೆ ಮಾಡಬೇಕು, ಸಮಾಜಕ್ಕೆ ಅಮೂಲ್ಯ ಕೊಡುಗೆ ನೀಡಬೇಕು ಎನ್ನುವ ಹಂಬಲ ಇರುವವರಿಗೆ, ಭಾರತೀಯ ನಾಗರಿಕ ಸೇವೆಯಲ್ಲದೆ ಇನ್ನೂ ಹಲವಾರು ಕ್ಷೇತ್ರಗಳಿವೆ/ಮಾರ್ಗಗಳಿವೆ. ಯುಪಿಎಸ್‌ಸಿ ಪರೀಕ್ಷೆಗಳಲ್ಲಿ ಯಶಸ್ವಿಯಾಗಿ ಆಯ್ಕೆಯಾದಲ್ಲಿ ಸಂತೋಷ; ಆದರೆ ಮಹತ್ವಾಕಾಂಕ್ಷಿಗಳು ಅದೊಂದನ್ನೇ ನಂಬಿಕೊಂಡು ಅಥವಾ ಆ ಪರೀಕ್ಷೆಗಳಲ್ಲಿ ವಿಫಲರಾಗಿದ್ದಕ್ಕೆ ಹತಾಶರಾಗಿ ಅತಂತ್ರ ಸ್ಥಿತಿಗೆ ಬರುವುದು ಬೇಡ ಎಂಬುದಷ್ಟೇ ಇಲ್ಲಿನ ಆಶಯ. ಸಮೃದ್ಧ ಮತ್ತು ಸ್ವಾಭಿಮಾನಿ ಬದುಕನ್ನು ಕಟ್ಟಿಕೊಳ್ಳಲು ನೂರೆಂಟು ಹಾದಿಗಳಿವೆ. ಈ ಮಾತು ಸಮಾಜಸೇವೆಗೂ ಅನ್ವಯಿಸುವಂಥದ್ದು. ಬದುಕು ಎಂಬುದು, ಮೆರವಣಿಗೆ ಹೊರಟಿರುವ ಉತ್ಸವಮೂರ್ತಿಯ ಪಲ್ಲಕ್ಕಿಯನ್ನು ಶ್ರದ್ಧಾಭಕ್ತಿಯಿಂದ ಹೊತ್ತು ಮುನ್ನಡೆಸುವ ಕೈಂಕರ್ಯವಿದ್ದಂತೆ. ಹೊರುವವರು ಪಲ್ಲಕ್ಕಿಯ ಮುಂದಿದ್ದರೂ ಸರಿ, ಹಿಂದಿದ್ದರೂ ಸರಿ, ಅದೇ ಭಕ್ತಿ-ಭಾವ ಇದ್ದರೆ ಸಾಕಲ್ಲವೇ?!

(ಲೇಖಕರು ನಿವೃತ್ತ ಎಂಜಿನಿಯರ್ ಮತ್ತು ಸಾಹಿತಿ)



ನಾರದ ಸಂಚಾರ

ಕಲಹಪ್ರಿಯ
naadigru@gmail.com

ರೇವಂತರೋ ಧಾವಂತರೋ?!

ಇದು ಪಕ್ಕದ ತೆಲಂಗಾಣ ರಾಜ್ಯದಿಂದ ಕಲಹಪ್ರಿಯ ನಾರದರ ಕಿವಿಗೆ ಅಪ್ಪಳಿಸಿರುವ ಸುದ್ದಿ. ಅಲ್ಲಿನ ಮುಖ್ಯಮಂತ್ರಿ ರೇವಂತ್ ರೆಡ್ಡಿಯವರು, 'ಸಮೃದ್ಧ ಭಾರತ್ ಫೌಂಡೇಷನ್' ಸಂಸ್ಥೆಯ ವತಿಯಿಂದ ರಾಜ್ಯದಲ್ಲಿ ಇತ್ತೀಚೆಗೆ ಆಯೋಜಿಸಲಾಗಿದ್ದ ಜಾಗತಿಕ ಸಮ್ಮೇಳನಕ್ಕೆ ಸಂಬಂಧಿಸಿದ ಎಲ್ಲಾ ಅಗತ್ಯ ಕ್ರಮಗಳನ್ನೂ ಕೈಗೊಳ್ಳುವಂತೆ ಉನ್ನತಾಧಿಕಾರಿಗಳಿಗೆ ಆದೇಶಿಸಿದರಂತೆ. ಬರೋಬ್ಬರಿ 450 ಮಂದಿ ಪ್ರತಿನಿಧಿಗಳಿಗೆ ನೀಡಬೇಕಿದ್ದ ಆತಿಥ್ಯಕ್ಕಾಗಿ ತೆಲಂಗಾಣ ಸರಕಾರವು ಮೂಲಭೂತ ಸೌಕರ್ಯ ಮತ್ತು ಹಣಕಾಸಿನ ನೆರವನ್ನು ಒದಗಿಸಿತ್ತಂತೆ.

ಆದರೆ ಮುಖ್ಯಮಂತ್ರಿಯಿಂದ ಹೀಗೊಂದು ಆದೇಶ ಹೊಮ್ಮುತ್ತಿದ್ದಂತೆ ಅಧಿಕಾರಿಗಳು ಗೊಂದಲಕ್ಕೆ ಒಳಗಾದರಂತೆ. ಕಾರಣ, ಜಾಗತಿಕ ಪ್ರಜಾಪ್ರಭುತ್ವ ಎಂಬ ವಿಷಯದ ಕುರಿತಾಗಿ ಹಮ್ಮಿಕೊಳ್ಳಲಾಗಿದ್ದ ಆ ಸಮಾವೇಶದಲ್ಲಿ ಪಾಲ್ಗೊಂಡಿದ್ದ ವಿದೇಶಿ ಪ್ರತಿನಿಧಿಗಳ ವಿಷಯದಲ್ಲೇ ಸದರಿ ಅಧಿಕಾರಿಗಳಿಗೆ ಸ್ಪಷ್ಟತೆಯಿರಲಿಲ್ಲ. ಇವರಲ್ಲಿ ಬಹುತೇಕರಿಗೆ ಇಂಥ ಸಮಾವೇಶದಲ್ಲಿ ಪಾಲ್ಗೊಳ್ಳುವ ಅರ್ಹತೆಯೇ ಇರಲಿಲ್ಲ. ಇದನ್ನು ಗ್ರಹಿಸಿದ ಅಧಿಕಾರಿಗಳಿಗೆ, ಇಂಥ ವಿದೇಶಿ ಪ್ರತಿನಿಧಿಗಳು ಹೀಗೊಂದು ಸಮಾವೇಶದಲ್ಲಿ ಪಾಲ್ಗೊಳ್ಳುವುದು ರಾಜ್ಯದಲ್ಲಿ ಹೂಡಿಕೆಗಳ ಪ್ರಮಾಣ ಹೆಚ್ಚಾಗಲು ಅದ್ಯಾವ ರೀತಿಯಲ್ಲಿ ನೆರವಾಗುತ್ತದೆ? ಎಂಬುದು ಯಕ್ಷಪ್ರಶ್ನೆ ಆಗಿತ್ತಂತೆ!

ತ್ರಿಲೋಕ ಸಂಚಾರಿ ನಾರದರಿಗೆ ಬಂದಿರುವ ಸುದ್ದಿಯೇನೆಂದರೆ, ಸದರಿ 'ಸಮೃದ್ಧ ಭಾರತ ಫೌಂಡೇಷನ್'ನ ಕಾರ್ಯನಿವಾಹಕ ಟ್ರಸ್ಟಿ ಆಗಿರುವ ಗುರುದೀಪ್ ಸಪ್ಪಲ್ ಅವರು ಕಾಂಗ್ರೆಸ್ ಪಕ್ಷದ ಹೈಕಮಾಂಡ್‌ಗೆ ತುಂಬಾ ಆಪ್ತರಾಗಿದ್ದಾರಂತೆ. ಹೀಗಾಗಿ ಅವರನ್ನು ಮೆಚ್ಚಿಸಲು ಉತ್ಸುಕರಾಗಿದ್ದ ತೆಲಂಗಾಣ ಸಿಎಂ ರೇವಂತ ರೆಡ್ಡಿಯವರು ಇಷ್ಟೆಲ್ಲಾ ಹರಸಾಹಸ ಪಟ್ಟಿದ್ದಂತೆ. ಆದರೆ ತರುವಾಯದಲ್ಲಿ ಹೊರಬಿದ್ದ ಸುದ್ದಿಯು ರೇವಂತ್ ರೆಡ್ಡಿಯವರಿಗೆ ದಿಗಿಲು ಹುಟ್ಟಿಸುವ ರೀತಿಯಲ್ಲಿತ್ತಂತೆ. ಅದೆಂದರೆ- ಸಮಾವೇಶವು ಮುಗಿಯುವ ಒಂದು ದಿವಸ ಮೊದಲೇ ಸದರಿ ಹೈ-ಪ್ರೊಫೈಲ್ ಅತಿಥಿಗಳು ಅಲ್ಲಿಂದ 'ಕಳಚಿಕೊಂಡಿದ್ದರಂತೆ'..!

ಇನ್ನು ಕಾಂಗ್ರೆಸ್‌ನ ಉನ್ನತ ನಾಯಕರ ವಿಷಯಕ್ಕೆ ಬಂದರೆ, ಪ್ರಿಯಾಂಕಾ ಗಾಂಧಿ ಅವರು ಈ ಸಮಾವೇಶದಿಂದ ದೂರವೇ ಉಳಿದರಂತೆ. ರಾಹುಲ್ ಗಾಂಧಿಯವರಿಗೆ ಶುರುವಿನಲ್ಲಿ ಈ ಸಮಾವೇಶದಲ್ಲಿ ಪಾಲ್ಗೊಳ್ಳುವುದಕ್ಕೆ ಇಷ್ಟವಿರಲಿಲ್ಲವಂತೆ; ಆದರೆ ಅಮೆರಿಕದಲ್ಲಿರುವ ತಮ್ಮ 'ಮಾಜಿ ಮಾರ್ಗದರ್ಶಕ' ಸ್ಯಾಮ್ ಪಿಟ್ರೋಡಾ ತಮ್ಮೊಂದಿಗೆ ಮಾತನಾಡಿದ ನಂತರ, ಸಮಾವೇಶದಲ್ಲಿ ಪಾಲ್ಗೊಳ್ಳುವುದಕ್ಕೆ ಕೊನೆಗೂ ಒಪ್ಪಿದರಂತೆ ರಾಹುಲರು. ನಾರದರಿಗೆ ಬಂದಿರುವ ವರ್ತಮಾನದ ಪ್ರಕಾರ, ಬಿಜೆಪಿಯ 'ವಿವೇಕಾನಂದ ಫೌಂಡೇಷನ್'ಗೆ ಪ್ರತಿಯಾಗಿರುವ ಕಾಂಗ್ರೆಸ್‌ನ 'ಚಿಂತಕರ ಚಾವಡಿ' ಆಗುವುದು ಗುರುದೀಪ್ ಸಪ್ಪಲ್ ಅವರ ಬಳಗದ ಉದ್ದೇಶವಂತೆ ಹಾಗೂ ಸಮಾವೇಶದಲ್ಲಿ ಭಾಗಿಯಾಗಿದ್ದ ಪ್ರತಿನಿಧಿಗಳ ಪೈಕಿ ಹೆಚ್ಚಿನವರು ನಿಜಕ್ಕೂ ಸಂಭಾವ್ಯ ಹೂಡಿಕೆದಾರರಾಗಿರಲಿಲ್ಲವಂತೆ! ವಿಪರ್ಯಾಸದ ಸಂಗತಿಯೆಂದರೆ, ಕರ್ನಾಟಕ ರಾಜ್ಯದಲ್ಲಿ ಕಾಂಗ್ರೆಸ್ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಫೆಬ್ರವರಿ ತಿಂಗಳಲ್ಲಿ ಅಧಿಕೃತವಾದ ಒಂದು ವಿದೇಶಿ ಹೂಡಿಕೆದಾರರ ಸಮಾವೇಶವನ್ನು ನಡೆಸಿದ್ದರು; ಇದನ್ನು ಉದ್ಘಾಟಿಸಿದ್ದು ಕೇಂದ್ರದ ರಕ್ಷಣಾ ಸಚಿವ ರಾಜನಾಥ್ ಸಿಂಗ್. ಆದರೆ ಗಾಂಧಿ ಕುಟುಂಬದ ಯಾರೊಬ್ಬರೂ ಇದರಲ್ಲಿ ಪಾಲ್ಗೊಂಡಿರಲಿಲ್ಲ.

ಒಟ್ನಲ್ಲಿ ನೀವೇನೇ ಹೇಳಿ, ರಾಜಕೀಯ ಅನ್ನೋದು ಅರ್ಥವಾಗದ ಲೆಕ್ಕಾಚಾರ ಕಣ್ರೀ!!

RNI no: 3918/59
VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed at M/s Elegant Offset Printers Pvt. Ltd. Plot No.33/1 & 15/1(part)M.T.Sagar Industrial Estate, Gokul Road, Hubballi-580030.
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:67, Issue: 361

ಸಮಾಚಾರ ಸಣ್ಣದಲ್ಲ

ಗಡಿ ಬೇಹುಗಾರಿಕೆ: ಪಾಕ್ ರೇಂಜರ್ಸ್ ಸೆರೆ

ಜೈಪುರ: ಪಾಕಿಸ್ತಾನದ ರೇಂಜರ್ಸ್ ಪಡೆಯ ಯೋಧನೊಬ್ಬನನ್ನು ಭಾರತದ ಗಡಿಯಲ್ಲಿ ಬೇಹುಗಾರಿಕೆ ನಡೆಸುತ್ತಿದ್ದ ಆರೋಪದಡಿ ಗಡಿ ಭದ್ರತಾ ಪಡೆ(ಬಿಎಸ್‌ಎಫ್) ಬಂಧಿಸಿದೆ. ಭಾರತದ ಗಡಿಯೊಳಕ್ಕೆ ನುಸುಳಿ ಬಹಾವಲ್‌ಪುರ ವಲಯದಲ್ಲಿ ಬೇಹುಗಾರಿಕೆ ನಡೆಸಲು ಯತ್ನಿಸುತ್ತಿದ್ದ ಪಾಕಿಸ್ತಾನದ ರೇಂಜರ್ಸ್ ಪಡೆ ಯೋಧನನ್ನು ರಾಜಸ್ಥಾನದ ಶ್ರೀಗಂಗಾನಗರದಲ್ಲಿ ಗಸ್ತು ನಡೆಸಿದ್ದ ಬಿಎಸ್‌ಎಫ್ ಸಿಬ್ಬಂದಿ ಶನಿವಾರ ಸಂಜೆ ಬಂಧಿಸಿದ್ದಾರೆ. ಪಹಲ್ಗಾಮ್ ಭಯೋತ್ಪಾದಕ ದಾಳಿ ನಂತರ ಎರಡೂ ಉಭಯ ದೇಶಗಳ ನಡುವೆ ಉದ್ವಿಗ್ನ ವಾತಾವರಣ ನಿರ್ಮಾಣವಾಗಿರುವಾಗಲೇ ಪಾಕ್ ಯೋಧ ದುಸ್ಸಾಹಸಕ್ಕಿಳಿದು ಸಿಕ್ಕಿಬಿದ್ದಿದ್ದಾನೆ.

ಐಎಸ್‌ಐ ನಂಟು, ಇಬ್ಬರ ಬಂಧನ

ಚಂಡೀಗಢ: ಪಾಕಿಸ್ತಾನದ ಗುಪ್ತಚರ ಸಂಸ್ಥೆಯಾದ 'ಐಎಸ್‌ಐ' ಜತೆ ಸಂಪರ್ಕ ಹೊಂದಿದ್ದ ಪಂಜಾಬ್‌ನ ಇಬ್ಬರು ಆರೋಪಿಗಳನ್ನು ಪೊಲೀಸರು ಭಾನುವಾರ ಬಂಧಿಸಿದ್ದಾರೆ. ಆರೋಪಿಗಳನ್ನು ಶೇರ್ ಮಾಸಿಹ್ ಮತ್ತು ಸೂರಜ್ ಮಾಸಿಹ್ ಎಂದು ಗುರ್ತಿಸಲಾಗಿದೆ.

ಸೇನಾ ಕಂಟೋನ್ಮೆಂಟ್(ದಂಡು) ಪ್ರದೇಶಗಳು ಮತ್ತು ವಾಯುನೆಲೆಗಳ ಸೂಕ್ಷ್ಮ ಮಾಹಿತಿ ಹಾಗೂ ಛಾಯಾಚಿತ್ರಗಳನ್ನು ಇಬ್ಬರೂ ಪಾಕ್‌ನ ಐಎಸ್‌ಐಗೆ ಸೋರಿಕೆ ಮಾಡಿದ್ದರು ಎಂದು ಆರೋಪಿಸಲಾಗಿದೆ. ಅಮೃತಸರ ಕೇಂದ್ರ ಕಾರಾಗೃಹದಲ್ಲಿರುವ ಹರ್‌ಪ್ರೀತ್ ಸಿಂಗ್ ಅಲಿಯಾಸ್ ಪಿಟ್ಟು ಶೇರ್ ಮತ್ತು ಸೂರಜ್ ಮಾಸಿಹ್‌ಗೆ ಜೈಲಿನಿಂದಲೇ ನಿರ್ದೇಶನ ನೀಡುತ್ತಿದ್ದ ಎಂದು ಪ್ರಾಥಮಿಕ ತನಿಖೆಯಲ್ಲಿ ತಿಳಿದುಬಂದಿದೆ. ಇಬ್ಬರೂ ಆರೋಪಿಗಳನ್ನು ನ್ಯಾಯಾಂಗ ಬಂಧನ ಆದೇಶದಡಿ ಅಮೃತಸರ ಕೇಂದ್ರ ಸೆರೆಮನೆಗೆ ಕಳುಹಿಸಲಾಗಿದೆ. ಅಧಿಕೃತ ರಹಸ್ಯ ಕಾಯಿದೆಯಡಿ ಪ್ರಕರಣ ದಾಖಲಿಸಿ ಕೊಂಡಿರುವ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಇಮ್ರಾನ್, ಭುಟ್ಟೊ ಎಕ್ಸ್ ಖಾತೆ ನಿರ್ಬಂಧ

ದೆಹಲಿ: ಪಾಕಿಸ್ತಾನದ ಮೇಲೆ ಭಾರತ ಡಿಜಿಟಲ್ ದಾಳಿ ಕ್ರಮಗಳನ್ನು ಮುಂದುವರಿಸಿದೆ. ಪಾಕ್‌ನ ಮಾಜಿ ಪ್ರಧಾನಿ, ಪಿಟಿಐ ಪಕ್ಷದ ಮುಖಂಡ ಇಮ್ರಾನ್ ಖಾನ್ 'ಎಕ್ಸ್' ಖಾತೆಯನ್ನು ಭಾರತದಲ್ಲಿ ನಿರ್ಬಂಧಿಸಲಾಗಿದೆ. ಅಲ್ಲದೇ, ಪಾಕ್‌ನ ಮಾಜಿ ಸಚಿವ ಬಿಲಾವಲ್ ಭುಟ್ಟೊ ಜರ್ದಾರಿ ಮತ್ತು ಗಾಯಕ ಅತಿಫ್ ಅಸ್ಲಾಂ 'ಎಕ್ಸ್' ಖಾತೆಗಳನ್ನೂ ನಿರ್ಬಂಧಿಸಿ ಭಾನುವಾರ ಕ್ರಮ ಕೈಗೊಳ್ಳಲಾಗಿದೆ. ಪಹಲ್ಗಾಮ್ ಭಯೋತ್ಪಾದಕ ದಾಳಿ ನಂತರ ಭಾರತ-ಪಾಕ್ ನಡುವೆ ಉದ್ವಿಗ್ನತೆ ಉಂಟಾಗಿದ್ದು, ರಾಜತಾಂತ್ರಿಕ ಕಠಿಣ ಕ್ರಮಗಳನ್ನು ಎರಡೂ ದೇಶಗಳು ಕೈಗೊಳ್ಳುತ್ತಿವೆ.

ಪಿಒಕೆ ಸ್ಥಳೀಯರಿಗೆ ಪಾಕ್ ಶಸ್ತ್ರ ತರಬೇತಿ

ದೆಹಲಿ: ಭಾರತ ಯಾವುದೇ ವೇಳೆ ಯುದ್ಧ ಆರಂಭಿಸಬಹುದು ಎಂಬ ಭೀತಿಯಲ್ಲಿರುವ ಪಾಕಿಸ್ತಾನ, ಅನಿವಾರ್ಯವಾಗಿ ತಾನೂ ಯುದ್ಧಕ್ಕೆ ಸಿದ್ಧತೆ ಮಾಡಿಕೊಳ್ಳುತ್ತಿದೆ. ಇದೇ ವೇಳೆ, ಪಾಕ್ ಆಕ್ರಮಿತ ಕಾಶ್ಮೀರ(ಪಿಒಕೆ)ದಲ್ಲಿನ ನಿವಾಸಿಗಳು ಪಾಕಿಸ್ತಾನಿ ಸೇನೆ ಶಸ್ತ್ರಾಸ್ತ್ರ ತರಬೇತಿ ನೀಡಲು ಆರಂಭಿಸಿದೆ. ಸಂಭಾವ್ಯ ಆಕ್ರಮಣಕಾರಿ ಕ್ರಮಗಳನ್ನು ಎದುರಿಸಲು ಪಾಕಿಸ್ತಾನಿ ಸೇನೆಯು ಪಿಒಕೆಯಲ್ಲಿ ಸ್ಥಳೀಯರಿಗೆ ತರಬೇತಿ ನೀಡುತ್ತಿದೆ. ಪಿಒಕೆಯನ್ನು ಭಾರತ ತನ್ನಲ್ಲಿ ಸೇರ್ಪಡೆ ಮಾಡಿಕೊಳ್ಳುವ ಉದ್ದೇಶ ಹೊಂದಿದೆ. ಅಲ್ಲದೇ, ಉಗ್ರರ ಅಡಗುತಾಣಗಳಿರುವ ಪಿಒಕೆ, ಭಾರತದ ಸೇನಾಪಡೆಗಳ ಗುರಿಯಾಗಿದೆ ಎಂಬ ಹಿನ್ನೆಲೆಯಲ್ಲಿ ಸ್ಥಳೀಯರನ್ನು ಪಾಕ್ ಸೇನೆ ಸಜ್ಜುಗೊಳಿಸುತ್ತಿದೆ ಎನ್ನಲಾಗಿದೆ. ಪಾಕ್ ಸೈನಿಕರು ಪಿಒಕೆ ಜನರಿಗೆ ಶಸ್ತ್ರಾಸ್ತ್ರ ತರಬೇತಿ ನೀಡುತ್ತಿರುವ ಸಂದರ್ಭದ ವಿಡಿಯೊ ಸದ್ಯ ವೈರಲ್ ಆಗಿದೆ.

ಸೇನಾ ವಾಹನ ಕಂದಕಕ್ಕೆ: ಮೂರು ಸೈನಿಕರ ಸಾವು

ರಂಬನ್: ಜಮ್ಮು-ಕಾಶ್ಮೀರದ ರಂಬನ್ ಜಿಲ್ಲೆಯಲ್ಲಿ ರಾಷ್ಟ್ರೀಯ ಹೆದ್ದಾರಿ 44ರಲ್ಲಿ ಸೇನಾ ವಾಹನವೊಂದು 700 ಅಡಿ ಆಳದ ಕಂದಕಕ್ಕೆ ಉರುಳಿದ್ದು, ಮೂವರು ಯೋಧರು ಸ್ಥಳದಲ್ಲೇ ದುರ್ಮರಣಕ್ಕೀಡಾಗಿದ್ದಾರೆ. ಮೃತರನ್ನು ಅಮಿತ್ ಕುಮಾರ್, ಸುಜಿತ್ ಕುಮಾರ್ ಮತ್ತು ಮನ್ ಬಹದ್ದೂರ್ ಎಂದು ಗುರುತಿಸಲಾಗಿದೆ. ಜಮ್ಮುವಿನಿಂದ ಶ್ರೀನಗರಕ್ಕೆ ಭಾನುವಾರ ಬೆಳಗ್ಗೆ 11.30ರಲ್ಲಿ ತೆರಳುತ್ತಿದ್ದ ಬೆಂಗಾವಲು ಪಡೆಯ ಭಾಗವಾಗಿದ್ದ ಸೇನಾ ಟ್ರಕ್, ಬ್ಯಾಟರಿ ಚಶ್ಮಾ ಬಳಿ ತಿರುವಿನಲ್ಲಿ ನಿಯಂತ್ರಣ ತಪ್ಪಿ ಬೆಳಿಗ್ಗೆ ಕಂದಕಕ್ಕೆ ಉರುಳಿದೆ. ಸೇನಾಪಡೆ ಮತ್ತು ಪೊಲೀಸರು, ಎಸ್‌ಡಿಆರ್‌ಎಫ್ ಮತ್ತು ಸ್ಥಳೀಯರು ಜಂಟಿ ರಕ್ಷಣಾ ಕಾರ್ಯಾಚರಣೆ ನಡೆಸಿದ್ದಾರೆ. ಮೃತದೇಹಗಳನ್ನು ಕಂದಕದಿಂದ ಹೊರತೆಗೆಯಲಾಗಿದೆ. ಅಪಘಾತದ ತೀವ್ರತೆಗೆ ವಾಹನ ನಜ್ಜುಗುಜ್ಜಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

{ ಎಸ್.ಜೈಶಂಕರ್ } ವಿದೇಶಾಂಗ ಸಚಿವ

ಭಾರತಕ್ಕೆ ಜತೆಗಾರರು ಬೇಕಿದ್ದಾರೆಯೇ ಹೊರತು ಬೋಧನೆ ಮಾಡುವವರು ಖಂಡಿತಾ ಬೇಕಿಲ್ಲ. ಐರೋಪ್ಯ ದೇಶಗಳ ಇಬ್ಬಗೆ ನೀತಿ ಸ್ವೀಕಾರಾರ್ಹವಲ್ಲ. ಯಾವುದೇ ವಿಚಾರದಲ್ಲಿ ಭಾರತಕ್ಕೆ ಪಾಠ ಮಾಡುವವರು ಬೇಕಿಲ್ಲ. ಭಾರತಕ್ಕೆ ನೀತಿ ಪಾಠ ಹೇಳುವವರು ಮೊದಲು ಜಾಗತಿಕ ವಿಚಾರಗಳಲ್ಲಿ ವಾಸ್ತವ ಅರಿಯಬೇಕಿದೆ.



ಪೂರ್ಣ ಪ್ರಮಾಣದ ಶಕ್ತಿ ಪ್ರಯೋಗ | ಭಾರತ ಯುದ್ಧಕ್ಕಿಳಿದರೆ ಅಣ್ವಸ್ತ್ರ ಬಳಕೆ | ರಷ್ಯಾದಲ್ಲಿನ ಪಾಕ್ ರಾಯಭಾರಿ ಕಿಡಿ

ಭಾರತ ವಿರುದ್ಧ ಅಣ್ವಸ್ತ್ರ ಬಳಕೆ: ಪಾಕ್ ಬೆದರಿಕೆ

ಇಸ್ಲಾಮಾಬಾದ್: ಭಾರತವೇನಾದರೂ ಯುದ್ಧ ಆರಂಭಿಸಿದರೆ ಪಾಕಿಸ್ತಾನ ಅಣ್ವಸ್ತ್ರಗಳನ್ನು ಪ್ರಯೋಗಿಸಲಿದೆ ಎಂದು ನೆರೆಯ ಮುಸ್ಲಿಂ ರಾಷ್ಟ್ರ ಬೆದರಿಕೆ ಒಡ್ಡಿದೆ.

ಪಹಲ್ಗಾಮ್‌ನಲ್ಲಿ ಏ.22ರಂದು ಪಾಕ್ ಮೂಲದ ಭಯೋತ್ಪಾದಕರು ದಾಳಿ ನಡೆಸಿ ಭಾರತದ 24 ಮಂದಿ, ನೇಪಾಳದ ಒಬ್ಬರು ಸೇರಿದಂತೆ 25 ಪ್ರವಾಸಿಗರು ಮತ್ತು ಒಬ್ಬ ಕಾಶ್ಮೀರಿ ವ್ಯಕ್ತಿಯನ್ನು ಬರ್ಬರವಾಗಿ ಕೊಂದಿದ್ದು, ಆನಂತರದಲ್ಲಿ ಎರಡೂ ದೇಶಗಳ ನಡುವೆ ಉದ್ವಿಗ್ನತೆ ಉಂಟಾಗಿದೆ. ಈ ಹಿನ್ನೆಲೆಯಲ್ಲಿ ಎರಡೂ ದೇಶಗಳ ರಾಜತಾಂತ್ರಿಕ ಮಟ್ಟದಲ್ಲಿ ಒಂದಾದ ಮೇಲೊಂದರಂತೆ ಕ್ರಮಗಳನ್ನು ಕೈಗೊಳ್ಳಲಾರಂಭಿಸಿವೆ. ಎರಡೂ ದೇಶಗಳಲ್ಲಿ ಯುದ್ಧದ ಕಾರ್ಮೋಡ ಕವಿದಿದೆ.



ಈ ಸಂದರ್ಭ, ರಷ್ಯಾದಲ್ಲಿನ ಪಾಕಿಸ್ತಾನ ರಾಯಭಾರಿ ಮುಹಮ್ಮದ್ ಖಾಲಿದ್ ಜಮಾಲಿ, ಪಾಕ್ ಬಳಿ ಹಲವಾರು ಪರಮಾಣು ಶಸ್ತ್ರಾಸ್ತ್ರಗಳಿವೆ. ಭಾರತವೇನಾದರೂ ಯುದ್ಧ ಆರಂಭಿಸಿದರೆ ಈ ಬಾರಿ ಪಾಕಿಸ್ತಾನ ಪೂರ್ಣ ಪ್ರಮಾಣದಲ್ಲಿ ಎದಿರೇಟು ನೀಡಲಿದೆ. ಅಣ್ವಸ್ತ್ರಗಳನ್ನೂ ಪ್ರಯೋಗಿಸಲಿದೆ ಎಂದು ಬೆದರಿಕೆ ಹಾಕಿದ್ದಾರೆ. ಭಾರತದ ಮಾಧ್ಯಮ ಸಂಸ್ಥೆಗಳು ಮತ್ತು ಅಲ್ಲಿನ ಸರಕಾರದಿಂದ ಬಹಳ ಬೇಜವಾಬ್ದಾರಿ ಹೇಳಿಕೆಗಳು ಬರುತ್ತಿವೆ. ಅವು ಪಾಕಿಸ್ತಾನವನ್ನು ವೃಥಾ ಪ್ರಚೋದನೆ ಮಾಡುತ್ತಿವೆ. ಪಾಕಿಸ್ತಾನದ ಕೆಲವು ಪ್ರದೇಶಗಳನ್ನು ದಾಳಿ ಮಾಡಲು ಭಾರತದ ಸೇನಾಪಡೆ ನಿರ್ಧರಿಸಿರುವ ಬಗ್ಗೆ ಕೆಲವು ಮಾಹಿತಿಗಳು ಸೋರಿಕೆಯಾಗಿವೆ. ಆ ದಾಖಲೆಗಳು ಪಾಕ್ ಬಳಿ ಇವೆ. ಮುಂದಿನ ಕೆಲವೇ ದಿನಗಳಲ್ಲಿ ಭಾರತ ಯುದ್ಧ ಆರಂಭಿಸಬಹುದು ಎಂಬ ಮಾಹಿತಿ ಇದೆ ಎಂದು ಜಮಾಲಿ ಸಂದರ್ಶನದಲ್ಲಿ ಹೇಳಿದ್ದಾರೆ. ಭಾರತ ಸರಕಾರ ಸಿಂಧೂ ನದಿ ನೀರು ಹಂಚಿಕೆ ಒಪ್ಪಂದವನ್ನು ತಡೆಹಿಡಿದು ಒಪ್ಪಂದದ ನಿಯಮಗಳನ್ನೇ ಉಲ್ಲಂಘನೆ ಮಾಡಿದೆ. ಅಲ್ಲದೆ, ಸಿಂಧೂ ನದಿಯಲ್ಲಿ ಭಾರತ ಮತ್ತೆ ಅಣೆಕಟ್ಟೆ ನಿರ್ಮಿಸಲು ಹೊರಟಿದೆ. ಹಾಗೇನಾದರೂ ಮಾಡಿದರೆ ಆ ಅಣೆಕಟ್ಟೆಗಳನ್ನು ಪಾಕಿಸ್ತಾನ ಒಡೆದು ಹಾಕಲಿದೆ ಎಂದು ಪಾಕಿಸ್ತಾನದ ರಕ್ಷಣಾ ಸಚಿವ ಖವಾಜಾ ಆಸಿಫ್ ಜಿಯೋ ನ್ಯೂಸ್‌ಗೆ ನೀಡಿದ ಸಂದರ್ಶನದಲ್ಲಿ ಬೆದರಿಕೆ ಹಾಕಿದ್ದಾರೆ. ಆ ನಂತರದಲ್ಲಿ ರಷ್ಯಾ ಮಾಧ್ಯಮಕ್ಕೆ ನೀಡಿದ ಸಂದರ್ಶನದಲ್ಲಿ ರಾಯಭಾರಿಯಿಂದ ಅಣ್ವಸ್ತ್ರ ಬಳಕೆ ಬೆದರಿಕೆ ಬಂದಿದೆ. ಸಚಿವ, ರಾಯಭಾರಿಯ ಮಾತುಗಳನ್ನು ದೃಢೀಕರಿಸುವಂತೆ ಪಾಕ್ ಸೇನೆ ಭೂ ಮೇಲ್ಮೈನಿಂದ ಮೇಲ್ಮೈಗೆ ಚಿಮ್ಮುವ, 450 ಕಿಮೀ ವ್ಯಾಪ್ತಿ ಸಾಮರ್ಥ್ಯದ ಅಬ್ದಾಲಿ ಕ್ಷಿಪಣಿ ಪರೀಕ್ಷಾರ್ಥ ಪ್ರಯೋಗವನ್ನೂ ನಡೆಸಿದೆ. ಈ ಕ್ಷಿಪಣಿ ಪರಮಾಣು ಸಿಡಿತಲೆಗಳನ್ನು ಹೊತ್ತೊಯ್ಯುವ ಸಾಮರ್ಥ್ಯ ಹೊಂದಿದೆ. ತಾನು ಯುದ್ಧಕ್ಕೆ ಸಿದ್ಧತೆ ಮಾಡಿಕೊಳ್ಳುತ್ತಿರುವುದನ್ನು ತೋರಿಸಲೆಂದೇ ಪಾಕ್ ಸೇನೆ ಈ ಕ್ಷಿಪಣಿ ಪ್ರಯೋಗ ನಡೆಸಿದೆ ಎನ್ನಲಾಗಿದೆ.

ಅತ್ಯಧಿಕ ಶಕ್ತಿ ಅಣ್ವಸ್ತ್ರ

ಅಮೆರಿಕದ ಬಳಿ ಅತ್ಯಧಿಕ ಶಕ್ತಿಯ ಅಣ್ವಸ್ತ್ರವಿದೆ. ಅಮೆರಿಕದ 'ಬಿ83' ಅತ್ಯಧಿಕ ಶಕ್ತಿಯ ಪರಮಾಣು ಅಸ್ತ್ರವಾಗಿದೆ. ಇದರ ಗರಿಷ್ಠ ಫಲಿತಾಂಶ 1.2 ಮೆಗಾಟನ್‌ಗಳಷ್ಟಿದೆ ಎಂಬ ಅಂದಾಜಿದೆ. ವಿಶ್ವದಲ್ಲಿ ಈವರೆಗೆ ಪರೀಕ್ಷಿಸಲಾದ ಅತಿದೊಡ್ಡದಾದ ಪರಮಾಣು ಶಸ್ತ್ರವೆಂದೆ ಅದು 'ಟಿಸಾರ್ ಬಾಂಬಾ'. ಇದು 50 ಮೆಗಾಟನ್ಸ್ ಟಿಎನ್‌ಟಿ ಫಲಿತಾಂಶ ಸಾಮರ್ಥ್ಯದ್ದಾಗಿದೆ.

ಪಾಕ್ ಅಣ್ವಸ್ತ್ರ ಬಲ

ಪಾಕಿಸ್ತಾನ 1998ರಲ್ಲಿ ಮೊದಲ ಅಣ್ವಸ್ತ್ರ ಬಳಕೆಯ ಪರೀಕ್ಷೆ ನಡೆಸಿತ್ತು. ಪಾಕ್ ಬಳಿ 170 ಪರಮಾಣ ಶಸ್ತ್ರಗಳಿವೆ. ಖಂಡಾಂತರ ಕ್ಷಿಪಣಿ ಮತ್ತು ಕ್ರೂಸ್ ಮಿಸೈಲ್‌ಗಳಿದ್ದು, ಪರಮಾಣು ಸಿಡಿತಲೆಗಳನ್ನು ಹೊತ್ತು ಸಾಗಬಲ್ಲವಾಗಿವೆ. ಶಾರ್ಟ್ ರೇಂಜ್‌ನ ಅಬ್ದಾಲಿ, ಘಜ್ನವಿ, ಶಹೀನ್-1, ಎನ್‌ಎಎಸ್‌ಆರ್ ಮಿಸೈಲ್ಸ್ ಮತ್ತು ಮೀಡಿಯಂ ರೇಂಜ್‌ನ ಶಹೀನ್-2 ಮತ್ತು ಘಾವ್ರಿ ಕ್ಷಿಪಣಿಗಳಿವೆ ಎಂಬ ಮಾಹಿತಿ ಲಭ್ಯವಿದೆ.

ಪ್ರತೀಕಾರ ಕ್ರಮ

'ಭಾರತ-ಪಾಕ್ ಸೇನಾಪಡೆಗಳ ಬಲಾಬಲ ವಿಷಯಕ್ಕೆ ಬಂದರೆ ಸಂಖ್ಯಾಬಲದ ಚರ್ಚೆಯನ್ನು ನಾವು ಮಾಡುವುದಿಲ್ಲ. ಸಾಂಪ್ರದಾಯಿಕ ಮತ್ತು ಪರಮಾಣು ಶಕ್ತಿಯ ಪೂರ್ಣ ಬಲಪ್ರಯೋಗ ಮಾಡುವುದು ನಮ್ಮ ನಿರ್ಧಾರ ಆಗಿರುತ್ತದೆ. ಪಾಕಿಸ್ತಾನದ ಸಶಸ್ತ್ರ ಪಡೆಗಳು, ದೇಶದ ಜನರ ಬೆಂಬಲದೊಂದಿಗೆ ಶಸ್ತ್ರಾಗಾರದ ಶಕ್ತಿಯ ಪೂರ್ಣ ಬಲವನ್ನು ಬಳಸಿಕೊಂಡು ಭಾರತದ ವಿರುದ್ಧ ಪ್ರತೀಕಾರ ಕ್ರಮ ಕೈಗೊಳ್ಳುತ್ತೇವೆ ಎಂದು ರಷ್ಯಾದಲ್ಲಿನ ಪಾಕ್ ರಾಯಭಾರಿ ಮುಹಮ್ಮದ್ ಖಾಲಿದ್ ಜಮಾಲಿ ಹೇಳಿದ್ದಾರೆ.

ಅಣ್ವಸ್ತ್ರ ರಾಷ್ಟ್ರಗಳು

ಭಾರತ ಮತ್ತು ಪಾಕಿಸ್ತಾನ ಅಣ್ವಸ್ತ್ರ ಹೊಂದಿರುವ ರಾಷ್ಟ್ರಗಳಾಗಿವೆ. ಭಾರತದ ಬಳಿ 180 ಮತ್ತು ಪಾಕಿಸ್ತಾನದ ಬಳಿ 170 ನ್ಯೂಕ್ಲಿಯರ್ ವೆಪನ್ಸ್ (ಪರಮಾಣ ಶಸ್ತ್ರಗಳು) ಇವೆ ಎಂಬುದು 'ಸ್ಟೇಟಸ್ ಆಫ್ ವರ್ಲ್ಡ್ ನ್ಯೂಕ್ಲಿಯರ್ ಫೋರ್ಸಸ್'ನ ಇತ್ತೀಚಿನ ವರದಿಯಿಂದ ತಿಳಿದುಬರುತ್ತದೆ. ವಿಶ್ವದಲ್ಲಿ 9 ದೇಶಗಳ ಬಳಿ ಪರಮಾಣು ಶಸ್ತ್ರಗಳಿವೆ. ಅಮೆರಿಕ, ರಷ್ಯಾ, ಫ್ರಾನ್ಸ್, ಚೀನಾ, ಭಾರತ, ಯುನೈಟೆಡ್ ಕಿಂಗ್ಡಂ, ಪಾಕಿಸ್ತಾನ, ಇಸ್ರೇಲ್, ಉತ್ತರ ಕೊರಿಯ. ಭಾರತ-ಪಾಕ್ ಬಳಿ ಇರುವ 350 ಅಣ್ವಸ್ತ್ರಗಳನ್ನೂ ಸೇರಿಸಿ 9 ದೇಶಗಳ ಬಳಿ ಒಟ್ಟು 13 ಸಾವಿರಕ್ಕೂ ಅಧಿಕ ಪರಮಾಣ ಅಸ್ತ್ರಗಳಿವೆ ಎಂಬ ಮಾಹಿತಿ ಇದೆ.

ರಷ್ಯಾ ಮಾಧ್ಯಮ ಸಂದರ್ಶನದಲ್ಲಿ ಎಚ್ಚರಿಕೆ

ರಷ್ಯಾದ ಮಾಧ್ಯಮ ಸಂಸ್ಥೆ ಆರ್‌ಟಿಗೆ ಸಂದರ್ಶನ ನೀಡಿರುವ ಪಾಕ್ ರಾಯಭಾರಿ, ಭಾರತದ ವಿರುದ್ಧ ಪ್ರಚೋದನಕಾರಿ ಮಾತುಗಳನ್ನಾಡಿದ್ದಾರೆ. 'ಭಾರತದಲ್ಲಿ ಯುದ್ಧ ತಯಾರಿ ನಡೆದಿದೆ. ಸದ್ಯ ಸೋರಿಕೆಯಾಗಿರುವ ಮಿಲಿಟರಿ ದಾಖಲೆಗಳ ಪ್ರಕಾರ, ಪಾಕಿಸ್ತಾನದ ನಿರ್ದಿಷ್ಟ ಗುರಿಗಳ ಮೇಲೆ ದಾಳಿ ಮಾಡಲು ಭಾರತವು ಯೋಜಿಸಿ ಸಿದ್ಧತೆ ಮಾಡಿಕೊಂಡಿದೆ. ಯುದ್ಧ ಸನ್ನಿಹಿತವಾಗಿದೆ. ಭಾರತವೇನಾದರೂ ಸೇನಾಪಡೆಗಳಿಂದ ದಾಳಿ ನಡೆಸಲಾರಂಭಿಸಿದರೆ ಪಾಕಿಸ್ತಾನ ಖಂಡಿತಾ ಸುಮ್ಮನೆ ಕೂರುವುದಿಲ್ಲ. ತನ್ನ ಬಳಿ ಇರುವ ಪರಮಾಣು ಶಸ್ತ್ರಾಸ್ತ್ರಗಳು ಖಂಡಿತಾ ಬಳಸಲಿದೆ. ಈ ಬಾರಿ ಪೂರ್ಣ ಪ್ರಮಾಣದ ಶಕ್ತಿಯನ್ನು ಪ್ರಯೋಗಿಸಲಿದೆ' ಎಂದು ಭಾರತಕ್ಕೆ ಎಚ್ಚರಿಕೆ ನೀಡುವ ದಾಟಿಯಲ್ಲಿ ಹೇಳಿದ್ದಾರೆ.

66 ವರ್ಷಗಳ ಆಡಳಿತ | ಪ್ರಧಾನಿ ಲಾರೆನ್ಸ್ ವಾಂಗ್‌ಗೆ ಜನಬೆಂಬಲ

ಸಿಂಗಾಪುರ ಚುನಾವಣೆ: ಪಿಎಪಿ ಮರು ಆಯ್ಕೆ

ಸಿಂಗಾಪುರ: ಶನಿವಾರ ನಡೆದ ಸಿಂಗಾಪುರದಲ್ಲಿ ಶನಿವಾರ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಪೀಪಲ್ಸ್ ಆಕ್ಷನ್ ಪಾರ್ಟಿ(ಪಿಎಪಿ) ಮರು ಆಯ್ಕೆಯಾಗಿದೆ. 66 ವರ್ಷಗಳಿಂದ ಆಡಳಿತ ನಡೆಸುತ್ತಿರುವ ಪಿಎಪಿಗೆ ಅಭೂತಪೂರ್ವ ಜಯ ದೊರೆತಿದೆ.

'ಪಿಎಪಿ' 1959ರಿಂದ ಸಿಂಗಾಪುರವನ್ನು ಆಡಳಿತ ನಡೆಸುತ್ತಿದೆ. ಅಲ್ಲದೇ, ವರ್ಷದ ಹಿಂದೆಯಷ್ಟೇ ಅಧಿಕಾರ ವಹಿಸಿಕೊಂಡ ಪ್ರಧಾನಿ ಲಾರೆನ್ಸ್ ವಾಂಗ್ ಅವರಿಗೂ ಜನಬೆಂಬಲ ವ್ಯಕ್ತವಾಗಿದೆ.

'ಪಿಎಪಿ' 82 ಸಂಸದೀಯ ಸ್ಥಾನಗಳನ್ನು ಗೆದ್ದಿದೆ. ಪಕ್ಷ ಈ ಮೊದಲೇ 5 ಕ್ಷೇತ್ರಗಳಲ್ಲಿ ಅವಿರೋಧ ಜಯ ದಾಖಲಿಸಿತ್ತು. ಇದರೊಂದಿಗೆ ದೇಶದ ಒಟ್ಟು 97 ಸಂಸತ್ ಸ್ಥಾನಗಳಲ್ಲಿ 87 ಸ್ಥಾನಗಳನ್ನು ಪಿಎಪಿ ಗೆದ್ದಂತಾಗಿದೆ. ಪ್ರತಿಪಕ್ಷವಾದ ವರ್ಕರ್ಸ್ ಪಾರ್ಟಿ, 10 ಸ್ಥಾನಗಳಲ್ಲಷ್ಟೇ ಜಯ ಸಾಧಿಸಲು ಸಾಧ್ಯವಾಗಿದೆ. 'ಪಿಎಪಿ' ಜನಪ್ರಿಯ ಮತ ಪ್ರಮಾಣ ಶೇ.65.6ಕ್ಕೆ ಏರಿಕೆಯಾಗಿದೆ.

2020ರ ಚುನಾವಣೆಯಲ್ಲಿ 'ಪಿಎಪಿ'ಗೆ ಶೇ.61ರಷ್ಟು ಮತ ಗಳಿಕೆಯಾಗಿತ್ತು. 'ಪಿಎಪಿ' ಕಾರ್ಯಕರ್ತರು, ಬೆಂಬಲಿಗರು ಕ್ರೀಡಾಂಗಣಗಳಲ್ಲಿ ಪಕ್ಷದ ಧ್ವಜ ಬೀಸುತ್ತಾ ಸಂಭ್ರಮಿಸಿದರು. ಅಮೆರಿಕದಲ್ಲಿ ತರಬೇತಿ ಪಡೆದ ಅರ್ಥಶಾಸ್ತ್ರಜ್ಞ ಮತ್ತು ಹಣಕಾಸು ಖಾತೆಯನ್ನೂ ನಿರ್ವಹಿಸುತ್ತಿರುವ ಪ್ರಧಾನಿ ವಾಂಗ್,

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಸುಂಕ ಹೆಚ್ಚಳದ ನಂತರದ ಆರ್ಥಿಕ ಪ್ರಕ್ಷುಬ್ಧತೆಯ ಮೂಲಕ ವ್ಯಾಪಾರ-ಅವಲಂಬಿತ ಸಿಂಗಾಪುರವನ್ನು ಮುನ್ನಡೆಸಲು ಸ್ಪಷ್ಟ ಜನಾದೇಶ ನೀಡುವಂತೆ ಮತದಾರರಲ್ಲಿ ಮನವಿ ಮಾಡಿದ್ದರು. ಅದರಂತೆ ಜನತೆ ಅವರನ್ನು ಮರಳಿ ಅಧಿಕಾರಕ್ಕೆ ತಂದಿದ್ದಾರೆ.

ಬದರಿನಾಥ ಮಂದಿರಕ್ಕೆ 15 ಟನ್ ಪುಷ್ಪಾಲಂಕಾರ

ಚಮೋಲಿ: ಉತ್ತರಾಖಂಡದ ಚಮೋಲಿ ಜಿಲ್ಲೆಯಲ್ಲಿರುವ ಹಿಂದೂಗಳ ಪವಿತ್ರ ಕ್ಷೇತ್ರ ಬದರಿನಾಥದಲ್ಲಿ ವಿಷ್ಣು ದೇವರ ದೇವಾಲಯದ ಬಾಗಿಲು ಆರು ತಿಂಗಳ ಬಳಿಕ ಭಾನುವಾರ ತೆರೆದಿದ್ದು, ಸಾವಿರಾರು ಭಕ್ತರು ದರ್ಶನ ಪಡೆದರು.

ವೇದ ಮಂತ್ರಗಳ ಪಠಣದ ನಡುವೆ ಭಾನುವಾರ ಬೆಳಗ್ಗೆ 6 ಗಂಟೆಗೆ ದೇವಾಲಯದ ಬಾಗಿಲನ್ನು ತೆರೆಯಲಾಯಿತು. ಬದರಿನಾಥ ಧಾಮದ ಪ್ರಧಾನ ಅರ್ಚಕ ರಾವಲ್ ವಿಶೇಷ ಪ್ರಾರ್ಥನೆ ಸಲ್ಲಿಸಿದರು. ಮುಖ್ಯಮಂತ್ರಿ ಪುಷ್ಕರಸಿಂಗ್ ಧಾಮಿ, ಬಿಜೆಪಿ ರಾಜ್ಯಾಧ್ಯಕ್ಷ ಮಹೇಂದ್ರ ಭಟ್ ಉಪಸ್ಥಿತರಿದ್ದರು. ಇಡೀ ದೇವಸ್ಥಾನವನ್ನು ವಿವಿಧ ಬಗೆಯ 15 ಟನ್ ಹೂವುಗಳನ್ನು ಬಳಸಿ ಅಲಂಕರಿಸಲಾಗಿದೆ. ಭಾರತೀಯ ಸೇನೆಯ ಬ್ಯಾಂಡ್ ತಂಡ ದೇವಾಲಯದೆದುರು ವಾದ್ಯಗಳಲ್ಲಿ ಭಕ್ತಿಗೀತೆ ನುಡಿಸಿತು.

ಮಾನಾ ಮತ್ತು ಬೆಮ್ನಿ ಗ್ರಾಮದ ಮಹಿಳೆಯರು ದೇವಾಲಯ ಆವರಣ ಜುಮ್ಮೈಲೋ ನೃತ್ಯ ಪ್ರದರ್ಶಿಸಿದರು. ದೇಗುಲ ಮತ್ತು ಭಕ್ತರ ಮೇಲೆ ಹೆಲಿಕಾಪ್ಟರ್‌ನಿಂದ 10 ನಿಮಿಷ ಪುಷ್ಪವೃಷ್ಟಿ ಮಾಡಲಾಯಿತು.

ಕೆ.ವಿ.ಸುಬ್ರಮಣಿಯನ್ ಐಎಂಎಫ್‌ನಿಂದ ವಜಾ

ದೆಹಲಿ: ಅಂತಾರಾಷ್ಟ್ರೀಯ ಹಣಕಾಸು ನಿಧಿ(ಐಎಂಎಫ್) ಸಂಸ್ಥೆಯಲ್ಲಿ ಭಾರತದ ಪರವಾಗಿ ಕಾರ್ಯನಿರ್ವಾಹಕ ನಿರ್ದೇಶಕರಾಗಿದ್ದ ಕೃಷ್ಣಮೂರ್ತಿ ವಿ.ಸುಬ್ರಮಣಿಯನ್ ಅವರನ್ನು ಸೇವಾವಧಿ ಪೂರ್ಣಗೊಳ್ಳುವುದಕ್ಕೂ ಮುನ್ನವೇ ಭಾರತ ಸರಕಾರ ಸೇವೆಯಿಂದ ವಜಾಗೊಳಿಸಿದೆ. 3 ವರ್ಷಗಳ ಅಧಿಕಾರವಧಿ ಪೂರ್ಣಗೊಳ್ಳಲು ಇನ್ನೂ 6 ತಿಂಗಳು ಬಾಕಿ ಇತ್ತು.

ಏ.30ರಿಂದಲೇ ಜಾರಿಗೆ ಬರುವಂತೆ ಕೆ.ವಿ.ಸುಬ್ರಮಣಿಯನ್ ಅವರನ್ನು ಸಂಪುಟ ನೇಮಕ ಸಮಿತಿ ವಜಾಗೊಳಿಸಿ ಆದೇಶ ಹೊರಡಿಸಿದೆ ಎಂದು ಮೂಲಗಳು ತಿಳಿಸಿವೆ. ಈ ಕ್ರಮಕ್ಕೆ ಕಾರಣವೇನು ಎಂಬುದು ತಿಳಿದುಬಂದಿಲ್ಲ. 'ಐಎಂಎಫ್' ಆಡಳಿತ ಮಂಡಳಿಗೆ ಸದಸ್ಯ ರಾಷ್ಟ್ರಗಳಿಂದ 25 ಕಾರ್ಯನಿರ್ವಾಹಕ ನಿರ್ದೇಶಕರ ನೇಮಕವಾಗಿರುತ್ತದೆ. ಭಾರತದ ಪರವಾಗಿ ಕೆ.ವಿ.ಸುಬ್ರಮಣಿಯನ್ 2023ರಲ್ಲಿ ನೇಮಕಗೊಂಡಿದ್ದರು. ಮೂಲಗಳ ಪ್ರಕಾರ, ಐಎಂಎಫ್ ದತ್ತಾಂಶ ಸಂಗ್ರಹ ಬಗ್ಗೆ ಸುಬ್ರಮಣಿಯನ್ ಪ್ರಶ್ನೆ ಎತ್ತಿದ್ದರು. ಅಲ್ಲದೇ, ಇತ್ತೀಚೆಗೆ 'ಪುಸ್ತಕ ಇಂಡಿಯಾ-100' ಪ್ರಚಾರ ವೇಳೆ ಅಧಿಕಾರ ದುರ್ಬಳಕೆ ಮಾಡಿಕೊಂಡಿದ್ದರು ಎಂಬ ಆರೋಪ ಕೇಳಿಬಂದಿತ್ತು. ಚಿಕಾಗೋ ವಿವಿ ಬೂತ್ ಸ್ಕೂಲ್ ಆಫ್ ಬಿಸಿನೆಸ್‌ನಿಂದ ಹಣ ಕಾಸು ಅರ್ಥಶಾಸ್ತ್ರದಲ್ಲಿ ಪಿಎಚ್‌ಡಿ ಪಡೆದಿರುವ ಸುಬ್ರಮಣಿಯನ್, 2018-21 ಅವಧಿಯಲ್ಲಿ ಭಾರತ ಸರಕಾರದ ಮುಖ್ಯ ಆರ್ಥಿಕ ಸಲಹೆಗಾರರೂ ಆಗಿದ್ದರು ಎಂಬುದು ಉಲ್ಲೇಖಾರ್ಹ.

ಪಾಕ್ ವಿರುದ್ಧ ಭಾರತ ವಾದ

ಏತನ್ಮಧ್ಯೆ, ಪಾಕಿಸ್ತಾನಕ್ಕೆ ಆರ್ಥಿಕ ನೆರವು ನೀಡುವ ವಿಚಾರ 'ಐಎಂಎಫ್' ಆಡಳಿತ ಮಂಡಳಿಯ ಮೇ 9ರ ಸಭೆಯಲ್ಲಿ ಚರ್ಚೆಗೆ ಬರಲಿದೆ. ಅದಕ್ಕೂ ಮುನ್ನವೇ ಸುಬ್ರಮಣಿಯನ್ ವಜಾ ಕ್ರಮ ಕುತೂಹಲಕ್ಕೆ ಕಾರಣವಾಗಿದೆ. ಪಾಕಿಸ್ತಾನ ಭಯೋತ್ಪಾದನೆಗೆ ನೆರವು ನೀಡುತ್ತಿದೆ ಎಂದು ಆಪಾದಿಸಿ ಪಹಲ್ಗಾಮ್ ದಾಳಿಯನ್ನು ಸಾಕ್ಷಿಯಾಗಿಟ್ಟುಕೊಂಡು ವಾದಿಸಲು ಸಿದ್ಧತೆ ನಡೆಸಿರುವ ಭಾರತ, ಪಾಕ್‌ಗೆ ಹೆಚ್ಚುವರಿ ಹಣಕಾಸು ನೆರವು ನೀಡುವುದನ್ನು ಸಭೆಯಲ್ಲಿ ವಿರೋಧಿಸುವ ಸಾಧ್ಯತೆ ಇದೆ ಎನ್ನಲಾಗಿದೆ.

ಕ್ಷಿಪಣಿ ದಾಳಿ ಭೀತಿ: ಏಐ ಮಾರ್ಗ ಬದಲು

ದೆಹಲಿ: ಇಸ್ರೇಲ್‌ನ ಟೆಲ್‌ಅವಿವ್ ವಿಮಾನ ನಿಲ್ದಾಣ ಬಳಿ ಕ್ಷಿಪಣಿ ದಾಳಿ ನಡೆಯುತ್ತಿದ್ದ ಮಾಹಿತಿ ಲಭ್ಯವಾಗಿದ್ದರಿಂದ ದೆಹಲಿಯಿಂದ ಟೆಲ್‌ಅವಿವ್ ನಗರಕ್ಕೆ ಸಂಚಾರ ನಡೆಸಿದ್ದ ಏರ್ ಇಂಡಿಯ ವಿಮಾನದ ಮಾರ್ಗ ಬದಲಿಸಿ ಸೌದಿ ಅರೇಬಿಯದಲ್ಲಿ ಇಳಿಸಲಾಗಿದೆ. ಜೋರ್ಡಾನ್ ದೇಶದ ಆಕಾಶದಲ್ಲಿ ಭಾನುವಾರ ಬೆಳಗ್ಗೆ ಹಾರುತ್ತಿದ್ದಾಗಲೇ ಕ್ಷಿಪಣಿ ದಾಳಿ ಸುದ್ದಿ ತಿಳಿದಿದ್ದರಿಂದ ಏರ್ ಇಂಡಿಯ ಸಂಸ್ಥೆಯ ಬೋಯಿಂಗ್ 787 ವಿಮಾನವನ್ನು ಅಬುಧಾಬಿಯತ್ತ ತಿರುಗಿಸಲಾಯಿತು ಎಂದು ಮೂಲಗಳು ತಿಳಿಸಿವೆ. ಇದೇ ವೇಳೆ, ಏರ್ ಇಂಡಿಯ ವಿಮಾನಯಾನ ಸಂಸ್ಥೆ ಮೇ 6ರವರೆಗೆ ಟೆಲ್ ಅವಿವ್ ಮಾರ್ಗದ ವಿಮಾನಗಳ ಸಂಚಾರವನ್ನು ಸ್ಥಗಿತಗೊಳಿಸಿದೆ. ಭಾನುವಾರ ಬೆಳಗ್ಗೆ ಬೆನ್ ಗುರಿಯಾನ್ ವಿಮಾನ ನಿಲ್ದಾಣದಲ್ಲಿ ಕ್ಷಿಪಣಿ ದಾಳಿ ನಡೆದ ನಂತರ ಏಐ 139 ಏರ್ ಇಂಡಿಯ ವಿಮಾನವನ್ನು ಅಬುದಾಬಿಯತ್ತ ತಿರುಗಿಸಲಾಯಿತು. ಅಬುದಾಬಿಯಲ್ಲಿ ಸಹಜವಾಗಿಯೇ ವಿಮಾನ ಲ್ಯಾಂಡ್ ಆಗಿದೆ. ಬಳಿಕ ದೆಹಲಿಗೆ ಮರಳಲಿದೆ ಎಂದು ಏರ್ ಲೈನ್ಸ್ ಹೇಳಿಕೆ ಪ್ರಕಟಿಸಿದೆ.

ವಾರಾಣಸಿ ನಿವಾಸಿ 128 ವರ್ಷದ ಯೋಗ ಸಾಧಕ, ಆಧ್ಯಾತ್ಮಿಕ ಗುರು

ಪದ್ಮಶ್ರೀ ಬಾಬಾ ಶಿವಾನಂದ್ ನಿಧನ

ವಾರಾಣಸಿ: ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ, ಯೋಗ ಸಾಧಕ, ಆಧ್ಯಾತ್ಮಿಕ ಗುರು ಬಾಬಾ ಶಿವಾನಂದ್ (128) ಅವರು ವಯೋಸಹಜ ಆರೋಗ್ಯ ಸಮಸ್ಯೆಗಳಿಂದ ಶನಿವಾರ ರಾತ್ರಿ ನಿಧನರಾದರು. ಆರೋಗ್ಯ ಸಮಸ್ಯೆ ಕಾಣಿಸಿಕೊಂಡ ಕಾರಣ ಅವರನ್ನು ಏ.30ರಂದು ವಾರಾಣಸಿಯ ಬಿಎಚ್‌ಯು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅಂತ್ಯಕ್ರಿಯೆ ಭಾನುವಾರ ಸಂಜೆ ನಡೆಸಲಾಗಿದೆ ಎಂದು ಶಿಷ್ಯವೃಂದ ತಿಳಿಸಿದೆ.

ಶಿವಾನಂದ್ ಅವರು ಅವಿಭಜಿತ ಬಾಂಗ್ಲಾದಲ್ಲಿ (ಈಗಿನ ಬಾಂಗ್ಲಾದೇಶ) ಸಿಲ್ಹೆಟ್ ಜಿಲ್ಲೆಯಲ್ಲಿ 1896ರ ಆ.8ರಂದು ಜನಿಸಿದರು. 6 ವರ್ಷದವರಾಗಿದ್ದಾಗ ಪೋಷಕರನ್ನು ಹಸಿವಿನ ಕಾರಣದಿಂದ ಕಳೆದುಕೊಂಡಿದ್ದಾಗಿ ಹೇಳುತ್ತಿದ್ದ ಶಿವಾನಂದ ಅವರು, ಅಂದಿನಿಂದಲೇ ಅತ್ಯಲ್ಪ ಆಹಾರ ಸೇವನೆ, ಕಠಿಣ ವ್ರತ ಮತ್ತು ಶಿಸ್ತಿನ ಜೀವನ ನಡೆಸಿಕೊಂಡು ಬಂದರು. ಈ ಕ್ರಮವೇ ದೀರ್ಘಾಯುಷ್ಯಕ್ಕೆ ಕಾರಣ ಎಂದು ಹೇಳುತ್ತಿದ್ದರು. ಬಾಲ್ಯವನ್ನು ಓಂಕಾರಾನಂದ ಅವರ ಆರೈಕೆಯಲ್ಲಿ ಕಳೆದ ಶಿವಾನಂದ, ಗುರುಗಳ ಮಾರ್ಗದರ್ಶನದಲ್ಲಿ ಆಧ್ಯಾತ್ಮಿಕ ಶಿಕ್ಷಣ ಮತ್ತು ಜೀವನ ಬೋಧನೆಗಳನ್ನು ಪಡೆದರು. ಯೋಗ ಕಲಿತು ನಿತ್ಯ ಅಭ್ಯಾಸ ಮಾಡುತ್ತಾ ಬಂದರು. ವೃದ್ಧಾಪ್ಯದಲ್ಲೂ ನಿತ್ಯ ನಸುಕಿನ 3 ಗಂಟೆಗೇ ಎದ್ದು ಯೋಗ ಅಭ್ಯಾಸ ಮಾಡುತ್ತಿದ್ದರು. ತಮ್ಮ ಕೆಲಸಗಳನ್ನೆಲ್ಲಾ ಸ್ವತಃ ಮಾಡಿಕೊಳ್ಳುತ್ತಿದ್ದರು. ಚಾಪೆ ಮೇಲೆ ಮಲಗುತ್ತಿದ್ದರು.

ಯೋಗ ಮತ್ತು ಆಧ್ಯಾತ್ಮಿಕ ಕ್ಷೇತ್ರಕ್ಕೆ ನೀಡಿದ ಕೊಡುಗೆಗಳಿಂದಾಗಿ ಶಿವಾನಂದ್ ಅವರಿಗೆ 2022ರಲ್ಲಿ ಪದ್ಮಶ್ರೀ ಪ್ರಶಸ್ತಿ ಸಂದಿತು.

ಪ್ರಧಾನಿ, ಸಿಎಂ ಸಂತಾಪ

ಬಾಬಾ ನಿರ್ಗಮನ ಕಾಶಿ ನಿವಾಸಿಗಳಾದ ನಮಗೆಲ್ಲ ಮತ್ತು ಅವರಿಂದ ಸ್ಫೂರ್ತಿ ಪಡೆದ ಲಕ್ಷಾಂತರ ಜನರಿಗೆ ತುಂಬಲಾಗದ ನಷ್ಟ. ಯೋಗ ಸಾಧಕ ಶಿವಾನಂದ ಬಾಬಾ ಅವರ ನಿಧನದಿಂದ ನನಗಂತೂ ತೀವ್ರ ದುಃಖವಾಗಿದೆ. ಯೋಗ ಮತ್ತು ಸಾಧನಕ್ಕೆ ಮೀಸಲಾದ ಅವರ ಜೀವನ ಎಲ್ಲಾ ಪೀಳಿಗೆಗೂ ಸ್ಫೂರ್ತಿದಾಯಕ ಎಂದು ಪ್ರಧಾನಿ ನರೇಂದ್ರ ಮೋದಿ ಶೋಕ ತಿಳಿಸಿದ್ದಾರೆ. ಯೋಗ ಕ್ಷೇತ್ರಕ್ಕೆ ಅಪ್ರತಿಮ ಕೊಡುಗೆ ನೀಡಿದ ಕಾಶಿಯ ಪ್ರಸಿದ್ಧ ಯೋಗ ಗುರು 'ಪದ್ಮಶ್ರೀ' ಶಿವಾನಂದ್ ಬಾಬಾ ನಿಧನ ಸುದ್ದಿ ದುಃಖಕರ. ಜೀವನವನ್ನು ಯೋಗದ ಬೆಳವಣಿಗೆಗೆ ಮೀಸಲಿಟ್ಟರಿ ಎಂದು ಸಿಎಂ ಯೋಗಿ ಆದಿತ್ಯನಾಥ್ ಸ್ಮರಿಸಿದ್ದಾರೆ.

6 ಮಹಿಳೆ ಸೇರಿ 10 ಬಾಂಗ್ಲಾ ಪ್ರಜೆ ಸೆರೆ

ದೆಹಲಿ: ಅಕ್ರಮವಾಗಿ ಭಾರತದೊಳಕ್ಕೆ ನುಸುಳಿ ದೆಹಲಿಯಲ್ಲಿ ನೆಲೆಸಿದ್ದ ಬಾಂಗ್ಲಾದೇಶದ 10 ಪ್ರಜೆಗಳನ್ನು ಬಂಧಿಸಲಾಗಿದೆ. ಗಡೀಪಾರು ಪ್ರಕ್ರಿಯೆಗಾಗಿ 10 ಆರೋಪಿಗಳನ್ನು ವಿದೇಶಿಯರ ಪ್ರಾದೇಶಿಕ ನೋಂದಣಿ ಕಚೇರಿಗೆ ಹಸ್ತಾಂತರಿಸಲಾಗಿದೆ ಎಂದು ಪೊಲೀಸರು ಭಾನುವಾರ ತಿಳಿಸಿದ್ದಾರೆ.

ಮಂಡವಾಲಿ ಪೊಲೀಸ್ ಠಾಣೆಯಲ್ಲಿ ದೊರೆತ ಸುಳಿವಿನ ಮೇರೆಗೆ ಕಾರ್ಯಾಚರಣೆ ನಡೆಸಿ ಮೊದಲಿಗೆ ಬಾಂಗ್ಲಾದೇಶದ ಒಬ್ಬ ಮಹಿಳೆಯನ್ನು ಬಂಧಿಸಿ ಠಾಣೆಗೆ ಕರೆತಂದು ವಿಚಾರಣೆಗೆ ಒಳಪಡಿಸಲಾಯಿತು. ಆಕೆ ಒಬ್ಬಳೇ ಅಲ್ಲದೇ, ಇನ್ನೂ ಐವರು ಬಾಂಗ್ಲಾ ಮಹಿಳೆಯರು ಪಹರ್ಗಂಜ್ ಪ್ರದೇಶದಲ್ಲಿರುವುದು ತಿಳಿಯಿತು. ನಂತರ ಐವರು ಮಹಿಳೆಯರನ್ನು ಬಂಧಿಸಲಾಯಿತು ಎಂದು ಉಪ ಪೊಲೀಸ್ ಆಯುಕ್ತ ಅಭಿಷೇಕ್ ಧನಿಯಾ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ. ವಾಯುವ್ಯ ದೆಹಲಿಯ ಆಜಾದ್‌ಪುರ ತರಕಾರಿ ಮಂಡಿಯಲ್ಲಿ ತೃತೀಯಲಿಂಗಿ ವೇಷದಲ್ಲಿದ್ದ ಬಾಂಗ್ಲಾದೇಶದ ನಾರಾಯಣಗಂಜ್ ನಿವಾಸಿಗಳಾದ ಮೊಹಮ್ಮದ್ ಅರ್ಮಾನ್ (21), ಮೊಹಮ್ಮದ್ ಆರಿಫ್ (26), ಮೊಹಮ್ಮದ್ ಜಾಹಿದ್ (21) ಮತ್ತು ಮೊಹಮ್ಮದ್ ಬಾಬುಲ್ (40) ಎಂಬವರನ್ನು ಬಂಧಿಸಲಾಗಿದೆ. ಏಜೆಂಟರ ಸಹಾಯದಿಂದ ಭಾರತ ಪ್ರವೇಶಿಸಿ ರೈಲಿನಲ್ಲಿ ಟಿಕೆಟ್ ಇಲ್ಲದೇ ದೆಹಲಿಗೆ ಪ್ರಯಾಣಿಸಿದ್ದಾಗಿ ಆರೋಪಿಗಳು ತಪ್ಪೊಪ್ಪಿಕೊಂಡಿದ್ದಾರೆ.

ರಷ್ಯಾ ವಿಜಯದಿವಸ್‌ಗೆ ರಾಜನಾಥ್ ಹೋಗಲ್ಲ

ದೆಹಲಿ: ರಷ್ಯಾದ ಮಾಸ್ಕೋದಲ್ಲಿ ಮೇ 9ರಂದು ನಡೆಯಲಿರುವ 'ವಿಜಯ ದಿವಸ್' ಆಚರಣೆ ಕಾರ್ಯಕ್ರಮದಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಗಡಿ ಉದ್ವಿಗ್ನತೆ ಹಿನ್ನೆಲೆಯಲ್ಲಿ ಭಾಗವಹಿಸುತ್ತಿಲ್ಲ. ಬದಲಾಗಿ ರಕ್ಷಣಾ ಖಾತೆ ಸಹಾಯಕ ಸಚಿವ ಸಂಜಯ್ ಸೇಠ್ ಭಾರತವನ್ನು ಪ್ರತಿನಿಧಿಸುವ ಸಾಧ್ಯತೆ ಇದೆ. ಅಧಿಕೃತ ಮೂಲಗಳು ಈ ಮಾಹಿತಿ ನೀಡಿವೆ.



2ನೇ ಮಹಾಯುದ್ಧದಲ್ಲಿ ಜರ್ಮನಿ ವಿರುದ್ಧ ಸೋವಿಯತ್ ಒಕ್ಕೂಟ ವಿಜಯ ಸಾಧಿಸಿದ 80ನೇ ವರ್ಷದ ಆಚರಣೆಯನ್ನು ಗುರುತಿಸಲು ರಷ್ಯಾ ಆಚರಿಸುತ್ತಿರುವ 'ವಿಜಯ ದಿನದ ಪರೇಡ್'ಗೆ ಪ್ರಧಾನಿ ನರೇಂದ್ರ ಮೋದಿ ಅವರನ್ನು ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಆಹ್ವಾನಿಸಿದ್ದರು. ಆದರೆ ಭಾರತ-ಪಾಕ್ ನಡುವಿನ ಗಡಿ ಉದ್ವಿಗ್ನತೆ ಹಿನ್ನೆಲೆ ಪ್ರಧಾನಿ ಉಪಸ್ಥಿತಿ ದೇಶಕ್ಕೆ ಅವಶ್ಯ ಎಂಬ ಕಾರಣದಿಂದ ರಾಜನಾತ್ ಸಿಂಗ್ ಅವರಿಗೆ ಭಾಗವಹಿಸಲು ಸೂಚಿಸಲಾಗಿತ್ತು. ಈಗ ಸೇಠ್ ಭಾರತವನ್ನು ಪ್ರತಿನಿಧಿಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ. ಈ ವರ್ಷ ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ವಾರ್ಷಿಕ ಶೃಂಗಸಭೆಯಲ್ಲಿ ಭಾಗವಹಿಸಲು ಭಾರತಕ್ಕೆ ಭೇಟಿ ನೀಡುವ ನಿರೀಕ್ಷೆಯಿದೆ.

ಭಾರತದ ಸೇನೆ ಬಗ್ಗೆ ಪಾಕ್ ಸುಳ್ಳು ಸುದ್ದಿ

ದೆಹಲಿ: ಏ.22ರ ಪಹಲ್ಗಾಮ್ ಭಯೋತ್ಪಾದಕ ದಾಳಿ ಬಳಿಕ ಭಾರತದ ವಿರುದ್ಧ ಸುಳ್ಳು ಸುದ್ದಿ ಹರಡುವುದನ್ನು ಪಾಕಿಸ್ತಾನದ ಮಾಧ್ಯಮ, ಜಾಲತಾಣಗಳು ಕಾಯಕವಾಗಿಸಿಕೊಂಡಿವೆ. ಏ.30ರಂದು ನಿವೃತ್ತರಾದವರು, ಬಡ್ತಿ ಪಡೆದು ಹೊಸ ಹುದ್ದೆಗಳಿಗೆ ನೇಮಕಗೊಂಡವರ ಬಗ್ಗೆ ಪಾಕ್ ಮಾಧ್ಯಮಗಳಲ್ಲಿ ಸುಳ್ಳು ವರದಿ ಮಾಡುತ್ತಿವೆ. ನಕಲಿ ದಾಖಲೆಯೊಂದನ್ನು ಬಳಸಿಕೊಂಡು ಭಾರತೀಯ ಸೇನೆಯಲ್ಲಿ ಬಿರುಕು ಎಂದೂ ಸುಳ್ಳು ಸುದ್ದಿ ಪ್ರಸಾರ ಮಾಡುತ್ತಿವೆ. ಲೆಫ್ಟಿನೆಂಟ್ ಜನರಲ್ ಡಿ.ಎಸ್.ರಾಣಾ ವಿಚಾರದಲ್ಲಿಯೂ ಪಾಕ್ ಮಾಧ್ಯಮ ಸಂಸ್ಥೆಗಳು, ಸಾಮಾಜಿಕ ಜಾಲತಾಣಗಳು ಸುಳ್ಳು ಸುದ್ದಿ ಹರಡುತ್ತಿವೆ. ಭಾರತೀಯ ಸೇನೆಯ ಮಹಾ ನಿರ್ದೇಶಕ-ರಕ್ಷಣಾ ಗುಪ್ತಚರ ಸಂಸ್ಥೆಯ ಲೆಫ್ಟಿನೆಂಟ್ ಜನರಲ್ ಡಿ.ಎಸ್.ರಾಣಾ ಅವರನ್ನು ತೆಗೆದುಹಾಕಿ ಅಂಡಮಾನ್ ಗೆ ಗಡಿಪಾರು ಮಾಡಲಾಗಿದೆ ಎಂಬ ಸುದ್ದಿಯನ್ನು 'ಕಲಾಪಾನಿ' ಹೆಸರಲ್ಲಿ ಹರಡುತ್ತಿವೆ. ಸತ್ಯ ಸಂಗತಿ ಏನೆಂದರೆ, ಲೆ.ಜನರಲ್ ಡಿ.ಎಸ್,ರಾಣಾ ಅವರಿಗೆ ಸೇನಾ ಕಮಾಂಡರ್ ಹುದ್ದೆಗೆ ಬಡ್ತಿ ನೀಡಲಾಗಿದೆ. ಅವರೀಗ ಭಾರತದ ಪ್ರತಿಷ್ಠಿತ ತ್ರಿ-ಸೇನಾ ಕಾರ್ಯಾಚರಣೆಯ ಕಮಾಂಡ್ ಅಂಡಮಾನ್ ಮತ್ತು ನಿಕೋಬಾರ್ ಕಮಾಂಡ್ ಆಗಿ ಅಧಿಕಾರ ವಹಿಸಿಕೊಳ್ಳಲಿದ್ದಾರೆ.



ಯುದ್ಧವಾದರೆ ಬ್ರಿಟನ್‌ಗೆ ಓಡುವೆ: ಪಾಕ್ ಸಂಸದ

ಇಸ್ಲಾಮಾಬಾದ್: ಭಾರತ- ಪಾಕಿಸ್ತಾನದ ಮಧ್ಯೆ ಯುದ್ಧವೇನಾದರೆ ಶುರುವಾದರೆ ಇಂಗ್ಲೆಂಡ್‌ಗೆ ಹೋಗಿ ನೆಲೆಸುತ್ತೇನೆ ಎಂದು ಪಾಕ್ ಸಂಸದರೊಬ್ಬರು ಭಯದಿಂದ ಹೇಳಿರುವುದರ ವಿಡಿಯೊ ಸದ್ಯ ಜಾಲತಾಣದಲ್ಲಿ ವೈರಲ್ ಆಗಿದೆ.



ಭಾರತ ಯುದ್ಧ ಘೋಷಿಸಿದರೆ ದೇಶದ ಪರವಾಗಿ ಗನ್ ಹಿಡಿದು ಗಡಿಗೆ ಹೋಗಿ ಯುದ್ಧ ಮಾಡುವಿರಾ? ಎಂದು ಪಾಕಿಸ್ತಾನದ ಸಂಸದ ಶೇರ್ ಅಫ್ಜಲ್ ಖಾನ್ ಮಾರ್ವತ್ ಅವರಿಗೆ ಪತ್ರಕರ್ತರು ಪ್ರಶ್ನೆ ಮಾಡಿದ್ದಾರೆ. 'ಅಯ್ಯೋ, ಹಾಗೇನಾದರೂ ಭಾರತ ಯುದ್ಧ ಶುರು ಮಾಡಿದರೆ ನಾನು ತಕ್ಷಣವೇ ಇಂಗ್ಲೆಂಡ್‌ಗೆ ಪಲಾಯನ ಮಾಡುವೆ' ಎಂದು ಉತ್ತರಿಸಿದರು.

ಉಭಯ ದೇಶಗಳ ನಡುವಿನ ಉದ್ವಿಗ್ನತೆ ಶಮನಕ್ಕೆ ಭಾರತದ ಪ್ರಧಾನಿ ನರೇಂದ್ರ ಮೋದಿ ಪ್ರಯತ್ನಿಸಬೇಕು ಎಂದು ಭಾವಿಸುವಿರಾ' ಎಂಬ ಮತ್ತೊಂದು ಪ್ರಶ್ನೆಗೆ, 'ನಾನು ಹೇಳಿದೆ ಎಂದು ಹಿಂದೆ ಸರಿಯಲು ಮೋದಿ ಅವರೇನಾದರೂ ನನ್ನ ಚಿಕ್ಕಮ್ಮನ ಮಗನೇ?' ಎಂದು ಸಂಸರು ಮರು ಪ್ರಶ್ನೆ ಮಾಡಿದ್ದಾರೆ.

ಸಮಾಚಾರ ಸಣ್ಣದಲ್ಲ

ನಿರುಪಾಧೀಶ್ವರ ಜಾತ್ರೆಗೆ ನಿಧಿ ಸಂಗ್ರಹ

ಮುದಗಲ್: ಪಟ್ಟಣದ ಶ್ರೀ ನಿವಾಸ ಕಂಪ್ಲಿ ನಿವಾಸದಲ್ಲಿ ಮೇ, 20 ರಂದು ಜರುಗುವ ಅಂಕಲಿಮಠ ನಿರುಪಾಧೀಶ್ವರ ಜಾತ್ರಾ ಮಹೋತ್ಸವದ ನಿಮಿತ್ತ ಮಠದ ಪೂಜ್ಯರಾದ ವೀರಭದ್ರ ಸ್ವಾಮೀಜಿ ನಿಧಿ ಸಂಗ್ರಹ ಭಿಕ್ಷೆ ಮಾಡಿದರು.ಗುರು ನಿರುಪಾಧೀಶ್ವರರ ಸ್ಥಳೀಯ ಭಕ್ತರು ಭಕ್ತಿಯ ಕಾಣಿಕೆ ಸಮರ್ಪಣೆ ಮಾಡಿ ವೀರಭದ್ರ ಸ್ವಾಮೀಜಿಯವರ ಆಶೀರ್ವಾದ ಪಡೆದರು. ಈ ಸಂದರ್ಭದಲ್ಲಿ ಸತೀಶ ಕಂಪ್ಲಿ, ನಾಗನಗೌಡ ಬಯ್ಯಾಪೂರು, ಡಾ. ಬಸವರಾಜ ಕರಡಿ, ನೇಮಿಚಂದ್ ನಾಯ್ಕ್, ಹೇಮಂತ ನಾಗಲಪೂರು, ರಿಯಾಜ್ ಜಂಬಾಳಿ, ಪ್ರಕಾಶ ಪಾನಗಂಟೆ, ಅಮರೇಶಗೌಡ ಮರಕುಂಬಿ, ರವಿ ಕಮ್ಮಾರ, ಯಮನೂರು ಮಡಿವಾಳ, ಹನುಮಂತಪ್ಪ ಬಂಗಾರಗುಂಡು ಹಾಗೂ ಇತರರಿದ್ದರು.

ಭಗೀರಥ ವೃತ್ತದಲ್ಲಿ ಜಯಂತಿ ಆಚರಣೆ

ಲಿಂಗಸೂಗೂರು: ಹೊಸದಾಗಿ ನಿರ್ಮಿಸಿದ ಶ್ರೀ ಭಗೀರಥ, ಶ್ರೀರಾಮ್ ವೃತ್ತಕ್ಕೆ ಪೂಜೆ ಸಲ್ಲಿಸಿ ಭಗೀರಥ ಜಯಂತಿ ಆಚರಣೆ ಮಾಡಲಾಯಿತು. ಈ ಸಂದರ್ಭದಲ್ಲಿ ಸಮಾಜದ ಗಣ್ಯರಾದ ಲಕ್ಷ್ಮಿಕಾಂತ ಗುಂಟಿ, ಮಾದವ ನೆಲೋಗಿ,ಸಿದ್ದನಗೌಡ ಪಾಟೀಲ, ಸೂರ್ಯಚಂದ್ರ,ಗುಂಡಪ್ಪ ನಾಯಕ, ಹನುಮಂತ ರಾಯ, ರಮೇಶ ಗುಂಟಿ, ಗುರು, ವೆಂಕನಗೌಡ, ಹನುಮೇಶ ಗುಂಟಿ, ಅಮರೇಗೌಡ, ಅಮರೇಶ, ಪುರಷೋತ್ತಮ್, ಆನಂದ್ ಗುಂಟಿ, ಶರಣಬಸವ, ಭಾಗವಹಿಸಿದರು.

ಜಯಂತಿಗಳು ಜಾತಿಗೆ ನೀಮಿತ ಬೇಡ

ಮುದಗಲ್: ಮಹಾನ ನಾಯಕರ ಜಯಂತಿಗಳು ಒಂದು ಜಾತಿಗೆ ಸೀಮಿತವಾಗಿರುವುದು ವಿಷಾದನೀಯ ಸಂಗತಿಯಾಗಿದೆ. ಈ ಜಯಂತಿಗಳು ಜಾತಿಗೆ ಸೀಮಿತಗೊಳ್ಳಿಸುವುದು ಬೇಡವೆಂದು ಎಂದು ಆಮದಿಹಾಳ ಗ್ರಾಮ ಪಂಚಾಯತಿ ಅಧ್ಯಕ್ಷ ಜಗದೀಶ ಹೊಸಮನಿ ಹೇಳಿದರು. ಪಟ್ಟಣ ಸಮೀಪದ ಆಮದಿಹಾಳ ಗ್ರಾಮ ಪಂಚಾಯತಿ ಕಾರ್ಯಾಲಯದಲ್ಲಿ ರವಿವಾರ ಬೆಳಗ್ಗೆ ಶ್ರೀ ಮಹರ್ಷಿ ಭಗೀರಥ ಅವರ ಭಾವಚಿತ್ರಕ್ಕೆ ಹೂ ಮಾಲೆ ಹಾಕಿ ಪೂಜೆ ಸಲ್ಲಿಸಿ ನಂತರ ಮಾತನಾಡಿ ಅವರು, ಗಂಗೆಯನ್ನು ಧರೆಗೆ ಇಳಿಸಿದ ಮಹಾನ್ ತಪಸ್ವಿ ಭಗೀರಥ ಮಹರ್ಷಿ ತತ್ವಾದರ್ಶಗಳನ್ನು ಎಲ್ಲರೂ ಪಾಲಿಸಿದಾಗ ಮಾತ್ರ ಅವರ ಜಯಂತಿ ಆಚರಣೆಗೆ ಅರ್ಥ ಬರುತ್ತದೆ ಎಂದರು. ನಾಡ ಕಾರ್ಯಾಲಯ, ಪುರಸಭೆ, ಪಶು ಆಸ್ಪತ್ರೆ, ಪ್ರಥಮ ದರ್ಜೆ ಕಾಲೇಜ್, ರೈತ ಸಂಪರ್ಕ ಕೇಂದ್ರ,ಪೊಲೀಸ್ ಠಾಣೆ,ಸೇರಿದಂತೆ ಸುತ್ತಮುತ್ತಲಿನ ಗ್ರಾಮ ಪಂಚಾಯತಿ ಕಾರ್ಯಾಲಯಗಳಲ್ಲಿ ಶ್ರೀ ಮಹರ್ಷಿ ಭಗೀರಥ ರವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವ ಮೂಲಕ ಜಯಂತಿ ಆಚರಣೆ ಮಾಡಿದರು. ಈ ಸಂದರ್ಭದಲ್ಲಿ ಕಾರ್ಯದರ್ಶಿ ಮಹಾದೇವಪ್ಪ, ಸದಸ್ಯರಾದ ಅಮರೇಶ ದಂಡಿನ, ಮಲ್ಲಪ್ಪ ಅಂಗಡಿ, ಹಾಗೂ ರಮೇಶಗೌಡ, ಧನಂಜ ಯಗೌಡ ಭೀಮನಗೌಡ, ಹನುಮಂತ ತುರುಮುರಿ, ಅಶೋಕ ಭಜಂತ್ರಿ, ಸೇರಿದಂತೆ ವಿವಿಧ ಇಲಾಖೆ ಅಧಿಕಾರಿ ಗಳು ಇದ್ದರು.

ಜೋಳ ಖರೀದಿಸಲು ರೈತರ ಒತ್ತಾಯ

ಮಸ್ಕಿ: ತಾಲೂಕಿನ ಹೂವಿನ ಬಾವಿ, ಬುದ್ದಿನ್ನಿ ಇತರ ಗ್ರಾಮ ಗಳ ರೈತರು ಬೆಳೆದ ಹೈಬ್ರೀಡ್ ಜೋಳ ಖರೀದಿಸಲು ಜಿಲ್ಲಾಡಳಿತ ವ್ಯವಸ್ಥೆ ಮಾಡಬೇಕು ಬೇಕು ಎಂದು ಹೂವಿನಬಾವಿ ಗ್ರಾಮದ ರೈತರು ಆಗ್ರಹಿಸಿದ್ದಾರೆ. ಹೂವಿನಬಾವಿ ಗ್ರಾಮದ ಬಳಿಯ ಸರ್ವೆ ನಂ. 101/3, 17, 33,88, 91, 93 ಇತರ ಸರ್ವೆ ನಂ. ಗಳಲ್ಲಿ ಅಂದಾಜು 500 ಕ್ವಿಂಟಲ್ ಹೈಬ್ರೀಡ್ ಜೋಳ ರೈತರು ಬೆಳೆದಿದ್ದಾರೆ. ಜೋಳ ಖರೀದಿಗೆ ಕೃಷಿ, ಕಂದಾಯ ಇಲಾಖೆ ಅಧಿಕಾರಿ ಗಳು ಜಮೀನು ಗಳ ಜೆಪಿಎಸ್ ಮಾಹಿತಿ ರೈತ ಸಂಪರ್ಕ ಕೇಂದ್ರಕ್ಕೆ ಕಳುಹಿದ್ದರೂ ಇಲ್ಲಿಯ ರೈತವ ಸಂಪರ್ಕ ಕೇಂದ್ರದ ಅಧಿಕಾರಿ ಗಳು ತಾಂತ್ರಿಕ ತೊಂದರೆ ನೆಪದಲ್ಲಿ ಜೋಳ ಖರೀದಿ ಕೇಂದ್ರಕ್ಕೆ ಮಾಹಿತಿ ರವಾನಿಸಿಲ್ಲ ಎಂದು ರೈತರಾದ ಸಿದ್ದಲಿಂಗಪ್ಪ ಹೂವಿನಬಾವಿ, ವೆಂಕಟರಾಯ ಗೌಡ, ಗೋವಿಂದ ರೆಡ್ಡಿ, ಬೀರಪ್ಪ ಪೂಜಾರಿ, ಕೆ. ಸಿದ್ದಪ್ಪ ದೂರಿದ್ದಾರೆ. ಜೋಳ ಹಲವು ತಿಂಗಳಿಂದ ಮನೆಗಳಲ್ಲಿ ಸಂಗ್ರಹ ಮಾಡಿರುವ ಕಾರಣ ಜೋಳಕ್ಕೆ ಕೀಟ ಕಾಟ ಶುರುವಾಗುವ ಆತಂಕ ಎದುರಾಗಿದೆ ಎಂದು ರೈತರು ಅಳಲು ತೋಡಿ ಕೊಳ್ಳುತ್ತಿದ್ದಾರೆ. ಜಿಲ್ಲಾಧಿಕಾರಿ, ಕೃಷಿ ಅಧಿಕಾರಿಗಳು ಗಮನ ಹರಿಸಿ ತಾಂತ್ರಿಕ ತೊಂದರೆ ಸರಿಪಡಿಸಿ ರೈತರ ಜೋಳ ಖರೀದಿಸಲು ಸಂಬಂಧ ಪಟ್ಟ ಇಲಾಖೆ ಅಧಿಕಾರಿ ಗಳಿಗೆ ಸೂಚನೆ ನೀಡ ಬೇಕು ಈ ಬಗ್ಗೆ ಶಾಸಕ ಬಸನ ಗೌಡ ತುರ್ವಿಹಾಳ ರೈತರ ನೆರವಿಗೆ ಧಾವಿಸ ಬೇಕು ಎಂದು ರೈತರು ಮನವಿ ಮಾಡಿದ್ದಾರೆ.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

{ ಡಿ.ಕೆ.ಶಿವಕುಮಾರ್ } ಡಿಸಿಎಂ
ಕುಸುಮ್ ಯೋಜನೆ ಮೂಲಕ ಪ್ರತಿ ತಾಲೂಕಿನಲ್ಲಿ 20 ಮೆ.ವ್ಯಾ ಸಾಮರ್ಥ್ಯದ ಸೋಲಾರ್ ವಿದ್ಯುತ್ ಘಟಕ ಸ್ಥಾಪನೆ ಮಾಡಿ ಇದರಿಂದ ಹಗಲು ಹೊತ್ತಿನಲ್ಲಿಯೇ ರೈತರ ಪಂಪ್‌ಸೆಟ್‌ಗಳಿಗೆ ವಿದ್ಯುತ್ ನೀಡಲು ಸರಕಾರ ತೀರ್ಮಾನ ಮಾಡಿದೆ.

ಜಿಲ್ಲೆಯ ಪ್ರತಿಯೊಂದು ಹಳ್ಳಿಗಳು | ಹೋಬಳಿಗಳಿಗೆ ಸಮರ್ಪಕ ನೀರು ಪೂರೈಕೆಗೆ ಒತ್ತು: ಜಿಲ್ಲಾಧಿಕಾರಿ

ಎಲ್ಲಾ ಕಡೆಗೂ ಕುಡಿಯುವ ನೀರು ಕೊಡಿ

ರಾಯಚೂರು: ಬೇಸಿಗೆ ಅವಧಿಯಲ್ಲಿ ಕುಡಿಯುವ ನೀರಿನ ಅಗತ್ಯತೆ ತುಂಬಾ ಇದ್ದು, ಜಿಲ್ಲೆಯ ಪ್ರತಿಯೊಂದು ಹಳ್ಳಿಗಳು ಮತ್ತು ಹೋಬಳಿಗಳಿಗೆ ಸಮರ್ಪಕ ನೀರು ಪೂರೈಕೆಗೆ ಒತ್ತು ಕೊಡಬೇಕು ಎಂದು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷರು ಆಗಿರುವ ಜಿಲ್ಲಾಧಿಕಾರಿ ನಿತೀಶ್ ಕೆ ಅವರು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.

ಬೇಸಿಗೆಯ ಸಮಯದಲ್ಲಿ ಕುಡಿಯುವ ನೀರಿನ ಪೂರೈಕೆ ಕುರಿತು ಜಿಲ್ಲಾಡಳಿತ ಭವನದಲ್ಲಿ ಸಭೆ ನಡೆಸಿ ಅವರು ಮಾತನಾಡಿದರು. ಯಾವುದೇ ಹಳ್ಳಿಗಳಲ್ಲಿ ವಾಂತಿ ಬೇಧಿ ಪ್ರಕರಣಗಳು ದಾಖಲಾಗದಂತೆ ಮುಂಜಾಗ್ರತೆ ವಹಿಸಬೇಕು.

> ಅಲ್ಲಲ್ಲಿ ಮಳೆ ಬಿದ್ದಿರುವುದರಿಂದ ಬಿಸಿಲು ಒಂದು ಹಂತಕ್ಕೆ ಬಂದಿದೆ. ಆದಾಗ್ಯೂ ಬಿಸಿಲಿನ ತಾಪ ಏರುಗತಿಯಲ್ಲಿದೆ. ಈ ವೇಳೆ ಜನತೆಗೆ ಸ್ಪಂದಿಸಬೇಕು. ಸಾರ್ವಜನಿಕರ ಆರೋಗ್ಯ ಹಿತದೃಷ್ಟಿಯಿಂದ ಮುಂಜಾಗ್ರತೆ ಕ್ರಮವಾಗಿ ಪರೀಕ್ಷೆಗೊಳಪಡಿಸಿಯೇ ಕುಡಿಯುವ ನೀರು ಪೂರೈಸಲು ಕ್ರಮ ವಹಿಸಬೇಕು ಎಂದು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.
> – ನಿತೀಶ್.ಕೆ, ಜಿಲ್ಲಾಧಿಕಾರಿ

ಬೇಸಿಗೆಯ ಸಮಯದಲ್ಲಿ ಕುಡಿಯುವ ನೀರಿನ ಪೂರೈಕೆ ಕುರಿತು ಜಿಲ್ಲಾಡಳಿತ ಭವನದಲ್ಲಿ ಸಭೆ ನಡೆಸಿದರು.

ಎಲ್ಲ ಹಳ್ಳಿಗಳಲ್ಲಿ ನಿಯಮಿತವಾಗಿ ನೀರು ಪರೀಕ್ಷಿಸಿಯೇ ಜನರಿಗೆ ನೀರು ಪೂರೈಕೆ ಮಾಡಬೇಕು ಎಂದು ಜಿಲ್ಲಾ ಪಂಚಾಯತ್ ಸಿಇಒ ರಾಹುಲ್ ಪಾಂಡ್ವೆ ಅವರು ಪಿಡಿಒ, ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು.

ರಾಯಚೂರಲ್ಲಿ 4, ದೇವದುರ್ಗ, ಲಿಂಗಸಗೂರು ಮತ್ತು ಮಸ್ಕಿಯಲ್ಲಿ ತಲಾ 5 ಗ್ರಾಮ ಪಂಚಾಯತನ ವ್ಯಾಪ್ತಿಯ 30 ಹಳ್ಳಿಗಳು ಕುಡಿಯುವ ನೀರಿನ ಸಮಸ್ಯೆಯನ್ನು ಎದುರಿಸುತ್ತಿವೆ ಎಂದು ಪಟ್ಟಿ ಮಾಡಲಾಗಿದೆ.

ಅಧಿಕಾರಿಗಳು ಆಗಾಗ ಪ್ರವಾಸ ಮಾಡಿ.

ರಾಯಚೂರ, ಸಿರವಾರ, ಮಸ್ಕಿ, ದೇವದುರ್ಗ, ಸಿಂಧನೂರ ಮತ್ತು ಮಾನ್ವಿಯ ತಹಸೀಲ್ದಾರರು ಹಾಗೂ ತಾಪಂ ಕಾರ್ಯ ನಿರ್ವಹಣಾಧಿಕಾರಿಗಳು ಬರಿ ಕಚೇರಿಗಳಿಗೆ ಸೀಮಿತವಾಗದೇ ಗ್ರಾಮೀಣ ಪ್ರದೇಶದಲ್ಲಿ ಸಂಚರಿಸಿ, ನಿಯಮಿತವಾಗಿ ಪ್ರವಾಸ ಮಾಡಿ ಕುಡಿಯುವ ನೀರಿನ ಪರಿಸ್ಥಿತಿಯ ಬಗ್ಗೆ ನಿಗಾವಹಿಸಬೇಕು ಎಂದು ಹೇಳಿದರು. ಬೇರೆ ಬೇರೆ ಇಲಾಖೆಯ ಅಧಿಕಾರಿಗಳು ಈ ವೇಳೆ ಸಮನ್ವಯದಿಂದ ಕಾರ್ಯ ಮಾಡಬೇಕು. ಸಹಾಯಕ ಆಯುಕ್ತರು ಮತ್ತು ನೋಡಲ್ ಅಧಿಕಾರಿಗಳು ಪ್ರತಿ ವಾರ ಸಭೆ ನಡೆಸಿ ಕುಡಿಯುವ ನೀರು ಸರಬರಾಜಿನ ಬಗ್ಗೆ ಚರ್ಚಿಸಬೇಕು. ಎಂದು ನಿರ್ದೇಶನ ನೀಡಿದರು.

ಇದಕ್ಕಾಗಿ ಈಗಾಗಲೇ 63 ಖಾಸಗಿ ಬೋರವೆಲಗಳ ನೀರನ್ನು ಬಾಡಿಗೆ ಪಡೆಯಲಾಗಿದೆ. 30 ಹಳ್ಳಿಗಳಿಗೆ ಖಾಸಗಿ ಬೋರವೆಲ್ ಮೂಲಕ ನೀರು ಪೂರೈಸಲಾಗುತ್ತಿದೆ ಎಂದು ಅಪರ ಜಿಲ್ಲಾಧಿಕಾರಿ ಶಿವಾನಂದ ಅವರು ತಿಳಿಸಿದರು.

ಜಿಲ್ಲೆಯಲ್ಲಿನ ಎಲ್ಲ ತಾಲೂಕುಗಳಲ್ಲಿ ಕುಡಿಯುವ ನೀರಿನ ಪರಿಸ್ಥಿತಿಯನ್ನು ಅವಲೋಕಿಸಲು ತಾಲೂಕುವಾರು ನೋಡಲ್ ಅಧಿಕಾರಿಗಳನ್ನು ಈಗಾಗಲೇ ನೇಮಕ ಮಾಡಲಾಗಿದೆ. ಅದೇ ರೀತಿ ಎಲ್ಲ ತಾಲೂಕುಗಳ ಗ್ರಾಮ ಪಂಚಾಯತ್‌ಗಳಿಗೆ ತಲಾ ಒಬ್ಬ ನೋಡಲ್ ಅಧಿಕಾರಿಯನ್ನು ನೇಮಕ ಮಾಡಲು ಎರಡು ಉಪ ವಿಭಾಗಗಳ ಸಹಾಯಕ ಆಯುಕ್ತರಿಗೆ ನಿರ್ದೇಶನ ನೀಡಲಾಗಿದೆ ಎಂದು ಅಪರ ಜಿಲ್ಲಾಧಿಕಾರಿಗಳು ಮಾಹಿತಿ ನೀಡಿದರು.

ಸಭೆಯಲ್ಲಿ ಸಹಾಯಕ ಆಯುಕ್ತರು ತಹಸೀಲ್ದಾರರು, ತಾಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿಗಳು ಮತ್ತು ಇನ್ನಿತರ ಇಲಾಖೆಗಳ ಅಧಿಕಾರಿಗಳು ಭಾಗಿಯಾಗಿದ್ದರು.

ಬೆಲೆ ಏರಿಕೆಗೆ ಕೇಂದ್ರ ಸರಕಾರದ ವಿರುದ್ಧ ಪ್ರತಿಭಟನೆ 7ಕ್ಕೆ

ರಾಯಚೂರು: ಸಂವಿಧಾನ ಉಳಿವಿಗಾಗಿ ಮತ್ತು ಜನ ಸಾಮಾನ್ಯರ ಹಿತ ಮರೆತು ಬೆಲೆ ಏರಿಕೆ ಮಾಡಿರುವ ಕೇಂದ್ರ ಸರ್ಕಾರದ ವಿರುದ್ಧ ರಾಯಚೂರಿನಲ್ಲಿ ಮೇ 7 ರಂದು ಕಲಬುರ್ಗಿ ವಿಭಾಗೀಯ ಪ್ರತಿಭಟನಾ ಸಮಾವೇಶವನ್ನ ಆಯೋಜಿಸಲಾಗುವುದು ಎಂದು ಎಐಸಿಸಿ ಕಾರ್ಯದರ್ಶಿ ಗೋಪಿನಾಥ ಪಳನಿಯಪ್ಪನ್ ಹೇಳಿದರು.

ನಗರದ ಜಿಲ್ಲಾ ಕಾಂಗ್ರೆಸ್ ಪಕ್ಷದ ಕಾರ್ಯಾಲಯದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಕೇಂದ್ರ ಸರಕಾರ ಜನ ಸಾಮಾನ್ಯರ ಮೇಲೆ ಜಿಎಸ್ ಟಿ ದಾಳಿ ಮಾಡುತ್ತಿದೆ. ದೇಶದಲ್ಲಿ ಸಾಮಾಜಿಕ ಸ್ವಾಸ್ಥ್ಯ ಹಾಳಾಗುತ್ತಿದೆ. ಸಂವಿಧಾನ ರಕ್ಷಣೆ ಮಾಡುವುದು ಇಂದಿನ ದಿನದಲ್ಲಿ ಅತಿ ಅವಶ್ಯಕವಾಗಿದೆ.

ಹಾಗಾಗಿ ಬೆಲೆ ಏರಿಕೆ ವಿರೋಧಿಸಿ ಮತ್ತು ಸಂವಿಧಾನ ರಕ್ಷಣೆಗಾಗಿ ಇದೇ 7 ರಂದು ಮಹಾತ್ಮಗಾಂಧಿ ಜಿಲ್ಲಾ ಕ್ರೀಡಾಂಗಣದಲ್ಲಿ ಪ್ರತಿಭಟನಾ ಸಮಾವೇಶವನ್ನ ಹಮ್ಮಿಕೊಂಡಿದ್ದೇವೆ. ಸಮಾವೇಶದಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಉಸ್ತುವಾರಿ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೆ ವಾಲ, ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ, ಜಿಲ್ಲಾ ಉಸ್ತುವಾರಿ ಸಚಿವ ಡಾ.ಶರಣ ಪ್ರಕಾಶ ಪಾಟೀಲ, ಸಣ್ಣ ನೀರಾವರಿ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್.ಬೋಸರಾಜು ಸೇರಿದಂತೆ ಹಲವು ಸಚಿವರು ಭಾಗಿಯಾಗಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಶರಣ ಪ್ರಕಾಶ ಪಾಟೀಲ, ಸಣ್ಣ ನೀರಾವರಿ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್.ಬೋಸರಾಜು, ಕೆಪಿಸಿಸಿ ಕಾರ್ಯಾಧ್ಯಕ್ಷ ಹಾಗೂ ವಿಧಾನ ಪರಿಷತ್ ಸದಸ್ಯ ವಸಂತಕುಮಾರ, ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಸಮಾವೇಶ ನಡೆಯುವ ಮಹಾತ್ಮಗಾಂಧಿ ಕ್ರೀಡಾಂಗಣಕ್ಕೆ ತೆರಳಿ ಸಿದ್ದತೆಗಳನ್ನ ಪರಿಶೀಲಿಸಿ ದರು.

ಸುದ್ದಿಗೋಷ್ಟಿಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಶರಣ ಪ್ರಕಾಶ ಪಾಟೀಲ, ಸಣ್ಣ ನೀರಾವರಿ ತಂತ್ರಜ್ಞಾನ ಸಚಿವ ಎನ್.ಎಸ್.ಬೋಸರಾಜು, ಕೆಪಿಸಿಸಿ ಕಾರ್ಯಾಧ್ಯಕ್ಷ ಹಾಗೂ ವಿಧಾನ ಪರಿಷತ್ ಸದಸ್ಯ ವಸಂತಕುಮಾರ, ಶಾಸಕರಾದ ಹಂಪನಗೌಡ ಬಾದರ್ಲಿ, ಹಂಪಯ್ಯ ನಾಯಕ, ಬಸನಗೌಡ ದದ್ದಲ್, ಬಸನಗೌಡ ತುರ್ವಿಹಾಳ, ವಿದಾನ ಪರಿಷತ್ ಸದಸ್ಯ ಬಸನಗೌಡ ಬಾದರ್ಲಿ, ಕಾಂಗ್ರೆಸ್ ಪಕ್ಷದ ಜಿಲ್ಲಾಧ್ಯಕ್ಷ ಬಸವರಾಜ ಪಾಟೀಲ ಇಟಗಿ, ಕೆಪಿಸಿಸಿ ಪ್ರದಾನ ಕಾರ್ಯದರ್ಶಿ ಕೆ.ಶಾಂತಪ್ಪ, ಮಾಧ್ಯಮ ವಕ್ತಾರ ಡಾ.ರಜಾಕ್ ಉಸ್ತಾದ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಜಾತಿಗಣತಿ ಮಾದಿಗ ಎಂದೇ ನಮೂದಿಸಿ

ಲಿಂಗಸೂಗೂರು: ಮೇ 5ರಿಂದ ನಡೆಯುವ ಜಾತಿಗಣತಿಯಲ್ಲಿ ಸಮುದಾಯದ ಭಾಂದವರು ಪರಿಶಿಷ್ಟ ಜಾತಿ ಕಾಲಂನಲ್ಲಿ ಮಾದಿಗ ಎಂದು ನಮೂದಿಸಬೇಕು ಎಂದು ಮುಖಂಡ ಹೆಚ್.ಬಿ. ಮುರಾರಿ ಹೇಳಿದರು.

ಪಟ್ಟಣದ ಪತ್ರಿಕಾ ಭವನದಲ್ಲಿ ಸುದ್ದಿ ಗೋಷ್ಠಿಯಲ್ಲಿ ಮಾತನಾಡಿದ ಅವರು, ಒಳ ಮೀಸಲಾತಿ ಜಾರಿಗಾಗಿ ಪರಿಶಿಷ್ಟ ಜಾತಿಯವರ ಜಾತಿ ಗಣತಿಗಾಗಿ ಸರಕಾರ ಆದೇಶ ಮಾಡಿದ್ದು, ಮೇ 5 ರಿಂದ ಜಾತಿ ಗಣತಿ ಪ್ರಾರಂಭ ವಾಗಲಿದೆ. ಆದಿ ದ್ರಾವಿಡ, ಆದಿ ಕರ್ನಾಟಕ, ಆದಿ ಆಂಧ್ರ ಸೇರಿದಂತೆ, ಇನ್ನಿತರ ಯಾವುದೇ ಉಪ ಜಾತಿಗಳನ್ನು ನಮೂದು ಮಾಡಬಾರದು, ಜಾತಿ ಕಾಲಂ ನಲ್ಲಿ ಕೇವಲ ಮಾದಿಗ ಎಂಬ ಪದವನ್ನು ಮಾತ್ರ ನಮೂದು ಮಾಡಿಸ ಬೇಕು. ಬೇರೆ ಬೇರೆ ಭಾಗದಲ್ಲಿ ಮಾದಿಗ ಜನಾಂಗವನ್ನು ವಿವಿಧ ಪದಗಳಿಂದ ಕರೆಯುತ್ತಾರೆ.

ಆದರೆ ಎಷ್ಟೇ ಉಪ ಜಾತಿಗಳು ಇದ್ದರೂ ಮೂಲ ಜಾತಿ ಮಾದಿಗ ಆಗಿರುತ್ತದೆ. ಕಾರಣ ಗಣತಿಗೆ ಬರುವ ಅಧಿಕಾರಿಗಳಿಗೆ ಸರಿಯಾಗಿ ಸ್ಪಂ ದಿಸಿ, ಮಾದಿಗ ಎಂದು ನಮೂದಿಸಬೇಕು ಎಂದು ಹೇಳಿ ದರು.

ಸುದ್ದಿಗೋಷ್ಠಿಯಲ್ಲಿ ರುದ್ರಪ್ಪ ಬ್ಯಾಗಿ, ರಮೇಶ ಫೋಸ್ಲೆ,ಮೋಹನ್ ಫೋಸ್ಲೆ, ಅಂಜಿನಯ್ಯ ಭಂಡಾರಿ, ನಾಗರಾಜ ಆಸ್ಕಿಹಾಳ್, ಮೌನೇಶ್, ಸೇರಿದಂತೆ ಇತರರು ಉಪಸ್ಥಿತರಿದ್ದರು.

ಪಟ್ಟಣದ ಪತ್ರಿಕಾ ಭವನದಲ್ಲಿ ಸುದ್ದಿ ಗೋಷ್ಠಿಯಲ್ಲಿ ಎಚ್.ಬಿ. ಮುರಾರಿ ಮಾತನಾಡಿದರು.

ವಕ್ಫ್ ಕಾಯ್ದೆ ವಿರೋಧಿಸಿ ಮುಸ್ಲಿಮರ ಪ್ರತಿಭಟನೆ

ಕೊಪ್ಪಳ: ಕೇಂದ್ರ ಸರಕಾರ ಜಾರಿಗೆ ಮುಂದಾಗಿರುವ ವಕ್ಫ ತಿದ್ದುಪಡಿ ಕಾಯ್ದೆ ಕೂಡಲೇ ಹಿಂಪಡೆಯಲು ಆಗ್ರಹಿಸಿ, ಅಖಿಲ ಭಾರತ ಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿ ಜಿಲ್ಲಾ ಸಮಿತಿ ನೇತೃತ್ವದಲ್ಲಿ ಸಾವಿರಾರು ಮುಸ್ಲಿಂಮರು ಶನಿವಾರ ಬೃಹತ್? ಪ್ರತಿಭಟನೆ ನಡೆಸಿದರು.

> ಕೊಪ್ಪಳಕ್ಕೆ ಬಿಎಸ್‌ಪಿಎಲ್ ಕಾರ್ಖಾನೆ ಬಂದರೆ ನಮಗೆ ಯಾರಿಗೂ ಉಳಿಗಾಲ ಇಲ್ಲ. ಈ ಹಿನ್ನೆಲೆ ಬಲ್ಡೋಟ ಕಾರ್ಖಾನೆ ವಿರುದ್ಧ ಧರ್ಮಾತೀತವಾಗಿ ಹೋರಾಟ ಮಾಡಬೇಕಿದೆ. ನಮ್ಮ ಬೆಂಬಲ ಮುಸ್ಲಿಂಮರಿಗೆ ಇದೆ. ನೀವೂ ಕೂಡ ಕೊಪ್ಪಳ ಜಿಲ್ಲಾ ಬಚಾವೋ ಆಂದೋಲನಕ್ಕೆ ಬೇಕಿದೆ.
> – ಅಲ್ಲಮಪ್ರಭು ಬೆಟ್ಟದೂರು, ಹೋರಾಟಗಾರ

ಅಖಿಲ ಭಾರತ ಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿ ಜಿಲ್ಲಾ ಸಮಿತಿ ನೇತೃತ್ವದಲ್ಲಿ ಸಾವಿರಾರು ಮುಸ್ಲಿಂಮರು ಪ್ರತಿಭಟನೆ ನಡೆಸಿದರು.

ನಗರದ ಗಡಿಯಾರ ಕಂಬದ ಬಳಿ ಜಮಾಯಿಸಿದ ಮುಸ್ಲಿಂ ನಾಗರೀಕರು ಮತ್ತು ಯುವಕರು ಅಶೋಕ ವೃತ್ತದ ವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿದರು. ಅಶೋಕ ವೃತ್ತದಲ್ಲಿ ಪಹಲ್ಗಾಮ್ ದಾಳಿಯಲ್ಲಿ ಹುತಾತ್ಮರಾದವರಿಗೆ ಒಂದು ನಿಮಿಷ ಮೌನ ಆಚರಣೆ ಮಾಡಿ ಶ್ರದ್ಧಾಂಜಲಿ ಸಲ್ಲಿಸಲಾಯಿತು. ವೃತ್ತದಲ್ಲಿ ಬಹಿರಂಗ ಸಮಾವೇಶ ನಡೆಸಿ, ಕೇಂದ್ರ ಸರಕಾರದ ವಿರುದ್ಧ ಘೋಷಣೆ ಕೂಗಿದರು.

ಸಂವಿಧಾನದ ಆಶಯಕ್ಕೆ ವಿರುದ್ಧವಾಗಿ ವಕ್ಫ ಕಾಯ್ದೆಗೆ ತಿದ್ದುಪಡಿ ಮಾಡಿಲಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಕೇಂದ್ರ ಸರಕಾರ ಸಂವಿಧಾನಕ್ಕೆ ವಿರುದ್ಧವಾಗಿ ನಡೆದುಕೊಳ್ಳುತ್ತಿದೆ. ಮುಸ್ಲಿಂ ಸಮುದಾಯ ಕೇಂದ್ರೀಕರಿಸಿ ದ್ವೇಷ ಸಾಧಿಸುತ್ತಿದೆ. ವಕ್ಫ ಕಾಯ್ದೆಗೆ ತಿದ್ದುಪಡಿ ಮಾಡಿ ಮರಣ ಶಾಸನ ಬರೆದಿದೆ. ಇದರಿಂದ ಮುಸ್ಲಿಂ ಸಮುದಾಯಕ್ಕೆ ಧಕ್ಕೆಯಾಗಲಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಶಾಸಕ ರಾಘವೇಂದ್ರ ಹಿಟ್ನಾಳ ಮಾತನಾಡಿ, ಮುಸ್ಲಿಂ ಸಮುದಾಯದ ಅಭಿವೃದ್ಧಿಗೆ ನೀಡಿದ ದಾನದ ಭೂಮಿ ಮೇಲೆ ಪ್ರಧಾನಿ ಮೋದಿ, ಅಮಿತ್ ಶಾ ಕಣ್ಣು ಹಾಕಿದ್ದಾರೆ. ಈ ಮೂಲಕ ಮುಸ್ಲಿಂಮರ ಭಾವನೆಗೆ ವಿರುದ್ಧವಾಗಿ ಕಾಯ್ದೆಗೆ ತಿದ್ದುಪಡಿ ಮಾಡಲಾಗಿದೆ. ಇದನ್ನು ಭಾರತೀಯ ಮುಸ್ಲಿಂಮರು ಸಹಿಸುವುದಿಲ್ಲ. ಕೇಂದ್ರದ ಸಂವಿಧಾನ ವಿರೋಧಿ ಧೋರಣೆ ಹೆಚ್ಚು ದಿನ ನಡೆಯುವುದಿಲ್ಲ. ವಕ್ಫ ಕಾನೂನು ತಿದ್ದುಪಡಿ ಯಿಂದ ಮುಂದಿನ ಲೋಕಸಭೆ ಚುನಾವಣೆಯಲ್ಲಿ ಬಿಜೆಪಿ ಇದರ ಪರಿಣಾಮ ಎದುರಿಸುತ್ತದೆ ಎಂದು ಭವಿಷ್ಯ ನುಡಿದರು.

ಹೋರಾಟಗಾರ ಅಲ್ಲಮಪ್ರಭು ಬೆಟ್ಟದೂರು ಮಾತನಾಡಿ, ತಿದ್ದುಪಡಿ ಕಾಯ್ದೆ ವಾಪಸ್ ಪಡೆಯಬೇಕು. ದೇಶಾದ್ಯಂತ ಕಾಯ್ದೆ ಖಂಡಿಸಿ ಹೋರಾಟ ನಡೆಯುತ್ತಿವೆ. ಆದರೂ ಕೇಂದ್ರ ಮೊಂಡುತನ ಮಾಡುತ್ತಿದೆ. ಜನರ ಭಾವನೆಗೆ ವಿರುದ್ಧವಾದ ಕಾನೂನು ಜಾರಿಗೆ ಹೊರಟಿದೆ. ಇದನ್ನು ನಾವೆಲ್ಲ ಖಂಡಿಸುತ್ತೇವೆ. ಕಾಯ್ದೆ ವಾಪಸ್ ಪಡೆವವರೆಗೆ ಹೋರಾಟ ನಿರಂತರವಾಗಿ ಇರಲಿದೆ. ಮುಸ್ಲಿಂರಿಗೆ ಮರಣ ಶಾಸನವಾಗಿರುವ ಕಾನೂನ ಜಾರಿಗೆ ಬಿಡುವುದಿಲ್ಲ. ಹಿಂದು– ಮುಸ್ಲಿಂಮರು ಸಹೋದರತ್ವದಿಂದ ಇದ್ದು, ಅಶಾಂತಿ ಸೃಷ್ಟಿಗೆ ಅವಕಾಶ ನೀಡಬಾರದು. ಕೂಡಲೇ ಕೇಂದ್ರ ನೂತನ ತಿದ್ದುಪಡಿ ಕಾಯ್ದೆ ವಾಪಸ್ ಪಡೆಯಬೇಕೆಂದು ಆಗ್ರಹಿಸಿದರು.

ಸಂಸದ ರಾಜಶೇಖರ ಹಿಟ್ನಾಳ, ನಗರಸಭೆ ಅಧ್ಯಕ್ಷ ಅಮ್ಜದ್, ಪಟೇಲ್, ಮಾಜಿ ಸಂಸದ ಸಂಗಣ್ಣ ಕರಡಿ, ಮುಸ್ಲಿಂ ಧರ್ಮಗುರು ಮುಫ್ತಿ ನಜೀರ್, ಅಹಮದ್ ಖಾದ್ರಿ, ನಗರಸಭೆ ಸದಸ್ಯರಾದ ಮಹೇಂದ್ರ ಚೋಪ್ರಾ, ರಾಜಶೇಖರ ಆಡೂರು, ಮುತ್ತು ಕುಷ್ಟಗಿ, ಕೆ.ಎಂ.ಸೈಯ್ಯದ, ಸಲೀಂ ಮಂಡಲಗಿರಿ, ಪೀರಾಹುಸೇನ್ ಹೊಸಳ್ಳಿ, ಆಸೀಫ್ ಅಲಿ, ಎಂ.ಕಾಟನ್ ಪಾಷಾ ಇದ್ದರು.

ಅಕ್ಷರ ಕಲಿಸಿದ ಶಿಕ್ಷಕರಿಗೆ ಗುರುವಂದನೆ

ಕುಕನೂರು: ತಾಲೂಕಿನ ಸೋಂಪೂರ ಗ್ರಾಮದಲ್ಲಿ 2003–4ನೇ ಸಾಲಿನ 10ನೇ ತರಗತಿ ವಿದ್ಯಾರ್ಥಿಗಳಿಂದ ಗುರುವಂದನಾ ಹಾಗೂ ಸ್ನೇಹ ಸಮ್ಮಿಲನದ ರಜತ್ ಮಹೋತ್ಸವ ಕಾರ್ಯಕ್ರಮ ನಡೆಯಿತು. ಡಾ.ಸರ್ವಪಲ್ಲಿ ರಾಧಾಕೃಷ್ಣನ್ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸುವ ಮೂಲಕ ಬಿಇಒ ಸೋಮಶೇಖರ ಪಾಟೀಲ್ ಕಾರ್ಯಕ್ರಮ ಉದ್ಘಾಟಿಸಿದರು.

ನಂತರ ಮಾತನಾಡಿ, ಅವರು ಕಲಿತ ಶಾಲೆ ಮತ್ತು ಕಲಿಸಿದ ಶಿಕ್ಷಕರನ್ನು ಎಂದಿಗೂ ಮರೆಯಬಾರದು. ಶಿಕ್ಷಣ ಕ್ಷೇತ್ರದಲ್ಲಿ ಸೇವೆ ಸಲ್ಲಿಸಲು ಪುಣ್ಯ ಮಾಡಿರಬೇಕು. ನವ ಸಮಾಜ ನಿರ್ಮಾಣ ಮಾಡುವ ಶಕ್ತಿ ಇರುವುದು ಶಿಕ್ಷಕರಿಗೆ ಮಾತ್ರ.ಅಕ್ಷರ ನೀಡಿದ ಶಿಕ್ಷಕರಿಗೆ ಗುರುವಂದನೆ ಸಲ್ಲಿಸುವುದು ಶ್ಲಾಘನೀಯ ಕಾರ್ಯ ಎಂದರು.

ನಿವೃತ್ತ ಶಿಕ್ಷಕ ಕೆ.ವಿ.ಉಣಚಗೇರಿ ಮಾತನಾಡಿ, ಗ್ರಾಮೀಣ ಭಾಗದಲ್ಲಿ ಶಿಕ್ಷಣವನ್ನು ಜನಸಾಮಾನ್ಯರಿಗೂ ನೀಡಿ ಸಮಾಜದಲ್ಲಿ ಗೌರವ ಹೆಚ್ಚಿಸಲು ಶ್ರೀಶರಣ ಬಸವೇಶ್ವರ ಪ್ರೌಢ ಶಾಲೆ 45 ವರ್ಷಗಳಿಂದ ಶೈಕ್ಷಣಿಕ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸಿದೆ. ಗುರುವನ್ನೆ ಮೀರಿಸುವ ಶಿಷ್ಯ ಬಳಗವನ್ನು ನೋಡಿ ಸಂತಸವಾಯಿತು. ಯುವ ಪೀಳಿಗೆಗೆ ಉತ್ತೇಜನ ನೀಡುವಲ್ಲಿ ಶ್ರಮಿಸೋಣ ಬದುಕಿನಲ್ಲಿ ಕಳೆದ ದಿನಗಳನ್ನು ನಾವು ಮರೆಯಬಾರದು ಶಿಕ್ಷಕನಾಗಿ ಸೇವೆ ಸಲ್ಲಿಸಿದ್ದು ನನ್ನ ಸೌಭಾಗ್ಯ ಎಂದರು.

ಶಾಲೆ ಮುಖ್ಯ ಶಿಕ್ಷಕ ಟಿ.ಎಫ್.ನೂರಭಾಷ ಅಧ್ಯಕ್ಷತೆ ವಹಿಸಿದ್ದರು. ಶಿಕ್ಷಕರಾದ ಆರ್.ಬಿ.ಅಬ್ಬಿಗೇರಿ, ಜಗದೀಶ ಕುಂಬಾರ, ಕೆ.ವಿ.ಉಣಚಗೇರಿ, ಅಶೋಕ ಸಂಗನಾಳ, ಅನಿಲ್ ಪೂಜಾರ, ಶಿವಣ್ಣ ಗುಳಗಣ್ಣನವರ, ಎಸ್.ವಿ.ಲಮಾಣಿ, ನಿಂಗಪ್ಪ ಕರೆಬಾಲಪ್ಪನವರ, ಹನುಮಂತಪ್ಪ ಕವಲೂರು ಅವರನ್ನು ಸನ್ಮಾನಿಸುವ ಮೂಲಕ ಗುರು ವಂದನೆ ಸಲ್ಲಿಸಿದರು. ಇದೇ ವೇಳೆ ಗ್ರಾಮದ ನಿವೃತ್ತ ಶಿಕ್ಷಕರು ಮತ್ತು ಪ್ರತಿಭಾ ಪುರಸ್ಕಾರದ ಮೂಲಕ ಗ್ರಾಮದ ಸಾಧಕ ವಿದ್ಯಾರ್ಥಿಗಳನ್ನು ಗೌರವಿಸಲಾಯಿತು. ಕಾರ್ಯ ಕ್ರಮದಲ್ಲಿ ವಲಯ ಮೇಲ್ವಿಚಾರಕ ಖಾದರಭಾಷಾ, ಗವಿಸಿದ್ದಯ್ಯ ಬೆಣಕಲ್ಲಮಠ 2003 – 04 ನೇ ಸಾಲಿನ ಹಳೆಯ ವಿದ್ಯಾರ್ಥಿಗಳು ಇದ್ದರು. ಜಗದ್ದೀಶ ಸಿಂದೋಗಿ ನಿರ್ವಹಿಸಿದರು.

ಕುಕನೂರು ತಾಲೂಕು ಸೋಂಪೂರ ಗ್ರಾಮದಲ್ಲಿ 2003–4ನೇ ಸಾಲಿನ 10ನೇ ತರಗತಿ ವಿದ್ಯಾರ್ಥಿಗಳಿಂದ ಗುರುವಂದನಾ ಹಾಗೂ ಸ್ನೇಹ ಸಮ್ಮಿಲನದ ರಜತ್ ಮಹೋತ್ಸವ ಕಾರ್ಯಕ್ರಮ ನಡೆಯಿತು.

ಒಳ ಮೀಸಲಿಗೆ ಜನ ಗಣತಿ ಶುರು

ಮಸ್ಕಿ: ಒಳ ಮೀಸಲು ಜಾರಿಗಾಗಿ ಪರಿಶಿಷ್ಟ ಜಾತಿ ಜನ ಗಣತಿ ರಾಜ್ಯದಲ್ಲಿ ಮೇ 5 ರಿಂದ 21 ರವರೆಗೆ ನಡೆಯಲಿದೆ ಅಧಿಕಾರಿಗಳು ಜನ ಗಣತಿ ಕರ್ತವ್ಯ ಅಚ್ಚುಕಟ್ಟಾಗಿ ನಿರ್ವಹಿಸಬೇಕು ಎಂದು ತಹಸೀಲ್ದಾರ್ ಡಾ. ಮಲ್ಲಪ್ಪ ಯರಗೋಳ ಹೇಳಿದರು.

ಪಟ್ಟಣದ ಬಾಲಕಿಯರ ಸರಕಾರಿ ಪದವಿ ಪೂರ್ವ ಕಾಲೇಜು ಬಳಿ ಏರ್ಪಡಿಸಿದ್ದ ಜನ ಗಣತಿ ಮೇಲ್ವಿಚಾರಕರ ಸಭೆ ಯಲ್ಲಿ ಶುಕ್ರವಾರ ಮಾತನಾಡಿ, ವಿಧಾನ ಸಭಾ ಕ್ಷೇತ್ರದ 231 ಮತಗಟ್ಟೆಗಳಿಗೆ 231 ಶಿಕ್ಷಕರನ್ನು ಗಣತಿದಾರ ರನ್ನಾಗಿ ಮತ್ತು ತಲಾ 12 ಮತಗಟ್ಟೆಗಳಿಗೆ ಒಬ್ಬರಂತೆ ಗಣತಿ ಮೇಲ್ವಿಚಾರಕರನ್ನು ನೇಮಕ ಮಾಡಲಾಗಿದೆ ಎಂದರು.

ಗಣತಿದಾರರು ಮತಗಟ್ಟೆ ವಾರು ಮನೆ ಮನೆಗೆ ಭೇಟಿ ನೀಡಿ ಗಣತಿಗೆ ಬಂದಾಗ ತಾಲೂಕಿನ ಜನರು ಜಾತಿ ಬಗ್ಗೆ ಅವರಿಗೆ ಅಗತ್ಯ ಮಾಹಿತಿ ನೀಡಿ ಗಣತಿಗೆ ಸಹಕರಿಸಬೇಕು ಎಂದರು. ಈ ಸಂದರ್ಭದಲ್ಲಿ ನೋಡಲ್ ಉಪ ಕಾರ್ಯದರ್ಶಿ ಶಶಿಕಾಂತ, ಡಿಡಿಪಿಐ ಕೆ ಡಿ. ಬಡಿಗೇರ್, ಇಒ. ಅಮರೇಶ ಯಾದವ್, ಕಂದಾಯ, ಶಿಕ್ಷಣ ಇಲಾಖೆ ಅಧಿಕಾರಿಗಳು ಇದ್ದರು.

ಜಿಲ್ಲಾಡಳಿತದಿಂದ ಭಗೀರಥ ಜಯಂತಿ

ಕೊಪ್ಪಳ: ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಶ್ರೀಭಗೀರಥ ಜಯಂತಿಯನ್ನು ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ರವಿವಾರ ಆಚರಿಸಲಾಯಿತು. ಕೊಪ್ಪಳ ತಹಸೀಲ್ದಾರ ವಿಠ್ಠಲ ಚೌಗಲಾ ಶ್ರೀಭಗೀರಥ ರವರ ಭಾವಚಿತ್ರಕ್ಕೆ ಪುಷ್ಪಾರ್ಪಣೆ ಮಾಡಿ ಗೌರವ ನಮನ ಸಲ್ಲಿಸಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಕೊಟ್ರೇಶ ಮರಬನಳ್ಳಿ, ಸಮಾಜದ ಮುಖಂಡರಾದ ಹನುಮೇಶ ಉಪ್ಪಾರ, ಶ್ರೀನಿವಾಸ, ಹನುಮಪ್ಪ, ಲಕ್ಷ್ಮಣ ಬಂಡಿಹರ್ಲಾಪುರ, ನಾಗರಾಜ ಬಿ., ಬಸವರಾಜ ಮೂಲಿಮನಿ, ನಿಂಗಪ್ಪ, ಬಸ್ನೆಪ್ಪ ಗೌಡ, ಅಶೋಕ, ಹೊನ್ನಪ್ಪ, ಯಮ ನಗೌಡ ಸೇರಿ ಇತರರು ಇದ್ದರು.



ಪ್ರತಿಭಟನೆ ತೀವ್ರಗೊಳಿಸಲು ಜಿಲ್ಲಾ ಬಚಾವೋ ಆಂದೋಲನ ಸಮಿತಿ ತೀರ್ಮಾನ | ಗವಿಶ್ರೀ ಸೇರಿ ಜಿಲ್ಲೆಯ ಮಠಾಧೀಶರ ನೇತೃತ್ವಕ್ಕೆ ಮನವಿ

ಬಲ್ಡೋಟ ಕಬ್ಬಿಣ ಕಾರ್ಖಾನೆ ವಿರೋಧಿ ಹೋರಾಟಕ್ಕೆ ಸಜ್ಜು

ಕೊಪ್ಪಳ: ನಗರದ ಶ್ರೀಮಹಾಂತಯ್ಯನಮಠ ಕಲ್ಯಾಣ ಮಂಟಪದಲ್ಲಿ, ಬಲ್ಡೋಟ ಕಾರ್ಖಾನೆ ವಿಸ್ತರಣೆಗೆ ವಿರೋಧಿಸುವುದು ಸೇರಿ ವಾಯು ಮಾಲಿನ್ಯಕ್ಕೆ ಕಾರಣವಾಗುವ ಕೈಗಾರಿಕೆ ವಿರುದ್ಧ ಹೋರಾಟಕ್ಕೆ ಕೊಪ್ಪಳ ಜಿಲ್ಲಾ ಬಚಾವೋ ಆಂದೋಲನ ಸಮಿತಿ ನೇತೃತ್ವದಲ್ಲಿ ಭಾನುವಾರ ಸಭೆ ನಡೆಯಿತು. ಹೋರಾಟಗಾರರು, ಸಾಹಿತಿಗಳು, ಪ್ರಜ್ಞಾವಂತರನ್ನು ಒಳಗೊಂಡು ನಡೆದ ಸಭೆಯಲ್ಲಿ, ಬಲ್ಡೋಟ ಕಾರ್ಖಾನೆ ವಿಸ್ತರಣೆ ಸೇರಿ ಪರಿಸರ ಮಾಲಿನ್ಯ ಮಾಡುತ್ತಿರುವ ಉಕ್ಕು ಮತ್ತು ಕಬ್ಬಿಣ ಕಾರ್ಖಾನೆ ವಿರುದ್ಧ ಕ್ರಮ ಬದ್ಧ ಹೋರಾಟ ಮಾಡಬೇಕು. ಜೊತೆಗೆ ಗವಿಸಿದ್ದೇಶ್ವರ ಸ್ವಾಮೀಜಿ ಸೇರಿ ಜಿಲ್ಲೆಯ ಮಠಾಧೀಶರನ್ನು ಹೋರಾಟದ ನೇತೃತ್ವ ವಹಿಸುವಂತೆ ಮನವಿ ಮಾಡುವ ಬಗ್ಗೆ ಸಭೆಯಲ್ಲಿ ತೀರ್ಮಾನಿಸಲಾಯಿತು.

ಹೋರಾಟದ ರೂಪುರೇಷೆ ಸಿದ್ಧಪಡಿಸುವ ಕುರಿತು ಸುಧೀರ್ಘವಾಗಿ ಚರ್ಚಿಸಿ, ಹೋರಾಟಕ್ಕೆ ಕೊಪ್ಪಳ ಮತ್ತು ಭಾದಿತ ಗ್ರಾಮಗಳ ಜನರನ್ನು ಸಜ್ಜುಗೊಳಿಸಬೇಕು. ಸಾರ್ವಜನಿಕರನ್ನು ಹೋರಾಟಕ್ಕೆ ಬರುವಂತೆ ಪ್ರೇರೇಪಿಸಲು ಜನರಲ್ಲಿ ಜಾಗೃತಿ ಮೂಡಿಸಲು ಸಭೆ ತೀರ್ಮಾನಿಸಿದೆ. ಸದ್ಯ ಬಿಎಸ್‌ಪಿಎಲ್ ಎಂದು ಹೆಸರು ಬದಲಿಸಿಕೊಂಡಿರುವ ಎಂಎಸ್‌ಪಿಎಲ್ ಸೇರಿ ಸಾರ್ವ ಜನಿಕರ ಬದು ಕಿಗೆ ಮಾರಕವಾಗಿರುವ ಎಲ್ಲ ಕೈಗಾರಿಕೆಗಳು ಕೊಪ್ಪಳ ಬಿಟ್ಟು ತೊಲಗಿಸುವವರೆಗೆ ನಿರಂತರವಾಗಿ ಹೋರಾಟ ಮಾಡ ಬೇಕು ಎಂದು ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಯಿತು.

ಕೈಗಾರಿಕೆ ವಿರುದ್ಧ ಹೋರಾಟಕ್ಕೆ ಕೊಪ್ಪಳ ಜಿಲ್ಲಾ ಬಚಾವೋ ಆಂದೋಲನ ಸಮಿತಿ ನೇತೃತ್ವದಲ್ಲಿ ಭಾನುವಾರ ಸಭೆ ನಡೆಯಿತು.

ವಾರ್ಡ್‌ವಾರು ಸಭೆ: ಪ್ರಮುಖವಾಗಿ ಕೊಪ್ಪಳ ಮತ್ತು ಭಾಗ್ಯನಗರ ಪಟ್ಟಣದಲ್ಲಿ ವಾರ್ಡ್‌ವಾರು ಸಭೆ ಮಾಡಿ, ಪರಿಸರದ ಬಗ್ಗೆ ಜಾಗೃತಿ ಮೂಡಿಸಬೇಕು. ಕೊಪ್ಪಳದ 31 ಮತ್ತು ಭಾಗ್ಯನಗರದ 19 ವಾರ್ಡ್ ನಲ್ಲಿ ಸಭೆ ನಡೆಸುವ ದಿನಾಂಕ ನಿಗದಿ ಮಾಡುವ ಜೊತೆಗೆ ಸುತ್ತಲಿನ ಸುಮಾರು 30 ಗ್ರಾಮದಲ್ಲಿ ಸಭೆ ನಡೆಸಬೇಕು. ಜಿಲ್ಲೆಯಲ್ಲಿನ ಜನ ಕಾಳಜಿ ಉಳ್ಳ ಸಂಘಟನೆ ಜೊತೆಗೂಡಿ ನಗರದ ಅಶೋಕ ವೃತ್ತದಲ್ಲಿ ನಿರಂತರ ಧರಣಿ ಸತ್ಯಾಗ್ರಹ ನಡೆಸಬೇಕು.

ಕೊಪ್ಪಳ ವಿಧಾನಸಭೆ ಕ್ಷೇತ್ರದ ಸುಮಾರು 35 ಸಾವಿರ ಕುಟುಂಬದಿಂದ ಪ್ರತಿ ಕುಟುಂಬದಿಂದ ಕನಿಷ್ಠ 3ರಂತೆ ರಾಷ್ಟ್ರಪತಿ, ಪರಿಸರ ಸಚಿವಾಲಯ ಮತ್ತು ಹಸಿರು ನ್ಯಾಯಾಧಿಕರಣಕ್ಕೆ ಒಟ್ಟು ಒಂದು ಲಕ್ಷ ಪತ್ರ ಬರೆಸುವ ಮೂಲಕ ಪತ್ರ ಚಳುವಳಿ ನಡೆಸಬೇಕು ಎಂಬ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.

ಹೋರಾಟದ ನೇತೃತ್ವವನ್ನು ಗವಿಮಠದ ಶ್ರೀಗವಿಸಿದ್ದೇಶ್ವರ ಮಹಾಸ್ವಾಮಿಗಳು ವಹಿಸಿಕೊಳ್ಳುವಂತೆ ಮತ್ತು ಜಿಲ್ಲೆಯ ಎಲ್ಲ ಮಠಾಧೀಶರು ಭಾಗವಹಿಸುವಂತೆ ಮನವಿ ಮಾಡಬೇಕು. ನಿರಂತರ ಜನಹೋರಾಟ ರೂಪಿಸಿ ಶಾಶ್ವತ ಪರಿಹಾರ ಕಂಡುಕೊಳ್ಳುವ ನಿರ್ಣಯ ಅಂಗೀಕರಿಸಲಾಯಿತು.

ಪರಿಸರಕ್ಕಾಗಿ ನಾವು ಸಂಘಟನೆ ರಾಜ್ಯ ಕಾರ್ಯದರ್ಶಿ ಕಾಶಿನಾಥ ಪಾಟೀಲ್, ಹೋರಾಟಗಾರ ಜನಾರ್ದನ, ಕೊಪ್ಪಳ ಜಿಲ್ಲಾ ಬಚಾವೋ ಆಂದೋಲನ ಸಮಿತಿ ಪ್ರಧಾನ ಸಂಚಾಲಕ ಅಲ್ಲಮಪ್ರಭು ಬೆಟ್ಟದೂರು, ಹಿರಿಯ ವಕೀಲ ರಾಜು ಬಾಕಳೆ, ಪೀರಾಹುಸೇನ್ ಹೊಸಳ್ಳಿ, ವರ್ತಕ ಪ್ರಭು ಹೆಬ್ಬಾಳ, ಬಸವರಾಜ ಬಳ್ಳೊಳ್ಳಿ, ರೈತ ಮುಖಂಡ ನಜೀರ ಸಾಬ್ ಮೂಲಿಮನಿ, ಶರಣು ಪಾಟೀಲ್ ಮಾತನಾಡಿ ಹೋರಾಟದ ರೂಪರೇಷ ಬಗ್ಗೆ ಸಲಹೆ ನೀಡಿದರು. ಅಂದಣ್ಣ ಅಗಡಿ, ಸಿದ್ದಣ್ಣ ನಾಲ್ವಾಡ, ಡಾ. ಚಂದ್ರಶೇಖರ ಕರಮುಡಿ, ಮಹಾಂತೇಶ ಮಲ್ಲನಗೌಡರ, ಶರಣು ಡೊಳ್ಳಿನ, ಕಾಶಪ್ಪ ಛಲವಾದಿ, ಬಿ.ಜಿ. ಕರಿಗಾರ, ವೈ.ಬಿ. ಬಂಡಿ, ನಿವೃತ್ತ ಪ್ರಾಂಶುಪಾಲ ರಾಜೂರ, ವಿ.ಪಿ. ರವಿಕಾಂತನವರ, ಮೌನೇಶ ಬಡಿಗೇರ ಇದ್ದರು. ಕೆ. ಬಿ. ಗೋನಾಳ ನಿರ್ಣಯ ಮಂಡಿಸಿದರು.

ತೀವ್ರ ಸ್ವರೂಪದ ಹೋರಾಟಕ್ಕೆ ನಿರ್ಧಾರ..

ಕೊಪ್ಪಳದ ಗವಿದ್ದೇಶ್ವರ ಸ್ವಾಮೀಜಿ ನೇತೃತ್ವದಲ್ಲಿ ಜಿಲ್ಲೆಯ ಮಠಾಧೀಶರನ್ನು ಒಳಗೊಂಡು ಸುಮಾರು 10 ಸಾವಿರ ಜನರೊಂದಿಗೆ ಬಲ್ಡೋಟ ಕಂಪನಿ ಲಾಕ್ ಮಾಡಿ ಹೋರಾಟ ಮಾಡಬೇಕು. ಪ್ರಗತಿಪರರು, ಶಿಕ್ಷಣ ಸಂಸ್ಥೆಗಳು, ವಕೀಲರು, ವೈದ್ಯರು, ಮಹಿಳಾ ಸಂಘ ಟನೆಗಳು ಒಂದೊಂದು ದಿನ ಒಬ್ಬರಂತೆ ನಿರಂತರ ಹೋರಾಟ ಮಾಡಬೇಕು. ತೀವ್ರ ಸ್ವರೂಪದಲ್ಲಿ ಹೋರಾ ಟ ಮಾಡಬೇಕು. ಅನಧಿಕೃತವಾಗಿ ಕಟ್ಟಿದ ಕಂಪೌ ಂಡ್ ಒಡೆಯುವುದು ಸೇರಿ ಏಳೆಂಟು ತಂಡ ವಾಗಿಸಿ ಜೈಲ್ ಭರೋ ಹೋರಾಟ ಸೇರಿ ಎಲ್ಲ ರೀತಿಯ ಕ್ರಾಂತಿ ಕಾರಿ ಹೋರಾಟಕ್ಕೆ ಸಭೆ ನಿರ್ಧರಿಸಿತು. ಜನರ ದೇಣಿಗೆ ಮೂಲಕ ಹೋರಾಟ ರೂಪಿಸಿ, ಜನಾಂದೋಲ ನವಾಗಿ ರೂಪಿಸಲು ನಿರ್ಧರಿಸಿ, ಹೋರಾಟಕ್ಕೆ ಶೀಘ್ರದಲ್ಲೇ ದಿನಾಂಕ ನಿಗದಿ ಮಾಡುವ ಬಗ್ಗೆ ತೀರ್ಮಾನ ಕೈಗೊಳ್ಳಲಾಯಿತು.

ಸಮಾಚಾರ ಸಣ್ಣದಲ್ಲ

ಮೇಘಾ ಬೇರಗಿಗೆ ಶೇ.75 ಅಂಕ ಗಳಿಕೆ

ಕೊಪ್ಪಳ: ಎಸ್‌ಎಸ್‌ಎಲ್‌ಸಿ ಪರೀಕ್ಷಾ ಫಲಿತಾಂಶ ಶುಕ್ರವಾರ ಪ್ರಕಟವಾಗಿದೆ. ವಿದ್ಯಾರ್ಥಿನಿ ಮೇಘಾ ಸುರೇಶ್ ಬೇರಗಿ

ಅವರು ಶೇ.75 ಅಂಕ ಗಳಿಸುವ ಮೂಲಕ ಯಲಬುರ್ಗಾ ತಾಲೂಕಿನ ಹಿರೇಮ್ಯಾಗೇರಿ ಗ್ರಾಮದ ಸರಕಾರಿ ಪ್ರೌಢ ಶಾಲೆಗೆ ಗೌರವ ತಂದಿದ್ದಾರೆ. ಫಲಿತಾಂಶ ಪ್ರಕಟವಾ ಗುತ್ತಿದ್ದಂತೆಯೇ ಮನೆಯವರು ಸಿಹಿ ಸವಿದು ಸಂಭ್ರಮಿಸಿದರು.ಮೇಘಾ ಅವರ ತಂದೆ ಸುರೇಶ್ ಅವರು ಕೃಷಿಕರಾಗಿದ್ದು, ತಾಯಿ ಅನಿತಾ ಅವರು ಗೃಹಿಣಿ ಆಗಿದ್ದಾರೆ. ಮೇಘಾ ಅವರ ಅಣ್ಣ ಕೂಡ ಪಿಯುಸಿ ದ್ವಿತೀಯ ವರ್ಷದಲ್ಲಿ ಉತ್ತಮ ಅಂಕವನ್ನು ಗಳಿಸಿದ್ದರು.

ಹುಗಲೂರು ವೀರೇಶ್‌ಗೆ ಪಿಎಚ್.ಡಿ ಪದವಿ

ಹೂವಿನಹಡಗಲಿ: ತಾಲೂಕಿನ ಹುಗಲೂರು ಗ್ರಾಮದ ವೀರೇಶ್‌ರವರಿಗೆ ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ ಪಿಎಚ್.ಡಿ ಪದವಿ ದೊರೆತಿದೆ. ಹಂಪಿಯ ಶಾಸನಶಾಸ್ತ್ರ

ವಿಭಾಗದ ಪ್ರಾಧ್ಯಾಪಕರಾದ ಡಾ.ಅಮರೇಶ ಯತಗಲ್ ಅವರ ಮಾರ್ಗದರ್ಶನದಲ್ಲಿ ವಿಜಯನಗರ ಜಿಲ್ಲೆಯ ಸ್ಮಾರಕ ಶಿಲ್ಪಗಳು ಎಂಬ ವಿಷಯದ ಮಹಾಪ್ರಬಂಧಕ್ಕೆ ಹಂಪಿ ಕನ್ನಡ ವಿಶ್ವವಿದ್ಯಾಲಯವು ಪಿಎಚ್‌ಡಿ ಪದವಿ ದೊರೆತಿದೆ. ಕನ್ನಡ ವಿಶ್ವವಿದ್ಯಾಲಯದ 33ನೇ ಘಟಿಕೋತ್ಸವದ ಸಮಾರಂಭದಲ್ಲಿ ರಾಜ್ಯಪಾಲರಾದ ಥಾವರ್ ಚಂದ್ ಗೆಹ್ಲೋಟ್ ಅವರು ಪಿಎಚ್.ಡಿ. ಪದವಿ ಪ್ರಧಾನ ಮಾಡಿದರು. ಇವರ ತಂದೆ ಡಿ.ಪರಮೇಶ್ವರಪ್ಪ, ತಾಯಿ ಕಮಲಾಕ್ಷಿಯವರು. ಕೃಷಿ ಕುಟುಂಬದಲ್ಲಿ ಹುಟ್ಟಿದ ವೀರೇಶ್ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣವನ್ನು ತಾಯಿಯ ತವರೂರು ಆದ ಹಿರೇಬನ್ನಿಮಟ್ಟಿಯಲ್ಲಿ ಪೂರ್ಣಗೊಳಿಸಿ, ಪಿಯುಸಿ ಹಾಗೂ ಪದವಿ ಶಿಕ್ಷಣವನ್ನು ಎ.ಡಿ.ಬಿ. ಕಾಲೇಜು-ಹರಪನಹಳ್ಳಿಯಲ್ಲಿ ತೇರ್ಗಡೆಯಾಗಿದ್ದಾರೆ. ಎಂ.ಎ. ಹಾಗೂ ಪಿಎಚ್.ಡಿ. ಪದವಿಯನ್ನು ಕನ್ನಡ ವಿಶ್ವವಿದ್ಯಾಲಯ, ಹಂಪಿಯಲ್ಲಿ ಪೂರ್ಣಗೊಳಿಸಿರುತ್ತಾರೆ. ಪಿಎಚ್‌ಡಿ ಪದವಿಯನ್ನು ಪಡೆದಿರುವ ವೀರೇಶ್‌ರನ್ನು ಶಿಕ್ಷಣ ಪ್ರೇಮಿಗಳು ಅಭಿನಂದಿಸಿದ್ದಾರೆ.

ವಿರಾಮ
ಪ್ರತಿ ಭಾನುವಾರ

ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿ ಜನಸ್ಪಂದನೆ ಸಚಿವ ಖಾನ್ ಚಾಲನೆ

ಉಸ್ತುವಾರಿ ಸಚಿವರಿಂದ ಜನಸ್ಪಂದನಾ

ಹೊಸಪೇಟೆ: ಜನತಾದರ್ಶನ ಮೂಲಕ ಕೇವಲ ಸಾರ್ವಜನಿಕರ ಅಹವಾಲು ಕೇಳುವುದು ಮಾತ್ರವಲ್ಲದೇ ಆದಷ್ಟು ಶೀಘ್ರವಾಗಿ ಪರಿಹಾರ ಒದಗಿಸುವ ಕ್ರಮವನ್ನು ಕೈಗೊಂಡು ನಾಗರಿಕರಿಗೆ ಭರವಸೆ ಮೂಡಿಸಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಜಮೀರ್ ಅಹ್ಮದ್‌ಖಾನ್ ತಿಳಿಸಿದರು.

ನಗರದ ಜಿಲ್ಲಾಧಿಕಾರಿ ಕಾರ್ಯಾಲಯದ ಆವರಣದಲ್ಲಿ ಜಿಲ್ಲಾಡಳಿತ, ಜಿಪಂ ನಿಂದ ಏರ್ಪಡಿಸಿದ್ದ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸುವ ಜನಸ್ಪಂದನ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಸಾರ್ವಜನಿಕರಿಂದ ಅಹವಾಲುಗಳನ್ನು ಸ್ವೀಕರಿಸಿ, ಕೆಲವೊಂದನ್ನು ಸ್ಥಳದಲ್ಲಿಯೇ ಪರಿಹರಿಸಿ ಸಾರ್ವಜನಿಕರಿಂದ ಸಲ್ಲಿಕೆಯಾದ ಅರ್ಜಿಗಳನ್ನು ಐಪಿಜಿಆರ್‌ಎಸ್ ತಂತ್ರಾಂಶದಲ್ಲಿ ನಮೂದಿಸಿ ಮೊಬೈಲ್ ಮೂಲಕ ಅರ್ಜಿದಾರರನ್ನು ಸಂಪರ್ಕಿಸಿ ಪರಿಹಾರ ಒದಗಿಸಲಾಗುತ್ತದೆ.

ಜಿಲ್ಲೆಯ ವಿವಿಧ ಭಾಗಗಳಿಂದ ಆಗಮಿಸಿದ ಸಾರ್ವಜನಿಕರು ಆಯಾ ಇಲಾಖೆಯ ಕೌಂಟರ್ ಬಳಿ ಅರ್ಜಿ ಸಲ್ಲಿಸಿದರೆ, ಇನ್ನೂ ಕೆಲವರು ನೇರವಾಗಿ ಉಸ್ತುವಾರಿ ಸಚಿವರನ್ನು, ಜಿಲ್ಲಾಧಿಕಾರಿಗಳನ್ನು ಭೇಟಿ ಮಾಡಿ ಅರ್ಜಿ ಸಲ್ಲಿಸಿದರು. ಸ್ವತಃ ಸಚಿವರೇ ಸಾರ್ವಜನಿಕರಿಂದ ಅಹವಾಲುಗಳನ್ನು ಸ್ವೀಕರಿಸಿದರು. ಜಿಲ್ಲಾಧಿಕಾರಿಗಳು ಸಹ ಸ್ಥಳದಲ್ಲೇ ಇದ್ದು ಇದರ ಬಗ್ಗೆ ಮಾಹಿತಿ ಪಡೆದುಕೊಂಡರು.

ವಿವಿಧ ಇಲಾಖೆ ಯ ಕೌಂಟರ್ ಸ್ಥಾಪನೆ: ಸಾರ್ವಜನಿಕರಿಂದ ಅಹವಾಲು ಸಲ್ಲಿಕೆಗೆ ಜಿಲ್ಲಾಡಳಿತದಿಂದ ಕೌಂಟರ್ ಸ್ಥಾಪಿಸಲಾಗಿತ್ತು, ಇಲಾಖಾವಾರು ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಲು ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು. ಕಂದಾಯ ಇಲಾಖೆ ಸೇರಿದಂತೆ ಭೂದಾಖಲೆ, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ, ಕೃಷಿ ಹಾಗೂ ತೋಟಗಾರಿಕೆ ಇಲಾಖೆ, ಅಬಕಾರಿ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಜೆಸ್ಕಾಂ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ನಗರಸಭೆ ಮತ್ತು ಸ್ಥಳೀಯ ಸಂಸ್ಥೆಗಳು, ಸಾರಿಗೆ ಇಲಾಖೆ, ಆರೋಗ್ಯ ಇಲಾಖೆ, ಕಾರ್ಮಿಕ ಇಲಾಖೆ, ಸಾರ್ವಜನಿಕ ಶಿಕ್ಷಣ ಇಲಾಖೆ, ಜಿಲ್ಲಾ ಅಂಗವಿಕಲ ಕಲ್ಯಾಣ ಇಲಾಖೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ರೇಷ್ಮೆ ಇಲಾಖೆ, ನಗರಸಭೆ, ಪುರಸಭೆ, ಕೌಂಟರ್ ತೆರೆದು ಸಾರ್ವಜನಿಕರಿಂದ ಅರ್ಜಿ ಮತ್ತು ಅಹವಾಲುಗಳನ್ನು ಸ್ವೀಕರಿಸಿ ಕಂಪ್ಯೂಟರ್‌ನಲ್ಲಿ ನಮೂದಿಸಿ ಸ್ವೀಕೃತಿಯನ್ನು ಅರ್ಜಿದಾರರಿಗೆ ನೀಡಲಾಯಿತು.

ಜನ ಸ್ಪಂದನಾದಲ್ಲಿ ಸಾರ್ವಜನಿಕರು ಆಯಾ ಇಲಾಖೆಯ ಕೌಂಟರ್‌ಗಳ ಬಳಿ ತೆರಳಿ ತಮ್ಮ ಅಹವಾಲುಗಳನ್ನು ಸಲ್ಲಿಸಿದರು.

ಕಂದಾಯ ಇಲಾಖೆಗೆ ಸಂಬಂಧಿಸಿದಂತೆ 13 ಹಾಗೂ ನಗರಸಭೆಗೆ 37, ಆರ್‌ಡಿಪಿಆರ್ 16, ಇತರೆ ವಿವಿಧ ಇಲಾಖೆಗಳ ಅರ್ಜಿಗಳು 18 ಸೇರಿದಂತೆ ಒಟ್ಟು 84 ಅರ್ಜಿಗಳನ್ನು ಸ್ವೀಕರಿಸಲಾಯಿತು. 2 ಅರ್ಜಿಗಳನ್ನು ಸ್ಥಳದಲ್ಲೆ ಇತ್ಯರ್ಥಪಡಿಸಲಾಯಿತು.

ಈ ಸಂಧರ್ಭದಲ್ಲಿ ಹುಡಾ ಅಧ್ಯಕ್ಷ ಹೆಚ್.ಎನ್.ಎಫ್. ಇಮಾಮ್ ನಿಯಾಜಿ, ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ನೋಂಗ್ಜಾಯ್ ಮೊಹಮ್ಮದ್ ಅಲಿ ಅಕ್ರಂ ಷಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಹರಿಬಾಬು, ಹೊಸಪೇಟೆ ಸಹಾಯಕ ಆಯುಕ್ತ ವಿವೇಕಾನಂದ, ತಹಸೀಲ್ದಾರ್ ಎಂ.ಶೃತಿ ಸೇರಿದಂತೆ ಅಧಿಕಾರಿಗಳು ಇದ್ದರು.

ನಗರದ ಜಿಲ್ಲಾಧಿಕಾರಿ ಕಾರ್ಯಾಲಯದ ಆವರಣದಲ್ಲಿ ಜನಸ್ಪಂದನ ಕಾರ್ಯಕ್ರಮ ನೀಡಿ ಜಮೀರ್ ಖಾನ್ ಮಾತನಾಡಿದರು.

ರಂಗಭೂಮಿಗೆ ಎಂ.ಪಿ.ಪ್ರಕಾಶರ ಕೊಡುಗೆ ಅಪಾರ: ಮೇಟಿ ಕೊಟ್ರಪ್ಪ

ಹೂವಿನಹಡಗಲಿ: ರಂಗಭೂಮಿ ಅಭಿವೃದ್ಧಿಗೆ ಎಂ ಪಿ ಪ್ರಕಾಶ್‌ರವರ ಕೊಡುಗೆ ಅಪಾರ ಎಂದು ಕನ್ನಡ ಪುಸ್ತಕ ಪ್ರಾಧಿಕಾರದ ಸಾಹಿತ್ಯ ಪರಿಚಾರಕ ಪ್ರಶಸ್ತಿ ಪುರಸ್ಕೃತ ಸಾಹಿತಿ ಮೇಟಿ ಕೊಟ್ರಪ್ಪ ಹೇಳಿದರು.

ಪಟ್ಟಣದ ರಂಗಭಾರತಿ ರಂಗಮಂದಿರದಲ್ಲಿ ರಂಗ ಒಕ್ಕಲು ಹುಗಲೂರು ಪರಿಪೂರ್ಣ ಎಜುಕೇಷನ್ ಟ್ರಸ್ಟ್‌ವತಿಯಿಂದ ಆಯೋಜಿಸಿದ್ದ ಕಲರವ ಚಿಣ್ಣರ ಬೇಸಿಗೆ ಶಿಬಿರದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

ಸಾಹಿತ್ಯ, ಸಂಗೀತ, ನೃತ್ಯ,ನಾಟಕ, ಜಾನಪದ, ಬಯಲಾಟ ವಿವಿಧ ಕಲಾ ಪ್ರಕಾರಗಳಿಗೆ ರಂಗಭಾರತಿ ಸಂಸ್ಥೆ ಪ್ರೋತ್ಸಾಹ ನೀಡುತ್ತಿದೆ. ಕಲೆ ಇದ್ದರೆ ಬದುಕು. ನಿಮ್ಮ ಮಕ್ಕಳ ನಾಳಿನ ಸುಂದರ ಭವಿಷ್ಯಕ್ಕಾಗಿ ಶಿಕ್ಷಣದ ಜೊತೆಗೆ ಸೃಜನಶೀಲ ಚಟುವಟಿಕೆಗಳಿಗೆ ಆದ್ಯತೆ ನೀಡಿರಿ ಎಂದು ತಿಳಿಸಿದರು.

ರಂಗಭಾರತಿ ಕಾರ್ಯಾಧ್ಯಕ್ಷೆ ಸುಮಾ ವಿಜಯ್ ಅಂಕಗಳ ಬೆನ್ನು ಹತ್ತದೆ ಗ್ರಾಮೀಣ ಕಲೆಗಳಲ್ಲಿ ಆಸಕ್ತಿ ಪ್ರೇರೇಪಿಸುವ ನಿಟ್ಟಿನಲ್ಲಿ ಪಾಲಕರು ಪ್ರೋತ್ಸಾಹ ನೀಡಿರಿ ಎಂದು ಹೇಳಿದರು. ನಿವೃತ್ತ ಪ್ರಾಚಾರ್ಯ ಶಾಂತಮೂರ್ತಿ ಕುಲಕರ್ಣಿ ಮಾತನಾಡಿ ಎಂ.ಪಿ. ಪ್ರಕಾಶರ ರಂಗ ಪರಂಪರೆಯನ್ನು ಮುಂದುವರೆಸಿಕೊಂಡು ಹೋಗುವ ಕೆಲಸ ನಿರಂತರವಾಗಿ ಆಗಬೇಕು ಎಂದು ತಿಳಿಸಿದರು.

ಬಯಲಾಟ ಅಕಾಡೆಮಿ ಸದಸ್ಯ ಡಾಕೆ. ರುದ್ರಪ್ಪ, ಸಿಂಚನ ಪ್ರಕಾಶನದ ಸುರೇಶ ಅಂಗಡಿ ಮಾತನಾಡಿದರು. ಲಿಟ್ಲ್ ಚಾಂಪ್ಸ್ ಶಾಲೆಯ ಮುಖ್ಯ ಗುರುಗಳಾದ ಜಿ ಕೊಟ್ರೇಶ್ ಅಧ್ಯಕ್ಷತೆ ವಹಿಸಿದ್ದರು. ರಂಗ ಒಕ್ಕಲು ಸಂಚಾಲಕ ಅಜಯ್ ಚ ಶಿಬಿರದ ಅನುಭವಗಳನ್ನು ಹಂಚಿಕೊಂಡರು. ದಾನಪ್ಪ ಟಿ ರಮ್ಯ ಅರಸಿ, ರೇಣುಕಾ ಕರ್ಜಗಿ ನಿವೇದಿತಾ, ನಂದೀಶ್ ನವಲಿ ಬಸವರಾಜ ಹಡಗಲಿ ನಿರ್ವಹಿಸಿದರು.

ಅಜಯ್ ಚ ನಿರ್ದೇಶನದ ಜಾನಪದ ಕಥೆ ಆಧಾರಿತ ಸಂಚರಿಸುವ ಮರ ಮತ್ತು ದಾನಪ್ಪ ಟಿ ನಿರ್ದೇಶನದ ಗೌಡರ ಮಗಳ ಮದುವೆ ನಾಟಕಗಳ ಮುದ್ದು ಮಕ್ಕಳ ಅಭಿನಯ ನೆರೆದಿದ್ದ ಪ್ರೇಕ್ಷಕರನ್ನು ನಗೆಗಡಲಲ್ಲಿ ತೇಲಿಸಿದವು. ಬಸವ ರಾಜ ಮಲಶೆಟ್ಟಿ ಬಯ ಲಾಟ ಅಕಾಡೆಮಿ ವತಿಯಿಂದ ಗಿರಿಜಾ ಕಲ್ಯಾಣದ ಬಯಲಾಟದ ಒಂದು ಪ್ರಸಂಗವನ್ನು ಕಲಾವಿದರು ಮನೋಜ್ಞವಾಗಿ ಪ್ರದರ್ಶಿಸಿದರು.

ಪಟ್ಟಣದ ರಂಗಭಾರತಿ ರಂಗಮಂದಿರದಲ್ಲಿ ಕಲರವ ಚಿಣ್ಣರ ಬೇಸಿಗೆ ಶಿಬಿರ ನಡೆಯಿತು.

ಮುಂದಿನ ವರ್ಷಕ್ಕೆ ವಿದ್ಯಾರ್ಥಿಗಳು ಮೇಲುಗೈ ಸಾಧಿಸಲಿ: ಸಿದ್ದಲಿಂಗಮೂರ್ತಿ

ಹರಪನಹಳ್ಳಿ: ಪ್ರಸ್ತುತ ವರ್ಷದ ಎಸ್.ಎಸ್. ಎಲ್.ಸಿ ಫಲಿತಾಂಶ ಪ್ರಕಟವಾಗಿದ್ದು ನಮ್ಮ ವಿ.ವಿ.ಎಸ್ ಹೈಸ್ಕೂಲ್ ವಿದ್ಯಾರ್ಥಿ ನಿಹರ್ ಎಸ್.ವಿ. 625ಕ್ಕೆ 622ಅಂಕಪಡೆದು ವಿಜಯನಗರಜಿಲ್ಲೆಗೆ ದ್ವಿತೀಯ ಹಾಗೂ ತಾಲೂಕಿಗೆ ಪ್ರಥಮ ಸ್ಥಾನ ಪಡೆದಿದ್ದಾನೆ ಎಂದು ಅಂಬ್ಲಿ ದೊಡ್ಡ ಭರಮಪ್ಪ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ.ಸಿದ್ದಲಿಂಗಮೂರ್ತಿಎಸ್.ಎಂ. ಹೇಳಿದರು.

ಪಟ್ಟಣದ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಲಾಗಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ ನೂತನ ಜಿಲ್ಲೆಗೆ 4ನೇಸ್ಥಾನ ಪಡೆದಿದ್ದಾರೆ ಮುಂದಿನ ದಿನಗಳಲ್ಲಿ ಉತ್ತಮ ಬೋದಕರ ಸಿಬ್ಬಂದಿ ಮೂಲಕ ಉತ್ತಮ ಶಿಕ್ಷಣವನ್ನು ವಿದ್ಯಾರ್ಥಿಗಳಿಗೆ ನೀಡಲಾಗವುದು ಗುಣಮಟ್ಟದ ಶಿಕ್ಷಣಕ್ಕೆ ಆದ್ಯತೆ ನೀಡಿ ಸೃಜನ ಶೀಲ ವಿದ್ಯಾರ್ಥಿಗಳನ್ನಾಗಿ ಹೊರಹೊಮ್ಮುವ ಕೆಲಸವನ್ನು ಭೋದನಾ ಬೋಧಕರು ಮಾಡಲಿದ್ದಾರೆ ಎಂದರು.

ವಿ.ವಿ.ಎಸ್ ಹೈಸ್ಕೂಲ್ ಮುಖ್ಯ ಶಿಕ್ಷಕ ನಾಗಭೂಷಣ ಮಾತನಾಡಿ ಪ್ರಸ್ತುತ ವರ್ಷದಲ್ಲಿ ನಮ್ಮ ಶಾಲೆಯುಲ್ಲಿ ಒಟ್ಟು 127ವಿದ್ಯಾರ್ಥಿಗಳ ಪೈಕಿ 101ವಿದ್ಯಾರ್ಥಿಗಳು ಉತ್ತೀರ್ಣರಾಗಿ ಹೊರಹಮ್ಮಿದ್ದಾರೆ. ಇನ್ನೂ ಉಳಿದ 26 ವಿದ್ಯಾರ್ಥಿಗಳು ಅನೂತ್ತೀರ್ಣ ಆಗಿದ್ದಾರೆ ,30ವಿದ್ಯಾರ್ಥಿಗಳು ಡಿಸ್ಟಿಂಕ್ಷನ್ ಆಗಿದ್ದು ಅನೂತ್ತೀರ್ಣರಾದ ವಿದ್ಯಾರ್ಥಿಗಳಿಗೆ ವಿಶೇಷ ತರಬೇತಿ ಬೋಧನೆ ನೀಡಿ ಪ್ರಸ್ತುತ ವರ್ಷ. ಉತ್ತೀರ್ಣರನ್ನಾಗಿ ಮಾಡುವಂತಹ ಪ್ರಮಾಣಿ ಪ್ರಯತ್ನ ಮಾಡಿ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ನೀಡುವಂತಹ ತರಬೇತಿ ಕಾರ್ಯವನ್ನು ಮಾಡುತ್ತೇವೆಂದು ಪ್ರತಿಪಾದಿಸಿದರು.

ಹೊಸಪೇಟೆಯಲ್ಲಿ ಯೋಗ ಭವನ ನಿರ್ಮಾಣವಾಗಲಿ

ಹೊಸಪೇಟೆ: ಭಾರತೀಯ ಶಿಕ್ಷಣ ಪದ್ದತಿಗೆ ಆದ್ಯತೆ ನೀಡುವ, ರೋಗ ಮುಕ್ತ ಭಾರತ ನಿರ್ಮಾಣಕ್ಕೆ ಹೊಸ'ಪೇಟೆಯಲ್ಲಿ ಯೋಗಭವನ ನಿರ್ಮಾಣವೂ ಆಗಬೇಕು ಇದು ನಮ್ಮ ಮೊದಲ ಆಧ್ಯತೆಯೂ ಆಗಬೇಕು ಎಂದು ಪತಂಜಲಿ ಪರಿಚಾರದ ಕೇಂದ್ರೀಯ ಪ್ರಭಾರಿ ಡಾ.ಪರಮಾರ್ಥದೇವಜೀ ಹೇಳಿದರು.

ನಗರದಲ್ಲಿ ಮೂರುದಿನಗಳ ಪ್ರವಾಸದ ಕೊನೆಯ ದಿನ ಕಾರ್ಯಕರ್ತರು ಹಾಗೂ ಮಾಧ್ಯಮದೊಂದಿಗೆ ಮಾಡನಾಡಿ, ಸಮಾಜವನ್ನು ಸನ್ಮಾರ್ಗದತ್ತ ಕೊಂಡೊ ಯ್ಯಲು ಪ್ರತಿಯೊಬ್ಬರ ಸಹಕಾರ ಅಗತ್ಯವಾಗಿದೆ ಎಂದರು.

ಆರೋಗ್ಯ ಸಮಸ್ಯೆ ಇತ್ತೀಚೆಗೆ ವೃದ್ಧಿಯಾಗುತ್ತಿದ್ದು ವಿಚಿತ್ರ ರೋಗ ರುಜೀನೆಗಳು ನಮ್ಮನ್ನು ಆವರಿಸುತ್ತಿವೆ, ಆರೋಗ ಯುಕ್ತ ಮನಸ್ಸುಗಳು ಮಾತ್ರ ದೇಶದ ಶಾಂತಿ ನೆಮ್ಮದಿ ನೆಲಸುತೆ ಮಾಡಲು ಸಾದ್ಯ. ಸ್ವಸ್ಥ ಸಮಾಜ ನಿರ್ಮಾಣ ಮಾಡಲು ಯೋಗ ಸುಲಭ ಮಾರ್ಗ ವಾಗಿದ್ದು ವ್ಯಾಪಕ ಸಂಖ್ಯೆಯ ಯೋಗ ಸಾಧಕರಿರುವ ಹೊಸಪೇಟೆಯಲ್ಲಿ ಸುಸಜ್ಜಿತ ಯೋಗಭವನ ಅಗತ್ಯವಾಗಿದ್ದು ಎಲ್ಲರೂ ಸಂಕರಿಸಬೇಕು ಎಂದರು. ಹಿರಿಯ ಯೋಗಸಾಧಕ ಭೂಪಾಳ ರಾಘವೇಂದ್ರ ಶೆಟ್ಟಿ ಪ್ರಸ್ತಾಪಿತ ಯೋಗಭವನಕ್ಕೆ ಪೂರಕವಾಗಿ ಮಾತನಾಡಿದ ಪೂಜ್ಯ ಡಾ.ಪರಮಾರ್ಥದೇವಜೀ ಮಾತನಾಡಿ ಇತ್ತೀಚೆಗೆ ಯುವ ಜನಾಂಗ ಅತೀ ಹೆಚ್ಚು ಹೃದಯ ಸಂಬಂದಿ ಕಾಯಿಲೆಗಳಿಗೆ ತುತ್ತಾಗುತ್ತಿದ್ದಾರೆ ಇದು ಆತಂಕಕಾರಿ ಬೆಳವಣಿಗೆ ಎಂದರು.

ಇದಕ್ಕೆ ಪರಿಹಾರ ಯೋಗ, ಯೋಗ ಮಾತ್ರ ನಮ್ಮ ಆತಃ ಶಕ್ತಿಯನ್ನು ಹೆಚ್ಚಿಸಬಲ್ಲದು ಎಂದರು. ಹೊಸಪೇಟೆಯಲ್ಲಿ ಯೋಗಕ್ಕೆ 2008ರಲ್ಲಿ ಬಂದ ಬಾಬಾರಾಮದೇವ ಬುನಾದಿ ಹಾಕಿದ್ದು ಇಂದು ಭವ್ಯ ಯೋಗಭವನ ನಿರ್ಮಾಣಕ್ಕೆ ನಾವು ಕಾರ್ಯಕರ್ತರನ್ನು ಸಂಕಲ್ಪಸುವಂತೆ ಮಾಡಿದ್ದು ಆರೋಗ್ಯ ಪೂರ್ಣ ಭಾರತಕ್ಕೆ ಈ ಸಂಕಲ್ಪಚಾಲನೆ ನೀಡಲಿದೆ ಎಂದರು. ಹಳ್ಳಿ ಹಳ್ಳಿಯಲ್ಲಿ ಯೋಗ, ಮನೆ ಮನೆಯಲ್ಲಿಯೂ ಯೋಗ, ಮಾಡುವುದು ಮತ್ತು ಯೋಗ ನಮ್ಮ ಜೀವನದ ಭಾಗವಗುವಂತೆ ಮಾಡುವುದು ನಮ್ಮ ಮೊದಲ ಆದ್ಯತೆಯಾಗಬೇಕಿದೆ ಈ ನಿಟ್ಟಿನಲ್ಲಿಯೇ ಮೂರುದಿನ ಕಾರ್ಯಕರ್ತರ ಸಭೆ, ಸತ್ಸಂಗ, ರಾಜ್ಯ ಕಾರ್ಯಕಾರಿಣಿ ಸಭೆ ಹಾಗೂ ಕಾರ್ಯಕರ್ತರ ಸಭೆ ನಡೆಸಲಾಗಿದೆ ಈ ಸುಂದರ ಸಮಾಜ ಕಟ್ಟುವ ಕಾಯಕ ಸದ್ಯದಲ್ಲಿಯೇ ಆಭವಾಗಲಿದೆ ಎಂದು ಹೇಳಿದರು.

ಪತಂಜಲಿ ಯೋಗ ಸಮಿತಿಯ ಭೂಪಾಳ್ ರಾಘವೇಂದ್ರ ಶೆಟ್ಟಿ, ಪ್ರೊ.ಎಫ್.ಟಿ.ಹಳ್ಳಿಕೇರಿ, ಸಂಜಯ್ ಕುಸ್ತಿಗಾರ, ಭೂಪಾಳ್ ಪ್ರಹ್ಲಾದ್, ಕಿರಣ್‌ಕುಮಾರ್, ಬಾಲಚಂದ್ರ ಶರ್ಮಾ, ರಾಜೇಶ್ ಕರ್ವಾ, ಅನಂತ ಜೋಶಿ ಇತರರಿದ್ದರು.

ನಗರದಲ್ಲಿ ಮೂರುದಿನಗಳ ಪ್ರವಾಸದ ಕೊನೆಯದಿನ ಡಾ.ಪರಮಾರ್ಥದೇವಜೀ ಮಾಧ್ಯಮದೊಂದಿಗೆ ಮಾತನಾಡಿದರು.

ಜಿಲ್ಲಾ ನೋಟ

ಮಂಜುನಾಥ, ಕೋಲಾರ

ಕ್ರಷರ್ ದಂಧೆ ಬಯಲು ಅಧಿಕಾರಿಗಳೂ ಶಾಮೀಲು

ಉಪ ಲೋಕಾಯುಕ್ತ ಬಿ.ವೀರಪ್ಪ ತವರು ಜಿಲ್ಲೆ ಕೋಲಾರದ ಮೇಲೆ ತೋರುತ್ತಿರುವ ಕಾಳಜಿಗೆ ಆಡಳಿತಶಾಹಿ ವರ್ಗ ಪತರುಗುಟ್ಟಿ ಹೋಗಿದೆ. ಅಧಿಕಾರಿಗಳು ಎದ್ದು ಬಿದ್ದು ಕೆಲಸ ಮಾಡುತ್ತಿದ್ದಾರೆ. ಒಂದೇ ತಿಂಗಳಲ್ಲಿ 4 ಬಾರಿ ಚಿನ್ನದನಾಡಿಗೆ ಭೇಟಿ ನೀಡಿದ್ದಾರೆ. ಕನಿಷ್ಠ 100 ಕೇಸುಗಳು ದಾಖಲಾಗಿವೆ ! ಆರಂಭದಲ್ಲಿ ಆಸ್ಪತ್ರೆ, ಜೈಲು, ಸರಕಾರಿ ಕಚೇರಿಗಳನ್ನು ಸುತ್ತಿದ ಲೋಕಾಯುಕ್ತ ತಂಡ ನಂತರದಲ್ಲಿ ಜಲ್ಲಿ ಕ್ರಷರ್ - ಕ್ವಾರಿಗೆ ಕಾಲಿಟ್ಟಿರುವುದು ದಂಧೆ ಕೋರರ ಬೆನ್ನುಹುರಿಯಲ್ಲಿ ಛಳಕು ಮೂಡಿಸಿದ್ದು ದಂಧೆಕೋರರು ತಬ್ಬಿಬ್ಬಾಗಿದ್ದಾರೆ. ಕ್ವಾರಿ- ಕ್ರಷರ್‌ಗಳಲ್ಲಿ ಒಂದು ಎಕರೆಗೆ ಅನುಮತಿ ಪಡೆದು ಕೊಂಡು ಹತ್ತಾರು ಎಕರೆ ಒತ್ತುವರಿ ಮಾಡಿ ಕೊಂಡು ಸುಮಾರು 300 ಅಡಿಗೂ ಹೆಚ್ಚಿನ ಆಳ ದಲ್ಲಿ ಗಣಿಗಾರಿಕೆ ನಡೆಸುತ್ತಿರುವುದನ್ನು ಸ್ವತಃ ನ್ಯಾಯಾಧೀಶ ವೀರಪ್ಪ ಅವರೇ ಬಯಲು ಮಾಡಿದ್ದಾರೆ.

ಕೆರೆ ಮಧ್ಯೆ ಸುಸಜ್ಜಿತ ರಸ್ತೆ

ಅಕ್ರಮವಾಗಿ ಮಣ್ಣು ಮತ್ತು ಮರಳು ಸಾಗಣೆ ಮಾಡುವುದಕ್ಕೆ ಕೆರೆ ಮಧ್ಯೆ ಸುಸಜ್ಜಿತ ರಸ್ತೆ ನಿರ್ಮಿಸಲಾಗಿದೆ. ಇದನ್ನು ಖುದ್ದು ಉಪ ಲೋಕಾಯುಕ್ತರೇ ಕಂಡು ಗರಂ ಆದರು. ಮಾಲೂರು ತಹಸೀಲ್ದಾರ್ ರೂಪಾ ಅವರು ತಕ್ಷಣ ಕ್ರಮ ಕೈಗೊಳ್ಳುವುದಾಗಿ ಕೈ ಮುಗಿದು ಬೇಡಿಕೊಂಡ ದೃಶ್ಯ ಮಾತ್ರ ಕೋಲಾರ ಜಿಲ್ಲೆಯ ಅಕ್ರಮಗಳಿಗೆ ಹಿಡಿದ ಕನ್ನಡಿಯಾಗಿತ್ತು.

ರಾತ್ರಿ ರಹಸ್ಯ ಬಯಲು

ಗಣಿ ಅಕ್ರಮ ಬೆಳಕಿಗೆ ಬಾರದಂತೆ ಕ್ವಾರಿ ಮತ್ತು ಕ್ರಷರ್‌ಗಳಲ್ಲಿ ಸಂಜೆ 6 ರಿಂದ ಬೆಳಗ್ಗೆ 6 ಗಂಟೆವರೆಗೆ ಕಾರ್ಮಿಕರು ಕೆಲಸ ಮಾಡುತ್ತಿರುವ ರಾತ್ರಿ ರಹಸ್ಯ ಬಯಲು ಮಾಡಿದ ಲೋಕಾ ತಂಡ ಕ್ವಾರಿ ಮತ್ತು ಕ್ರಷರ್‌ಗಳಲ್ಲಿ ಯಾವುದೇ ರಕ್ಷಣಾತ್ಮಕ ಕ್ರಮಗಳಿಲ್ಲ, ಕನಿಷ್ಠ ಫೆನ್ಸಿಂಗ್ ಕೂಡ ಕಾಣುತ್ತಿಲ್ಲ ಎಂದು ಸುಮಾರು 70 ಕೇಸ್‌ಗಳನ್ನು ಜಡಿದಿದ್ದಾರೆ.

ನಕಲಿ ಕ್ಲಿನಿಕ್ ಹಾವಳಿ

ಕೋಲಾರ ಜಿಲ್ಲೆ ನಕಲಿ ಡಾಕ್ಟರ್‌ಗಳಿಗೆ ಹಾಗೂ ಎಕ್ಸ್‌ಪೈರಿಯಾದ ಡ್ರಗ್ಸ್‌ಗಳಿಗೆ ಹೆಸರುವಾಸಿ. ಆಂಧ್ರ, ತಮಿಳುನಾಡು ಗಡಿಯಲ್ಲಿ ನೂರಾರು ಅನಕ್ಷರಸ್ಥರು ಕ್ಲಿನಿಕ್ ತೆರೆದು ಸ್ಟಿರಾಯ್ಡ್ ಚುಚ್ಚಿ ರೋಗಿಗಳ ಹಣ-ಪ್ರಾಣ ಎರಡನ್ನೂ ದೋಚುತ್ತಿರುವ ಸಂಗತಿ ಹೊಸತೇನಲ್ಲ. ಇದನ್ನು ಗಮನಿಸಿದ ಉಪ ಲೋಕಾಯುಕ್ತರು ಕೊಟ್ಟ ಡೋಸಿಗೆ ಇಡೀ ಆರೋಗ್ಯ ಇಲಾಖೆ ಡಿಎಚ್‌ಒ ಸಾರಥ್ಯದ ದಾಳಿಗೆ ಮುಂದಾಗಿದೆ. ನಕಲಿ ವೈದ್ಯನನ್ನು ಜಾಗ ಖಾಲಿ ಮಾಡಿಸಿ ಕ್ಲಿನಿಕ್ ಬೋರ್ಡ್‌ಗೆ ಬಣ್ಣ ಬಳಿಸಿ ಕುರುಹೇ ಇಲ್ಲದಂತೆ ಮಾಡುತ್ತಿದ್ದಾರೆ..!

ಲಂಚಾವತಾರಕ್ಕೆ ಸಾಕ್ಷಿ

ನಕಲಿ ಡಾಕ್ಟರ್ ಆಗಿ ಚಲಾವಣೆಗೊಂಡು ಲಕಲಕ ಎಂದು ಮಿನುಗುತ್ತಿದ್ದ ನರ್ಸಮ್ಮನಿಗೆ ಜಿಲ್ಲಾಧಿಕಾರಿ ಡಾ.ರವಿ ಅವರು ಡಿಸಿ ಕೋರ್ಟ್‌ನಲ್ಲಿ ಕೊಟ್ಟ ಹೈಡೋಸ್ ಚುಚ್ಚುಮದ್ದಿಗೆ ಅಳುತ್ತಾ ಹೊರಬಂದರು. ಆ ಮಹಿಳೆ 'ದುಡ್ಡೂ ತಗಂಡರು, ಆಸ್ಪತ್ರೆನೂ ಮುಚ್ಚಿಸಿದರು' ಎಂದು ಶಾಪ ಹಾಕುತ್ತಾ ಹೋದ ದೃಶ್ಯ ಆರೋಗ್ಯ ಇಲಾಖೆ ಲಂಚಾವತಾರಕ್ಕೆ ಸಾಕ್ಷಿಯಾಗಿತ್ತು. ಕ್ರಾಸ್ ಟ್ರೀಟ್‌ಮೆಂಟ್ ಆರೋಪದ ಮೇಲೆ ಕೆಲ ಆಯುಷ್ ವೈದ್ಯರ ಕ್ಲಿನಿಕ್‌ಗಳನ್ನು ಮುಚ್ಚಿಸಲಾಗಿದೆ. ಕೊನೆಗೆ ಡಿಸಿ ಕೋರ್ಟ್‌ನಲ್ಲಿ ಅಫಿಡೇವಿಯೆಟ್ ಪಡೆದು ಬೀಗಮುದ್ರೆ ತೆರವು ಮಾಡುವಂತೆ ಜಿಲ್ಲಾಧಿಕಾರಿಗಳು ಸೂಚಿಸಿದ್ದರೂ ಫೈಲ್ ಪುಟ್‌ಅಪ್‌ಗೆ ಸಿಬ್ಬಂದಿ ಕೊರತೆ ಎಂದು ತಿಂಗಳಾನುಗಟ್ಟಲೆ ಕಾಯಬೇಕಾಗಿದೆ.

ಜಿಲ್ಲಾಸ್ಪತ್ರೆ ಕತೆ

ಜಿಲ್ಲಾಸ್ಪತ್ರೆಯಲ್ಲೇ ಎಕ್ಸ್‌ಪೈರಿ ಡ್ರಗ್ಸ್ ಎತ್ತಿ ಸರ್ಜನ್‌ಗಳ ಕೈಗಿಟ್ಟಿರುವ ಉಪ ಲೋಕಾಯುಕ್ತರ ಜಾಣ್ಮೆಗೆ ಬೆಚ್ಚಿರುವ ಡಾಕ್ಟರ್‌ಗಳು ಇದೀಗ ಎಚ್ಚೆತ್ತುಕೊಂಡಿದ್ದಾರೆ. ಹೊರಗಡೆ ಚೀಟಿ ಬರೆಯಲು ಹೆದರುತ್ತಿದ್ದಾರೆ. ಅತ್ತ ಖಾಸಗಿ ಮೆಡಿಕಲ್ ಸ್ಟೋರ್‌ಗಳಿಂದ ಬರುತ್ತಿದ್ದ ಕಮೀಷನ್‌ಗೆ ಕತ್ತರಿ ಬಿದ್ದಂತಾದೆ.

ಎಪಿಎಂಸಿ ಕ್ಲೀನ್

ಕೋಲಾರದ ಎಪಿಎಂಸಿಗೆ ಬೆಳ್ಳಂಬೆಳಗ್ಗೆ ದಾಳಿಯಿಟ್ಟ ವೀರಪ್ಪ ಅವರಿಗೆ ಸಾಲುಸಾಲು ಸಮಸ್ಯೆ ಗೋಚರಿಸಿದವು. ತಕ್ಷಣ ಲೋಪಗಳನ್ನು ಪರಿಹರಿಸುವಂತೆ ಎಪಿಎಂಸಿ ಸಹಾಯಕ ನಿರ್ದೇಶಕ ರವಿಕುಮಾರ್‌ಗೆ ಕಟ್ಟಪ್ಪಣೆ ಮಾಡಿದರು. ಇದಾದ ಬಳಿಕ ಎಪಿಎಂಸಿ ಲಕಲಕ ಹೊಳೆಯುತ್ತಿದೆ. ಹೀಗಾಗಿ ರೈತರು ನೆಮ್ಮದಿಯ ನಿಟ್ಟುಸಿರು ಬಿಡುವಂತಾಗಿದೆ. ಸ್ವಚ್ಛತೆ ಕಾಪಾಡಲಾಗುತ್ತಿದ್ದು ತಕ್ಷಣ ತರಕಾರಿ ತ್ಯಾಜ್ಯ ವಿಲೇವಾರಿ ನಡೆಯುತ್ತಿದೆ. ರೈತರಿಂದ ಕಮೀಷನ್ ತೆಗೆದುಕೊಳ್ಳದಂತೆ ಬೋರ್ಡ್‌ಗಳನ್ನು ಬರೆಸಲಾಗಿದ್ದು,ಧ್ವನಿವರ್ಧಕದ ಮೂಲಕ ಅನೌನ್ಸ್ ಮಾಡಲಾಗುತ್ತಿದೆ.

ನಾಮಫಲಕ ಜಾಗೃತಿ

'ಬಿಳಿ ಚೀಟಿ ತಿರಸ್ಕರಿಸಿ, ಅಧಿಕೃತ ಬಿಲ್ ಪುರಸ್ಕರಿಸಿ' ಎಂದು ನಾಮಫಲಕಗಳನ್ನು ಹಾಕಲಾಗಿದೆ. ಈ ಕುರಿತ ಕರಪತ್ರಗಳನ್ನೂ ಹೊರಡಿಸಲಾಗಿದೆ. ತೂಕದ ಯಂತ್ರಗಳನ್ನು ಸ್ಟಾಂಪಿಂಗ್ ಮಾಡಿಸಲಾಗಿದೆ. 4 ವಾಟರ್‌ಫಿಲ್ಟರ್ ಜತೆಗೆ ಮತ್ತೆರಡು ಹೆಚ್ಚುವರಿಯಾಗಿ ಸ್ಥಾಪಿಸಲು ಕ್ರಿಯಾ ಯೋಜನೆ ತಯಾರಿಸಲಾಗಿದೆ. ತರಕಾರಿ ತೂಕದಲ್ಲಿ ಕಡಿತ ಮಾಡುತ್ತಿದ್ದ ವ್ಯಾಪಾರಸ್ಥರ ಲೈಸೆನ್ಸ್ ಗಳನ್ನು ಸಸ್ಪೆಂಡ್ ಮಾಡಲಾಗಿದೆ. ಶೌಚಾಲಯ-ಸ್ನಾನಗೃಹದಲ್ಲಿ ನಿಗದಿತ ಶುಲ್ಕ ಪಡೆದುಕೊಳ್ಳುವಂತೆ ತಾಕೀತು ಮಾಡಲಾಗಿದೆ. ಎಪಿಎಂಸಿಗೆ ಹೆಚ್ಚಿನ ಸ್ಥಳಾವಕಾಶಕ್ಕೆ ಎಡಿ ರವಿಕುಮಾರ್ ಸರಕಾರಕ್ಕೆ ಒಂದು ಪ್ರಸ್ತಾವ ಕೂಡ ಸಲ್ಲಿಸಿದ್ದಾರೆ.

ಒಟ್ಟಾರೆ ಉಪ ಲೋಕಾಯುಕ್ತರು ತಮ್ಮ ತವರು ಜಿಲ್ಲೆ ಮೇಲಿನ ಅಭಿಮಾನಕ್ಕಾಗಿಯಾದರೂ ಆಗಾಗ್ಗೆ ಭೇಟಿ ನೀಡಿ ಅಧಿಕಾರಿಗಳಿಗೆ ಬಿಸಿ ಮುಟ್ಟಿಸುತ್ತಿದ್ದಾರೆ. ನೇರವಾಗಿ ತರಾಟೆ ತೆಗೆದುಕೊಳ್ಳುತ್ತಿದ್ದಾರೆ. ಇದರಿಂದ ಕೆಲ ಇಲಾಖೆಗಳಂತೂ ಫುಲ್ ಅಲರ್ಟ್ ಆದಂತಿವೆ. ಇಂಥ ದಾಳಿ ನಿರಂತರವಾಗಿದ್ದಾರೆ.



ಅಕ್ರಮ ಗಣಿಗಾರಿಕೆಯ ನೋಟ.

ಉಪ ಲೋಕಾಯುಕ್ತ ಬಿ.ವೀರಪ್ಪ

> ಕೋಲಾರ ನನ್ನ ಜನ್ಮ ಭೂಮಿ. ಇದರ ಸ್ಥಿತಿ ನೋಡಿ ನೋವಾಗಿದೆ. ಕೋಲಾರ ಕ್ಲೀನ್ ನನ್ನ ಗುರಿಯಾಗಿದೆ. ಕೋಲಾರ ಎಪಿಎಂಸಿ ಇದೀಗ ಉತ್ತಮಗೊಂಡಿದ್ದು ಮೂಲ ಸೌಕರ್ಯ ಕಲ್ಪಿಸಲಾಗಿದೆ. ಅಕ್ರಮ ಕಮಿಷನ್‌ಗೆ ಬ್ರೇಕ್ ಬಿದ್ದಿದ್ದು ರೈತರು ನೆಮ್ಮದಿ ಕಾಣುತ್ತಿದ್ದಾರೆ. ಈ ಬದಲಾವಣೆ ಎಲ್ಲ ಕಡೆ ಆಗಬೇಕಿದೆ. ಕೋಲಾರ ಜಿಲ್ಲೆಯಲ್ಲಿ ಅಧಿಕಾರಿಗಳು ನಿಷ್ಠೆ ಯಿಂದ ಕೆಲಸ ಮಾಡುತ್ತಿಲ್ಲ. ಮುಂದಿನ ದಿನಗಳಲ್ಲಿ ಗ್ರಾಮಪಂಚಾಯತಿ ಕೇಂದ್ರಗಳಿಗೂ ಭೇಟಿ ನೀಡಿ ಭ್ರಷ್ಟರನ್ನು ಮನೆಗಟ್ಟುವೆ.
>
> -ಬಿ.ವೀರಪ್ಪ, ಉಪ ಲೋಕಾಯುಕ್ತರು

- ಉಪ ಲೋಕಾಯುಕ್ತರಿಂದ ತರಾಟೆ
- ಕೆರೆಯಲ್ಲೇ ರಸ್ತೆ ನಿರ್ಮಾಣ
- ನೂರಾರು ಎಕರೆ ಅಕ್ರಮ ಮೈನಿಂಗ್
- ಜಿಲ್ಲೆಯಲ್ಲಿ 100 ಕೇಸುಗಳು ದಾಖಲು

ಜಿಲ್ಲಾ ನೋಟ

ದೇವೇಂದ್ರ ಜಾಡಿ, ಕಲಬುರಗಿ

ರಾಜಕೀಯವಾಗಿ ಬಲಿಷ್ಠ ಶೈಕ್ಷಣಿಕವಾಗಿ ಮಾತ್ರ ಕನಿಷ್ಠ

ಪ್ರತಿ ವರ್ಷ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಫಲಿತಾಂಶಗಳು ಪ್ರಕಟವಾದಾಗಲೆಲ್ಲ ಕಲ್ಯಾಣ ಕರ್ನಾಟಕ ಒಂದು ಬಗೆಯ ಅವಮಾನ, ತಳಮಳ, ಸಾಮಾಜಿಕ ಸಂಕಟ, ಶೈಕ್ಷಣಿಕ ಹಿನ್ನಡೆ ಅನುಭವಿಸುತ್ತಾ ಬಂದಿದೆ. ಆದರೆ ರಾಜಕೀಯವಾಗಿ ಮಾತ್ರ ರಾಜ್ಯದ, ದೇಶದ ಗಮನ ಸೆಳೆಯುವ ಘಟಾನುಘಟಿ ರಾಜಕಾರಣಿಗಳನ್ನು ನೀಡುತ್ತಾ ಬಂದಿದೆ.

ಹೌದು. ಈ ಕಲಬುರಗಿ ಜಿಲ್ಲೆ ರಾಜಕೀಯವಾಗಿ ಬಲಿಷ್ಠ. ಆದರೆ ಶೈಕ್ಷಣಿಕವಾಗಿ ಫಲಿತಾಂಶದ ಸಾಧನೆಯಲ್ಲಿ ಮಾತ್ರ ಅತ್ಯಂತ ಕಳಪೆ, ಮತು ಕನಿಷ್ಠ ಗುಣಮಟ್ಟ ದಾಖಲಿಸುತ್ತಿದೆ. ಇಂಥ ದುರಾದೃಷ್ಟಕರ ಪರಿಸ್ಥಿತಿ ಜಿಲ್ಲೆಯ ಜನರಿಗೆ, ಪಾಲಕರಿಗೆ ಯಾಕೆ ಬಂದೊದಗಿದೆ ಎಂಬ ಪ್ರಶ್ನೆಗೆ ಉತ್ತರ ಹತ್ತಾರು..!

> ಕಳೆದ ಬಾರಿ ಗ್ರೇಸ್ ಮಾರ್ಕ್ಸ್ ನೀಡಲಾಗಿತ್ತು. ಆದರಿಂದ 34ನೇ ಸ್ಥಾನ ಪಡೆಯಲಾಗಿತ್ತು. ಈ ಬಾರಿ ಗ್ರೇಸ್ ಮಾರ್ಕ್ಸ್ ಇಲ್ಲದೇ ಜಿಲ್ಲೆಯ ಫಲಿತಾಂಶ ಕುಸಿದು 35ಕ್ಕೆ ಸ್ಥಾನಕ್ಕೆ ಇಳಿದಿದೆ. ಶ್ರದ್ದೆಯಿಂದ ಪಾಠ ಮಾಡದ ಶಿಕ್ಷಕರ ಉದಾಸೀನದ ಮನಸ್ಥಿತಿ ಹಾಗೂ ಪಾಠ ಕಲಿಯದೇ ಶಾಲೆಗೆ ಚೆಕ್ಕರ್ ಹಾಕುವ ವಿದ್ಯಾರ್ಥಿಗಳ ನಿರಾಸಕ್ತಿ ಈ ಕಳಪೆ ಸಾಧನೆಗೆ ಕಾರಣ ಇರಬಹುದು.
>
> -ಸೂರ್ಯಕಾಂತ್ ಮದಾನೆ, ಡಿಡಿಪಿಐ ಕಲಬುರಗಿ

ಶೈಕ್ಷಣಿಕ ಪ್ರಗತಿ ಇಳಿಕೆ

ಅಂದಿನ ಹೈದ್ರಾಬಾದ್ ಕರ್ನಾಟಕ, ಕಲ್ಯಾಣ ಕರ್ನಾಟಕ ಎಂದು ಹೆಸರು ಬದಲಾಯಿಸಿ ದಶಕ ಕಳೆದಿದೆ ಹೌದು. ಅದು ಈಗ 371(ಜೆ) ಸೌಲಭ್ಯವನ್ನೂ ಪಡೆದಿದೆ. ರಾಜಕೀಯವಾಗಿ ಬಲಿಷ್ಠವಾಗಿ ಗುರುತಿಸಿಕೊಂಡು ರಾಷ್ಟ್ರ ಮಟ್ಟದಲ್ಲಿ ಹೆಗ್ಗಳಿಕೆ ಪಡೆದರೂ ಜಿಲ್ಲೆಯ ಶೈಕ್ಷಣಿಕ ಪ್ರಗತಿ ಮಾತ್ರ ಆರಕ್ಕೆ ಏರಲಿಲ್ಲ, ಮೂರಕ್ಕೆ ಇಳಿಯಲಿಲ್ಲ ಎನ್ನುವಂತಾಗಿದೆ. ತೀರಾ ಹಿಂದುಳಿದ ಪ್ರದೇಶ ಎಂದೇ ಕರೆಸಿಕೊಳ್ಳುವ ಈ ಜಿಲ್ಲೆಯ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ರಿಸಲ್ಟ್ ಮಾತ್ರ ಇನ್ನೂ ಸುಧಾರಣೆ ಕಾಣದೆ ಇರುವುದು ದುರಂತ.

ಇಚ್ಛಾಶಕ್ತಿ ಕೊರತೆ

ಜಿಲ್ಲೆಯಲ್ಲಿ ಪ್ರಭಾವೀ ಸಚಿವರು, ನಿಗಮ ಮಂಡಳಿ ಅಧ್ಯಕ್ಷರು, ಸಂಸದರು ಹಾಗೂ ಬಹಳಷ್ಟು ಪ್ರಭಾವಿ ರಾಜಕಾರಣಿಗಳು ಇದ್ದಾರೆ. ಶೈಕ್ಷಣಿಕ ಸುಧಾರಣೆಗಾಗಿ ಯಾರೊಬ್ಬರೂ ಹೆಚ್ಚಿನ ಮುತುವರ್ಜಿ ವಹಿಸುತ್ತಿಲ್ಲ. ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯಿಂದ ನೂರಾರು ಕೋಟಿ ಅನುದಾನ ನೀಡಿ, ಶೈಕ್ಷಣಿಕ ವರ್ಷ ಎಂದು ಘೋಷಣೆ ಮಾಡಲಾಗಿದೆ. ಶೇ.25ಅನುದಾನ ಶಿಕ್ಷಣಕ್ಕೆ ಮೀಸಲಿಡಲಾಗಿದೆ. ಮಾದರಿ ಶಾಲೆಗೆ ಕಾಯಕಲ್ಪ ರೂಪಿಸಲಾಗಿದೆ. ಶಿಕ್ಷಕರ ಕೊರತೆ ನೀಗಿಸಲು ಅತಿಥಿ ಶಿಕ್ಷಕರ ನಿಯೋಜನೆ ಮಾಡಲಾಗಿದೆ. ಮಕ್ಕಳಿಗೆ ಕಲಿಕಾಸರೆ ಪುಸ್ತಕ ವಿತರಿಸಲಾಗಿದೆ. ಆದರೂ ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳಲ್ಲಿ ಮಾತ್ರ ಫಲಿತಾಂಶ ಸುಧಾರಣೆ ಕಾಣುತ್ತಿಲ್ಲ. ಇದಕ್ಕೆ ಪಾಠ ಕಲಿಸುವ ಶಿಕ್ಷಕರ ಹಾಗೂ ಕಲಿಯುವ ಮಕ್ಕಳ ನಿರಾಸಕ್ತಿ ಕಾರಣ ಇರಬಹುದೇ ಎಂಬ ಪ್ರಶ್ನೆ ಕಾಡುತ್ತಿದೆ.

ಶಿಕ್ಷಕರಿಗೆ ಬೇಕು ಕಾಳಜಿ

ಜಿಲ್ಲೆಯಲ್ಲಿನ ಬಹುತೇಕ ಶಿಕ್ಷಕರು ಶೈಕ್ಷಣಿಕ ಚಟುವಟಿಕೆ ಬಿಟ್ಟು, ಇತರೆ ಕೆಲಸ ಮಾಡುವುದರಲ್ಲೇ ತಲ್ಲಿನರಾಗಿರುತ್ತಾರೆ. ಮಕ್ಕಳಿಗೆ ಪಾಠ ಮಾಡುವ ಬದಲಿಗೆ, ರಾಜಕಾರಣಿಗಳ ಬೆನ್ನ ಹಿಂದೇಬಿದ್ದು, ಮುಂಬಡ್ತಿ, ವರ್ಗಾವಣೆ, ಇತರೆ ವೈಯಕ್ತಿಕ ಕೆಲಸಗಳಲ್ಲೇ ಬ್ಯುಸಿ ಆಗಿರುತ್ತಾರೆ. ಕೆಲ ಶಿಕ್ಷಕರು ಶಾಲೆಯಲ್ಲಿ ಇರದೇ, ರಾಜಕಾರಣಿಗಳ ಮನೆ ಮುಂದೆ, ಅವರ ಕಚೇರಿ ಮುಂದೆ ಇಲ್ಲವೇ ಅವರ ಹಿಂದೆ ಇರುತ್ತಾರೆ. ಹೀಗಿದ್ದಾಗ ಮಕ್ಕಳಿಗೆ ಪಠ್ಯ ಚಟುವಟಿಕೆ ಪೂರ್ಣಗೊಳ್ಳುವುದು ಯಾವಾಗ.? ಮಕ್ಕಳು ಓದುವುದು ಯಾವಾಗ? ಫಲಿತಾಂಶ ಸಾಧನೆಯ ಶ್ರೇಣಿಯಲ್ಲಿ ಜಿಲ್ಲೆ ಕೊನೆ ಸ್ಥಾನದಿಂದ ಮೇಲಕ್ಕೆ ಹೋಗುವುದು ಯಾವಾಗ.? ಇದನ್ನು ಶಿಕ್ಷಕ ವರ್ಗವೇ ಸೀರಿಯಸ್ಸಾಗಿ ಚಿಂತಿಸಬೇಕಿದೆ.

ಕಾಯಂ ಕೊನೇ ಸ್ಥಾನ

ಇತ್ತೀಚೆಗೆ ಪ್ರಕಟವಾದ ದ್ವಿತೀಯ ಪಿಯು ಫಲಿತಾಂಶದಲ್ಲಿ ಕೂಡ 31ನೇ ಸ್ಥಾನಕ್ಕೆ ತೃಪ್ತಿ ಪಟ್ಟುಕೊಂಡಿದ್ದ ಕಲಬುರಗಿ ಜಿಲ್ಲೆ, ಈಗ ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಂತೂ ನಾಲ್ಕು ಹೆಜ್ಜೆ ಹಿಂದಕ್ಕೆ ಹೋಗಿ, ಕಟ್ಟ ಕಡೆಯ 35ನೇ ಸ್ಥಾನಕ್ಕೆ ತಲುಪಿದೆ. ಕೆಳಗಿಂದ ಮೊದಲ ಸ್ಥಾನ ಪಡೆದುಕೊಂಡಿದೆ ಅಷ್ಟೇ !

ಫಲಿತಾಂಶ ಪ್ರಮಾಣ

100ಕ್ಕೆ ಕೇವಲ ಶೇ.42ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಮಕ್ಕಳಿಗೆ ಉತ್ತಮ ಶಿಕ್ಷಣವೊಂದಿದ್ದರೆ ಸಾಕು. ಇಡೀ ಊರು, ಇಡೀ ಮನೆ, ಇಡೀ ದೇಶ, ಇಡೀ ಸಮಾಜ ಉದ್ದಾರವಾಗುತ್ತದೆ ಎಂಬ ಮಾತುಗಳು ವೇದಿಕೆಗಳಲ್ಲಿ ಹರಿದಾಡುತ್ತವೆ. ಇದು ಸಾಧಿಸಬೇಕಾದರೆ ಜಿಲ್ಲೆಯ ರಾಜಕಾರಣಿಗಳು, ಶಿಕ್ಷಣ ಇಲಾಖೆ ಅಧಿಕಾರಿಗಳು, ಶಿಕ್ಷಕರ ವರ್ಗ ಹೆಚ್ಚಿನ ಮುತುವರ್ಜಿ ವಹಿಸಿ, ಫಲಿತಾಂಶ ಸುಧಾರಣೆ ಕಡೆಗೆ ಗಮನ ಹರಿಸಲೇಬೇಕಿದೆ. ಸರಕಾರ ಮಕ್ಕಳಿಗೆ ಬೇಕಾದ ಪೂರಕ ಸೌಲಭ್ಯ ನೀಡಿ ಫಲಿತಾಂಶ ಮೇಲೆತ್ತುವ ಕಡೆ ಯೋಚಿಸಬೇಕಿದೆ.

ಶಿಕ್ಷಕರ ಪಾತ್ರ ಮುಖ್ಯ

ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಫಲಿತಾಂಶ ಸುಧಾರಣೆ ಕಾಣಲು ಶಿಕ್ಷಕರ ಪಾತ್ರ ಮುಖ್ಯ. ಮಕ್ಕಳಿಗೆ ಆಸಕ್ತಿದಾಯಕ ವಿಷಯ ಬೋಧನೆ ಮಾಡುವ ಜವಾಬ್ದಾರಿ ಶಿಕ್ಷಕರದ್ದೇ ಆಗಿರುತ್ತದೆ. ಆದರೆ, ಬೇರೆ ಜಿಲ್ಲೆಗಳಿಗೆ ಹೋಲಿಸಿದರೆ, ಜಿಲ್ಲೆಯ ಶಿಕ್ಷಕರ ಆಸಕ್ತಿ ಕೊಂಚ ಕಡಿಮೆಯೇ ಎಂದು ಫಲಿತಾಂಶದ ಚಿತ್ರ ನೋಡಿದರೆ ಸಾಬೀತಾಗುತ್ತದೆ.

ಫಲ ಕೊಡದ ಆವಿಷ್ಕಾರ

ಪ್ರತಿವರ್ಷ ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ ಕಲಬುರಗಿ ಕೊನೆಯ ಸ್ಥಾನದಲ್ಲಿ ಬರುವುದನ್ನು ಅರಿತ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಡಾ. ಅಜಯ್ ಸಿಂಗ್ ಅವರು ಶೈಕ್ಷಣಿಕ ಸುಧಾರಣೆಗಾಗಿ ಅಕ್ಷರ ಆವಿಷ್ಕಾರ ಯೋಜನೆ ಜಾರಿಗೆ ತಂದರು. ಈ ಮೂಲಕ ಶೇಕಡ 25ರಷ್ಟು ಅನುದಾನ ಶಿಕ್ಷಣಕ್ಕೆ ಮೀಸಲಿಡಲಾಗಿತ್ತು. ಶೈಕ್ಷಣಿಕ ವರ್ಷ ಎಂದು ಸಹ ಘೋಷಣೆ ಮಾಡಲಾಗಿತ್ತು. ಆದರೂ ಫಲಿತಾಂಶದಲ್ಲಿ ಮಾತ್ರ ಚೇತರಿಕೆ ಕಾಣದೆ ಮತ್ತೆ ನಿರಾಸೆ ಎದುರಾಗಿದೆ. ಇದರಿಂದ ಅಕ್ಷರ ಆವಿಷ್ಕಾರಕ್ಕೆ ಹಾಕಿದ ಶ್ರಮ ಫಲ ಕೊಡದಂತಾಗಿದೆ.

ಪಟ್ಟಿ 14/ Table 14
ಜಿಲ್ಲೆಗಳ ಶೇಕಡಾವಾರು ಉತ್ತೀರ್ಣ ಫಲಿತಾಂಶ (ಶಾಲಾ ವಿದ್ಯಾರ್ಥಿಗಳು)
District wise Pass Percentage (Regular Fresh Students)

ಕ್ರ.ಸಂ Sl.No	ಜಿಲ್ಲೆಯ ಹೆಸರು District name	ಹಾಜರಾದವರು Present	ಉತ್ತೀರ್ಣರಾದವರು Passed	ಶೇಕಡಾ ಫಲಿತಾಂಶ Pass Percentage
1	DAKSHINA KANNADA	27795	25326	91.12
2	UDUPI	13579	12215	89.96
3	UTTARA KANNADA	8890	7396	83.19
4	SHIVAMOGGA	21873	17999	82.29
5	KODAGU	6255	5142	82.21
6	HASSAN	19248	15807	82.12
7	SIRSI	9368	7538	80.47
8	CHIKKAMAGALURU	12257	9548	77.9
9	BENGALURU RURAL	13587	10057	74.02
10	BENGALURU SOUTH	56078	40547	72.3
11	BENGALURU NORTH	44392	32082	72.27
12	MANDYA	19453	13476	69.27
13	HAVERI	21115	14575	69.03
14	KOLAR	18560	12708	68.47
15	MYSURU	35264	24116	68.39
16	BAGALAKOTE	30243	20654	68.29
17	GADAG	14521	9833	67.72
18	DHARWAD	26835	18145	67.62
19	VIJAYANAGARA	19413	13127	67.62
20	TUMAKURU	20452	13709	67.03
21	DAVANAGERE	19964	13195	66.09
22	CHIKKABALLAPURA	14868	9462	63.64
23	CHITRADURGA	21481	13579	63.21
24	RAMANAGARA	12090	7631	63.12
25	BELAGAVI	31503	19583	62.16
26	CHIKKODI	42366	26317	62.12
27	CHAMARAJANAGARA	10749	6605	61.45
28	MADHUGIRI	11704	7098	60.65
29	BALLARI	20126	12128	60.26
30	KOPPALA	21610	12386	57.32
31	BIDAR	23754	12650	53.25
32	RAICHURU	28550	14860	52.05
33	YADAGIRI	15036	7759	51.6
34	VIJAYAPURA	38654	19164	49.58
35	KALABURAGI	39257	16658	42.43
	TOTAL	790890	523075	66.14

ಕಲ್ಯಾಣ ಕರ್ನಾಟಕ

- ಬಳ್ಳಾರಿ 60.26 %
- ಕೊಪ್ಪಳ 57.32 %
- ಬೀದರ್ 53.25 %
- ರಾಯಚೂರು 52.05 %
- ಯಾದಗಿರಿ 51.6 %
- ವಿಜಯಪುರ 49.58 %
- ಕಲಬುರಗಿ 42.43 %

ಆರಾಮ

ವಿಶ್ವವಾಣಿ
@vishwavaninews
ಬೆಂಗಳೂರು
05-05-2025
ಸೋಮವಾರ

ಚಿತ್ತವಿಹಾರ

ನಗೆ ಅಥವಾ ನೆರಿಗೆ ಆಯ್ಕೆ ನಮ್ಮದು!

● ಹೊಸ್ಮನೆ ಮುತ್ತು

ಜೀವನ ಪಯಣದಲ್ಲಿ ನೆನಪುಗಳು ಮಹತ್ವಪೂರ್ಣ ಪಾತ್ರವಹಿಸುತ್ತವೆ. ಅನುಭವಿಸಿದ ಪ್ರತಿಯೊಂದು ಕ್ಷಣ, ಬದುಕಿನ ಪ್ರತಿಯೊಂದು ಘಟನೆ, ಹೃದಯದಲ್ಲಿ ಒಂದು ಗುರುತನ್ನು ಮೂಡಿಸುತ್ತದೆ. ಕೆಲವು ನೆನಪುಗಳು ಪದೇ ಪದೇ ನೆನೆಯುವಂತಹ ಸುಂದರ ಕ್ಷಣಗಳಾಗಿ ಮನಸ್ಸಿಗೆ ಆಹ್ಲಾದ ನೀಡಿದರೆ, ಇನ್ನು ಕೆಲವು ನೋವುಂಟು ಮಾಡಿ ನಮ್ಮ ಮುಖದಲ್ಲಿ ಚಿಂತೆಯ ಗೆರೆಗಳನ್ನು ಮೂಡಿಸುತ್ತವೆ. 'ನಗುವಿಗೆ ಕಾರಣವಾದ ನೆನಪುಗಳನ್ನು ಹೃದಯದಲ್ಲಿ ಉಳಿಸಿಕೊಳ್ಳಿ; ನೋವಿಗೆ ಕಾರಣವಾದ ನೆನಪುಗಳನ್ನು ಮರೆತುಬಿಡಿ' ಎನ್ನುತ್ತದೆ ಒಂದು ಪ್ರಸಿದ್ಧ ಉಕ್ತಿ.

ಭಾವನೆಗಳು ನೇರವಾಗಿ ನೆನಪುಗಳ ಮೇಲೆ ಅವಲಂಬಿತವಾಗಿವೆ. ನೋಡಿದ ದೃಶ್ಯಗಳು, ಅನುಭವಿಸಿದ ಕ್ಷಣಗಳು, ಮಾಡಿದ ತಪ್ಪುಗಳು, ಗೆದ್ದ ಸಾಧನೆಗಳು ಎಲ್ಲವೂ ನೆನಪಿನಲ್ಲಿ ಒಂದು ವರ್ಣಚಿತ್ರದಂತೆ ಉಳಿದಿರುತ್ತವೆ. ನೆನಪುಗಳು ಗತಿಸಿದ ದಿನಗಳ ಹೆಜ್ಜೆ ಗುರುತುಗಳು, ಅದು ನಾವು ಹೇಗೆ ರೂಪುಗೊಂಡೆವು ಎಂಬುದರ ಕಥನ. ಕೆಲವು ನೆನಪುಗಳು ನಮ್ಮೊಳಗೆ ಖುಷಿಯ ಬುಗ್ಗೆಯನ್ನೇ ಚಿಮ್ಮಿಸಬಹುದು. ಇದಕ್ಕೆ ವ್ಯತಿರಿಕ್ತವಾಗಿ, ನಷ್ಟ, ಅವಮಾನ, ನೆರವೇರದ ಪ್ರೀತಿ, ವಿಫಲವಾದ ಪ್ರಯತ್ನ, ನಂಬಿಕೆ ದ್ರೋಹ, ವಿಚ್ಛೇದನ, ಅಥವಾ ದುರಂತಗಳು ನೋವಿನ ನೆನಪುಗಳಾಗಿ ಪರಿಣಮಿಸಬಹುದು. ಇವು ಮನಸ್ಸನ್ನು ದುಃಖಕ್ಕೆ ತಳ್ಳಿ ಆಂತರಿಕ ಶಾಂತಿಯನ್ನು ಕದಡಬಹುದು.

ಹಾಗಾಗಿ,ಯಾವ ನೆನಪನ್ನು ಉಳಿಸಿಕೊಳ್ಳಬೇಕು ಮತ್ತು ಯಾವುದನ್ನು ಬಿಡಬೇಕು ಎಂಬ ವಿವೇಚನೆಯೇ ಬದುಕಿಗೆ ದಿಕ್ಸೂಚಿಯಾಗಿದೆ. ಒಳ್ಳೆಯ ನೆನಪುಗಳು ಮನಸ್ಸಿಗೆ ಪ್ರೇರಣೆಯನ್ನೀಯುತ್ತವೆ. ಆತ್ಮವಿಶ್ವಾಸವನ್ನು ಹೆಚ್ಚಿಸುತ್ತವೆ. ಅವು ನಿಜವಾದ ಸಂಪತ್ತು. ದುಃಖದ ನೆನಪುಗಳನ್ನು ಕೇವಲ ತಾತ್ಕಾಲಿಕ ಭಾವನೆಗಳೆಂದು ಅರಿತುಕೊಂಡು, ಎಚ್ಚರಿಕೆಯಿಂದ, ಧೈರ್ಯದಿಂದ, ಕ್ಷಮಾಗುಣದಿಂದ ಮತ್ತು ಸಕಾರಾತ್ಮಕ ದೃಷ್ಟಿಕೋನದಿಂದ ಬದುಕಿದರೆ, ನೆನಪುಗಳ ನಿರ್ವಹಣೆ ಸುಲಭವಾಗುತ್ತದೆ. 'ನಗೆ ಅಥವಾ ನೆರಿಗೆ' ನಡುವಿನ ಆಯ್ಕೆಯಲ್ಲೇ ಬದುಕಿನ ಗುಣಮಟ್ಟವಿದೆ. ಕಣ್ಣಲ್ಲಿ ಕಿರುನಗೆ ಮೂಡಿಸುವ ನೆನಪುಗಳನ್ನು ಮಾತ್ರ ಉಳಿಸಿಕೊಳ್ಳಿ, ಮುಖದಲ್ಲಿ ನೆರಿಗೆಗಳು ಮೂಡಿದರೂ, ಕಣ್ಣಲ್ಲಿನ ಆ ಕಿರುನಗೆ ಎಂದಿಗೂ ಮಾಸುವುದಿಲ್ಲ.

ಹನಿ ಮಳೆ

ಕಂಬನಿ

ಬಿಸಿಲ ಬೇಗೆಗೆ ಬಾನು ಬೀಗಿದೆ
ಗಾಳಿ ಬೀಸಿದೆ ಮೋಡ ಗುಡುಗಿದೆ
ಬಿದ್ದ ಮರದಡಿ ಸಿಲುಕಿ ಚಾಲಕ
ಲೋಕ ತ್ಯಜಿಸಿದ ನೋವು ಮನದಲಿ
ಕರುಣೆ ತೋರಲಿ ವಾಯು ದೇವ
ಬದುಕಿ ಉಳಿಯಲಿ ಹುಲು ಮಾನವ

● ಕಿರಣ್ ಕೊಕ್ಕರ್ಣೆ

ಸಮುದ್ರ ತಟದಲ್ಲೇ ಓಂಕಾರ!

● ವಾ.ಮುರಳೀಧರ, ತೀರ್ಥಹಳ್ಳಿ

ಪುರಾಣ ಪ್ರಸಿದ್ಧ ಸಂಸ್ಥಾನ ಶ್ರೀ ಮಹಾಬಲೇಶ್ವರ ದೇವರ ಸನ್ನಿಧಿ ಗೋಕರ್ಣ. ಅಭಿಮನ್ಯುವಿನ ಚಕ್ರವ್ಯೂಹದಂತಿರುವ ಅಂಕುಡೊಂಕಾದ ಸರ್ಪಾಕಾರದ ಮಾರ್ಗಗಳು ಇಲ್ಲಿವೆ. ಅಂತಹ ಕಿಷ್ಕಿಂಧಾ ಮಾರ್ಗಗಳಲ್ಲೂ ತಮ್ಮ ಕಿರಿಯ ವಾಹನಗಳಲ್ಲಿ ಪೂಜಾ ಕೈಂಕರ್ಯಗಳಿಗೆ ಬಿಡುವಿಲ್ಲದೆ ರಭಸದಿಂದ ಸಾಗುವ ಪುರೋಹಿತರ ದಂಡು ನೋಡುವುದೇ ಇಲ್ಲಿ ಒಂದು ಚಂದ. ಇಲ್ಲಿ ಬರುವ ಹಲವರಿಗೆ ತಮ್ಮ ಪಾಲಿನ ಕರ್ಮಗಳನ್ನು ನೆರವೇರಿಸಿ ಹಗುರಾಗುವ ಹಂಬಲ.

ಆದರೆ ಗೋಕರ್ಣ ಎಂದರೆ ಅಷ್ಟೇ ಅಲ್ಲ. ಅದು ಪ್ರಕೃತಿ ಸೌಂದರ್ಯದ ಬೀಡು. ಆರೇಳು ಕಿಲೋಮೀಟರು ದೂರವಿರುವ ಗೋಕರ್ಣದ 'ಓಂ ಬೀಚು' ನಯನ ಮನೋಹರ ಸ್ಥಳ. ಸಮುದ್ರದ ನೀರು ಶುದ್ಧ ಬಿಳಿಯ ಮರಳಿನ ತಟಕ್ಕೆ ಬಂದು ಬಡಿಯುವಾಗ ಓಂ ನಾದವನ್ನೇ ನುಡಿಯುತ್ತದೆಯೇನೋ ಎಂಬ ಭಾವ ಇಲ್ಲಿ ಮೂಡಿದರೆ ಅಚ್ಚರಿಯಿಲ್ಲ. ದೂರದಿಂದ ಕಂಡಾಗ, ಈ ಬೀಚ್‌ನ ಆಕಾರವು ಸಂಸ್ಕೃತದ ಓಂ ಅಕ್ಷರವನ್ನು ಹೋಲುತ್ತದೆ ಎಂಬುದು ಪ್ರಸಿದ್ಧ ಹೇಳಿಕೆ. ಇಲ್ಲಿ ಸ್ಥಳೀಯರು ಕವಡೆ ಕಪ್ಪೆಚಿಪ್ಪು ಮಣಿಗಳಿಂದ ಮಾಡಿದ ಹಾರಗಳನ್ನು ಮಾರುತ್ತಾರೆ. ಸ್ಥಳೀಯವಾಗಿ ಬೆಳೆದ ಅನಾನಸ್ ಹಣ್ಣಿನ ರುಚಿ ಸವಿದವರಿಗಷ್ಟೇ ಗೊತ್ತು. ಬುಡಕಟ್ಟು ಮಾದರಿಯ ಕೇಶಾಲಂಕಾರ ಮಾಡಿಸಿಕೊಳ್ಳಬಹುದು. ಸ್ಥಳೀಯ ನಿವಾಸಿ ಹಾಗೂ ದನಕರುಗಳಿಗೆಂದೇ ಮೀಸಲಿರುವ ಕಾಲುದಾರಿಯಲ್ಲಿ ಎಚ್ಚರಿಕೆಯಿಂದ ಸಾಗಿದರೆ ಗಿಡ ಮರ ಬಂಡೆಗಳ ಚೌಕಟ್ಟಿನಲ್ಲಿ ಸುಂದರ ಸೂರ್ಯಾಸ್ತಮಾನ ಲಭ್ಯವಿದೆ. ಓಂ ಬೀಚ್‌ನ ಚಂದವನ್ನು ನೋಡಲು ದೇಶೀಯರ ಜತೆ, ವಿದೇಶೀಯರೂ ಬರುವುದುಂಟು.

ನಮ್ಮ ರಾಜ್ಯದ ಅತಿ ಸುಂದರ ಬೀಚುಗಳಲ್ಲಿ ಓಂ ಬೀಚು ಸಹ ಒಂದು. ಪ್ರಾಕೃತಿಕ ಸೌಂದರ್ಯವು ಅತಿ ಶ್ರೀಮಂತ ಸ್ಥಿತಿಯಲ್ಲಿರುವ ಈ ಸ್ಥಳವನ್ನು, ಅತಿ ಪುರಾತನ ಪೌರಾಣಿಕ ಕಥೆಯೊಂದಿಗೆ ತಳುಕು ಹಾಕಿ, ಇಲ್ಲಿಗೆ ಭೇಟಿ ನೀಡಿ, ಇಲ್ಲಿನ ಪ್ರಾಕೃತಿಕ ಸೌಂದರ್ಯವನ್ನು ನೋಡುವಂತೆ ಮಾಡಿರುವರೇ, ನಮ್ಮ ಹಿಂದಿನ ತಲೆಮಾರಿನವರು?

ಸಮುದ್ರ ದಂಡೆಯಲ್ಲಿ ಸಿಗುವ ನುಣುಪಾದ ಸಣ್ಣ ಸಣ್ಣ ಕಲ್ಲುಗಳನ್ನು ಬಳಸಿ ನಿರ್ಮಿಸಿರುವ ಕಂಬ ಹಾಗೂ ಲಿಂಗಾಕೃತಿ ಗಮನಸೆಳೆಯುತ್ತದೆ. ದೋಣಿ ವಿಹಾರವೂ ಇದೆ.

ಇಲ್ಲೇಕೆ ಹಾರಿಬಂದ ಹನುಮ?

ಪೇಟೆಯಲ್ಲಿ ಇರುವ 'ಆಂಜನೇಯ ಜನ್ಮ ಭೂಮಿಗೆ ದಾರಿ' ಎಂಬ ಗೋಡೆಬರಹ ಗೊಂದಲಕ್ಕೀಡು ಮಾಡುತ್ತದೆ. ವಿಚಾರಿಸಿದರೆ 'ಅಲ್ಲಿ ಜಾಸ್ತಿ ಏನೂ ಇಲ್ಲ, ಕತ್ತಲೆ ಹೊತ್ತಿನಲ್ಲಿ ಹೋಗಬೇಡಿ' ಎಂಬ ಎಚ್ಚರಿಕೆಯ ಹೊರತು ಬೇರೆ ವಿವರ ಸಿಗುವುದಿಲ್ಲ. ಬಹುತೇಕರು ನಂಬಿರುವವಂತೆ, ಆಂಜನೇಯನ ಜನ್ಮ ಸ್ಥಳ ಹಂಪಿ ಸಮೀಪದ ಅಂಜನಾ ಪರ್ವತಕ್ಕೆ ಇಲ್ಲಿಂದ ಹೋಗಲು ಸಾಧ್ಯವಿರಬಹುದೇ? ತಿಳಿಯದು.

ಗೋಕರ್ಣ ಬೀಚಿನ ಸೂರ್ಯಾಸ್ತಮವೂ ಕಣ್ಣಿಗೆ ಹಬ್ಬವೇ. ಇಲ್ಲಿ ಕುದುರೆ ಮತ್ತು ಒಂಟೆ ಸವಾರಿಗೂ ಅವಕಾಶವಿದೆ.

ಇವುಗಳ ಜೊತೆಗೆ ಸಮೀಪದಲ್ಲೇ ಅಶೋಕವನ ಎಂಬಲ್ಲಿ ಸಸ್ಯ ಸಂಜೀವಿನಿ ಎಂಬ ಆಯುರ್ವೇದ ಕೇಂದ್ರವಿದೆ. ಅದು ಸದ್ದಿಲ್ಲದೇ ಕಾರ್ಯ ನಿರ್ವಹಿಸುತ್ತಿದೆ. ಸುಮಾರು ಹದಿನೈದು ಎಕರೆ ಜಾಗದಲ್ಲಿ, ಆರು ನೂರು ವಿವಿಧ ಔಷಧೀಯ ಸಸ್ಯಗಳನ್ನು ಬೆಳೆದು ಅವುಗಳ ಬೆಳೆಗಳಿಂದಲೇ ಆಯುರ್ವೇದ ಔಷಧಿಗಳನ್ನು ತಯಾರಿಸಿ ಜನರಿಗೆ ತಲುಪಿಸುವ ಕೆಲಸವನ್ನು ಡಾ.ಪತಂಜಲಿ ಶರ್ಮ ಹಾಗೂ ಡಾ. ಸೌಮ್ಯಶ್ರೀ ಶರ್ಮ ಮಾಡುತ್ತಿದ್ದಾರೆ. ಪ್ರವೇಶ ದ್ವಾರದಲ್ಲಿರುವ ಧನ್ವಂತರಿ ದೇಗುಲ ತನ್ನ ಸರಳ ರೂಪದಿಂದ ಇಷ್ಟವಾಗುತ್ತದೆ. ಗೀರ್ ಮತ್ತು ಮಲೆನಾಡು ಗಿಡ್ಡ ತಳಿಗಳ ಸುಸಜ್ಜಿತ ಗೋಶಾಲೆ ಇಲ್ಲಿನ ವಿಶೇಷ. ಮೂರು ಹಂತದಲ್ಲಿ, ಗಾಢಾಂಧಕಾರದಲ್ಲಿ ಧ್ಯಾನದ ಅವಕಾಶ ಕಲ್ಪಿಸುವ ಕಾಯಕಲ್ಪ ಕುಟಿ ಈ ಕೇಂದ್ರದ ವಿಶೇಷತೆ.

ಗೋಕರ್ಣದ ಇತಿಹಾಸ ಹುಡುಕಹೊರಟರೆ, ಅದು ಪುರಾಣದ ಆದಿಕಾಲಕ್ಕೂ ಸಾಗಬಲ್ಲದು. ದೈವಭಕ್ತ ರಾವಣನ ಪೂಜೆಯ ಸಮಯಕ್ಕೆ ಸಹಕರಿಸಲು ಬಂದ ಗಣೇಶನು, ಶಿವಲಿಂಗದ ಭಾರ ತಾಳದೆ, ಅದನ್ನು ನೆಲದ ಮೇಲಿಟ್ಟುಬಿಟ್ಟ ಎಂಬ ಬಹು ಪುರಾತನ ಕಥೆಯು ಹಲವು ಆಯಾಮಗಳನ್ನು ಹೊಂದಿದೆ. ಪಾರಮಾರ್ಥಿಕ ದೃಷ್ಟಿಯಿಂದ ಬಂದವರಿಗೆ ಇಹಲೋಕದ ಸೌಂದರ್ಯ ಉಣಬಡಿಸುವ ಗೋಕರ್ಣ ನಿಜಕ್ಕೂ ಒಂದು ಸುಂದರ ಪ್ರಾಕೃತಿಕ ತಾಣ.

ಸ್ವಾಭಿಮಾನ ದಿಂದ ದುಡಿದು ತಿನ್ನಬೇಕು

**ರಾಗಿಮುದ್ದೆಯ ನುಂಗಿ ನಲಿದು ಬಾಳ್ವಾತಂಗೆ
ಕಾಗೆ ಕದ್ದುಣುವ ಭಕ್ಷ್ಯವ ಕಂಡು ಕರುಬೆ ?
ನೀಗುವುದು ಹಸಿವನ್ ಉಣಿಸೆಂತಪ್ಪುದಾದೊಡಂ
ಬಾಗಿಸದಿರಾತ್ಮವನು - ಮಂಕುತಿಮ್ಮ॥**

ಬೆವರು ಹರಿಸಿ ಕಷ್ಟ ಬಿದ್ದು ದುಡಿದು ರಾಗಿ ಮುದ್ದೆಯನ್ನೇ ನುಂಗಿ ಅದರಲ್ಲೇ ಸುಖ ಕಂಡು ಬಾಳುವೆ ನಡೆಸುವವನು ಅದೆಲ್ಲೋ ಕಾಗೆಯು ಕದ್ದು ಮೃಷ್ಟಾನ್ನ ಉಣ್ಣುವುದನ್ನು ಕಂಡು ಕರುಬುತ್ತಾನೆಯೇ? ಸರಳತೆಯ ಪ್ರತೀಕವೆನಿಸಿದ ರಾಗಿ ಮುದ್ದೆಯಾಗಲಿ, ಐಶಾರಮಿತ್ವದ ಮೃಷ್ಟಾನ್ನವಾಗಲಿ, ಇವೆರಡೂ ಹಸಿವನ್ನು ತಣಿಸುತ್ತವೆ. ಆದರೆ ನಾವು ತಿನ್ನುವ ಅನ್ನ ಸರಳವಾಗಿದ್ದರೂ ನಮ್ಮ ದುಡಿತದ ಶ್ರಮದಿಂದ, ನಮ್ಮ ಆತ್ಮಗೌರವದಲ್ಲಿರಬೇಕೇ ಹೊರತು ಕದ್ದುದರಿಂದಲೋ, ಬೇರೆಯವರ ಮುಂದೆ ಮನವನ್ನು ಅಡವಿಟ್ಟು, ಮನಬಾಗಿಸಿ ಪಡೆದ ಮೃಷ್ಟಾನ್ನವಾಗಿರಬಾರದು ಎಂದು ಈ ಮುಕ್ತಕದಲ್ಲಿ ಹೇಳಿದ್ದಾರೆ.



ಶುಭೋದಯಕ್ಕೊಂದು ಕಗ್ಗ

ರವೀ ಚಿಕ್ಕನಾಯಕನಹಳ್ಳಿ

ಇಲ್ಲಿ ರಾಗಿಮುದ್ದೆಯನು ನುಂಗುವಾತ ಅಂದರೆ ಸರಳತೆಯಲ್ಲಿ, ಶ್ರಮವಹಿಸಿ, ಕಷ್ಟಪಟ್ಟು ದುಡಿಯುವಾತ ಎಂಬರ್ಥದಲ್ಲಿ ಸೂಚಿಸದ್ದಾಗಿರುತ್ತದೆ. ಈತ ತನ್ನ ಜೀವನದಲ್ಲಿ ತನ್ನ ಬೆವರಿನ ಶ್ರಮಕ್ಕೆ ಮಾತ್ರ ಪ್ರತಿಫಲ ಪಡೆತುವಂತಹನಾಗಿದ್ದು, ತಾನುಣ್ಣುವನ್ನವನ್ನು ತಾನೇ ಶ್ರಮವಹಿಸಿ, ದೇಹದಂಡಿಸಿ ಕಷ್ಟಬಿದ್ದು ಅನ್ನವನ್ನುಣುತ್ತಾನೆ. ಆತನಿಗೆ ಬೇಕು ಬೇಡಗಳಿರುವುದಿಲ್ಲ. ಹೆಚ್ಚಿನದನ್ನು ನಿರೀಕ್ಷಿಸುವ ಆಕಾಂಕ್ಷೆಗಾರನೂ ಆತನಾಗಿರುವುದಿಲ್ಲ. ಅದೇ ದುರಾಸೆಯ ಮನಸ್ಥಿತಿಯ ಮನುಷ್ಯನನ್ನು ಕಾಗೆಗೆ ಹೋಲಿಸುತ್ತಾ, ಕಾಗೆಯು ಯಾರೋ ತಿಂದು ಬಿಸುಟಿದ ಮೃಷ್ಟಾನ್ನವನ್ನು ತಿನ್ನುವುದನ್ನು ನೋಡಿರುತ್ತೇವೆ. ದುಡಿಮೆಯಿಂದ ಗಳಿಸದ ಅನ್ನವನ್ನು ಯಾರೋ ದುಡಿದ ಅನ್ನಕ್ಕೆ ತನ್ನ ಆತ್ಮಗೌರವವನ್ನೂ ಅಡವಿಟ್ಟು ಮೃಷ್ಟಾನ್ನ ಸವಿಯುತ್ತಲಿರುತ್ತಾನೆ. ಇಲ್ಲಿ ಕಾಗೆಯು ಅನ್ಯರ ಶ್ರಮದಿಂದ ತಯಾರಾದ ಅನ್ನವನ್ನು ಕದ್ದೋ ಅಥವಾ ತಿಂದು ಬಿಸುಟಿದನ್ನು ತಂದು ತಿನ್ನುವಂತೆ ಅಂದರೆ ಆತ್ಮಗೌರವವಿರದೆ, ಇನ್ನೊಬ್ಬರಿಗೆ ಹಿಂಸಿಸಿಯೋ, ಇನ್ನೊಬ್ಬರ ಮುಂದೆ ಮಂಡಿಯೂರಿ, ಬೆವರಿನ ಬೆಲೆ ತಿಳಿಯದೆ, ಆತ್ಮಾಭಿಮಾನವನ್ನು ಇನ್ನೊಬ್ಬರ ಪಾದತಲದಲ್ಲಿಟ್ಟು ಸಿರಿವಂತಿಕೆಯಲ್ಲಿ ಜೀವನ ಮಾಡುವುದೂ ಒಂದು ಜೀವನವೇ? ಎಂಬುದನ್ನು ಪ್ರಶ್ನೆ ಮಾಡಿಕೊಳ್ಳಬೇಕಾಗುತ್ತದೆ. ಶ್ರಮವಹಿಸಿ ತನ್ನ ಬೆವರನ್ನು ನಂಬಿ ದುಡಿವಾತ ಎಂದಿಗೂ, ಯಾರಿಗೂ ಕರುಬದೆ ಶಾಂತಿಯಲಿ, ನಿಶ್ಚಿಂತತೆಯಲಿ ತನ್ನ ಬದುಕನ್ನು ಆತ್ಮತೃಪ್ತಿಯಿಂದ ಯಾರಿಗೂ ಬಾಗದೆ ತನ್ನ ಜೀವನವನ್ನು ನಡೆಸುತ್ತಾನೆ ಎಂಬುದು ಈ ಮುಕ್ತಕದ ಅರ್ಥವೂ ಆಗಿದೆ.

ಪುಸ್ತಕ ಲೋಕ

ಅಮೀಬಾ



ಕನ್ನಡದಲ್ಲಿ ಕ್ರೈಸಿಸ್ ಮ್ಯಾನೇಜ್‌ಮೆಂಟ್ ಕುರಿತಾದ ಮೊದಲ ಪುಸ್ತಕ ಇದು ಎಂಬ ಟ್ಯಾಗ್ ಲೈನ್‌ನೊಂದಿಗೆ ಪ್ರಕಟಗೊಂಡ 'ಅಮೀಬಾ', ವ್ಯವಹಾರ ಜಗತ್ತಿನ ಪೈಪೋಟಿಯ ಒಳನೋಟಗಳನ್ನು ನೀಡುತ್ತದೆ. ಯಂಡಮೂರಿ ವೀರೇಂದ್ರನಾಥ್ ಅವರು ಈ ಪುಸ್ತಕದಲ್ಲಿ, ಒಬ್ಬ ಯಶಸ್ವಿ ಉದ್ಯಮಿನ ಕಥೆಯನ್ನು ವಿಶ್ಲೇಷಣೆಗೆ ಒಳಪಡಿಸಿದ್ದಾರೆ. ಐಐಟಿ ಸೀಟನ್ನು ತಿರಸ್ಕರಿಸಿದ ಈ ಉದ್ಯಮಿ, ಆರಂಭದಲ್ಲಿ ಬಹು ಕಷ್ಟ ಪಟ್ಟರು. ಆಫ್ರಿಕಾದಲ್ಲಿ ಹೊಸ ವ್ಯವಹಾರ ಆರಂಭಿಸಿ, ಅಲ್ಲಿನ ಸಿಮೆಂಟ್ ಮಾಫಿಯಾದ ಒಳಪಟ್ಟುಗಳನ್ನು ಅರ್ಥಮಾಡಿಕೊಂಡು, ತಮ್ಮದೇ ವ್ಯವಹಾರ ಬೆಳೆಸಿದರು. ಇಂದು ಅವರು 20000 ಜನರಿಗೆ ಉದ್ಯೋಗ ನೀಡಿದ್ದಾರೆ. ಈ ಪುಸ್ತಕವನ್ನು ಹುಬ್ಬಳ್ಳಿಯ ಸಾಹಿತ್ಯ ಪ್ರಕಾಶನ ಪ್ರಕಟಿಸಿದೆ. ತಮ್ಮ ವಿಶಿಷ್ಟ ಪುಸ್ತಕಗಳ ಮೂಲಕ ಹೆಸರು ಮಾಡಿರುವ ಯಂಡಮೂರಿ ವೀರೇಂದ್ರ ನಾಥ್ ಅವರ ಈ ಕೃತಿಯನ್ನು ಕನ್ನಡಕ್ಕೆ ಅನುವಾದಿಸಿದವರು ಗಣೇಶಭಟ್ಟ ಕೊಪ್ಪಲತೋಟ.

ಆಚರಣೆ ಅನುಕರಣೆ ಅನುರಣನೆ

● ಸಿದ್ದೇಶ್ ಹಾರನಹಳ್ಳಿ

ಅದೆಷ್ಟೋ ಮಹನೀಯರು ಮತ್ತು ಮಹಾಪುರುಷರು ಜನಿಸಿ ಮಾನವತೆಯ ಮತ್ತು ಸಮಾಜದ ಅಭ್ಯುದಯಕ್ಕಾಗಿ ಶ್ರಮಿಸಿದ್ದರು. ಇಂತಹ ಮಹಾಪುರುಷರು ಜನಿಸದೆ ಇದ್ದಿದ್ದರೆ ನಮ್ಮ ಸಮಾಜದ ಪರಿಸ್ಥಿತಿ ಇಂದಿನಂತೆ ಇರದೆ ಇನ್ನೂ ಅಮಾನವೀಯವಾಗಿಯೇ ಇರುತ್ತಿತ್ತು ಎಂಬುದು ಸತ್ಯವಾದ ಮಾತು. ಬಸವಾದಿ ಶರಣರನ್ನು ಒಳಗೊಂಡಂತೆ ನಮ್ಮ ರಾಜ್ಯ ಸರ್ಕಾರ ಒಟ್ಟು 32 ಮಹಾಪುರುಷರ/ಮಹನೀಯರ ಜಯಂತಿಯನ್ನು ಜಿಲ್ಲಾಡಳಿತದ ವತಿಯಿಂದ ಆಚರಿಸಲು ಆದೇಶವನ್ನು ಹೊರಡಿಸಿದೆ. ಆ ಪಟ್ಟಿಯನ್ನೊಮ್ಮೆ ನೋಡಿದರೆ ಜಾತಿಗೊಬ್ಬ ಮಹನೀಯರನ್ನು ಸರ್ಕಾರವೇ ಹುಡುಕಿ ತೆಗೆದು ಪಟ್ಟಿಮಾಡಿದಂತಿದೆ.

ಆದರೆ ಒಂದು ಜಾತ್ಯಾತೀತ ವ್ಯವಸ್ಥೆಯಲ್ಲಿ ಮಹನೀಯರ ಜಯಂತಿಯ ಆಚರಣೆಯ ಹೊಣೆಯನ್ನು ಸರ್ಕಾರ ಹೊರಬಹುದೇ ಎನ್ನುವುದು ಪ್ರಶ್ನೆ. ಹೊತ್ತರೆ ಅದರ ಸಾರ್ಥಕತೆ ಏನು? ಯಾವುದಾದರೂ ಸಮುದಾಯ ಇದರಿಂದ ಪ್ರೇರೇಪಿತರಾಗಿ ಅವರ ತತ್ವಗಳನ್ನು ಅನುಷ್ಠಾನಗೊಳಿಸಿದೆಯೇ? ಇದು ಹೊಣೆ ಹೊತ್ತ ಸರ್ಕಾರವೇ ಉತ್ತರಿಸಬೇಕಾದ ಪ್ರಶ್ನೆಗಳು.



ಇನ್ನು ಸರ್ಕಾರೇತರವಾಗಿ ಆಚರಿಸಲ್ಪಡುವ ಜಯಂತಿಗಳು ಬಹುತೇಕ ಅರ್ಥಹೀನ ಸಂಜೆಯ ಕಾರ್ಯಕ್ರಮಗಳಾಗಿ ಉಳಿದಿವೆ. ಕಠೋರ ಶಬ್ದ ಮಾಡುವ ಡಿಜೆ, ಅಪ್ರಸ್ತುತ ನೃತ್ಯಗಳು ಮತ್ತು ಫೋಟೋ ಸಹಿತ ಸಂಜೆಯ ಮೆರವಣಿಗೆಗಳು ಇಷ್ಟಕ್ಕೇ ಸೀಮಿತವಾಗಿ ಜಯಂತಿಗಳ ಆಚರಣೆಯ ಸದುದ್ದೇಶವನ್ನೇ ವಿಫಲಗೊಳಿಸಿವೆ. ಗದ್ದಲದ ಸಂಭ್ರಮ ನಡೆಸುವಲ್ಲಿ ಪರಸ್ಪರ ಪಂಗಡಗಳ ನಡುವೆ ಪೈಪೋಟಿಯೂ ಇದೆ! ಒಬ್ಬರದು ಆರು ಸ್ಪೀಕರ್ ಗಳ ಡಿಜೆ ಯಾದರೆ ಇನ್ನೊಬ್ಬರದು 12 ಸ್ಪೀಕರಿನ ಡಿಜೆ. ಮಹನೀಯರ ಜಯಂತಿಗಳಲ್ಲಿ ಈ ರೀತಿಯ ಬೆಳವಣಿಗೆಗಳು ತೀರಾ ಅಸಹ್ಯಕರವಾದವು. ಈ ಬರಹದ ಶೀರ್ಷಿಕೆ ಆಚರಣೆ – ಅನುಕರಣೆ – ಅನುರಣನೆ. ನಾವು ಯಾವುದೇ ಮಹನೀಯರನ್ನು ಗೌರವಿಸುತ್ತೇವೆ ಎಂದಲ್ಲಿ ಅವರ ಫೋಟೋಗಳಿಗೆ ಹೂವು ಸಮರ್ಪಿಸಿ ಆಚರಿಸುವಂತದಲ್ಲ, ಹಾಗೆ ಮಾಡಿದಲ್ಲಿ ಇದು ಆಚರಣೆ. ಅವರ ತತ್ವಾದರ್ಶಗಳನ್ನು ನಾವು ಅನುಷ್ಠಾನಗೊಳಿಸಲು ಪ್ರಯತ್ನಿಸಬೇಕು. ಇದು ಅನುಕರಣೆ. ಈಗೆ ಮಾಡುತ್ತಾ ಹೋದಲ್ಲಿ ಅಂತ ಮಹನೀಯರು ನಮ್ಮ ನಡೆ ನುಡಿಗಳಲ್ಲಿ ಗೋಚರಿಸುತ್ತ ಹೋಗುತ್ತಾರೆ. ನಮ್ಮ ದೇಹ ಮತ್ತು ಆತ್ಮವು ಅವರ ತತ್ವಗಳಲ್ಲಿ ಸಮ್ಮಿಲನಗೊಂಡು ನಮ್ಮ ಸರ್ವವೂ ಅವರ ಸಂದೇಶವನ್ನೇ ಧ್ವನಿಸುತ್ತದೆ, ಇದು ಅನುರಣನೆ. ಈ ಮೂರೂ, ಉಪಾಸನೆಯ ಮೂರು ಹಂತಗಳು; ಪೂಜ್ಯರೆನಿಸಿದ ಮಹನೀಯರನ್ನು ತಲುಪುವ ವಿಧಾನಗಳು.

ಯಾವುದೇ ಮಹನೀಯರ ಜಯಂತಿಯ ಆಚರಣೆ ಸರ್ಕಾರ ಅಥವಾ ಆಯಾ ಜಾತಿಯ ಸಮುದಾಯಗಳಿಗಷ್ಟೇ ಸೀಮಿತವಾಗದೆ ಸರ್ವರೂ ಆಚರಿಸುವಂತಾಗಬೇಕು. ಜಯಂತಿಗಳ ಆಚರಣೆಯಲ್ಲಿ ಮಹನೀಯರ ತತ್ವ – ಸಂದೇಶಗಳ ಮೆರವಣಿಗೆ ಹೊರಡಬೇಕು. ನಾವು ಅಜಾಗರೂಕರಾದರೆ ಜಯಂತಿಗಳ ಆಚರಣೆಯ ವಿಷಯದಲ್ಲಿ ನಮ್ಮ ಮುಂದಿನ ಪೀಳಿಗೆಗೆಒಂದು ೀ ಕೆಟ್ಟ ಸಂಪ್ರದಾಯವನ್ನು ಕೊಡುಗೆಯಾಗಿ ನೀಡಿ ಹೋಗಲಿದ್ದೇವೆ. ಯೋಚಿಸಿ.

ಪದಬಂಧ

● ಸಿ.ರವಿಶಂಕರ ಶಾಸ್ತ್ರಿ, ದಂಬೆ

■	1	■	2	■	3	■	4	■
5				■	6			
■		■	7	8		■		■
9		10	■		■	11		
■	■	12		■	13		■	■
14	15		■	16	■	17	18	
■		■	19		20	■		■
21				■	22			
■		■		■		■		■

ಎಡದಿಂದ ಬಲಕ್ಕೆ

5. ಬೆಳಗು ಅಥವಾ ಹೊಳೆ (4)
6. ಎಷ್ಟು ಬೇಕೋ ಅಷ್ಟೇ ಮಾತನಾಡುವವನು (4)
7. ಬಾಲಕ (3)
9. ಕೆಳಕ್ಕೆ ಬಿದ್ದ ಅಥವಾ ಧರ್ಮವನ್ನು ಬಿಟ್ಟವನು (3)
11. ಖುಷಿಗೆ ಮತ್ತೊಂದು ಹೆಸರು (3)
12. ಕೋಪಗೊಂಡಂತಿರುವ ಶಿವ (2)
13. ಪ್ರಾಣವು ಕೊನೆಗೆ ದೀರ್ಘವಾಗಿದೆ (2)
14. ಅಗಲವಾದ ಪಾತ್ರೆ (3)
17. ಹತೋಟಿಯಲ್ಲಿ ಮನವಿದೆ (3)
19. ಅಗಸನಿಗೆ ಕಾಣಿಸಿದ ಆಕಾಶ 3)
21. ಸೈನಿಕರು ನಡೆಸುವ ಕಸರತ್ತು (4)
22. ಕಾಗದ ಪಾತ್ರಗಳಲ್ಲಿ ಹಾಕುವ ಸಹಿ (4)

ಮೇಲಿಂದ ಕೆಳಕ್ಕೆ

1. ದರೋಡೆ ಅಥವಾ ಸುಲಿಗೆ (4)
2. ಅಷ್ಟ ಸರ್ಪಗಳಲ್ಲಿ ಒಂದು (3)
3. ಕತ್ತಲು ಅಥವಾ ಅಜ್ಞಾನ (3)
4. ಸಂಸ್ಕೃತದಿಂದ ಬಂದಿರುವ ಒಳ್ಳೆಯ ಮಾತು (4)
8. ಹುಡುಕುವಿಕೆ ಅಥವಾ ಪರಿಶೀಲನೆ (2)
10. ಖುಣಿಯಾಗಿರುವ ಯುವತಿ (3)
11. ವಾದ ವಿವಾದ ಅಥವಾ ಚರ್ಚೆ (3)
15. ರಾಯರಿಗೆ ಪ್ರಿಯವಾದ ವಾರ (4)
16. ಸಹವಾಸ ಎರಡೇ ಅಕ್ಷರದಲ್ಲಿ (2)
18. ಮರದ ನಡುವೆ ಸಿಲುಕಿದ ಭ್ರಮರಿ (4)
19. ಗಡಿಬಿಡಿ, ಅವಸರ (3)
20. ಸರದ ನಡುವೆ ಸಿಲುಕಿದ ಸಲುಗೆ (3)

ಸರಿಯುತ್ತರಗಳು

ಎಡದಿಂದ ಬಲಕ್ಕೆ
5. ಪ್ರಕಾಶಿಸು 6. ಮಿತಭಾಷಿ 7. ಕಿಶೋರ 9. ಪತಿತ 11. ಸಂತಸ 12. ರುದ್ರ 13. ಜೀವಾ 14. ಬೋಗುಣಿ 17. ದಮನ 19. ಆಗಸ 21. ಕವಾಯತು 22. ದಸಕತ್ತು

ಮೇಲಿಂದ ಕೆಳಕ್ಕೆ
1. ಡಕಾಯಿತಿ 2. ವಾಸುಕಿ 3. ತಿಮಿರ 4. ಸುಭಾಷಿತ 8. ಶೋಧ 10. ತರುಣಿ 11. ಸಂವಾದ 15. ಗುರುವಾರ 16. ಸಂಗ 18. ಮಧುಕರ 19. ಆತುರ 20. ಸದರ

ಪುಟ್ಟ ಹಣತೆಯ ದೊಡ್ಡಗುಣ

ಒಮ್ಮೆ ಸೂರ್ಯ- ಚಂದ್ರ- ತಾರೆ- ಆಕಾಶದ ಮಿಂಚು- ಮಿಂಚು ಹುಳ ಹಾಗೆ ಬೆಳಕು ಕೊಡುವ ಎಲ್ಲರೂ, ನಾನು ಶ್ರೇಷ್ಠ-ತಾನು ಹೆಚ್ಚು ಎಂದು ಬೆಳಕಿನ ವಿಚಾರದ ವಾದ ವಿವಾದ ಮಾಡಿಕೊಂಡು ಬ್ರಹ್ಮ ಲೋಕಕ್ಕೆ ಬಂದರು. ಬ್ರಹ್ಮದೇವ ನಮ್ಮಲ್ಲಿ ಯಾರು ಶ್ರೇಷ್ಠರು ಎಂದು ನೀವೇ ಗುರುತಿಸಬೇಕು ಎಂದು ಒಟ್ಟಾಗಿ ಹೇಳಿದರು. ಬ್ರಹ್ಮ ಯೋಚಿಸಿ ಯಾರನ್ನು ಶ್ರೇಷ್ಠ ಎನ್ನುವುದು. ಹಗಲಿನ ಬೆಳಕು ಸೂರ್ಯ, ರಾತ್ರಿ ಹಾಲಿನಂತ ಬೆಳಕು ಚೆಲ್ಲುವ ಚಂದ್ರ, ಹಾಗೆ ಆಕಾಶದ ತುಂಬಾ ಹೊಳೆಯುವ ತಾರೆಗಳು ಎಲ್ಲವೂ ಅವು ಕೊಡುವ ಬೆಳಕು ಆಯಾ ಸಮಯದಲ್ಲಿ ಆ ಬೆಳಕು ಜಗತ್ತಿಗೆ ಉಪಯುಕ್ತವಾಗಿದೆ. ಹೀಗಿರುವಾಗ ಯಾರು ಹೆಚ್ಚು ಎಂದು ಹೇಳುವುದು ಹೇಗೆ? ಗೊಂದಲವಾಗಿ, ತೀರ್ಮಾನ ಹೇಳಲು ಸಾಧ್ಯವಿಲ್ಲದೆ ಎಲ್ಲರ ಅಭಿಪ್ರಾಯ ಸಂಗ್ರಹಿಸಲು ಸಭೆ ಏರ್ಪಡಿಸಿ ದೇವಲೋಕದವರನ್ನು ಸಭೆಗೆ ಆಹ್ವಾನಿಸಿದನು.

ಸಭೆಗೆ ಇಂದ್ರ, ವರುಣ, ಅಗ್ನಿ, ಗಂಧರ್ವರು, ಅಪ್ಸರೆಯರು ಎಲ್ಲರೂ ಸೇರಿದರು. ಮತ್ತು ಬೆಳಕಿನ ಸ್ಪರ್ಧೆಯಲ್ಲಿ ಇರುವವರನ್ನು ಬರಲು ಆಹ್ವಾನಿಸಲಾಯಿತು. ಅದರಂತೆ, ಸೂರ್ಯ, ಚಂದ್ರ, ತಾರೆ, ನಕ್ಷತ್ರಗಳು, ನಭೊ ಮಂಡಲದ ಪ್ರತಿನಿಧಿಗಳಾಗಿ ಬಂದರು. ಭೂಮಿಯ ಪ್ರತಿನಿಧಿಯಾಗಿ ಮಿಂಚು ಹುಳ ಸ್ಪರ್ಧೆಗೆ ಬಂದಿತ್ತು.

ಸಭೆ ಆರಂಭವಾಯಿತು ಬ್ರಹ್ಮ ಮಿಂಚು ಹುಳಕ್ಕೆ, ಭೂಮಿಯ ಪ್ರತಿನಿಧಿಯಾಗಿ ನೀನೊಬ್ಬನೇ ಬಂದಿರುವೆಯಾ? ಇನ್ನಾರೂ ಇಲ್ಲವೇ? ಎಂದು ಕೇಳಿದಾಗ ಸಭೆಯಲ್ಲಿದ್ದ ಕೆಲವರು ಎಲ್ಲರ ಮನೆಗಳ ಬೆಳಗುವ ''ಹಣತೆ'' ಬಂದಿಲ್ಲವೇ ಎಂದರು. ಮಿಂಚು ಹುಳ ಹೇಳಿತು, ನಾನು ಹೊರಡುವ ಮುನ್ನ ಹಣತೆಯನ್ನು ಸಭೆಗೆ ಬರು ವಂತೆ ಕರೆದೆ. ಆದರೆ ಹಣತೆ ಹೇಳಿತು. ನಾನು ಈ ಸ್ಪರ್ಧೆಗೆ ಭಾಗವಹಿಸಬೇಕೋ ಬೇಡವೋ ನನಗೆ ಗೊತ್ತಿಲ್ಲ. ನೀನು ಹೋಗಿ ಬಾ ಎಂದು ನನ್ನನ್ನು ಕಳಿಸಿತು ಎಂದಿತು. ಹಣತೆಯು ಈ ಸಭೆಗೆ ಪ್ರತಿನಿಧಿಯಾಗಿ ಬರುವ ಎಲ್ಲಾ ಅರ್ಹತೆ ಇದೆ ಎಂದು ಬ್ರಹ್ಮದೇವ ಹಣತೆಗೆ ಕರೆ ಕಳಿಸಿದನು.

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ಸಭೆಯಲ್ಲಿ ವಿಷಯ ಮಂಡಿಸುವ ಅಧಿಕಾರ ಮೊದಲು ಸೂರ್ಯ, ಚಂದ್ರ ತಾರೆಯರಿಗೆ ದೊರಕಿತು ಅವರೆಲ್ಲ ತಮ್ಮ ಬಗ್ಗೆ ಅಪರಿಮಿತವಾಗಿ ಹೇಳಿಕೊಂಡು ತಮ್ಮಿಂದಲೇ ಭೂಮಿಗೆ ಬೆಳಕು ಎಂದು ಪ್ರತಿಪಾದಿಸಿದರು.

ಹಣತೆ ಮುಂದೆ ಬರಲಿಲ್ಲ. ಬ್ರಹ್ಮ ಹಣತೆಯನ್ನು ಕರೆದು ನೀನು ಏನಾದರೂ ವಾದ ಮಂಡಿಸು ಎಂದನು. ಹಣತೆ ಹೇಳಿತು ನನಗೆ ವಾದ ಮಂಡಿಸಲು ಆಸೆ ಇಲ್ಲ. ನಾನು ಶ್ರೇಷ್ಠ ಅಥವಾ ಕನಿಷ್ಠನು ಅಲ್ಲ. ನಾನು ನನ್ನ ಕೆಲಸ ಮಾಡುತ್ತಿರುವೆ. ನನ್ನನ್ನು ನಾನೇ ಸುಡುತ್ತಾ ಬೆಳಕು ಕೊಡುವುದರಲ್ಲಿ ನನಗೆ ಬಹಳ ತೃಪ್ತಿ ಇದೆ. ನನ್ನದು ಕಡಿಮೆ ಬೆಳಕಾದರೂ ನನ್ನನ್ನು ನಂಬಿ ದೀಪ ಬೆಳಗಿಸಿದವರಿಗೆ ನಾನು ಬೆಳಕು ಕೊಡುತ್ತೇನೆ. ನನ್ನ ಬೆಳಕು ಸಾಕು ಎನ್ನುವ ತನಕ ಸಂತೋಷದಿಂದ ಬೆಳಕು ಕೊಡುತ್ತೇನೆ. ಬೆಳಕು ಸಾಕು ಎಂದರೆ ನನ್ನ ಬೆಳಕನ್ನು ನಿಲ್ಲಿಸುವೆ. ಸೂರ್ಯ- ಚಂದ್ರ -ನಕ್ಷತ್ರಗಳು ಬೇಡ ಎಂದರೆ ಅವರು ಬೆಳಕನ್ನು ನಿಲ್ಲಿಸಲು ಆಗುವುದಿಲ್ಲ. ಜನರಿಗೆ ಎಷ್ಟು ಬೇಕು, ಎನ್ನುವುದರ ಅರಿವಿಲ್ಲದೆ ಅವರು ಬೆಳಕನ್ನು ಕೊಡುತ್ತಾರೆ. ನಾನು ಇಲ್ಲದಿದ್ದರೆ ಕತ್ತಲೆಯಲ್ಲಿ ಮನುಷ್ಯನ ಬದುಕು ಹೇಗೆ ಇರುತ್ತದೆ ಊಹಿಸಲು ಸಾಧ್ಯವಿಲ್ಲ. ನಾನು ಎಲ್ಲಾ ಸಮಯದಲ್ಲೂ ಮನುಷ್ಯರಿಗೆ ಬೇಕು. ಹಬ್ಬ ಹರಿ ದಿನಗಳಲ್ಲಿ, ಸಭೆ ಸಮಾರಂಭಗಳಲ್ಲಿ ಹಾಗೂ ಪ್ರತಿನಿತ್ಯ ಎಲ್ಲರ ಮನೆಯಲ್ಲೂ ಕತ್ತಲಾದಾಗ ಬೆಳಗುವ ಬೆಳಕು ನಾನು. ನಾನು ಆದಿಯಿಂದಲೂ ಇರುವೆ ಎಂದೆಂದಿಗೂ ಇರುವೆ. ಚಾಚೂ ತಪ್ಪದೇ ಕರ್ತವ್ಯ ಮಾಡುತ್ತೇನೆ. ನಾನೇ ಶ್ರೇಷ್ಠ ಎಂಬ ಅಹಂ ಇಲ್ಲ. ನನ್ನೊಳಗೆ ನಾನು ಉರಿದು ಬೆಳಕು ಕೊಡುವುದರಲ್ಲಿ ಆನಂದವಿದೆ. ಅದು ನನಗೆ ಭಗವಂತ ಕೊಟ್ಟ ಕೊಡುಗೆ ಎಂದುಕೊಂಡಿರುವೆ ಎಂದು ಶಿರಬಾಗಿ ನಮಸ್ಕರಿಸಿತು.

ಎಲ್ಲರಿಗೂ ಆಗ ಹಣತೆಯ ಬೆಳಕೇ ಶ್ರೇಷ್ಠ ಎಂದು ಮನವರಿಕೆಯಾಯಿತು. ನಾವು ಎಷ್ಟೇ ಸಾಧನೆ ಮಾಡಿದರೂ ನಮ್ಮಲ್ಲಿ ವಿನಯವಿಲ್ಲದಿದ್ದರೆ ಆ ಸಾಧನೆಗೆ ಬೆಲೆ ಇಲ್ಲ.

ತಿಳಿಯಲಾರದ್ದನ್ನು ತಿಳಿಯುವುದು

ಕೃಷ್ಣ ತನ್ನ ಪರಮ ಪ್ರಕೃತಿಯನ್ನು ವಿಶ್ವವನ್ನು ಬೆಂಬಲಿಸುವ ಜೀವನ ಅಂಶ ಎಂದು ವರ್ಣಿಸಿದ್ದಾನೆ.(7.5) ಹಾಗೂ ಸುಂದರ ಮಾಲೆಯನ್ನಾಗಿ ಮಾಡಲು ಮಣಿಗಳನ್ನು ಜೋಡಿಸುವ ದಾರದ ಉದಾಹರಣೆ ಕೊಡುತ್ತಾನೆ(7.7). ವಿವಿಧ ವ್ಯಾಖ್ಯೆಗಳನ್ನು ನೀಡಲು ಇನ್ನೂ ಅನೇಕ ಉದಾಹರಣೆಗಳನ್ನು ನೀಡುತ್ತಾನೆ.

ಈ ಜೀವನಾಂಶವನ್ನು ವಿವರಿಸುವಾಗ ಈ ಮೊದಲು ಕೃಷ್ಣ ಹೇಳಿದ್ದಾನೆ : ಇದನ್ನು ಯಾರು ಅರಿತಿಲ್ಲ ಬಹಳ ಜನರು ಬಹಳ ರೀತಿಯಲ್ಲಿ ವರ್ಣಿಸುತ್ತಾರೆ ಅಷ್ಟೇ (2.29). ಇಲ್ಲಿ ಯಾರು ಎನ್ನುವುದು ಯಾರೋ ಒಬ್ಬನನ್ನು ಸೂಚಿಸುತ್ತದೆ ಅವನು ಇಂದ್ರಿಯಗಳ ಮೂಲಕ ಇದನ್ನು ತಿಳಿಯುವ ಪ್ರಯತ್ನ ಮಾಡುತ್ತಾನೆ. ಆದರೆ ಈ ಜೀವನಾಂಶ ಇಂದ್ರಿಯಗಳನ್ನು ಮೀರಿ ಇದ. ಈ ಜೀವನಾಂಶವನ್ನು ವಿವರಿಸುವ ಈ ಕೆಳಗಿನ ಶ್ಲೋಕಗಳನ್ನು ತಿಳಿಯುವಾಗ ಈ ಸತ್ಯವನ್ನು ಗಮನಿಸಬೇಕು.

ಅವನು ಹೇಳುತ್ತಾನೆ ನಾನು ನೀರಿನಲ್ಲಿ ರಸ, ಸೂರ್ಯ ಚಂದ್ರರಲ್ಲಿ ಬೆಳಕು, ವೇದಗಳಲ್ಲಿ ಪವಿತ್ರ ಶಬ್ದವಾದ ಪ್ರಣವಾಕಾರ (ಓಂ), ಆಕಾಶದಲ್ಲಿ ಶಬ್ದ, ಹಾಗೂ ಪುರುಷರಲ್ಲಿ (7.8) ಪೌರುಷ ರಸವನ್ನು ಸಾಮಾನ್ಯವಾಗಿ ಸ್ವಾದ ಹಾಗೂ ರಸವಂತಿಕೆ ಎಂದು ಹೇಳುತ್ತಾರೆ. ಆದರೆ ಇವೆರಡೂ ಶಬ್ದಗಳು ಮೂಲ ಅರ್ಥವನ್ನು ಕೊಡುವುದಿಲ್ಲ ಅದು ಜೀವವನ್ನು ಪೋಷಿಸುವ ನೀರಿನ ಸಾಮರ್ಥ್ಯ ಎಂದು ಕೃಷ್ಣ ಹೇಳುತ್ತಾನೆ. ಹಾಗೆಯೇ ಆಕಾಶದಲ್ಲಿಯ ಶಬ್ದವು ಸಂಕೇತಗಳನ್ನು ಒಯ್ಯುವ ಆಕಾಶದ ಸಾಮರ್ಥ್ಯ ವನ್ನು ಸೂಚಿಸುತ್ತದೆ. ಅವನು ಮುಂದುವರಿದು ಹೇಳುತ್ತಾನೆ ನಾನು ಭೂಮಿಯ ಸುವಾಸನೆ, ಬೆಂಕಿಯ ತೇಜಸ್ಸು, ಎಲ್ಲ ಜೀವಿಗಳಲ್ಲಿರುವ ಪ್ರಾಣ, ಸನ್ಯಾಸಿಯಲ್ಲಿಯ ಶಿಸ್ತು(7.9) ನಾನು ಜಾಣರಲ್ಲಿ ಜಾಣತನ, ಭವ್ಯತೆಯಲ್ಲಿ ಉಜ್ವಲತೆ(7.10), ನಾನು ಆಸೆ ಮತ್ತು ಮೋಹದಿಂದ ಮುಕ್ತವಾಗಿರುವ ಬಲ ಹಾಗೂ ಶಕ್ತಿ, ನಾನು ಧರ್ಮಕ್ಕೆ ವಿರುದ್ಧವಲ್ಲದ ಆಸೆ (7.11). ಪ್ರೇಮವಿರಲಿ, ಯುದ್ಧವಿರಲಿ ಯೋಗದಲ್ಲೇ (ಧರ್ಮದಲ್ಲಿ) ಎಲ್ಲವೂ ಸಮರಸವಾಗಿರುತ್ತದೆ ಎಂದು ಕೃಷ್ಣ ಈ ಮೊದಲು ತಿಳಿಸಿರುತ್ತಾನೆ. (2.50) ಎಲ್ಲವನ್ನು ಆವರಿಸಿರುವ ಅಸ್ತಿತ್ವ ತನ್ನನ್ನು ತಾನೇ ವರ್ಣಿಸಿಕೊಳ್ಳುವುದಾದರೆ ಶಬ್ದಗಳು ಸಾಲುವುದಿಲ್ಲ ಇಲ್ಲಿ ನಾವು ಕಾಣುವುದು ಅದನ್ನೇ. ಇಂದ್ರಿಯಾತೀತನಾಗಿರುವ ಪರಮಾತ್ಮನನ್ನು ತಿಳಿಯಲು ಸಹಾಯ ಮಾಡುವ ಕೆಲವು ಉದಾಹರಣೆಗಳು ಇವಾಗಿವೆ.



ನಿತ್ಯ ಜೀವನದಲ್ಲಿ ಭಗವದ್ಗೀತೆ

ಕೆ.ಶಿವಪ್ರಸಾದ್
ಹಿರಿಯ ಐಎಎಸ್ ಅಧಿಕಾರಿ

ನೀವೂ ಬರೆಯಬಹುದು

ನಮ್ಮ ವಿಳಾಸ: ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098

e-mail: vishwavanimagazine@gmail.com

ಅಂಕ ಪಟ್ಟಿ

	ಪಂದ್ಯ	ಗೆಲುವು	ಸೋಲು	ಅಂಕ
ಬೆಂಗಳೂರು	11	08	03	16
ಮುಂಬೈ	11	07	04	14
ಗುಜರಾತ್	10	07	03	14
ಪಂಜಾಬ್	10	06	03	13
ಡೆಲ್ಲಿ	10	06	04	12
ಕೋಲ್ಕತ್ತಾ	11	05	05	11
ಲಖನೌ	10	05	05	10
ರಾಜಸ್ಥಾನ್	12	03	09	06
ಹೈದರಾಬಾದ್	10	03	07	06
ಚೆನ್ನೈ	11	02	09	04

ಇಂದಿನ ಪಂದ್ಯ

7.30 PM

ಸನ್ ರೈಸರ್ಸ್ ಹೈದರಾಬಾದ್ VS ಡೆಲ್ಲಿ ಕ್ಯಾಪಿಟಲ್ಸ್

ರಾಜೀವ್ ಗಾಂಧಿ ಸ್ಟೇಡಿಯಂ ಹೈದರಾಬಾದ್

‘ಆರ್‌ಸಿಬಿ ವಿರುದ್ಧದ ಬೆಂಗಳೂರಿನ ಪಂದ್ಯದ ಸೋಲಿನ ಹೊಣೆಯನ್ನು ನಾನೇ ಹೊತ್ತಿದ್ದೇನೆ. ನಾನು ಕ್ರೀಸ್‌ಗೆ ಇಳಿದಾಗ ಎದುರಿಸಿದ ಪ್ರತಿ ಎಸೆತಗಳಲ್ಲಿ ರನ್ ಅಗತ್ಯವಿತ್ತು, ಹಾಗಾಗಿ ಒತ್ತಡವನ್ನು ಕಡಿಮೆ ಮಾಡಲು ಒಂದೆರಡು ಎಸೆತಗಳನ್ನು ದೊಡ್ಡ ಹೊಡೆತಗಳಾಗಿ ಪರಿವರ್ತಿಸಬೇಕಿತ್ತು. ಕೆಳಮಟ್ಟದಲ್ಲಿ ಬರುವ ಫುಲ್‌ಟಾಸ್ ಎಸೆತಗಳನ್ನು ಹೆಚ್ಚಿನ ಬ್ಯಾಟರ್‌ಗಳು ಸಮರ್ಥವಾಗಿ ಎದುರಿಸಲಾರರು, ಆದರೆ ಈಗಿನ ಬ್ಯಾಟರ್‌ಗಳು ಅದನ್ನು ಅಭ್ಯಾಸ ಮಾಡಬೇಕಿದೆ. ತಮ್ಮ ತಂಡದ ಬ್ಯಾಟರ್‌ಗಳೂ ಅದೇ ರೀತಿ ವೈಫಲ್ಯಗೊಂಡರು. ಜಡೇಜ ಉತ್ತಮ ಹೊಡೆತಗಳನ್ನು ಪ್ರಯೋಗಿಸಿದರೂ ನಾವು ಬ್ಯಾಟಿಂಗ್‌ನಲ್ಲಿ ಹಿನ್ನಡೆ ಅನುಭವಿಸಿದ್ದೇವೆ. ಆ ಕಾರಣದಿಂದಾಗಿ ಒಟ್ಟಾರೆ ನಮಗೆ ಬೆಂಗಳೂರಿನ ಪಂದ್ಯದಲ್ಲಿ ಸೋಲಾಯಿತು’

-ಎಂ ಎಸ್ ಧೋನಿ ಸಿಎಸ್‌ಕೆ ನಾಯಕ

ಸ್ಕೋರ್ ಬೋರ್ಡ್

ಕೋಲ್ಕತ್ತಾ ನೈಟ್ ರೈಡರ್ಸ್ 206/4 (20 ಓವರ್)

ಕೋಲ್ಕತ್ತಾ ನೈಟ್ ರೈಡರ್ಸ್		ರನ್	ಎಸೆತ
ಗುರ್ಬಾಜ್	ಕಾಟ್ ಹೆಟ್ಮೆಯರ್, ಬೌಲರ್ ತೀಕ್ಷಣ	35	25
ನರೇನ್	ಬೌಲ್ಡ್-ಬೌಲರ್ ಯುದ್ಧವೀರ್	11	9
ರಹಾನೆ	ಕಾಟ್ ಜುರೆಲ್, ಬೌಲರ್ ಪರಾಗ್	30	24
ಎ.ರಘುವಂಶಿ	ಕಾಟ್-ಸಬ್ ಅಶೋಕ್, ಬೌಲರ್ ಆರ್ಚರ್	44	31
ಎ.ರಸೆಲ್	ನಾಟೌಟ್	57	25
ರಿಂಕು	ನಾಟೌಟ್	19	6

ರಾಜಸ್ಥಾನ್ ರಾಯಲ್ಸ್	ಓವರ್	ರನ್	ವಿಕೆಟ್
ಆರ್ಚರ್	4	30	1
ಯುದ್ಧವೀರ್	2	26	1
ತೀಕ್ಷಣ	4	41	1
ಎ.ಮಧ್ವಲ್	3	50	0
ಹಸರಂಗ	4	35	0
ಪರಾಗ್	3	21	1

ಕೋಲ್ಕತ್ತಾ ನೈಟ್ ರೈಡರ್ಸ್	ಓವರ್	ರನ್	ವಿಕೆಟ್
ಅರೋರಾ	4	50	1
ಮೊಯಿನ್	3	43	2
ಹರ್ಷಿತ್	4	41	2
ವರುಣ್	4	32	2
ನರೇನ್	4	27	0
ರಸೆಲ್	1	11	0

ರಾಜಸ್ಥಾನ್ ರಾಯಲ್ಸ್ 205/8 (20 ಓವರ್)

ರಾಜಸ್ಥಾನ್ ರಾಯಲ್ಸ್		ರನ್	ಎಸೆತ
ಜೈಸ್ವಾಲ್	ಕಾಟ್ ರಿಂಕು, ಬೌಲರ್ ಮೊಹಿನ್	34	21
ವೈಭವ್	ಕಾಟ್ ರಹಾನೆ, ಬೌಲರ್ ಅರೋರಾ	4	2
ರಾಥೋರ್	ಕಾಟ್ ರಸೆಲ್, ಬೌಲ್ಡ್ ಮೊಹಿನ್	0	5
ಪರಾಗ್	ಕಾಟ್ ಅರೋರಾ, ಬೌಲರ್ ರಾಣಾ	95	45
ಜುರೆಲ್	ಬೌಲ್ಡ್-ಬೌಲರ್ ವರುಣ್	0	1
ಹಸರಂಗ	ಬೌಲ್ಡ್-ಬೌಲರ್ ವರುಣ್	0	2
ಹೆಟ್ಮೆಯರ್	ಕಾಟ್ ನರೇನ್, ಬೌಲರ್ ಹರ್ಷಿತ್	29	23
ಎಸ್.ದುಬೆ	ನಾಟೌಟ್	25	14
ಆರ್ಚರ್	ರನೌಟ್ (ಅರೋರಾ)	12	8

ಕೆಕೆಆರ್ ಪ್ಲೇ ಆಫ್ ಆಸೆ ಇನ್ನೂ ಜೀವಂತ | ಒಂದು ರನ್ ರೋಚಕ ಗೆಲುವು

ರಾಜಸ್ಥಾನ ವಿರುದ್ಧ ಕೋಲ್ಕತ್ತಾ ಸವಾರಿ

ಕೋಲ್ಕತ್ತಾ: ಆ್ಯಂಡ್ರೆ ರಸೆಲ್ (57 ಅಜೇಯ) ಬ್ಯಾಟಿಂಗ್ ಅಬ್ಬರದ ನೆರವಿನಿಂದ ಕೋಲ್ಕತಾ ನೈಟ್ ರೈಡರ್ಸ್ ತಂಡವು ಐಪಿಎಲ್‌ನಲ್ಲಿ ಭಾನುವಾರ ನಡೆದ ರಾಜಸ್ಥಾನ್ ರಾಯಲ್ಸ್ ವಿರುದ್ಧದ ಪಂದ್ಯದಲ್ಲಿ ಒಂದು ರನ್‌ನ ರೋಚಕ ಗೆಲುವನ್ನು ಸಾಧಿಸಿ ಪ್ಲೇ ಆಫ್ ಆಸೆಯನ್ನು ಇನ್ನೂ ಜೀವಂತವಾಗಿ ಉಳಿಸಿಕೊಂಡಿದೆಯಲ್ಲದೆ, ಅಂಕಪಟ್ಟಿಯಲ್ಲಿ ಲಕ್ನೋ ತಂಡವನ್ನು ಹಿಂದಿಕ್ಕಿ 6ನೇ ಸ್ಥಾನಕ್ಕೇರಿದೆ. ಟೂರ್ನಿಯಲ್ಲಿ 8ನೇ ಸೋಲು ಅನುಭವಿಸಿದ ರಾಜಸ್ಥಾನ ತಂಡವು ಅಂಕ ಪಟ್ಟಿಯಲ್ಲಿ 9ನೇ ಸ್ಥಾನಕ್ಕೆ ಕುಸಿಯಿತು.

ಇಲ್ಲಿನ ಈಡನ್ ಗಾರ್ಡನ್ಸ್ ಮೈದಾನದಲ್ಲಿ ನಡೆದ ನಿರ್ಣಾಯಕ ಪಂದ್ಯದಲ್ಲಿ ಟಾಸ್ ಗೆದ್ದು ಬ್ಯಾಟಿಂಗ್ ಆಯ್ದುಕೊಂಡ ಕೆಕೆಆರ್ ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳ ಆಕ್ರಮಣಕಾರಿ ಬ್ಯಾಟಿಂಗ್ ನೆರವಿನಿಂದ 4 ವಿಕೆಟ್‌ಗೆ 206 ರನ್ ಪೇರಿಸಿತು. ಗುರಿ ಬೆನ್ನಟ್ಟಿದ ರಾಜಸ್ಥಾನ ತಂಡವು 8 ವಿಕೆಟ್ ನಷ್ಟಕ್ಕೆ 205 ರನ್ ಗಳಿಸಿ ವಿರೋಚಿತ ಸೋಲು ಕಂಡಿತು.

ಗುರಿ ಬೆಂಬತ್ತಿದ ವೇಳೆ ರಾಜಸ್ಥಾನ್ ಆರಂಭಿಕ ಆಘಾತ ಎದುರಿಸಿತು. 8 ರನ್ ಆಗುವಷ್ಟರಲ್ಲಿ 2 ವಿಕೆಟ್ ಕಳೆದುಕೊಂಡಿತು. ಸೂರ್ಯವಂಶಿ (4) ಮತ್ತು ಕುನಾಲ್ ಸಿಂಗ್ ರಾಥೋಡ್(0) ಬಹು ಬೇಗ ತಮ್ಮ ವಿಕೆಟ್ ಕಳೆದುಕೊಂಡರು. ಮೂರನೇ ವಿಕೆಟ್‌ಗೆ ಜತೆಯಾದ ನಾಯಕ ಪರಾಗ್ ಮತ್ತು ಜೈಸ್ವಾಲ್ ಕ್ರೀಸ್‌ನಲ್ಲಿ ತಲವೂರಿ ಆಡುವ ಮೂಲಕ ಇನ್ನೇನು ತಂಡಕ್ಕೆ ಇಬ್ಬರೂ ಆಸರೆಯಾಗುತ್ತಾರೆ ಎನ್ನುವಷ್ಟರಲ್ಲಿ ಜೈಸ್ವಾಲ್(34) ವಿಕೆಟ್ ಕೂಡ ಬಿತ್ತು.

ಪರಾಗ್ ಏಕಾಂಗಿ ಹೋರಾಟ: ಜೈಸ್ವಾಲ್ ವಿಕೆಟ್ ಬೀಳುತ್ತಿದ್ದಂತೆ ರಾಜ ಸ್ಥಾನ ತಂಡವು ನಾಟಕೀಯ ಕುಸಿತ ಕಂಡಿತು. ವನಿಂದು ಹಸರಂಗ ಮತ್ತು ಧ್ರುವ ಜುರೇಲ್ ಸೊನ್ನೆ ಸುತ್ತಿ ಪೆವಿಲಿಯನ್ ಸೇರಿದರು. ಒಂದೆಡೆ ಸಹ ಆಟಗಾರರ ವಿಕೆಟ್ ಬೀಳುತ್ತಿದ್ದರೂ ಮತ್ತೊಂದು ತುದಿಯಲ್ಲಿ ದಿಟ್ಟ ಬ್ಯಾಟಿಂಗ್ ಮೂಲಕ ಕೆಕೆಆರ್ ಬೌಲರ್‌ಗಳನ್ನು ಮನಸೋ ಇಚ್ಛೆ ದಂಡಿಸಿದ ರಿಯಾನ್ ಪರಾಗ್ 45 ಎಸೆತಗಳಿಂದ 95 ರನ್ ಬಾರಿಸಿದರು. ಅವರ ಈ ಅಬ್ಬರದ ಬ್ಯಾಟಿಂಗ್ ಇನಿಂಗ್ಸ್‌ನಲ್ಲಿ ಬರೋಬ್ಬರಿ 8 ಸಿಕ್ಸರ್ ಮತ್ತು 6 ಬೌಂಡರಿ ಒಳಗೊಂಡಿತ್ತು. ಶಿಮ್ರಾನ್ ಹೆಟ್‌ಮೇರ್(29) ರನ್ ಗಳಿಸಿದರೆ, ಅಂತಿಮ ಓವರ್‌ನಲ್ಲಿ ಸಿಡಿದು ನಿಂತ ಶುಭಂ ದುಬೆ ಶಕ್ತಿ ಮೀರಿ ಬ್ಯಾಟಿಂಗ್ ನಡೆಸುವ ಮೂಲಕ ರಾಜಸ್ಥಾನ ತಂಡಕ್ಕೆ ಗೆಲುವಿನ ಆಸೆ ಹುಟ್ಟಿಸಿದರೂ, ತಂಡವನ್ನು ಗೆಲುವಿನ ದಡ ಸೇರಿಸಲು ವಿಫಲರಾದರು. ಒಂದು ಎಸೆತಕ್ಕೆ ಮೂರು ರನ್ ಬೇಕಿದ್ದಾಗ ಜೋಫ್ರ ಆರ್ಚರ್ ರನೌಟ್ ಆಗಿ ಒಂದು ರನ್ ಅಂತರದಿಂದ ರಾಜಸ್ಥಾನ ತಂಡವು ಸೋಲು ಕಂಡಿತು. ಕೆಕೆಆರ್ ಪರ ಉತ್ತಮ ಬೌಲಿಂಗ್ ಪ್ರದರ್ಶನ ತೋರಿದ ಮೊಯಿನ್ ಅಲಿ, ಹರ್ಷಿತ್ ರಾಣಾ ಮತ್ತು ವರುಣ್ ಚಕ್ರವರ್ತಿ ತಲಾ 2 ವಿಕೆಟ್ ಕಿತ್ತರು.

ರಸೆಲ್ ಬ್ಯಾಟಿಂಗ್ ಅಬ್ಬರ: ಇದಕ್ಕೂ ಮುನ್ನ ಬ್ಯಾಟಿಂಗ್‌ಗೆ ಇಳಿದ ಕೆಕೆಆರ್ ಪರ ವಿಂಡೀಸ್‌ನ ಸ್ಫೋಟಕ ಬ್ಯಾಟರ್ ಆ್ಯಂಡ್ರೆ ರಸೆಲ್ 25 ಎಸೆತಗಳಿಂದ 6 ಸಿಕ್ಸರ್ ಮತ್ತು 4 ಬೌಂಡರಿ ಸಿಡಿಸಿ ಅಜೇಯ 57 ರನ್ ಬಾರಿಸಿ, ಈ ಐಪಿಎಲ್‌ನಲ್ಲಿ ಮೊದಲ ಅರ್ಧಶತಕ ಸಿಡಿಸಿ ಲಯಕ್ಕೆ ಮರಳಿದರು. ಉಳಿದಂತೆ ಅಂಗ್‌ಕ್ರಿಶ್ ರಘುವಂಶಿ 44, ನಾಯಕ ಅಜಿಂಕ್ಯ ರಹಾನೆ 30 ರನ್ ಕೊಡುಗೆ ಸಲ್ಲಿಸಿದರು.

ಅಂತಿಮ ಹಂತದಲ್ಲಿ ಸಿಡಿದು ನಿಂತ ರಿಂಕು ಸಿಂಗ್ 6 ಎಸೆತಗಳಿಂದ ಅಜೇಯ 19 ರನ್ ಸಿಡಿಸಿ ತಂಡದ ಬೃಹತ್ ಮೊತ್ತಕ್ಕೆ ನೆರವಾದರು. ಆರಂಭಿಕ ಆಟಗಾರ ರಹಮಾನುಲ್ಲಾ ಗುರ್ಬಾಜ್(35) ರನ್ ಗಳಿಸಿದರು.

ರಾಜಸ್ಥಾನ ಪರ ಜೋಫ್ರಾ, ಆರ್ಚರ್, ಯಧುವೀರ್ ಸಿಂಗ್ ಮತ್ತು ಮಹೇಶ್ ತೀಕ್ಷಣ ತಲಾ ಒಂದು ವಿಕೆಟ್ ಕಿತ್ತರು.

ಪರಾಗ್ ಪರಾಕ್ರಮ: ಸತತ 5 ಸಿಕ್ಸರ್

ರಾಜಸ್ಥಾನ ರಾಯಲ್ಸ್ ತಂಡದ ನಾಯಕ ರಿಯಾನ್ ಪರಾಗ್ ಅವರು ಕೋಲ್ಕತ್ತಾ ವಿರುದ್ಧದ ಪಂದ್ಯದಲ್ಲಿ ಭಾನುವಾರ ಒಂದೇ ಓವರ್‌ನಲ್ಲಿ ಐದು ಸಿಕ್ಸರ್‌ಗಳ ಸಾಧನೆ ಮಾಡಿದ್ದಾರೆ. ಗುರಿ ಬೆನ್ನಟ್ಟಿದ ರಾಜಸ್ಥಾನ ತಂಡವು ಒಂದು ಹಂತದಲ್ಲಿ 7.5 ಓವರ್‌ಗಳಲ್ಲಿ 71 ರನ್ನಿಗೆ ಐದು ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತು. ಆಗ ಲೀಲಾಜಾಲವಾಗಿ ಬ್ಯಾಟ್ ಬೀಸಿದ ಪರಾಗ್, ಕೇವಲ 27 ಎಸೆತಗಳಲ್ಲಿ ಅರ್ಧಶತಕದ ಸಾಧನೆ ಮಾಡಿದರು. ಅಷ್ಟೇ ಅಲ್ಲದೆ ಮೊಯಿನ್ ಅಲಿ ಎಸೆದ ಇನಿಂಗ್ಸ್‌ನ 13ನೇ ಓವರ್‌ನಲ್ಲಿ ಐದು ಸತತ ಸಿಕ್ಸರ್‌ಗಳನ್ನು ಬಾರಿಸಿ ಅಬ್ಬರಿಸಿ, ವೆಸ್ಟ್ ಇಂಡೀಸ್‌ನ ಕ್ರಿಸ್ ಗೇಲ್ ಅವರೊಂದಿಗೆ ಎಲೈಟ್ ಪಟ್ಟಿಗೆ ಸೇರಿದ್ದಾರೆ.

ಐಪಿಎಲ್‌ನ ಒಂದೇ ಓವರ್: ಸತತ ಐದು ಸಿಕ್ಸರ್‌ಗಳ ಸರದಾರರು	
ಕ್ರಿಸ್ ಗೇಲ್:	2012 (ರಾಹುಲ್ ಶರ್ಮಾ ವಿರುದ್ಧ)
ರಾಹುಲ್ ತೆವಾಟಿಯಾ:	2020 (ಕಾಟೆಲ್ ವಿರುದ್ಧ)
ರವೀಂದ್ರ, ಜಡೇಜ:	2021 (ಹರ್ಷಲ್ ಪಟೇಲ್ ವಿರುದ್ಧ)
ರಿಂಕು ಸಿಂಗ್:	2023 (ಯಶ್ ದಯಾಳ್ ವಿರುದ್ಧ)
ರಿಯಾನ್ ಪರಾಗ್:	2025 (ಮೊಯಿನ್ ಅಲಿ ವಿರುದ್ಧ)

ಬೌಲರ್‌ಗಳನ್ನು ಬೆಂಡೆತ್ತಿದ ಪ್ರಭ್‌ಸಿಮ್ರನ್ ಸಿಂಗ್ | ಪಂಜಾಬ್ ಬ್ಯಾಟರ್‌ಗಳ ಅಬ್ಬರ

ಲಖನೌಗೆ 237 ರನ್‌ಗಳ ಬೃಹತ್ ಗುರಿ

ಧರ್ಮಶಾಲಾ: ಇಲ್ಲಿ ಭಾನುವಾರ ನಡೆದ ಐಪಿಎಲ್ ಟೂರ್ನಿಯ ಪಂದ್ಯದಲ್ಲಿ ಪ್ಲೇ ಆಫ್ ಪ್ರವೇಶದ ಮೇಲೆ ಕಣ್ಣಿಟ್ಟಿರುವ ಪಂಜಾಬ್ ಕಿಂಗ್ಸ್ ತಂಡವು ಸಿಡಿಲಬ್ಬರ ಬ್ಯಾಟಿಂಗ್ ಪ್ರದರ್ಶಿಸಿ 5 ವಿಕೆಟ್ ನಷ್ಟಕ್ಕೆ 236 ರನ್ ಗಳಿಸಿ, ಲಖನೌ ಸೂಪರ್ ಜೈಂಟ್ಸ್ ತಂಡಕ್ಕೆ 237 ರನ್‌ಗಳ ಬೃಹತ್ ಗುರಿ ನೀಡಿದೆ.

ಮೊದಲು ಬ್ಯಾಟಿಂಗ್ ಮಾಡಿದ ಪಂಜಾಬ್ ತಂಡವು ಪ್ರಭ್‌ಸಿಮ್ರನ್ ಸಿಂಗ್ (91), ಶ್ರೇಯಸ್ ಅಯ್ಯರ್ (45), ಜೋಶ್ ಇಂಗ್ಲಿಸ್ (30) ಹಾಗೂ ಶಶಾಂಕ್ ಸಿಂಗ್ (33) ಸ್ಫೋಟಕ ಬ್ಯಾಟಿಂಗ್ ನೆರವಿನಿಂದ 20 ಓವರ್‌ಗಳಲ್ಲಿ 5 ವಿಕೆಟ್ ಕಳೆದುಕೊಂಡು ಭಾರೀ ಮೊತ್ತವನ್ನು ದಾಖಲಿಸಿತು.

ಟಾಸ್ ಸೋತು ಬ್ಯಾಟಿಂಗ್ ಮಾಡಿದ ಪಂಜಾಬ್ ಕಿಂಗ್ಸ್ ತಂಡವು ಮೊದಲ ಓವರ್‌ನಲ್ಲೇ ಪ್ರಿಯಾಂಶ್ (1) ವಿಕೆಟ್ ಬಹುಬೇಗನೇ ಕಳೆದುಕೊಂಡಿತು. 3ನೇ ಕ್ರಮಾಂಕದಲ್ಲಿ ಬಡ್ತಿ ಪಡೆದು ಬಂದ ಜೋಸ್ ಇಂಗ್ಲಿಸ್ 2ನೇ ವಿಕೆಟ್‌ಗೆ ಪ್ರಭ್‌ಸಿಮ್ರನ್ ಸಿಂಗ್ ಜತೆ ಸೇರಿ 22 ಎಸೆತಗಳಲ್ಲಿ 48 ರನ್ ಸೇರಿಸಿದರು. ಇಂಗ್ಲಿಸ್ 14 ಎಸೆತಗಳಲ್ಲಿ 1 ಬೌಂಡರಿ, 4 ಸಿಕ್ಸರ್ ಸಹಿತ 30 ರನ್ ಗಳಿಸಿದ್ದಾಗ ಆಕಾಶ್ ಸಿಂಗ್ ಬೌಲಿಂಗ್‌ನಲ್ಲಿ ಡೇವಿಡ್ ಮಿಲ್ಲರ್‌ಗೆ ಕ್ಯಾಚ್ ಕೊಟ್ಟು ಪೆವಿಲಿಯನ್‌ಗೆ ಹೋದರು.

ನಂತರ ಬಂದ ಶ್ರೇಯಸ್ ಅಯ್ಯರ್ ಕೂಡ ಅಬ್ಬರದಾಟವನ್ನು ಮುಂದುವರಿಸಿದರು. ಅಯ್ಯರ್ ಹಾಗೂ ಪ್ರಭ್‌ಸಿಮ್ರನ್ ಸಿಂಗ್ 47 ಎಸೆತಗಳಲ್ಲಿ 78 ರನ್‌ಗಳ ಜತೆಯಾಟ ನಡೆಸಿದರು. ಅಯ್ಯರ್ 25 ಎಸೆತಗಳಲ್ಲಿ 4 ಬೌಂಡರಿ, 2 ಸಿಕ್ಸರ್ ಸಹಿತ 45 ರನ್ ಗಳಿಸಿ ದಿಗ್ವೇಶ್ ಬೌಲಿಂಗ್‌ನಲ್ಲಿ ಮಯಾಂಕ್ ಯಾದವ್‌ಗೆ ಕ್ಯಾಚ್ ನೀಡಿ ಔಟ್ ಆದರು. ಪ್ರಭ್‌ಸಿಮ್ರನ್ ಸಿಂಗ್ 48 ಎಸೆತಗಳಲ್ಲಿ 6 ಬೌಂಡರಿ, 7 ಸಿಕ್ಸರ್‌ಗಳ ಸಹಿತ 91 ರನ್‌ಗಳಿಸಿ 19ನೇ ಓವರ್‌ನಲ್ಲಿ ದಿಗ್ವೇಶ್ ರಾಥಿ ಬೌಲಿಂಗ್‌ನಲ್ಲಿ ಪೂರನ್‌ಗೆ ಕ್ಯಾಚ್ ನೀಡಿ ಪೆವಿಲಿಯನ್ ಸೇರಿದರು, ಆ ಮೂಲಕ ಅವರು ಕೇವಲ 9 ರನ್‌ಗಳಿಂದ ಶತಕ ವಂಚಿತರಾದರು.

ಕೊನೆಯಲ್ಲಿ ಅಬ್ಬರಿಸಿದ ಶಶಾಂಕ್ ಸಿಂಗ್ 15 ಎಸೆತಗಳಲ್ಲಿ 4 ಬೌಂಡರಿ, 1 ಸಿಕ್ಸರ್ ಸಹಿತ 33 ರನ್ ಗಳಿಸಿ ಹಾಗೂ ಮಾರ್ಕಸ್ ಸ್ಟೋಯಿನಿಸ್ 5 ಎಸೆತಗಳಲ್ಲಿ 15 ರನ್ ಗಳಿಸಿ ಅಜೇಯರಾಗಿ ಉಳಿದರು.

ಲಖನೌ ಸೂಪರ್ ಜೈಂಟ್ಸ್ ತಂಡದ ಪರ ಮೊದಲ ಅವಕಾಶ ಪಡೆದಿದ್ದ ಆಕಾಶ್ ಸಿಂಗ್ 30 ರನ್ ನೀಡಿ 2 ವಿಕೆಟ್, ದಿಗ್ವೇಶ್ ಸಿಂಗ್ ರಾಠಿ 46 ರನ್ ನೀಡಿ 2 ವಿಕೆಟ್, ಪ್ರಿನ್ಸ್ ಯಾದವ್ 43 ರನ್ ಕೊಟ್ಟು 1 ವಿಕೆಟ್ ಪಡೆದರು.

ಲಖನೌಗೆ ಮಾಡು ಇಲ್ಲವೇ ಮಡಿ ಪಂದ್ಯ

ಈ ಸಲದ ಐಪಿಎಲ್ ಮೆಗಾ ಹರಾಜಿನಲ್ಲಿ ಅತ್ಯಂತ ದುಬಾರಿ ಮೌಲ್ಯ ಪಡೆದ ರಿಷಬ್ ಪಂತ್ ನಾಯಕತ್ವದ ಲಖನೌ ಸೂಪರ್ ಜೈಂಟ್ಸ್ ತಂಡಕ್ಕೆ ಭಾನುವಾರದ ಪಂದ್ಯವು ಮಾಡು ಇಲ್ಲವೇ ಮಡಿ ಪಂದ್ಯ ಎಂಬಂತಾಯಿತು. ಶ್ರೇಯಸ್ ನಾಯಕತ್ವದ ಪಂಜಾಬ್ ಕಿಂಗ್ಸ್ ತಂಡವು ಸದ್ಯ ನಾಲ್ಕನೇ ಸ್ಥಾನದಲ್ಲಿದ್ದು ತನ್ನ ಪಾಲಿಗೆ ಉಳಿದಿರುವ ನಾಲ್ಕು ಪಂದ್ಯಗಳ ಪೈಕಿ ಇನ್ನೆರಡರಲ್ಲಿ ಜಯಿಸಿದರೂ ಪ್ಲೇ ಆಫ್ ಹಾದಿ ಸುಗಮವಾಗಲಿದೆ. ಕಳೆದ ವರ್ಷ ಕೋಲ್ಕತ್ತಾ ನೈಟ್‌ರೈಡರ್ಸ್ ತಂಡವು ಶ್ರೇಯಸ್ ನಾಯಕತ್ವದಲ್ಲಿ ಚಾಂಪಿಯನ್ ಆಗಿತ್ತು.

ಚೆನ್ನೈ ವಿರುದ್ಧದ ಆರ್‌ಸಿಬಿ ಪಂದ್ಯ | ಯಶ್ ದಯಾಳ್ ವೃತ್ತಿಜೀವನದಲ್ಲಿ ಮಹತ್ತರ ತಿರುವು

ಕೊಹ್ಲಿಗೆ ದಯಾಳ್ ತಂದೆಯ ಧನ್ಯವಾದ

ಬೆಂಗಳೂರು: ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಮಧ್ಯಮ ವೇಗಿ ಯಶ್ ದಯಾಳ್ ಅವರ ತಂದೆ ಚಂದ್ರಪಾಲ್ ದಯಾಳ್, ತಮ್ಮ ಮಗನ ವೃತ್ತಿಜೀವನದಲ್ಲಿ ತಿರುವು ನೀಡಿದ್ದಕ್ಕಾಗಿ ವಿರಾಟ್ ಕೊಹ್ಲಿಗೆ ಧನ್ಯವಾದ ಅರ್ಪಿಸಿದ್ದಾರೆ. ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧದ ಅಂತಿಮ ಓವರ್‌ನಲ್ಲಿ ಜಯದ ಪಲಿತಾಂಶವನ್ನು ಯಶಸ್ವಿಯಾಗಿ ತಡೆದು ನಿಲ್ಲಿಸಿ, ಆರ್‌ಸಿಬಿಗೆ ಎರಡು ರನ್‌ಗಳ ರೋಚಕ ಗೆಲುವು ದಾಖಲಿಸಿಕೊಟ್ಟ ಯಶ್ ದಯಾಳ್ ಪಂದ್ಯದ ಹೀರೋ ಆಗಿ ಮೆರೆದಿದ್ದರು. ಅವರ ಈ ಸಾಧನೆಗೆ ಆರ್‌ಸಿಬಿ ತಂಡದ ನಾಯಕ ಪಾಟೀದಾರ್ ಮಾತ್ರವಲ್ಲದೆ ಅಭಿಮಾನಿಗಳು ಕೂಡ ಭಾರೀ ಮೆಚ್ಚುಗೆ ವ್ಯಕ್ತಪಡಿಸಿದರು. ಮಗನ ಈ ಸಾಧನೆ ಕಂಡು ಭಾವುಕರಾದ ಚಂದ್ರಪಾಲ್, ಮಗನ ವೃತ್ತಿಜೀವನಕ್ಕೆ ತಿರುವು ಕೊಟ್ಟ ಕೀರ್ತಿ ಕೊಹ್ಲಿಗೆ ಸಲ್ಲುತ್ತದೆ ಎಂದಿದ್ದಾರೆ.

2023ರ ಆವೃತ್ತಿಯ ಐಪಿಎಲ್‌ನಲ್ಲಿ ಗುಜರಾತ್ ಟೈಟಾನ್ಸ್ ತಂಡದ ಆಟಗಾರನಾಗಿದ್ದ ಯಶ್ ದಯಾಳ್ ಅವರ ಒಂದೇ ಓವರ್‌ನಲ್ಲಿ ಕೆಕೆಆರ್‌ನ ರಿಂಕು ಸಿಂಗ್ ಸತತ 5 ಸಿಕ್ಸರ್ ಬಾರಿಸಿ ತಂಡಕ್ಕೆ ಸ್ಮರಣೀಯ ಗೆಲುವು ತಂದುಕೊಟ್ಟಿದ್ದರು. ಅಂದು ಸಿಕ್ಸರ್ ಬಾರಿಸಿದ ರಿಂಕು ಖ್ಯಾತಿ ವಿಶ್ವಕ್ಕೆ ಪರಿಚಯವಾಗಿ, ಅವರು ಭಾರತ ತಂಡದ ಪರ ಆಡುವಂತೆ ಮಾಡಿತ್ತು.

ಸಿಕ್ಸರ್ ಹೊಡೆಸಿಕೊಂಡಿದ್ದ ಯಶ್ ದಯಾಳ್ ಅವರ ಐಪಿಎಲ್ ವೃತ್ತಿ ಜೀವನವೇ ಮುಗಿಯಿತು ಎನ್ನಲಾಗಿತ್ತು. ಗುಜರಾತ್ ಕೂಡ ಮುಂದಿನ ಆವೃತ್ತಿಗೆ ಮುನ್ನ ಅವರನ್ನು ತಂಡದಿಂದ ಕೈಬಿಟ್ಟಿತ್ತು. ಆರ್‌ಸಿಬಿ ತಂಡ ಹರಾಜಿನಲ್ಲಿ ಯಶ್ ದಯಾಳ್ ಅವರನ್ನು 5 ಕೋಟಿ ರು. ನೀಡಿ ಖರೀದಿ ಮಾಡಿತ್ತು. ಈ ವೇಳೆ ಸ್ವತಃ ಆರ್‌ಸಿಬಿ ಅಭಿಮಾನಿಗಳೇ ಯಶ್ ದಯಾಳ್ ಅವರನ್ನು ಖರೀದಿಸಿದ್ದಕ್ಕೆ ಟೀಕೆ ವ್ಯಕ್ತಪಡಿಸಿದ್ದರು, ಆದರೆ ಯಶ್ ದಯಾಳ್ ಇದೀಗ ಆರ್‌ಸಿಬಿಯ ಮ್ಯಾಚ್ ವಿನ್ನಿಂಗ್ ಆಟಗಾರನಾಗಿ ಅಭಿಮಾನಿಗಳ ಪಾಲಿಗೆ ನೆಚ್ಚಿನ ಆಟಗಾರ ಎನಿಸಿಕೊಂಡಿದ್ದಾರೆ.

ಮಗನ ಈ ಸಾಧನೆಗೆ ವಿರಾಟ್ ಕೊಹ್ಲಿ ನೀಡಿದ ಬೆಂಬಲ ಕಾರಣ ಎಂದು ಚಂದ್ರಪಾಲ್ ದಯಾಳ್ ಹೇಳಿದ್ದು, ಆ ಕಾರಣಕ್ಕೆ ಅವರು ಕೊಹ್ಲಿಗೆ ಧನ್ಯವಾದ ತಿಳಿಸಿದರು. ಕಳೆದ ವರ್ಷ ಚಿನ್ನಸ್ವಾಮಿ ಮೈದಾನದಲ್ಲೇ ನಡೆದಿದ್ದ ಚೆನ್ನೈ ಮತ್ತು ಆರ್‌ಸಿಬಿ ನಡುವಣ ಪಂದ್ಯದಲ್ಲಿ ಯಶ್ ದಯಾಳ್ ಅವರು ಧೋನಿ ಮತ್ತು ಜಡೇಜಾರನ್ನು ನಿಯಂತ್ರಿಸಿ ಆರ್‌ಸಿಬಿಗೆ ರೋಚಕ ಗೆಲುವನ್ನು ತಂದುಕೊಟ್ಟಿದ್ದರು. ಈ ಬಾರಿಯೂ ಅವರು ಧೋನಿ ಮತ್ತು ಜಡೇಜಾ ಮುಂದೆ ಮ್ಯಾಜಿಕ್ ಪ್ರದರ್ಶಿಸಿದ ಯಶ್ ದಯಾಳ್, ಚಿನ್ನಸ್ವಾಮಿ ಸ್ಟೇಡಿಯಂದನಲ್ಲಿ ಶನಿವಾರ ನಡೆದ ಪಂದ್ಯದಲ್ಲಿ ಆರ್‌ಸಿಬಿಗೆ ಗೆಲುವನ್ನು ತಂದುಕೊಟ್ಟಿದ್ದಾರೆ.

ಪಾಕಿಸ್ತಾನದಲ್ಲಿ ಐಪಿಎಲ್ ಸ್ಥಗಿತ

ಲಾಹೋರ್: ಪಹಲ್ಗಾಮ್ ಭಯೋತ್ಪಾದಕ ದಾಳಿಯ ನಂತರ ಭಾರತ ಸರಕಾರವು, ಪಾಕಿಸ್ತಾನದ ವಿರುದ್ಧ ಉಗ್ರ ಕ್ರಮಗಳನ್ನು ಕೈಗೊಳ್ಳುವ ಜತೆಗೆ ಡಿಜಿಟಲ್ ದಾಳಿಯನ್ನು ಮಾಡಿತ್ತು. ಪಾಕಿಸ್ತಾನದ ಪ್ರಮುಖ ಕ್ರೀಡಾಳುಗಳ ಹಾಗೂ ಪಾಕಿಸ್ತಾನ ಕ್ರಿಕೆಟ್ ತಂಡದ ಸ್ಟಾರ್ ಆಟಗಾರರ ಸೋಶಿಯಲ್ ಮೀಡಿಯಾ ಖಾತೆಯನ್ನು ಭಾರತದಲ್ಲಿ ಬ್ಯಾನ್ ಮಾಡಲಾಗಿತ್ತು ಮಾತ್ರವಲ್ಲದೆ, ಪಾಕಿಸ್ತಾನದಲ್ಲಿ ನಡೆಯುತ್ತಿರುವ ಪಾಕಿಸ್ತಾನ ಸೂಪರ್ ಲೀಗ್ (ಪಿಎಸ್‌ಎಸ್) ಪ್ರಸಾರವನ್ನು ಭಾರತದಲ್ಲಿ ನಿಷೇಧಿಸಲಾಗಿತ್ತು. ಇದೀಗ ಪಾಕಿಸ್ತಾನ ಕೂಡ ಭಾರತದ ವಿರುದ್ಧ ಡಿಜಿಟಲ್ ದಾಳಿ ನಡೆಸಿದ್ದು, ಐಪಿಎಲ್ ಪಂದ್ಯಾವಳಿಯನ್ನು ಪಾಕಿಸ್ತಾನದಲ್ಲಿ ಪ್ರಸಾರ ಮಾಡುವುದನ್ನು ನಿಷೇಧಿಸಿದೆ ಎಂದು ವರದಿಯಾಗಿದೆ. ಪ್ರಸ್ತುತ ಎರಡೂ ದೇಶಗಳ ಈ ನಿಷೇಧದ ಯಾವಾಗ ಕೊನೆಯಾಗಬಹುದು ಎಂಬುದು ಸ್ಪಷ್ಟವಾಗಿಲ್ಲ. ಹಾಗೆಯೇ ಐಸಿಸಿ ಮತ್ತು ಎಸಿಸಿ ಟೂರ್ನಿಗಳಲ್ಲಿ ಪಾಕಿಸ್ತಾನದ ವಿರುದ್ಧ ಆಡುವುದನ್ನು ನಿಲ್ಲಿಸುವ ಮೂಲಕ ಬಿಸಿಸಿಐ ಪಾಕಿಸ್ತಾನದೊಂದಿಗಿನ ಸಂಬಂಧವನ್ನು ಸಂಪೂರ್ಣವಾಗಿ ಕೊನೆಗೊಳಿಸಬಹುದು ಎಂಬ ವರದಿಳಗಳಿವೆ. ಆ ಕಾರಣಕ್ಕಾಗಿ ಈ ವರ್ಷ ಭಾರತದಲ್ಲಿ ನಡೆಯಲಿರುವ ಏಷ್ಯಾಕಪ್ ಕೂಡ ರದ್ದಾಗುವ ಸಾಧ್ಯತೆ ಇದೆ ಎಂದೂ ಹೇಳಲಾಗುತ್ತಿದೆ.

ಚೀನಾ ಮಡಿಲಿಗೆ ಸುಧೀರ್‌ಮನ್ ಕಪ್

ಷಾಮೆನ್ (ಚೀನಾ): ಆತಿಥೇಯ ಚೀನಾ ತಂಡವು ಭಾನುವಾರ ನಡೆದ ಫೈನಲ್‌ನಲ್ಲಿ 3-1ರಿಂದ ದಕ್ಷಿಣ ಕೊರಿಯಾ ತಂಡವನ್ನು ಸೋಲಿಸಿ ಸುಧೀರ್‌ಮನ್ ಕಪ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ದಾಖಲೆಯ ಓಟವನ್ನು ಮುಂದುವರಿಸಿತು. ಎರಡು ವರ್ಷಕ್ಕೊಮ್ಮೆ ಮಿಶ್ರ ತಂಡ ವಿಭಾಗದಲ್ಲಿ ನಡೆಯುವ ಈ ಟೂರ್ನಿಯನ್ನು ಚೀನಾ 14ನೇ ಬಾರಿ ಗೆದ್ದುಕೊಂಡಿತು. ಈ ಹಿಂದಿನ ಮೂರು ಆವೃತ್ತಿಗಳಲ್ಲಿ ಜಯಭೇರಿ ಬಾರಿಸಿದ್ದ ಚೀನಾ, ನಾಲ್ಕು ಬಾರಿಯ ಚಾಂಪಿಯನ್ ಆಗಿದ್ದ ದಕ್ಷಿಣ ಕೊರಿಯಾ ವಿರುದ್ಧ ಫೈನಲ್‌ನಲ್ಲಿ ಗೆಲ್ಲುವ ನೆಚ್ಚಿನ ತಂಡವೆನಿಸಿತ್ತು. ಮಿಶ್ರ ಡಬಲ್ಸ್‌ನಲ್ಲಿ, ವಿಶ್ವದ ಎರಡನೇ ಕ್ರಮಾಂಕದ ಜೋಡಿ ಫೆಂಗ್ ಯಾನೆ ಮತ್ತು ಹುವಾಂಗ್ ಡಾಂಗ್‌ಪಿಂಗ್ 21-16, 17-21, 21-15ರಿಂದ ಕೊರಿಯಾದ ಸಿಯೊ ಸಿಯುಂಗ್ ಜೇ-ಚೇ ಯು ಜಂಗ್ ಜೋಡಿಯನ್ನು ಒಂದು ಗಂಟೆ 24 ನಿಮಿಷಗಳಲ್ಲಿ ಸೋಲಿಸಿತು. ಆದರೆ ಆ ಮುನ್ನಡೆ ಹೆಚ್ಚುಕಾಲ ಉಳಿಯಲಿಲ್ಲ. ಮಹಿಳಾ ಸಿಂಗಲ್ಸ್‌ನಲ್ಲಿ ವಿಶ್ವದ ಅಗ್ರಮಾನ್ಯ ಆಟಗಾರ್ತಿ ಹಾಗೂ ಒಲಿಂಪಿಕ್ ಚಾಂಪಿಯನ್ ಆನ್ ಸೆ-ಯಂಗ್ 21-17, 21-16 ರಿಂದ ಎರಡನೇ ಕ್ರಮಾಂಕದ ವಾಂಗ್ ಝಿಯಿ (ಚೀನಾ) ಅವರನ್ನು ಸೋಲಿಸಿದರು.

ಗ್ರೆಟ್ಚೆನ್ ವಾಲ್ಶ್ ವಿಶ್ವದಾಖಲೆ

ಮಯಾಮಿ: ಅಮೆರಿಕದ ಗ್ರೆಟ್ಚೆನ್ ವಾಲ್ಶ್ ಅವರು ಫ್ಲಾರಿಡಾದ ಅರ್ಲಾಂಡೊದಲ್ಲಿ ಶನಿವಾರ ನಡೆದ ಟರ್ ಪ್ರೊ ಸ್ವಿಮ್ ಸಿರೀಸ್ ಕೂಟದ ಮಹಿಳೆಯರ 100 ಮೀ. ಬಟರ್ ಫ್ಲೈ ಸ್ಪರ್ಧೆಯ ಹೀಟ್‌ನಲ್ಲಿ 55.09 ಸೆ. ಗಳಲ್ಲಿ ಗುರಿಮುಟ್ಟಿ ವಿಶ್ವದಾಖಲೆ ಸ್ಥಾಪಿಸಿದರು. ಈ ಹಿಂದಿನ ವಿಶ್ವ ದಾಖಲೆಯನ್ನು (55.18 ಸೆ.) ವಾಲ್ಶ್ ಕಳೆದ ವರ್ಷದ ಜೂನ್ 15ರಂದು ನಡೆದ ಅಮೆರಿಕದ ಒಲಿಂಪಿಕ್ಸ್ ಟ್ರಯಲ್ಸ್‌ನಲ್ಲಿ ಮಾಡಿದ್ದರು, ಆದರೆ ಅವರು ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಸ್ವದೇಶದ ಟೋರಿ ಹಸ್ಕೆ ಅವರಿಗಿಂತ ಹಿಂದೆ ಬಿದ್ದು ಬೆಳ್ಳಿ ಪದಕ ಗೆಲ್ಲಬೇಕಾಯಿತು.

ಭಾರತದ ಅಜೇಯ ಓಟಕ್ಕೆ ಲಂಕಾ ವನಿತೆಯರಿಂದ ತಡೆ | ರಿಚಾ ಘೋಷ್ ಅರ್ಧಶತಕ ವಿಫಲ

ಭಾರತದ ವಿರುದ್ಧ ಲಂಕಾಕ್ಕೆ ಗೆಲುವು

ಕೊಲಂಬೊ: ಮಹಿಳಾ ತ್ರಿಕೋನ ಏಕದಿನ ಕ್ರಿಕೆಟ್ ಸರಣಿಯಲ್ಲಿ ಹ್ಯಾಟ್ರಿಕ್ ಗೆಲುವಿನ ನಿರೀಕ್ಷೆಯಲ್ಲಿದ್ದ ಭಾರತಕ್ಕೆ ಆತಿಥೇಯ ಲಂಕಾ ಸೋಲಿನ ರುಚಿ ತೋರಿಸಿದೆ. ಭಾನುವಾರ ನಡೆದ ಪಂದ್ಯದಲ್ಲಿ ಲಂಕಾ ಮಹಿಳಾ ತಂಡವು 3 ವಿಕೆಟ್ ಅಂತರದ ಗೆಲುವು ಸಾಧಿಸಿತು. ಹರ್ಮನ್‌ಪ್ರೀತ್ ಕೌರ್ ನೇತೃತ್ವದ ಭಾರತ ಈ ಪಂದ್ಯ ಗೆದ್ದಿದ್ದರೆ, ಫೈನಲ್ ಸ್ಥಾನ ಖಚಿತವಾಗುತ್ತಿತ್ತು, ಹೀಗಾಗಿ ಫೈನಲ್ ಸ್ಥಾನಕ್ಕೇರಲು ಭಾರತ ಬುಧವಾರ ನಡೆಯುವ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ ಗೆಲುವು ಸಾಧಿಸಬೇಕಿದೆ.

ಇಲ್ಲಿನ ಆರ್ ಪ್ರೇಮದಾಸ ಸ್ಟೇಡಿಯಂನಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ಶ್ರೀಲಂಕಾ ಬೌಲಿಂಗ್ ಆಯ್ಕೆ ಮಾಡಿಕೊಂಡಿತು. ಬ್ಯಾಟಿಂಗ್‌ಗೆ ಇಳಿಸಲ್ಪಟ್ಟ ಭಾರತ ಸಂಘಟಿತ ಬ್ಯಾಟಿಂಗ್ ನೆರವಿನಿಂದ 9 ವಿಕೆಟ್‌ಗೆ 275 ರನ್ ಕಲೆ ಹಾಕಿತು. ಗುರಿಯನ್ನು ಬೆಂಬತ್ತಿದ ಶ್ರೀಲಂಕಾ ತಂಡವು ಹರ್ಷಿತಾ ಸಮರ ವಿಕ್ರಮ(53) ಮತ್ತು ನೀಲಾಕ್ಷಿ ಡಿ ಸಿಲ್ವಾ(56) ಬಾರಿಸಿದ ಅರ್ಧ ಶತಕದ ಬಲದಿಂದ 5 ಎಸೆತಗಳು ಬಾಕಿ ಇರುವಂತೆಯೇ 7 ವಿಕೆಟ್‌ಗೆ 278 ರನ್ ಬಾರಿಸಿ ಗೆಲುವಿನ ನಗೆ ಬೀರಿತು.

ಲಂಕಾದ ಅಗ್ರ ಕ್ರಮಾಂಕದ ಬ್ಯಾಟರ್‌ಗಳೆಲ್ಲ ಉತ್ತಮ ಮೊತ್ತ ಪೇರಿಸಿ ತಂಡಕ್ಕೆ ನೆರವಾದರು. ವಿಷ್ಮಿ ಗುಣರತ್ನೆ(33), ಹರ್ಷಿತಾ ಸಮರ ವಿಕ್ರಮ(53), ನೀಲಾಕ್ಷಿ ಡಿ ಸಿಲ್ವಾ(56), ಕವಿಶಾ ದಿಲ್ಹಾರಿ(35) ಉತ್ತಮ ಮೊತ್ತ ಪೇರಿಸಿದರೆ, ನಾಯಕಿ ಚಾಮರಿ ಅಟಪಟ್ಟು 23 ರನ್ ಕೊಡುಗೆ ನೀಡಿದರು. ಅಂತಿಮ ಹಂತದಲ್ಲಿ ಅಜೇಯ 23 ರನ್ ಬಾರಿಸಿದ ಅನುಷ್ಕಾ ಸಂಜೀವನಿ ತಂಡವನ್ನು ಗೆಲುವಿನ ದಡ ಸೇರಿಸಿದರು.

ಭಾರತ ಪರ ಆಲ್‌ರೌಂಡರ್ ಸ್ನೇಹ ರಾಣಾ 45 ರನ್‌ಗೆ 3 ವಿಕೆಟ್ ಕಿತ್ತು ಯಶಸ್ವಿ ಬೌಲರ್ ಎನಿಸಿಕೊಂಡರು, ಉಳಿದಂತೆ ಅರುಂಧತಿ ರೆಡ್ಡಿ, ನಲ್ಲಪುರ ರೆಡ್ಡಿ ಚರಣಿ ಮತ್ತು ಪ್ರತೀಕಾ ರಾವಲ್ ತಲಾ ಒಂದು ವಿಕೆಟ್ ಪಡೆದರು.

ಇದಕ್ಕೂ ಮುನ್ನ ಬ್ಯಾಟಿಂಗ್ ನಡೆಸಿದ ಭಾರತ ತಂಡದ ಪರ 6ನೇ ಕ್ರಮಾಂಕದಲ್ಲಿ ಆಡಲಿಳಿದ ವಿಕೆಟ್ ಕೀಪರ್-ಬ್ಯಾಟರ್ ರಿಚಾ ಘೋಷ್ 48 ಎಸೆತಗಳಿಂದ 58(3 ಸಿಕ್ಸರ್, 5 ಬೌಂಡರಿ) ರನ್ ಬಾರಿಸಿದರು. ಉಳಿದಂತೆ ಜೆಮಿಮಾ ರೋಡ್ರಿಗಸ್(37), ನಾಯಕಿ ಹರ್ಮನ್‌ಪ್ರೀತ್ ಕೌರ್(30) ಮತ್ತು ಆರಂಭಿಕ ಆಟಗಾರ್ತಿ ಪ್ರತೀಕಾ ರಾವಲ್(35) ರನ್ ಬಾರಿಸಿದರು. ಉಪನಾಯಕಿ ಸ್ಮೃತಿ ಮಂಧಾನ 18 ರನ್ ಗಳಿಸಿದ ವೇಳೆ ರನೌಟ್ ಆದರು. ಲಂಕಾ ಪರ ಸಂಘಟಿತ ಬೌಲಿಂಗ್ ದಾಳಿ ನಡೆಸಿದ ಸುಗಂಧಿಕಾ ಕುಮಾರಿ ಮತ್ತು ಚಾಮರಿ ಅತಪಟ್ಟು ತಲಾ 3 ವಿಕೆಟ್ ಕಿತ್ತು ಮಿಂಚಿದರು.

ಪಂಜಾಬ್ ತಂಡಕ್ಕೆ ಮಿಚೆಲ್ ಓವನ್ ಸೇರ್ಪಡೆ

ಮೊಹಾಲಿ: ಅಭ್ಯಾಸದ ವೇಳೆ ಬೆರಳಿಗೆ ಮೂಳೆ ಮುರಿತಕ್ಕೊಳಗಾಗಿ ಐಪಿಎಲ್‌ನಿಂದ ಹೊರಬಿದ್ದ ಪಂಜಾಬ್ ಕಿಂಗ್ಸ್ ತಂಡದ ಆಸ್ಟ್ರೇಲಿಯನ್ ಆಲ್‌ರೌಂಡರ್ ಗ್ಲೆನ್ ಮ್ಯಾಕ್ಸ್‌ವೆಲ್ ಅವರ ಸ್ಥಾನಕ್ಕೆ ಬದಲಿ ಆಟಗಾರನಾಗಿ ಆಸ್ಟ್ರೇಲಿಯಾದವರೇ ಆದ ಮಿಚೆಲ್ ಓವನ್ ತಂಡಕ್ಕೆ ಸೇರ್ಪಡೆಯಾಗಿದ್ದಾರೆ. ಮಿಚೆಲ್ ಓವನ್ ಪಂಜಾಬ್ ತಂಡ ಸೇರಿದ ವಿಚಾರವನ್ನು ಫ್ರಾಂಚೈಸಿ ತನ್ನ ಅಧಿಕೃತ ಟ್ವಿಟರ್ ಎಕ್ಸ್‌ನಲ್ಲಿ ಪ್ರಕಟಿಸಿದೆ. 3 ಕೋಟಿ ರು.ಗೆ ಮಿಚೆಲ್ ಓವನ್ ಪಂಜಾಬ್ ಫ್ರಾಂಚೈಸಿಯನ್ನು ಸೇರಿಕೊಳ್ಳಲಿದ್ದಾರೆ.

ಆಸ್ಟ್ರೇಲಿಯಾದ ಆಲ್‌ರೌಂಡರ್ ಆಗಿರುವ ಮಿಚೆಲ್ ಓವನ್, ಪ್ರಸ್ತುತ ಪಾಕಿಸ್ತಾನ ಸೂಪರ್ ಲೀಗ್-2025ರಲ್ಲಿ (ಪಿಎಸ್‌ಎಲ್) ಬಾಬರ್ ಅಜಂ ನಾಯಕತ್ವದ ಪೇಶಾವರ್ ಝಲ್ಮಿ ಪರ ಆಡುತ್ತಿದ್ದಾರೆ. ಪಿಎಸ್‌ಎಲ್‌ನಲ್ಲಿ ತಮ್ಮ ಕರ್ತವ್ಯವನ್ನು ಪೂರೈಸಿದ ನಂತರ ಅವರು ಪಂಜಾಬ್ ತಂಡ ಸೇರುವ ನಿರೀಕ್ಷೆಯಿದೆ.

ಝಲ್ಮಿ ತಂಡವು ಮೇ 9ರಂದು ರಾವಲ್ಪಿಂಡಿ ಕ್ರಿಕೆಟ್ ಕ್ರೀಡಾಂಗಣದಲ್ಲಿ ಲಾಹೋರ್ ಖಲಂದರ್ಸ್ ವಿರುದ್ಧ ತಮ್ಮ ಕೊನೆಯ ಲೀಗ್ ಪಂದ್ಯವನ್ನು ಆಡಲಿದೆ. ಸದ್ಯ ತಂಡವು 5ನೇ ಸ್ಥಾನದಲ್ಲಿದ್ದು ಪ್ಲೇಆಫ್‌ಗೆ ಅರ್ಹತೆ ಪಡೆಯುವಲ್ಲಿ ವಿಫಲವಾಗಿದೆ, ಹೀಗಾಗಿ ಮಿಚೆಲ್ ಓವನ್ ಆ ಪಂದ್ಯವನ್ನಾಡಿ ಆ ಬಳಿಕ ಐಪಿಎಲ್‌ಗೆ ಮರಳಲಿದ್ದಾರೆ. ಕೋಲ್ಕತ್ತಾದ ಈಡನ್ ಗಾರ್ಡನ್ಸ್‌ನಲ್ಲಿ ಕೋಲ್ಕತ್ತಾ ನೈಟ್ ರೈಡರ್ಸ್ (ಕೆಕೆಆರ್) ವಿರುದ್ಧ ಪಂಜಾಬ್ ಪಂದ್ಯಕ್ಕೂ ಮುನ್ನ ತರಬೇತಿ ಅವಧಿಯಲ್ಲಿ ಮ್ಯಾಕ್ಸ್‌ವೆಲ್ ಅವರ ಬೆರಳು ಮುರಿತಕ್ಕೊಳಗಾಗಿತ್ತು. ಈ ಐಪಿಎಲ್ ಆವೃತ್ತಿಯಲ್ಲಿ ಮ್ಯಾಕ್ಸ್‌ವೆಲ್ ಆಡಿದ ಏಳು ಪಂದ್ಯಗಳಲ್ಲಿ ಕೇವಲ 48 ರನ್‌ಗಳನ್ನು ಗಳಿಸಿದ್ದರು.

ಅಕ್ಷರ್ ಪಟೇಲ್ ಬಳಗಕ್ಕೆ ಪ್ಲೇ ಆಫ್ ತಲುಪುವ ತವಕ | ಕಮಿನ್ಸ್ ಪಡೆಗೆ ತವರಿನಲ್ಲಿ ಔಪಚಾರಿಕ ಪಂದ್ಯ

ಇಂದು ಹೈದರಾಬಾದ್-ಡೆಲ್ಲಿ ಹಣಾಹಣಿ

ಹೈದರಾಬಾದ್ ತಂಡ

ಪ್ಯಾಟ್ ಕಮಿನ್ಸ್ (ನಾಯಕ)
ಅಭಿಷೇಕ್ ಶರ್ಮಾ
ನಿತೀಶ್ ರೆಡ್ಡಿ
ಹೆನ್ರಿಚ್ ಕ್ಲಾಸೆನ್
ಟ್ರಾವಿಸ್ ಹೆಡ್
ಮೊಹಮ್ಮದ್ ಶಮಿ
ಹರ್ಷಲ್ ಪಟೇಲ್
ಇಶಾನ್ ಕಿಶನ್
ರಾಹುಲ್ ಚಹರ್
ಆಡಂ ಝಂಪ
ಅಭಿನವ್ ಮನೋಹರ್
ಸಿಮ್ರಾನ್‌ಜಿತ್ ಸಿಂಗ್,
ಜಯದೇವ್ ಉನದ್ಕಾತ್
ಕಮಿಂದು ಮೆಂಡಿಸ್

ಡೆಲ್ಲಿ ತಂಡ

ಅಕ್ಷರ್ ಪಟೇಲ್ (ನಾಯಕ)
ಕೆಎಲ್ ರಾಹುಲ್
ಕರುಣ್ ನಾಯರ್
ಅಭಿಷೇಕ್ ಪೊರೆಲ್
ಟ್ರಿಸ್ಟಿಯನ್ ಸ್ಟಬ್ಸ್
ಕುಲದೀಪ್ ಯಾದವ್
ಟಿ. ನಟರಾಜನ್
ಮಿಚೆಲ್ ಸ್ಟಾರ್ಕ್
ಸಮೀರ್ ರಿಜ್ವಿ
ಆಶುತೋಷ್ ಶರ್ಮಾ
ಡು ಪ್ಲೆಸಿಸ್
ಮುಖೇಶ್ ಕುಮಾರ್
ದರ್ಶನ್ ನಲ್ಕಂಡೆ
ಮಾಧವ್ ತಿವಾರಿ

ಹೈದರಾಬಾದ್: ಸೋಮವಾರ ನಡೆಯಲಿರುವ ಐಪಿಎಲ್ ಪಂದ್ಯದಲ್ಲಿ ಇಲ್ಲಿನ ರಾಜೀವ್ ಗಾಂಧಿ ಸ್ಟೇಡಿಯಂನ ತವರು ನೆಲದಲ್ಲಿ ಅತಿಥೇಯ ಹೈದರಾಬಾದ್ ತಂಡವು ಡೆಲ್ಲಿ ಕ್ಯಾಪಿಟಲ್ಸ್ ತಂಡವನ್ನು ಎದುರಿಸಲಿದೆ. ಈಗಾಗಲೇ ಟೂರ್ನಿಯಲ್ಲಿ 12 ಅಂಕಗಳನ್ನು ಗಳಿಸಿರುವ ಡೆಲ್ಲಿ ತಂಡವು ಈ ಪಂದ್ಯವನ್ನು ಗೆಲ್ಲುವ ಮೂಲಕ ಪ್ಲೇ ಆಫ್ ಖಾತರಿಪಡಿಸುವ ತವಕದಲ್ಲಿದ್ದರೆ, ಅತಿಥೇಯ ಹೈದರಾಬಾದ್ ತಂಡದ ಮಟ್ಟಿಗೆ ಇದೊಂದು ಔಪಚಾರಿಕ ಪಂದ್ಯ.

ಮಾರ್ಚ್-23ರಂದು ನಡೆದಿದ್ದ ಪಂದ್ಯದಲ್ಲಿ ಹೈದರಾಬಾದ್ ತಂಡವು ಐಪಿಎಲ್ ಟೂರ್ನಿಯಲ್ಲಿ ಶುಭಾರಂಭ ಮಾಡಿತ್ತಾದರೂ, ಆ ಬಳಿಕ ಅದರ ಅಭಿಯಾನವು ಟೂರ್ನಿಯಲ್ಲಿ ಸುಗಮವಾಗಿರಲಿಲ್ಲ. ಮಾರ್ಚ್-27ರಂದು ನಡೆದ ಪಂದ್ಯದಲ್ಲಿ ಅದು ಲಖನೌ ವಿರುದ್ಧ ಮತ್ತು ಮಾರ್ಚ್-30ರಂದು ನಡೆದ ಪಂದ್ಯದಲ್ಲಿ ಡೆಲ್ಲಿ ವಿರುದ್ಧ ಹಾಗೂ ಏಪ್ರಿಲ್-3ರಂದು ಆಯೋಜಿಸಲಾಗಿದ್ದ ಪಂದ್ಯದಲ್ಲಿ ಅದು ಸೋಲನ್ನು ಅನುಭವಿಸಿತು.

ಆ ಬಳಿಕ ಮಾರ್ಚ್-12ರಂದು ಪಂಜಾಬ್ ವಿರುದ್ಧದ ಪಂದ್ಯದಲ್ಲಿ ಹೈದರಾಬಾದ್ ಗೆದ್ದು ಬೀಗಿತು. ಏಪ್ರಿಲ್-17ರಂದು ನಡೆದ ಪಂದ್ಯದಲ್ಲಿ ಹಾಗೂ ಏಪ್ರಿಲ್-23ರಂದು ನಡೆದ ಪಂದ್ಯದಲ್ಲಿ ಅದು ಮುಂಬೈ ವಿರುದ್ಧ ಸತತ ಸೋಲನ್ನು ಒಪ್ಪಿ ಮುಜುಗರಕ್ಕೊಳಗಾಯಿತು. ಏಪ್ರಿಲ್-25ರಂದು ಜರುಗಿದ ಪಂದ್ಯದಲ್ಲಿ ಚೆನ್ನೈ ತಂಡವನ್ನು ಹೈದರಾಬಾದ್ ಸೋಲಿಸಿತು. ಮೇ-2ರಂದು ನಡೆದ ಪಂದ್ಯದಲ್ಲಿ ಗುಜರಾತ್ ವಿರುದ್ಧ ಸೋಲುವ ಮೂಲಕ ಹೈದರಾಬಾದ್ ತಂಡವು ಪ್ಲೇ ಆಫ್ ಅರ್ಹತೆಯನ್ನೂ ಕಳೆದುಕೊಂಡಿತು.

ಡೆಲ್ಲಿ ತಂಡವು ಈ ಐಪಿಎಲ್‌ನಲ್ಲಿ ಸತತ ನಾಲ್ಕು ಗೆಲುವುಗಳ ಮೂಲಕ ಉತ್ತಮ ಆರಂಭವನ್ನೇ ಪಡೆದಿದೆ ಎಂಬುದು ಗಮನಾರ್ಹ. ಮಾರ್ಚ್-24ರಂದು ಲಖನೌ ವಿರುದ್ಧ, ಮಾರ್ಚ್-30ರಂದು ಹೈದರಾಬಾದ್ ವಿರುದ್ಧ, ಏಪ್ರಿಲ್-5ರಂದು ಚೆನ್ನೈ ವಿರುದ್ಧ, ಏಪ್ರಿಲ್-10ರಂದು ಮುಂಬೈ ವಿರುದ್ಧ ಗೆದ್ದು ತನ್ನ ಪರಾಕ್ರಮ ಮೆರೆದಿತ್ತು. ಏಪ್ರಿಲ್-13ರಂದು ಮುಂಬೈ ವಿರುದ್ಧ ಡೆಲ್ಲಿ ಸೋತರೂ ಕೂಡಾ, ಏಪ್ರಿಲ್-16ರಂದು ರಾಜಸ್ಥಾನದ ವಿರುದ್ಧ ಸೂಪರ್ ಓವರ್ ಮೂಲಕ ರೋಚಕ ಪಂದ್ಯವನ್ನು ಗೆದ್ದಿತ್ತು.

ಏಪ್ರಿಲ್-19ರಂದು ಗುಜರಾತ್ ವಿರುದ್ಧ ಪರಾಭವಗೊಂಡಿದ್ದರೂ, ಏಪ್ರಿಲ್-22ರಂದು ಡೆಲ್ಲಿಯು ಲಖನೌ ವಿರುದ್ಧ ಗೆಲುವು ಸಾಧಿಸಿತು. ಏಪ್ರಿಲ್-27ರಂದು ಆರ್‌ಸಿಬಿ ವಿರುದ್ಧ ಸೋತ ಡೆಲ್ಲಿ ತಂಡವು ಏಪ್ರಿಲ್-29ರಂದು ನಡೆದ ಪಂದ್ಯದಲ್ಲಿ ಕೋಲ್ಕತ್ತಾ ತಂಡದ ವಿರುದ್ಧವೂ ಸೋತಿತು.

ಇದೀಗ ಅಂಕಪಟ್ಟಿಯಲ್ಲಿ 10 ಪಂದ್ಯಗಳಲ್ಲಿ 3 ಪಂದ್ಯಗಳನ್ನಷ್ಟೇ ಗೆದ್ದಿರುವ ಪ್ಯಾಟ್ ಕಮಿನ್ಸ್ ನಾಯಕತ್ವದ ಹೈದರಾಬಾದ್ ಪಾಲಿಗೆ ಔಪಚಾರಿಕ ಪಂದ್ಯವಷ್ಟೇ ಆಗಲಿದ್ದು, 10 ಪಂದ್ಯಗಳಿಂದ 12 ಅಂಕ ಗಳಿಸಿರುವ ಅಕ್ಷರ್ ಪಟೇಲ್ ನಾಯಕತ್ವದ ಡೆಲ್ಲಿ ಕ್ಯಾಪಿಟಲ್ಸ್‌ಗೆ ಪ್ಲೇ ಆಫ್ ತಲುಪಲು ಇನ್ನೊಂದೇ ಆಟದ ಗೆಲುವು ಸಾಕಾಗುತ್ತದೆ, ಹಾಗಾಗಿ ಆ ತನ್ನ ಗುರಿಯನ್ನು ಪೂರ್ಣಗೊಳಿಸಬೇಕೆಂಬ ಲಕ್ಷ್ಯದಿಂದ ಅದು ಹೈದರಾಬಾದ್ ವಿರುದ್ಧ ಸೋಮವಾರ ಪಂದ್ಯವನ್ನಾಡಲಿದೆ.

ಮುಖಾಮುಖಿಯ ವಿವರ

ಹೈದರಾಬಾದ್ ಮತ್ತು ಡೆಲ್ಲಿ ತಂಡವು ಐಪಿಎಲ್‌ನಲ್ಲಿ ಈ ವರೆಗೆ 24 ಪಂದ್ಯಗಳಲ್ಲಿ ಮುಖಾಮುಖಿ ಆಗಿವೆ. 13 ಪಂದ್ಯಗಳಲ್ಲಿ ಹೈದರಾಬಾದ್ ಗೆದ್ದಿದ್ದರೆ, ಡೆಲ್ಲಿ ಕ್ಯಾಪಿಟಲ್ಸ್ ತಂಡವು 11ರಲ್ಲಿ ಜಯ ಸಾಧಿಸಿದೆ.